ಭಾನುವಾರ, ಮಾರ್ಚ್ 1, 2026 ₹ 7.00 • www.prajavani.net prajavani.net prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸಂಭ್ರಮ

ಮುಂಬೈನಲ್ಲಿ ನಡೆದ 'ಇಂಡಿಯನ್ ಟೆಲಿ ಸ್ಟ್ರೀಮಿಂಗ್ ಅವಾರ್ಡ್ಸ್– 2026' ಸಮಾರಂಭದಲ್ಲಿ ನಟಿ ಹುಮಾ ಖುರೇಷಿ ಪ್ರಶಸ್ತಿಯೊಂದಿಗೆ ಸಂಭ್ರಮಿಸಿದರು





ಲಸಿಕೆ ಅಭಿಯಾನ

ದೇಶದಾದ್ಯಂತ ಇರುವ 14 ವರ್ಷದ ಬಾಲಕಿಯರಿಗೆ ಎಚ್‌ಪಿವಿ ಲಸಿಕೆ ನೀಡುವ ಅಭಿಯಾನಕ್ಕೆ ಶನಿವಾರ ಚಾಲನೆ ನೀಡಲಾಯಿತು

M S International Public School

Hanakere, Mandya Taluk, Mandya - 571404.



Admission Open Now 2026 - 2027

Pre-Primary to Grade 10

Admissions open for ITI College! Enquire now (SSLC graduates eligible)








Local School Bus & Hostel facility Available

We are Hiring

Principal, Kannada, English, Hindi, Maths, Science & Social Teacher's
FOR CLASS 1 TO 10TH

Teachers Qualification: TGT / PGT

Class 1 to 7:
Any Degree, D.Ed, B.Ed

Class 8 to 10:
Any Degree, Post Graduate with B.Ed,

Preferably: Resident Teacher for hostel-based teaching and supervision. Free food and accommodation provided.

Kindergarten Teacher - PUC/ any degree ,NST | PET Teacher - any degree with B.PEd/ M.PEd

Librarian | Art & Craft Teacher | Office Assistant (clerk) | Accountant | Bus Drivers
Watch Man (Day & Night Shift) | Cleaning Department | Attender | Cook | Scavengers

msinternationalpublicschool26@gmail.com
Hanakere, Mandya Taluk, Mandya - 571404.
+91 98450 41912 / +91 91485 76991
+91 72042 41020 / +91 80503 04076

ಭಾನುವಾರ, ಮಾರ್ಚ್ 1, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 60 | ಪುಟ 18

www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಫರ್ಹಾನ್ ಶತಕ

ಪಾಕಿಸ್ತಾನದ ಸಾಹಿಬ್‌ಝಾದಾ ಫರ್ಹಾನ್ (100;60ಎ) ಟಿ20 ವಿಶ್ವಕಪ್‌ನ ಸೂಪರ್ 8ರ ಹಂತದ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ ಶತಕ ದಾಖಲಿಸಿದರು. ಪಾಕ್ 5 ರನ್‌ಗಳಿಂದ ಗೆದ್ದಿತು

'ಭಾರತ ಕಥಾಮಂಜರಿ' ಮರುಮುದ್ರಣ 7

ಕೊಲ್ಲಿ ಯುದ್ಧ: ಪರಿಸ್ಥಿತಿ ಉದ್ವಿಗ್ನ

ಇರಾನ್ ಮೇಲೆ ಅಮೆರಿಕ, ಇಸ್ರೇಲ್ ದಾಳಿ ತಿರುಗೇಟು ನೀಡಿದ ಇರಾನ್

ದುಬೈ/ವಾಷಿಂಗ್ಟನ್/ಕೈರೊ (ಪಿಟಿಐ/ಎಎಫ್‌ಪಿ): ಇರಾನ್ ಮೇಲೆ ಅಮೆರಿಕ ಹಾಗೂ ಇಸ್ರೇಲ್ ಶನಿವಾರ ರಾತ್ರಿ ದೊಡ್ಡ ಮಟ್ಟದಲ್ಲಿ ದಾಳಿ ನಡೆಸಿವೆ. ಇರಾನ್ ಕೂಡ ಪ್ರತಿದಾಳಿ ನಡೆಸಿದ್ದು, ಇದರಿಂದ ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನ ಸ್ಥಿತಿ ಮನೆ ಮಾಡಿದೆ.

ಇದರ ಬೆನ್ನಲ್ಲೇ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, 'ನಿಮ್ಮ ಸರ್ಕಾರವನ್ನು ನೀವೇ ವಹಿಸಿಕೊಳ್ಳಿ' ಎಂದು ಇರಾನ್‌ನ ಜನರಿಗೆ ಕರೆ ನೀಡಿದ್ದಾರೆ. ಆ ಮೂಲಕ ದಶಕಗಳ 'ಧರ್ಮಾಧಾರಿತ ಪ್ರಭುತ್ವ' (ಖಮೇನಿ ಆಡಳಿತ) ಕೊನೆಗೊಳಿಸಲು ನಿಮಗೆ ಅವಕಾಶ ನೀಡಿದ್ದೇವೆ' ಎಂಬ ಸಂದೇಶವನ್ನೂ ರವಾನಿಸಿದ್ದಾರೆ.

ಉಭಯ ರಾಷ್ಟ್ರಗಳು ನಡೆಸಿದ ದಾಳಿಗಳು ಕೊಲ್ಲಿಯಲ್ಲಿನ ತೈಲ ಉತ್ಪಾದಕ ರಾಷ್ಟ್ರಗಳನ್ನು ಸಂಕಷ್ಟಕ್ಕೆ ದೂಡಿವೆ.

ಖಮೇನಿಯೇ ಗುರಿ: ಇರಾನ್‌ನ ಸರ್ವೋಚ್ಚ ನಾಯಕ ಅಯಾತೊಲ್ಲಾ ಅಲಿ ಖಮೇನಿ ಹಾಗೂ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರ ನಿವಾಸಗಳನ್ನು ಗುರಿಯಾಗಿರಿಸಿಕೊಂಡು ಟೆಹರಾನ್‌ನ ಹೃದಯ ಭಾಗದ ಮೇಲೆ ಅಮೆರಿಕ ದಾಳಿ ನಡೆಸಿದೆ. ದಾಳಿಯ ಮುನ್ಸೂಚನೆ ಅರಿತ ಖಮೇನಿ ಟೆಹರಾನ್‌ನಲ್ಲಿ ಇರಲಿಲ್ಲ. ಬದಲಾಗಿ ಸುರಕ್ಷಿತ ಸ್ಥಳಕ್ಕೆ ಅವರನ್ನು ಸ್ಥಳಾಂತರಗೊಳಿಸಲಾಗಿತ್ತು ಎಂದು 'ರಾಯಿಟರ್ಸ್' ಸುದ್ದಿಸಂಸ್ಥೆ ವರದಿ ಮಾಡಿದೆ.

ಇರಾನ್‌ನ ನಾಯಕರನ್ನು ಗುರಿಯಾಗಿಸಿಕೊಂಡು 'ಆಪರೇಷನ್ ಎಪಿಕ್ ಫ್ಯೂರಿ' ಹೆಸರಿನಲ್ಲಿ ಅಮೆರಿಕ ಮೊದಲ ಹಂತದ ದಾಳಿ ನಡೆಸಿತು ಎಂದು ಮೂಲಗಳು ತಿಳಿಸಿವೆ. 8



ದಿನದ ಬೆಳವಣಿಗೆ

- ಟೆಹರಾನ್ ಸ್ಥಳೀಯ ಕಾಲಮಾನ 9.30ರ ವೇಳೆಗೆ ಇರಾನ್‌ನ 30ಕ್ಕೂ ಹೆಚ್ಚು ನಗರಗಳ ಮೇಲೆ ಬಾಂಬ್ ದಾಳಿ
- ಇಸ್ಫಾನ್, ಖೊಮ್, ಕರಾಜ್ ಹಾಗೂ ಕೆರ್ಮಾನ್‌ಶಾದಲ್ಲಿ ಕಾಣಿಸಿಕೊಂಡ ದಟ್ಟ ಹೊಗೆ
- ಜಾಲತಾಣಗಳಲ್ಲಿ ಹರಿದಾಡಿದ ವಿಡಿಯೊ– ದಿಕ್ಕಾಪಾಲಾಗಿ ಓಡಿದ ಜನರು
- ದಾಳಿ ನಡೆಸಿರುವುದನ್ನು ಖಚಿತ ಪಡಿಸಿದ ಅಮೆರಿಕ, ಇಸ್ರೇಲ್
- ಪಶ್ಚಿಮ ಏಷ್ಯಾದಲ್ಲಿರುವ ಅಮೆರಿಕ ಸೇನಾ ನೆಲೆಗಳ ಮೇಲೆ ಇರಾನ್ ಪ್ರತಿದಾಳಿ
- ಡ್ರೋನ್, ಕ್ಷಿಪಣಿ ದಾಳಿ ಬೆನ್ನಲ್ಲೇ ವಾಯುಪ್ರದೇಶ ಮುಚ್ಚಿದ ಯುಎಇ
- ಭಾರತ ಸೇರಿ ಹಲವು ದೇಶಗಳ ವಿಮಾನಗಳ ಸಂಚಾರ ರದ್ದು



ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್ ಶನಿವಾರ ನಡೆಸಿದ ಕ್ಷಿಪಣಿ ದಾಳಿಯಿಂದ ಬಹರೇನ್‌ನಲ್ಲಿರುವ ಅಮೆರಿಕ ನೌಕಾ ಪಡೆಯ ಕೇಂದ್ರ ಕಚೇರಿಯಲ್ಲಿ ದಟ್ಟವಾದ ಹೊಗೆ ಆವರಿಸಿತ್ತು —ಎಎಫ್‌ಪಿ ಚಿತ್ರ

ಇರಾನ್‌ನಿಂದ ಪ್ರತಿದಾಳಿ

ಅಮೆರಿಕ–ಇಸ್ರೇಲ್ ತನ್ನ ಮೇಲೆ ದಾಳಿ ನಡೆಸಿದ ಬಳಿಕ ಇರಾನ್ ಪ್ರತಿ ದಾಳಿ ನಡೆಸಿದೆ. ಇಸ್ರೇಲ್ ಮೇಲೆ ಡ್ರೋನ್ ಹಾಗೂ ಕ್ಷಿಪಣಿ ದಾಳಿ ನಡೆಸಲಾಗಿದೆ ಎಂದು ಇರಾನ್‌ನ ಅರೆಸೇನಾ ಪಡೆ ರೆವಲ್ಯೂಷನರಿ ಗಾರ್ಡ್ಸ್ ತಿಳಿಸಿದೆ. ಇರಾನ್ ದಾಳಿಯ ಮುನ್ಸೂಚನೆ ಬೆನ್ನಲ್ಲೇ, ಇಸ್ರೇಲ್‌ನಾದ್ಯಂತ ಮುನ್ನೆಚ್ಚರಿಕೆ ಘೋಷಿಸಲಾಯಿತು. 8

ಭಾರತೀಯರಿಗೆ ಸಲಹೆ

ನವದೆಹಲಿ/ದುಬೈ (ಪಿಟಿಐ): ಇರಾನ್, ಸೌದಿ ಅರೇಬಿಯಾ, ಯುಎಇ ಮತ್ತು ಜೋರ್ಡನ್ ಸೇರಿದಂತೆ ಕೊಲ್ಲಿ ರಾಷ್ಟ್ರಗಳಲ್ಲಿನ ಭಾರತೀಯರು ಎಚ್ಚರಿಕೆಯಿಂದ ಇರುವಂತೆ ಮತ್ತು ಸ್ಥಳೀಯಾಡಳಿತದ ಮಾರ್ಗಸೂಚಿಗಳನ್ನು ಪಾಲಿಸುವಂತೆ ಅಲ್ಲಿರುವ ಭಾರತದ ರಾಯಭಾರ ಕಚೇರಿಗಳು ಸೂಚನೆ ನೀಡಿವೆ. 8

ವಿಮಾನಗಳ ಸಂಚಾರ ರದ್ದು

ಮಂಗಳೂರು: ಇರಾನ್‌ನ ವಾಯುಮಾರ್ಗದಲ್ಲಿ ವಿಮಾನ ಹಾರಾಟಕ್ಕೆ ನಿರ್ಬಂಧ ಇರುವುದರಿಂದ ಮಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕೊಲ್ಲಿ ರಾಷ್ಟ್ರಗಳಿಗೆ ತೆರಳುವ ಹಾಗೂ ಅಲ್ಲಿನ ರಾಷ್ಟ್ರಗಳಿಂದ ಮಂಗಳೂರಿಗೆ ಬರುವ ಅನೇಕ ವಿಮಾನಗಳ ಹಾರಾಟ ರದ್ದುಪಡಿಸಲಾಗಿದೆ. 8

ನೆಡುತೋಪಿನಿಂದ ವನ ವಿಸ್ತರಣೆ?

ದಶಕದಲ್ಲಿ ಅರಣ್ಯ ಏರಿಕೆ • ವಿಜಯಪುರದಲ್ಲಿ ಹೆಚ್ಚಿದ ಹಸಿರು

ಒಳನೋಟ

• ಯತೀಶ್ ಕುಮಾರ್ ಜಿ.ಡಿ.

ಬೆಂಗಳೂರು: ಕರ್ನಾಟಕದಲ್ಲಿ ಕಳೆದೊಂದು ದಶಕದಲ್ಲಿ ದಟ್ಟ ಅರಣ್ಯದ ಪ್ರಮಾಣ ಗಣನೀಯವಾಗಿ ಜಾಸ್ತಿ ಆಗಿದೆ ಎಂದು ಕೇಂದ್ರ ಸರ್ಕಾರದ ಸಾಂಖ್ಯಿಕ ಸಚಿವಾಲಯದ ವರದಿ ಅಭಿಪ್ರಾಯಪಟ್ಟು ಅರಣ್ಯ ಇಲಾಖೆಯ ಬೆನ್ನುತಟ್ಟಿದೆ. ಆದರೆ, ನೆಡುತೋಪುಗಳಿಂದಾಗಿಯೇ ಅರಣ್ಯ ಪ್ರಮಾಣ ಹೆಚ್ಚಾಗಿದೆ. ಇದು ನೈಸರ್ಗಿಕ ಅರಣ್ಯವಲ್ಲ. ಜೀವವೈವಿಧ್ಯವಿಲ್ಲದ ಕೃತಕ ಅರಣ್ಯದಿಂದ ಈ ಹೆಗ್ಗಳಿಕೆ ಸಿಕ್ಕಿದೆ ಎಂದು ಪರಿಸರ ತಜ್ಞರು ಬೊಟ್ಟು ಮಾಡುತ್ತಾರೆ.

ರಸ್ತೆ ವಿಸ್ತರಣೆ, ಜಲವಿದ್ಯುತ್ ಯೋಜನೆಗಳಂತಹ ಹಲವಾರು ಬಗೆಯ ಅಭಿವೃದ್ಧಿ ಯೋಜನೆಗಳಿಂದ ಪಶ್ಚಿಮ ಘಟ್ಟ ಹಾಗೂ ಸಹ್ಯಾದ್ರಿ ಶ್ರೇಣಿಗಳಲ್ಲಿ ಪ್ರತಿಕ್ಷಣವೂ ಅರಣ್ಯ ತೆಳುವಾಗುತ್ತಲೇ ಇದೆ. ಅರಣ್ಯೀಕರಣದ ಹೆಸರಿನಲ್ಲಿ ಬೆಳೆಸಲಾಗುವ ಅಕೇಶಿಯಾ, ನೀಲಗಿರಿಯಂತಹ ಮರಗಳು ಪರಿಸರಕ್ಕೆ ಹಾನಿಮಾಡುವ ಗುಣಗಳನ್ನು ಹೊಂದಿವೆ. ಈ ಮರಗಳ ಎಲೆಗಳು ಭೂಮಿಗೆ ಬಿದ್ದು ಈಗಿರುವ ಫಲವತ್ತತೆಯನ್ನು ಹೀರಿಕೊಳ್ಳುತ್ತವೆ ಎಂದೂ ಅವರು ಬೆಳಕು ಚೆಲ್ಲುತ್ತಾರೆ.

ಸಾಂಖ್ಯಿಕ ಸಚಿವಾಲಯದ ವರದಿ ಪ್ರಕಾರ, ರಾಜ್ಯದಲ್ಲಿ 2010–11ರಲ್ಲಿ 1,777 ಚದರ ಕಿ.ಮೀ. ದಟ್ಟಾರಣ್ಯ ಇತ್ತು. 2021–22ರ ವೇಳೆಗೆ ಇದರ ಪ್ರಮಾಣ 4,537 ಚದರ ಕಿ.ಮೀ.ಗೆ ಏರಿಕೆ ಆಗಿದೆ. ಸಾಧಾರಣ ದಟ್ಟವಾದ ಅರಣ್ಯಗಳೂ ಹೆಚ್ಚಾಗಿವೆ. 2010–11ರಲ್ಲಿ 20,179 ಚದರ ಕಿ.ಮೀ ಇದ್ದ ಈ ಕಾಡು ಶೇ 4.8ರಷ್ಟು ಹೆಚ್ಚಳವಾಗಿ 2021–22ರಲ್ಲಿ 21,151 ಕಿ.ಮೀ. ಆಗಿದೆ. ಆದರೂ, ಒಟ್ಟಾರೆ ರಾಜ್ಯದ ಅರಣ್ಯ ಪ್ರದೇಶ ಸ್ಥಿರವಾಗಿಯೇ ಉಳಿದಿದೆ. ಕರ್ನಾಟಕದ ಭೂಪ್ರದೇಶದ ಶೇ 19.96 ಪ್ರತಿಶತದಲ್ಲಿ ಅರಣ್ಯ ಇದೆ. ಈ ಅವಧಿಯಲ್ಲಿ ಮೀಸಲು, ಸಂರಕ್ಷಿತ ಹಾಗೂ ವರ್ಗೀಕರಿಸದ ಕಾಡಿನಲ್ಲಿ ಯಾವುದೇ ಬದಲಾವಣೆ ಆಗಿಲ್ಲ.

ಈ ಸಂಖ್ಯೆಗಳು ಆಶಾವಾದಿ ಪ್ರವೃತ್ತಿಯನ್ನು ಸೂಚಿಸುತ್ತವೆ. ಈ ಅಂಕಿ ಅಂಶಗಳು ತಾಂತ್ರಿಕವಾಗಿ ಸರಿ ಇದ್ದರೂ ಸಹಜ ಅರಣ್ಯ ಹಾಗೂ ನೆಡುತೋಪುಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವಲ್ಲಿ ವಿಫಲವಾಗಿವೆ ಎಂದು ಪರಿಸರ ತಜ್ಞರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. 'ಹುಲಿ, ಆನೆ, ಚಿರತೆ, ಅನೇಕ ಪಕ್ಷಿ ಮತ್ತು ಕೀಟ ಜಾತಿಗಳಿಗೆ ನೈಸರ್ಗಿಕ ಕಾಡಿನ ಸಂಕೀರ್ಣ ಪರಿಸರವೇ ಅಗತ್ಯ. 6



ವಿಜಯಪುರ ಜಿಲ್ಲೆಯ ಮಮದಾಪುರದಲ್ಲಿ ತಲೆ ಎತ್ತಿರುವ ಅರಣ್ಯ ಪ್ರದೇಶ

'ನೈಸರ್ಗಿಕ ಕಾಡಿನಿಂದ ವಿಸ್ತರಣೆಯಾಗಿಲ್ಲ'

ಕೇಂದ್ರ ಸರ್ಕಾರದ ಸಾಂಖ್ಯಿಕ ಸಚಿವಾಲಯದ ವರದಿ ಕರ್ನಾಟಕದಲ್ಲಿ ಕಳೆದೊಂದು ದಶಕದಲ್ಲಿ ಅರಣ್ಯ ಪ್ರಮಾಣ ಹೆಚ್ಚಾಗಿದೆ ಎಂದು ಹೇಳಿ ಅರಣ್ಯ ಇಲಾಖೆಯನ್ನು ಬೆನ್ನುತಟ್ಟಿರುವುದು ಮೇಲ್ನೋಟಕ್ಕೆ ಸಂತೋಷದ ಸಂಗತಿಯಂತೆ ಕಾಣುತ್ತದೆ. ಆದರೆ ಈ ಅಂಕಿಅಂಶಗಳ ಹಿಂದೆ ಇರುವ ವಾಸ್ತವವನ್ನು ಗಂಭೀರವಾಗಿ ಪರಿಶೀಲಿಸಬೇಕಾಗಿದೆ. ಅರಣ್ಯ ಪ್ರಮಾಣ ಹೆಚ್ಚಾಗಿದೆ ಎನ್ನುವ ಹೇಳಿಕೆಗೆ ಪ್ರಮುಖ ಕಾರಣ ನೈಸರ್ಗಿಕ ಕಾಡಿನ ವಿಸ್ತರಣೆ ಅಲ್ಲ, ಬದಲಾಗಿ ನೆಡುತೋಪುಗಳ ಹೆಚ್ಚಳ ಎಂಬುದನ್ನು ವರದಿ ಸೂಚಿಸುತ್ತದೆ.

ಅರಣ್ಯ ಸಂರಕ್ಷಣೆಯ ಯಶಸ್ಸನ್ನು ಕೇವಲ ವಿಸ್ತೀರ್ಣದ ಅಂಕಿಅಂಶಗಳಿಂದ ಅಳೆಯಬಾರದು. ಅರಣ್ಯದ ಗುಣಮಟ್ಟ, ಜೈವಿಕ ವೈವಿಧ್ಯ ಮತ್ತು ಜೀವಜಂತುಗಳಿಗೆ ಅದರ ಉಪಯುಕ್ತತೆಯೇ ನಿಜವಾದ ಮಾನದಂಡವಾಗಬೇಕು. ಇಲ್ಲದಿದ್ದರೆ, ಅಂಕಿಅಂಶಗಳಲ್ಲಿ ಅರಣ್ಯ ಹೆಚ್ಚಾಗುತ್ತಿರುವಂತೆ ತೋರಿದರೂ, ನೆಲಮಟ್ಟದಲ್ಲಿ ನೈಸರ್ಗಿಕ ಕಾಡುಗಳು ನಿಧಾನವಾಗಿ ಅಳಿದು-ಹೋಗುತ್ತಿರುವ ವಿಪರ್ಯಾಸ ಮುಂದುವರಿಯುತ್ತದೆ.

ಆದರೆ, ಸಂತಸದ ಸಂಗತಿ ಎಂದರೆ ಹಲವಾರು ಮೀಸಲು ಅರಣ್ಯಗಳು ಮತ್ತು ರಕ್ಷಿತ ಅರಣ್ಯಗಳನ್ನು ಹೊಸದಾಗಿ ಅಧಿಸೂಚಿಸುವ ಮೂಲಕ ರಾಜ್ಯ ಸರ್ಕಾರ ಅರಣ್ಯ ಭೂಮಿ ಸಂರಕ್ಷಣೆಗೆ ಕಾನೂನಿನ ಬಲ ಒದಗಿಸುತ್ತಿದೆ.

ಗಿರಿಧರ ಕುಲಕರ್ಣಿ, ಪರಿಸರ ಕಾರ್ಯಕರ್ತ, ಬೆಳಗಾವಿ

ಡಿಎಂಕೆ–ಕಾಂಗ್ರೆಸ್ ಮೈತ್ರಿ ಕಗ್ಗಂಟು

ನವದೆಹಲಿ: ತಮಿಳುನಾಡು ವಿಧಾನಸಭಾ ಚುನಾವಣೆಗೆ ಸೀಟು ಹಂಚಿಕೆ ಸಂಬಂಧ ಆಡಳಿತಾರೂಢ ಡಿಎಂಕೆ–ಕಾಂಗ್ರೆಸ್ ಶನಿವಾರ ಮತ್ತೊಂದು ಸುತ್ತಿನ ಮಾತುಕತೆ ನಡೆಸಿದರೂ ಕಗ್ಗಂಟು ಬಗೆಹರಿದಿಲ್ಲ. 40 ಸ್ಥಾನಗಳನ್ನು ಬಿಟ್ಟುಕೊಡಬೇಕು ಎಂಬ ಕಾಂಗ್ರೆಸ್ ನಾಯಕರ ಬೇಡಿಕೆಗೆ ಡಿಎಂಕೆ ನಾಯಕರು ಒಪ್ಪಿಲ್ಲ. 9

ಸಕ್ರಿಯ ರಾಜಕಾರಣದತ್ತ ಅನಂತಕುಮಾರ

ಕಾರವಾರ: ಎರಡು ವರ್ಷಗಳ ಬಳಿಕ ಲೋಕಸಭೆಯ ಮಾಜಿ ಸದಸ್ಯ ಅನಂತ ಕುಮಾರ ಹೆಗಡೆ ಮತ್ತೆ ಸಕ್ರಿಯ ರಾಜಕಾರಣದತ್ತ ಮುಖ ಮಾಡಲಿದ್ದಾರೆ ಎಂಬ ಚರ್ಚೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಆರಂಭವಾಗಿದೆ. 4

63.66 ಲಕ್ಷ ಮತದಾರರಿಗೆ ಕೊಕ್

ಪಶ್ಚಿಮ ಬಂಗಾಳ ಎಸ್‌ಐಆರ್: 7.04 ಕೋಟಿಗೆ ಇಳಿದ ಮತದಾರರ ಸಂಖ್ಯೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ನಡೆಸಿದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಬಳಿಕ 63.66 ಲಕ್ಷ (ಶೇ 8.3ರಷ್ಟು) ಮತದಾರರ ಹೆಸರನ್ನು ಕೈಬಿಡಲಾಗಿದ್ದು, ರಾಜ್ಯದ ಒಟ್ಟು ಮತದಾರರ ಸಂಖ್ಯೆ 7.04 ಕೋಟಿಗೆ ಇಳಿದಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಸುಮಾರು 60.6 ಲಕ್ಷ ಮತದಾರರಿಗೆ ಸಂಬಂಧಿಸಿದಂತೆ ನ್ಯಾಯಾಂಗ ಅಧಿಕಾರಿಗಳಿಂದ ಪರಿಶೀಲನೆ ನಡೆಯಲಿದ್ದು, ಆ ಬಳಿಕವಷ್ಟೇ ಪಟ್ಟಿಯಲ್ಲಿ ಹೆಸರು ಅಳಿಸುವ ಮತ್ತು ಸೇರಿಸುವ ಕುರಿತು ಸ್ಪಷ್ಟ ಚಿತ್ರಣ ದೊರೆಯಲಿದೆ ಎಂದು ಅದು ಹೇಳಿದೆ.

'ಎಸ್‌ಐಆರ್ ಭಾಗವಾಗಿ ನಡೆದ ಹೆಸರುಗಳನ್ನು ತೆಗೆದುಹಾಕುವುದು ಮತ್ತು ಸೇರಿಸುವ ಪ್ರಕ್ರಿಯೆ ಬಳಿಕ ಪಶ್ಚಿಮ ಬಂಗಾಳದಲ್ಲಿ 7.04 ಕೋಟಿ ಜನರು ಮತದಾರರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ' ಎಂದು ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಕುಮಾರ್ ಅಗರ್ವಾಲ್ ಶನಿವಾರ ಸುದ್ದಿಗಾರರಿಗೆ ತಿಳಿಸಿದರು. 9

ತಮಿಳುನಾಡು: 1.18 ಕೋಟಿ ಯುವ ಮತದಾರರು

ಚೆನ್ನೈ (ಪಿಟಿಐ): ತಮಿಳುನಾಡಿನಲ್ಲಿ ಸುಮಾರು 1.18 ಕೋಟಿ ಯುವ ಮತದಾರರಿದ್ದಾರೆ ಎಂದು ಚುನಾವಣಾ ಆಯೋಗ ತಿಳಿಸಿದೆ. ಯುವ ಜನರನ್ನು ನೋಂದಾಯಿಸಲು 3,060 ಸಹಾಯಕ ಚುನಾವಣಾ ನೋಂದಣಿ ಅಧಿಕಾರಿಗಳನ್ನು ನಿಯೋಜಿಸಲಾಗಿದೆ ಎಂದು ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ.

ಫೆಬ್ರುವರಿ 23ರಂದು ಆಯೋಗ ಪ್ರಕಟಿಸಿರುವ ಮತದಾರರ ಅಂತಿಮ ಪಟ್ಟಿಯಲ್ಲಿ ಯುವ ಮತದಾರರ ಸಂಖ್ಯೆ ಹೆಚ್ಚಳವಾಗಿರುವುದು ದಾಖಲಾಗಿದೆ.

ಮೊದಲ ದಿನದ ಪರೀಕ್ಷೆ ಸುಸೂತ್ರ

ಪ್ರಜಾವಾಣಿ ವಾರ್ತೆ



ದ್ವಿತೀಯ ಪಿಯು

ಬೆಂಗಳೂರು: ದ್ವಿತೀಯ ಪಿಯು ಮೊದಲ ದಿನದ ಕನ್ನಡ ಮತ್ತು ಅರೇಬಿಕ್ ಭಾಷಾ ಪರೀಕ್ಷೆ ಸುಸೂತ್ರವಾಗಿ ನಡೆದಿದೆ.

ನೋಂದಾಯಿಸಿಕೊಂಡಿದ್ದ 5.09 ಲಕ್ಷ ವಿದ್ಯಾರ್ಥಿಗಳಲ್ಲಿ ಶೇ 96.87ರಷ್ಟು ವಿದ್ಯಾರ್ಥಿಗಳು (4.93 ಲಕ್ಷ) ಪರೀಕ್ಷೆ ಬರೆದರು.

ಒಂದು ಕಾಲೇಜಿನ ವಿದ್ಯಾರ್ಥಿಗಳನ್ನು ಮತ್ತೊಂದು ಕಾಲೇಜಿನ ಕೇಂದ್ರಕ್ಕೆ ಹಂಚಿಕೆ ಮಾಡಿದ್ದರಿಂದ ಬೆಳಿಗ್ಗೆ 9ಕ್ಕೆ ಮಕ್ಕಳು ಪರೀಕ್ಷಾ ಕೇಂದ್ರದಲ್ಲಿ ಹಾಜರಿದ್ದು, ಫಲಕಗಳಲ್ಲಿ ತಮ್ಮ ನೋಂದಣಿ ಸಂಖ್ಯೆ ನೋಡಿಕೊಂಡು ಆಯಾ ಕೊಠಡಿಗಳಿಗೆ ತೆರಳಿ ತಮ್ಮ ಆಸನಗಳಲ್ಲಿ ಕುಳಿತು ಪರೀಕ್ಷೆ ಎದುರಿಸಿದರು. ವಿದ್ಯಾರ್ಥಿಗಳನ್ನು ಬಿಡಲು ಹೆಚ್ಚಿನ ಸಂಖ್ಯೆಯ ಪೋಷಕರು ಆಗಮಿಸಿದ ಕಾರಣ ಪರೀಕ್ಷಾ ಕೇಂದ್ರದ ಹೊರಗೆ ಜನದಟ್ಟಣೆ ಇತ್ತು. 1,217 ಪರೀಕ್ಷಾ ಕೇಂದ್ರಗಳಲ್ಲೂ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿತ್ತು.

ಮಕ್ಕಳನ್ನು ಮೊದಲೇ ಮಾನಸಿಕವಾಗಿ ಸಿದ್ಧಗೊಳಿಸಿದ್ದರಿಂದ ಭಯಮುಕ್ತವಾಗಿ, ಆತ್ಮಸ್ಥೈರ್ಯದಿಂದ ಪರೀಕ್ಷೆ ಬರೆದರು. ವಿವಿಧ ಹಂತದ ಅಧಿಕಾರಿಗಳು ವೆಬ್‌ಕಾಸ್ಟಿಂಗ್ ಮೂಲಕ ಪರೀಕ್ಷಾ ಚಟುವಟಿಕೆಗಳ ಮೇಲೆ ನಿರಂತರ ನಿಗಾವಹಿಸಿದ್ದರು. ನಕಲು ಮಾಡಿದ ಯಾವುದೇ ಪ್ರಕರಣ ಮೊದಲ ದಿನ ಪತ್ತೆಯಾಗಿಲ್ಲ. ಪರೀಕ್ಷಾ ಕೇಂದ್ರದ ಹೊರಗೂ ಕಟ್ಟುನಿಟ್ಟಿನ ಕಣ್ಗಾವಲಿತ್ತು. ಪೊಲೀಸ್ ಭದ್ರತೆ ಒದಗಿಸಲಾಗಿತ್ತು. ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ನಿಷೇಧಿತ ಪ್ರದೇಶ ಎಂದು ಘೋಷಿಸಲಾಗಿತ್ತು.

ಸಂಪುಟದ ತೀರ್ಮಾನಕ್ಕೆ ಒಪಿಎಸ್: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: 'ಹಳೆ ಪಿಂಚಣಿ ವ್ಯವಸ್ಥೆ (ಒಪಿಎಸ್) ಮರುಜಾರಿ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಶನಿವಾರ ಆಯೋಜಿಸಿದ್ದ ರಾಜ್ಯ ಮಟ್ಟದ ಶೈಕ್ಷಣಿಕ ಮಹಾಸಮ್ಮೇಳನ ಹಾಗೂ ಸಂಘದ ಸುವರ್ಣ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. 'ಶಿಕ್ಷಕರ ಹಲವು ಬೇಡಿಕೆಗಳನ್ನು ಈಗಾಗಲೇ ಈಡೇರಿಸಲಾಗಿದೆ. ನಾನು ಹಿಂದೆ ಹಣಕಾಸು ಸಚಿವನಾಗಿದ್ದಾಗ ಐದು ವರ್ಷಗಳಲ್ಲಿ ಒಂದು ಲಕ್ಷ ಶಿಕ್ಷಕರನ್ನು ನೇಮಕ ಮಾಡಿದ್ದೆ. 6 ಮತ್ತು 7ನೇ ವೇತನ ಆಯೋಗ ಜಾರಿ ಮಾಡಿದ್ದೇವೆ. ವೇತನ ಬಡ್ತಿ ಸೇರಿದಂತೆ ಉಳಿದ ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸಲಾಗುವುದು' ಎಂದು ಭರವಸೆ ನೀಡಿದರು.

'ಶಿಕ್ಷಕರು ದೇಶದ ಭವಿಷ್ಯವನ್ನು ರೂಪಿಸುವವರು. ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಶೇ 12ರಿಂದ 15ರಷ್ಟಿದ್ದ ಸಾಕ್ಷರತಾ ಪ್ರಮಾಣ ಪ್ರಸ್ತುತ ಶೇ 74ರಷ್ಟಿದೆ. ಮಕ್ಕಳಿಗೆ ಉತ್ತಮ ಬೋಧನೆ ನೀಡುವ ಜತೆಗೆ ಶಿಕ್ಷಕನ ನಡವಳಿಕೆಯೂ ಉತ್ತಮವಾಗಿರಬೇಕು. ವಿಷಯಗಳನ್ನು ತರ್ಕ, ಪ್ರಶ್ನೆ ಮಾಡಿ ಒಪ್ಪಿಕೊಳ್ಳಬೇಕು' ಎಂದರು. 4

ಪಟಾಕಿ ಘಟಕದಲ್ಲಿ ಸ್ಫೋಟ: 20 ಮಂದಿ ಸಾವು

ವೆಟ್ಲಪಾಲೆಂ (ಆಂಧ್ರಪ್ರದೇಶ) (ಪಿಟಿಐ): ಕಾಕಿನಾಡ ಜಿಲ್ಲೆಯಲ್ಲಿನ ಪಟಾಕಿ ತಯಾರಿಕಾ ಘಟಕವೊಂದರಲ್ಲಿ ಶನಿವಾರ ಸ್ಫೋಟ ಸಂಭವಿಸಿದ್ದು, ಒಂಬತ್ತು ಮಹಿಳೆಯರು ಸೇರಿ 20 ಮಂದಿ ಮೃತಪಟ್ಟಿದ್ದಾರೆ.

'ಒಂಬತ್ತು ಮಂದಿ ಗಂಭೀರವಾಗಿ ಗಾಯಗೊಂಡಿದ್ದು, ಸಾವಿನ ಸಂಖ್ಯೆ ಏರಿಕೆಯಾಗಬಹುದು' ಎಂದು ಆಂಧ್ರ ಪ್ರದೇಶದ ಗೃಹ ಸಚಿವೆ ವಂಗಲಪೂಡಿ ಅನಿತಾ ಅವರು ತಿಳಿಸಿದ್ದಾರೆ.

'ಸ್ಫೋಟ ಸಂಭವಿಸಿದ ವೇಳೆ 30ಕ್ಕೂ ಹೆಚ್ಚು ಕಾರ್ಮಿಕರು ಘಟಕದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಯಾರೂ ಬದುಕುಳಿಯುವ ಸಾಧ್ಯತೆಗಳಿಲ್ಲ' ಎಂದು ಸಚಿವ ಕಂಡುಲಾ ದುರ್ಗೇಶ್ ಅವರು ತಿಳಿಸಿದ್ದಾರೆ.

'ಸ್ಫೋಟದ ತೀವ್ರತೆಯು ಅಧಿಕವಾಗಿತ್ತು. ಕೆಲ ಮೃತದೇಹಗಳು ಸಮೀಪದ ಭತ್ತದ ಗದ್ದೆಯಲ್ಲಿ ಪತ್ತೆಯಾಗಿವೆ. ಉಳಿದ ಮೃತದೇಹಗಳ ಅವಶೇಷಗಳ ಪತ್ತೆಗಾಗಿ ಡ್ರೋನ್ ಅನ್ನು ಬಳಕೆ ಮಾಡಲಾಗಿತ್ತು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಸ್ಫೋಟಕ್ಕೆ ಕಾರಣವೇನು ಎಂಬ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ದೇಹಗಳು ಬಹುತೇಕ ಸುಟ್ಟುಹೋಗಿವೆ' ಎಂದು ತಿಳಿಸಿದರು.

'ರಕ್ಷಣಾ ಕಾರ್ಯದ ಬಗ್ಗೆ ಮಾಹಿತಿ ಪಡೆಯಲಾಗಿದೆ. ಗಾಯಗೊಂಡವರಿಗೆ ತಕ್ಷಣ ನೆರವು ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಚಿನಕುರುಳಿ — ಪ್ರಕಾಶ್ ಶೆಟ್ಟಿ



ಚೊಚ್ಚಲ ರಣಜಿ ಟ್ರೋಫಿ ಜಯಿಸಿದ ಕಣಿವೆ ಪ್ರದೇಶದ ತಂಡ

ಜಮ್ಮು–ಕಾಶ್ಮೀರ ತಂಡದ ಚಾರಿತ್ರಿಕ ಸಾಧನೆ

• ಗಿರೀಶ ದೊಡ್ಡಮನಿ

ಹುಬ್ಬಳ್ಳಿ: ಜಮ್ಮು–ಕಾಶ್ಮೀರದ ಕ್ರಿಕೆಟ್ ಕ್ಷೇತ್ರದಲ್ಲಿ ಶನಿವಾರದಿಂದ ಹೊಸ ಶಕೆ ಆರಂಭವಾಯಿತು. 67 ವರ್ಷಗಳಲ್ಲಿ ಇದೇ ಮೊದಲ ಸಲ ಅಲ್ಲಿಯ ತಂಡವು ರಣಜಿ ಟ್ರೋಫಿ ಗೆದ್ದಿತು.

ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಪಾರಸ್ ಡೋಗ್ರಾ ಬಳಗವು ಟ್ರೋಫಿ ಎತ್ತಿ ಹಿಡಿದಾಗ, ಆಟಗಾರರು, ನೆರವು ಸಿಬ್ಬಂದಿ ಮತ್ತು ಗಣ್ಯರ ಗ್ಯಾಲರಿಯಲ್ಲಿದ್ದ ಆ ರಾಜ್ಯದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರ ಕಂಗಳಲ್ಲಿ ಭಾವುಕತೆಯ ಹನಿಗಳು ಜಿನುಗಿದವು.

ಡೋಗ್ರಾ ಬಳಗವು ಎಂಟು ಸಲದ ಚಾಂಪಿಯನ್ ಕರ್ನಾಟಕ ತಂಡವನ್ನು ತಾಳ್ಮೆ ಮತ್ತು ಯೋಜನಾಬದ್ಧ ಆಟದ ಮೂಲಕ ಕಟ್ಟಿಹಾಕಿತು. ಡ್ರಾ ಆದ ಪಂದ್ಯದಲ್ಲಿ ಆತಿಥೇಯ ತಂಡಕ್ಕೆ ಮೊದಲ ಇನಿಂಗ್ಸ್‌ನಲ್ಲಿ 291 ರನ್‌ಗಳ ಬೃಹತ್ ಹಿನ್ನಡೆಯ ಕಹಿಯುಣಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ್ದ ತಂಡವು 584 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಕರ್ನಾಟಕವು 293 ರನ್ ಗಳಿಸಿ ನಾಲ್ಕನೇ ದಿನದಾಟದಲ್ಲಿ ಎಲ್ಲ ವಿಕೆಟ್ ಕಳೆದುಕೊಂಡಿತ್ತು. ಮಯಂಕ್ ಅಗರವಾಲ್ ಅವರು ಶತಕ ಗಳಿಸಿದ್ದರು. ಉಳಿದ ಅಗ್ರಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದ್ದರು. ಎರಡನೇ ಇನಿಂಗ್ಸ್‌ನಲ್ಲಿ ಕಮ್ರಾನ್ ಇಕ್ಬಾಲ್ (ಅಜೇಯ 160) ಮತ್ತು ಪ್ರಥಮದರ್ಜೆ ಕ್ರಿಕೆಟ್‌ನಲ್ಲಿ ಚೊಚ್ಚಲ ಶತಕ ದಾಖಲಿಸಿದ ಸಾಹಿಲ್ ಲೋತ್ರಾ (ಅಜೇಯ 101) ಅವರ ಆಟದಿಂದಾಗಿ ಶನಿವಾರ ಮಧ್ಯಾಹ್ನದ ವರೆಗೂ ಕರ್ನಾಟಕದ ಬೌಲರ್‌ಗಳು ಹೆಣಗಾಡಿದರು. ಇನಿಂಗ್ಸ್ ಡಿಕ್ಲೇರ್ ಮಾಡಿದ ತಕ್ಷಣ ಘೋಷಣೆಯಾಯಿತು. ಮುನ್ನಡೆಯ ಮೊತ್ತ 633ಕ್ಕೇರಿತ್ತು.



ರಣಜಿ ಟ್ರೋಫಿ ಗೆದ್ದ ಜಮ್ಮು ಮತ್ತು ಕಾಶ್ಮೀರ ತಂಡವು ಅಲ್ಲಿನ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರೊಂದಿಗೆ ಫೋಟೊಗೆ ಪೋಸ್ ನೀಡಿತು ಚಿತ್ರ: ಗೋವಿಂದರಾಜ ಜವಳಿ

ವಿಬಿಎಸ್‌ಎ ಮಸೂದೆ: ಗೊಂದಲ ಪರಿಹಾರ

ರಾಷ್ಟ್ರೀಯ ಶಿಕ್ಷಣ ನೀತಿ–2020ಕ್ಕೆ ಪೂರಕವಾಗಿ ಮಸೂದೆ
ಸಂಘಟನಾ ಕಾರ್ಯದರ್ಶಿ ಬಿ.ಆರ್. ಶಂಕರಾನಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಈಗ ಶಿಕ್ಷಣದ ವಿವಿಧ ವಿಭಾಗಗಳನ್ನು ವಿಭಿನ್ನ ಸಂಸ್ಥೆಗಳು ನಿಯಂತ್ರಿಸುತ್ತಿವೆ. ವಿಕಸಿತ ಭಾರತ ಶಿಕ್ಷಾ ಅಧಿಷ್ಠಾನ (ವಿಬಿಎಸ್‌ಎ) ಮಸೂದೆ ಜಾರಿಗೆ ಬಂದರೆ ಎಲ್ಲವೂ ಒಂದೇ ಮುಖ್ಯ ವ್ಯವಸ್ಥೆಯಡಿ ಇರಲಿದ್ದು, ಗೊಂದಲ ಪರಿಹಾರಗೊಳ್ಳಲಿದೆ ಎಂದು ಭಾರತೀಯ ಶಿಕ್ಷಣ ಮಂಡಲದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಆರ್. ಶಂಕರಾನಂದ ಅವರು ತಿಳಿಸಿದರು.

ಭಾರತೀಯ ಶಿಕ್ಷಣ ಮಂಡಲ, ಕರ್ನಾಟಕ– ದಕ್ಷಿಣ ವತಿಯಿಂದ ಮಿಥಿಕ್ ಸೊಸೈಟಿ ಸಹಯೋಗದಲ್ಲಿ ಶನಿವಾರ ವಿಬಿಎಸ್‌ಎ ಮಸೂದೆ ಬಗ್ಗೆ ಹಮ್ಮಿಕೊಂಡಿದ್ದ ದುಂಡು ಮೇಜಿನ ಸಭೆಯಲ್ಲಿ ಅವರು ಮಾತನಾಡಿದರು.


ವಿಕಸಿತ ಭಾರತ ಶಿಕ್ಷಾ ಅಧಿಷ್ಠಾನ (ವಿಬಿಎಸ್‌ಎ) ಮಸೂದೆ ಕುರಿತ ದುಂಡು ಮೇಜಿನ ಸಭೆಯಲ್ಲಿ ಎಸ್‌.ಎಸ್‌. ಮಂಥ, ಎಂ.ಆರ್‌. ಜಯರಾಮ್‌, ಬಿ.ಆರ್‌. ಶಂಕರಾನಂದ, ಅಜಯ್‌ ರಾವಲ್‌ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

‘ಭಾರತವು 2047ರ ವೇಳೆಗೆ ಸಂಪೂರ್ಣ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು, ವಿಕಸಿತ ಭಾರತ ಎಂದು ಕರೆಸಿಕೊಳ್ಳಲು ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಶಿಕ್ಷಣದ ಸುಧಾರಣೆ ಅಗತ್ಯ. ಅದಕ್ಕೆ ಪೂರಕವಾಗಿ ವಿಬಿಎಸ್‌ಎ ಮಸೂದೆ ಸಿದ್ಧಪಡಿಸಲಾಗಿದೆ’ ಎಂದರು.

‘ಯುಜಿಸಿ ವಿಶ್ವವಿದ್ಯಾಲಯಗಳನ್ನು ನಿಯಂತ್ರಿಸುತ್ತಿದೆ. ತಾಂತ್ರಿಕ ಶಿಕ್ಷಣ ಮಂಡಳಿಯು ಎಂಜಿನಿಯರಿಂಗ್ ಮತ್ತು ನಿರ್ವಹಣಾ ಕೋರ್ಸ್‌ಗಳನ್ನು ನಿರ್ವಹಿಸುತ್ತದೆ. ಶಿಕ್ಷಕರ ತರಬೇತಿಯನ್ನು ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ ನಿರ್ವಹಿಸುತ್ತದೆ. ಹೀಗೆ ಪ್ರತ್ಯೇಕವಾಗಿ ಇರುವುದು ಗೊಂದಲ ಮತ್ತು ವಿಳಂಬಕ್ಕೆ ಕಾರಣವಾಗಿದೆ ಎಂದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಜಯಕರ ಶೆಟ್ಟಿ, ಎಂ.ಎಸ್. ರಾಮಯ್ಯ ವಿಶ್ವವಿದ್ಯಾಲಯದ ಸಾಮಾಜಿಕ ವಿಜ್ಞಾನ ಮತ್ತು ಕಾನೂನು ಶಾಲೆ ನಿರ್ದೇಶಕ ಗುರುಚರಣ್ ಗೊಲ್ಲರಕೇರಿ, ಭಾರತೀಯ ವಿಜ್ಞಾನ ಸಂಸ್ಥೆಯ ಪ್ರವೀಣ್ ರಾಮಮೂರ್ತಿ, ಸತ್ಯಂ ಸುವಾಸ್, ವೀರಣ್ಣ ಕಮ್ಮಾರ್ ಭಾಗವಹಿಸಿದ್ದರು.

‘ಶಿಕ್ಷಣ ಕ್ಷೇತ್ರಕ್ಕೆ ಹೊಸ ಆಯಾಮ’

ಆಲ್ ಇಂಡಿಯಾ ಕೌನ್ಸಿಲ್ ಫಾರ್ ಟೆಕ್ನಿಕಲ್ ಎಜುಕೇಶನ್‌ನ ಮಾಜಿ ಅಧ್ಯಕ್ಷ ಎಸ್‌.ಎಸ್‌. ಮಂಥ ಮಾತನಾಡಿ, ‘ಮಸೂದೆಯಲ್ಲಿ ನೀಡಿರುವ ಆಡಳಿತಾತ್ಮಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ವಾಯತ್ತತೆ ಶಿಕ್ಷಣ ಕ್ಷೇತ್ರಕ್ಕೆ ಹೊಸ ಆಯಾಮವನ್ನು ನೀಡಲಿದೆ’ ಎಂದರು.

ಎಂ.ಎಸ್‌. ರಾಮಯ್ಯ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್‌. ಜಯರಾಮ್ ಮಾತನಾಡಿ, ‘ಸ್ವಾತಂತ್ರ್ಯದ ಏಳು ದಶಕಗಳ ನಂತರ ಭಾರತದಲ್ಲಿ ಇದು ಮಹತ್ವದ ಬದಲಾವಣೆಯಾಗಿದೆ. ಜನರ ಚಿಂತನೆಗೆ ಹೊಸ ದಿಕ್ಕನ್ನು ನೀಡಲಿದೆ’ ಎಂದು ಹೇಳಿದರು.

ಈಸ್ಟ್ ಪಾಯಿಂಟ್ ಉದ್ಯಮ ನಾಯಕತ್ವ ಸಮಾವೇಶ

ಬೆಂಗಳೂರು: ಸುಸ್ಥಿರ ಪ್ರತಿಭೆಗಳ ಸೃಷ್ಟಿಗೆ ‘ಈಸ್ಟ್ ಪಾಯಿಂಟ್ ಉದ್ಯಮ ನಾಯಕತ್ವ ಸಮಾವೇಶ-2026’ (ಇಪಿಐಎಲ್‌ಸಿ) ಅನ್ನು ಈಸ್ಟ್ ಪಾಯಿಂಟ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಹಮ್ಮಿಕೊಂಡಿತ್ತು.

‘ಭವಿಷ್ಯದ ಕಾರ್ಯಪಡೆಯ ರೂಪಿಸುವಿಕೆ’ ಗೋಷ್ಠಿಯಲ್ಲಿ ವಿವಿಧ ಕಂಪನಿಗಳ ಅಧಿಕಾರಿಗಳು ಭಾಗವಹಿಸಿದ್ದರು. ‘ಸುಸ್ಥಿರ ಪ್ರತಿಭೆಗಳ ನಿರ್ಮಾಣದಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ’ ಎಂಬ ವಿಷಯದ ಮೇಲೆ ಸಂವಾದ ನಡೆಯಿತು.

ಸಿಐಟಿಐನ ವೀರಣ್ಣಾಜಿ ಶಿವಣ್ಣ, ಸಿಸ್ಕೊದ ನಿತಿನ್ ಗುಡಿಮನಿ, ಸ್ನೋಫ್ಲೇಕ್‌ನ ರಾಜೇಶ್ ನಂಬಿಯಾರ್, ಯುಎಸ್‌ಟಿ ಗ್ಲೋಬಲ್‌ನ ಡಾ. ದಿನೇಶ್ ಮುರುಗನ್ ಮತ್ತು ಮೈಕ್ರೊಚಿಪ್ ಟೆಕ್ನಾಲಜಿಯ ಅಮಿತ್ ಶಾಲಿ ಅವರು ಭಾಗವಹಿಸಿದ್ದರು. ಬ್ಯಾಂಕಿಂಗ್, ಸೆಮಿ ಕಂಡಕ್ಟರ್ ಮತ್ತು ಕ್ಲೌಡ್ ಕಂಪ್ಯೂಟಿಂಗ್ ಕ್ಷೇತ್ರಗಳ ಹೊಸ ನೇಮಕಾತಿ ಸವಾಲುಗಳ ಬಗ್ಗೆ ಮಾಹಿತಿ ನೀಡಿದರು.

ಉದ್ಯಮದ ಅಗತ್ಯಕ್ಕೆ ತಕ್ಕಂತೆ ಪಠ್ಯಕ್ರಮ ಪರಿಷ್ಕರಣೆ, ಇಂಟರ್ನ್‌ಶಿಪ್ ಮತ್ತು ಪ್ರಾಜೆಕ್ಟ್ ಆಧಾರಿತ ಕಲಿಕೆಗೆ ತಜ್ಞರು ಸಲಹೆ ನೀಡಿದರು.

ಗೀತಂ ಸ್ಕೂಲ್ ಆಫ್ ಎಜುಕೇಷನ್ ಆರಂಭ

ಬೆಂಗಳೂರು: ಗೀತಂ ಡೀಮ್ಡ್ ಟು ಬಿ ಯೂನಿವರ್ಸಿಟಿ ಹೈದರಾಬಾದ್‌ನಲ್ಲಿ ತನ್ನ ‘ಗೀತಂ ಸ್ಕೂಲ್ ಆಫ್ ಎಜುಕೇಷನ್’ ಅನ್ನು ಪ್ರಾರಂಭಿಸಿದೆ. ರಾಷ್ಟ್ರೀಯ ಶಿಕ್ಷಣ ನೀತಿ 2020ರ ದೂರದೃಷ್ಟಿಯೊಂದಿಗೆ ಭವಿಷ್ಯದ ಬೋಧಕರನ್ನು ಸಿದ್ಧಪಡಿಸುವ ತನ್ನ ಬದ್ಧತೆಯನ್ನು ಸಾಧಿಸಲು ಇದು ಮೈಲುಗಲ್ಲಾಗಿದೆ ಎಂದು ಸಂಸ್ಥೆ ತಿಳಿಸಿದೆ.

ಹೊಸದಾಗಿ ಸ್ಥಾಪನೆಯಾಗಿರುವ ಸ್ಕೂಲ್ ಆಫ್ ಎಜುಕೇಷನ್, 4 ವರ್ಷಗಳ ಸಮಗ್ರ ‘ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳನ್ನು’ (ಐಟಿಇಪಿ) 2026–27ನೇ ಸಾಲಿನಿಂದ ಆರಂಭಿಸಲಿದೆ. ಈ ಬಿ.ಎಸ್‌ಸಿ, ಬಿ.ಇಡಿ, ಮತ್ತು ಬಿಎ ಕೋರ್ಸ್‌ಗಳಲ್ಲಿ ಶಿಸ್ತುಬದ್ಧ ಜ್ಞಾನದ ಪಠ್ಯಕ್ರಮಗಳನ್ನು ವೃತ್ತಿಪರ ಶಿಕ್ಷಕರ ತರಬೇತಿಯೊಂದಿಗೆ ನೀಡಲಾಗುತ್ತದೆ. ಪ್ರತಿಯೊಂದು ಕೋರ್ಸ್‌ಗೆ ತಲಾ 50 ವಿದ್ಯಾರ್ಥಿಗಳಿಗೆ ಪ್ರವೇಶವಿರುತ್ತದೆ. ಐಟಿಇಪಿ ಮೂಲಕ ವಿದ್ಯಾರ್ಥಿಗಳು ವಿಜ್ಞಾನ, ಗಣಿತ, ಇಂಗ್ಲಿಷ್ ಅಥವಾ ಸಮಾಜ ವಿಜ್ಞಾನದಲ್ಲಿ ಪರಿಣತಿ ಪಡೆಯಬಹುದು.


ಹೈದರಾಬಾದ್‌ನಲ್ಲಿರುವ ಗೀತಂ ಡೀಮ್ಡ್ ಟು ಬಿ ಯೂನಿವರ್ಸಿಟಿ

‘ತತ್ವಶಾಸ್ತ್ರ, ಸಮಾಜಶಾಸ್ತ್ರ ಮತ್ತು ಮನೋವಿಜ್ಞಾನದ ಫೌಂಡೇಷನ್ ಕೋರ್ಸ್‌ಗಳನ್ನು ಶೈಕ್ಷಣಿಕ ನೀತಿ, ಶಾಲಾ ಪರಿಸರ, ಮೌಲ್ಯಮಾಪನ ಪ್ರಕ್ರಿಯೆಗಳೊಂದಿಗೆ ಶೈಕ್ಷಣಿಕ ವರ್ಷದಲ್ಲಿ ರೂಪಿಸಲಾಗಿದೆ’ ಎಂದು ಗೀತಂನ ಸಹ ಕುಲಪತಿ ಪ್ರೊ. ಡಿ.ಎಸ್. ರಾವ್ ತಿಳಿಸಿದ್ದಾರೆ. ಮಾಹಿತಿಗೆ www.gitam.edu

‘ಗ್ಯಾರಂಟಿ’ಗಳಿಗೆ ₹ 1.20 ಲಕ್ಷ ಕೋಟಿ ವೆಚ್ಚ’

ಬೆಂಗಳೂರು: ‘ಐದು ಗ್ಯಾರಂಟಿ ಯೋಜನೆಗಳಿಗೆ ಈವರೆಗೆ ಒಟ್ಟು ₹1.20 ಲಕ್ಷ ಕೋಟಿ ವೆಚ್ಚವಾಗಿದೆ. ಗ್ಯಾರಂಟಿ ಯೋಜನೆಗಳು ಕೇವಲ ಹಣದ ಸಹಾಯವಲ್ಲ, ಗೌರವದ ಭರವಸೆ’ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷರೂ ಆಗಿರುವ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಹೇಳಿದ್ದಾರೆ.

‘ಗ್ಯಾರಂಟಿಗಳು ಸ್ಥಗಿತಗೊಳ್ಳಲಿವೆ ಎಂದು ವಿಪಕ್ಷಗಳು ಅಪಪ್ರಚಾರ ಮಾಡುತ್ತಿವೆ. ಆದರೆ, ಯೋಜನೆಗಳು ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ. ರಾಜ್ಯ ಸರ್ಕಾರದ ‘ಗೃಹಲಕ್ಷ್ಮಿ’ ಗ್ಯಾರಂಟಿ ಯೋಜನೆಯ 26ನೇ ಕಂತಿನ ₹2 ಸಾವಿರ ಫಲಾನುಭವಿಗಳ ಖಾತೆಗೆ ಜಮೆ ಆಗಿದೆ. ಆ ಮೂಲಕ, ಪ್ರತಿ ಮನೆಯ ಯಜಮಾನಿಗೆ ಈವರೆಗೆ ಒಟ್ಟು ₹52 ಸಾವಿರ ಪಾವತಿ ಆದಂತಾಗಿದೆ’ ಎಂದು ಅವರು ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

ANJANAPURA 8TH Block, 30x40,BDA Site For sale Good Location Genuine Buyers Contact : 9980775693

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BANASHANKARI 6TH STAGE, 11th BLOCK, CLOSE UTTARAHALLI MAIN ROAD, 40x60 SALE. GOOD LOCATION. MANOJ: 9731410616

BSK 3RD-STAGE SALE 40x60 PRIME RESIDENTIAL SITE HOUSE NEAR WATER TANK RS.30K NEGOTIABLE. Shivu: 9880004149

WEST FACING BDA site 9Mx12M for sale in BSK 6th Stage, 2nd Block. call: 9663611844

BDA BSK 6th-Stage 4th Block 20x30 North Facing Site 75 Lakhs negotiable. "ABHILASHA CONSULTANT"- 9480565758

40'X60' WEST Facing BDA site BSK Sixth Stage 4B Block FE. Contact:- 9481424697 / 698

BSK 2ND stage 15th main, 50x90 West (Old Bungalow) 14.50 crore. Brokers excuse. Aumkaran's -9448487387.

SALE BDA 30x40 East Facing, BSK 6th Stage, 2nd Block, 18.5k per sft. Contact Owner: 9980333100

BTM Layout

SITE FOR Sale 30×40 40×60 East North Facing BTM 2nd Stage 25000 to 30000, 9945377119 /9844099557

Gnanabharathi

30X40 RESIDENTIAL SITE FOR SALE, NORTH FACING, JNANABHARATHI 1st BLOCK, NEAR to METRO STATION. Call: 8147618891.

Hennur

HENNUR 20X45 North West Corner B ekatha site sale HIREMATH LAYOUT, KOTHANUR Rs.6000/- 9945033366

Hanumanthnagar

FOR SALE 40x60 North in HANUMANTHANAGAR and 30x50, 40x60 in GIRINAGAR. Contact immediately : 8618373754

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

BDA SITE for Sale 40 feet Road, 20/30 Kempegowda Layout 1st block Broker Excuse:7349549087

DH Classifieds More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
Book your ad with us now! For more details contact:
+91 9845114560| +91 9886213331 | 080-45557163/164

Multiple Locations

BANASHANKARI VI 30x40 40x60 50x80, Vishweshwaraiah 30x40 40x60 50x80, Kempegowda 30x40 40x60 50x880 and 10,000, 15000 sqft sites. 9448483699.

Nagarabhavi

"NAGARABHAVI DEEPA-COMPLEX 40x60 North East Corner, 30x48 West 40 feet Road Immediate Registration. 9448432633"

"AVAILABLE 40X60, 50X80 Sites in Nagarbhavi, ITI Layout, Vishveshwaraiah Layout, Kempegowda Layout. Call: 9945494074"

40X60 WEST facing Site for sale. MPM Lyt 2nd Main (60ft Road) Nagarbhavi 2nd Stg. Close to upcoming Metro St. Contact 9900866995

Nelamangala

BYRASHETTYHALLI AISHWARYA County BMRDA 40x60, East And Banashankari BDA 30x40,Sites For Sale : 9620117773/9845857006

Rajajinagar

RAJAJINAGAR 2ND Stage, 5th Main, 'E' Block, No 1491/2, 30x36 BDA Site Sale, West. 9845729728.

RAJAJINAGAR 3RD Block Bashyam Circle BDA SITE Sale 28x32, No 1, East Facing. Contact. 9972599170.

30X30 NORTH commercial Property Dr. Rajkumar Road, Near Dharmasthala Kalyana Mantapa, RajajiNagar 6th Block. 9060406731

Sanjaynagar

SALE 50X81 Site S/F Semi Commercial, 60' Road Sanjaynagar Near Vibhav Theatre. Price 30000/-sft. 9845751918

Vishweshwariah Layout

"VISVESHWARAIAH LAYOUT 6th Block 40x60 South facing Site for sale Good Location Genuine Buyers Contact: 9845500019/ 7019314962"

BDA SITE SALE VISHWESHWARAIAH LAYOUT 2nd Block 40X60 NORTH FACE NEAR 100FT ROAD GOOD LOCATION CONTACT: 8892901567

DIRECT OWNER 20x30 E/F BDA Site Sale, VISHWESHWARAIAH LAYOUT BLOCK-9 near RTO Office Mallathalli. 9742681666

SMV LAYOUT 8TH BLOCK, 50x80 N/F, 40ft ROAD, NEAR NPS SCHOOL, PRIME LOCATION, SITE SALE: 9164089633/ 9663226688

SMV LAYOUT 2nd BLOCK 20x30 WEST FACE, BUILDER LOCATION, SITE FOR SALE. Call: 9164089633, 9663226688.

SALE 50X80 West BDA 40 Feet Road Rs 9250/- Negotiable Vishweshwaraiah Layout Contact 9916826976

BDA SITE For Sale @ Vishweshwaraiah Layout 30x40, 40x60, 50x80 Contact: 6363496142 9845555666

DIRECT OWNER 20x30,30x40 Sites Sale, Near RTO Office, Vishweshwaraiah Layout, Very Good Location: 9620696913/ 9880781399

Mysore

MUDA SITE FOR SALE 40x60 DATTAGALLI, MYSORE. CONTACT 89044 97670

House

Anjanapura

ANJANAPURA BDA 4TH BLOCK BRAND NEW DUPLEX HOUSE BUILT ON 700 SQFT WITH LIFT OWNER 9980079792

Bannerghatta Road

BHANNERGHATTA ROAD 30x40 East with old Duplex House near M.S.Ramaiah City and Aradhana school 1.8crores. Contact: 9945033366

Basavanagudi

SALE 45X110 Semi Commercial Site near DVG Road with House, 39k/= Sft, negotiable. Call. 9886044313.

Hennur

SALE ROW house 4BHK fully furnished Hennur Kothanur Road. Opposite to Salarpuria Gold Summit. Site 2600Sft Building 5600Sft. 3 carparks. Arun 9845077299.

Nagarabhavi

BDA 20X20 G+2 Building N/F Pattegarapalya, Nagarabhavi, A/E Katha, Price 68 Lakh Owner 9740073482

Uttarahalli

UTTARAHALLI BHARAT HOUSING SOCIETY, OPPOSITE PARK, 20X40 WEST FACING 3 BHK DUPLEX HOUSE SALE. 9945724472.

Yelahanka

YELAHANKA ATTUR MAIN ROAD, MUNESHWAREA BADAVANE: 40x70 site with Builtup 1550sft Vaastu INDEPENDENT HOUSE SALE 5.5crores. Serious buyers Contact: 9483700875

Villas/Bunglows

East

4 BHK independent villa, gated community, 5 bathrooms, beautifully maintained, contact 7674928555

Flat

Basavanagudi

SALE: BASAVANAGUDI 3BHK FLAT with Servant Room. Total Area 3000 SFT Lift, Carpark. Contact: 99010-66464

Mathikere

A 1800 sq.ft. 3 BHK with 3 baths and 5 balconies flat in Donata Marvel Apartment. Sundernagar Gokul extension Bangalore-54 is for sale. The above Flat is fully furnished with 4 AC and two basement car parking price 2.1 crores, negotiable. Contact: 9845033544

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Agricultural Land

Hosur Road

HOSUR AGRICULTURAL LAND for sale 1.5ACRE 320x200ft 500mtrs from STRR Bagalur 3.3crores. Contact: 9945033366

Commercial Building

Jayanagar

FOR SALE Commercial Property, Three Floors Building Approximately 6000 Sft @ 28th Main, Byrasandra. 9845022435.

Commercial Land

Tumkur Road

SALE COMMERCIAL BDA Site Facing Tumkur Road, Opposite Metro cash and carry, Measuring 150x125 Fully or partly. Owner 9480060249.

Yeshwanthpur

PRIME-COMMERCIAL- LAND 56,000 SQ.FT. on Tumkur Road, Yeshwantpur, Near Sparsh Hospital. Ph: 9845202433

Commerical

Basaveshwaranagar

BASAVESHWAR NAGAR 100 Feet Road Commercial 40X60 BDA Property For Sale Call: 9341260828

Bannerghatta Road

SALE: SEMI-COMMERCIAL A/E Khata 5020 Sft- West Plot at Devarachikkanahalli Bilekahalli Ward. Contact: 9845005855

Industrial & Factory

Jigani

SALE: MNC Tenanted INDUSTRIAL/ WAREHOUSE Plot- ANEKAL Industrial Park 7.20 Acres. Developer share of 5 Acres being Sold. Monthly Rental Income- 35Lakhs, 4Crores Deposit on long lease with 5% increase in Annual Rent. Contact BV Ananthkumar: 9845005855

Tumkur Road

SALE 20 Acres Industrial Zone Land, 100 feet Road, Suitable for Industry/ Warehouse/ Commercial. 9141326819

Residential/ Commercial

Marathahalli

TENENTED BUILDING SALE, KUNDANAHALLI, ITPL ROAD, 30X40 Site, Building 6500sft, Getting 2.80L, SALE:3.85cr. Call: 9980577227

Bangalore North

SALE 6825 sqft residential plot Lush greenery coconut Teak silver fruits trees atchikkajala just 20mins BLR airport 9448717222

REAL ESTATE BUYING

Commerical

General

COMMERCIAL/ SEMI Commercial Rental income building with clear titles, good location. Only interested owners (brokers excuse) contact 9035464075, 9035838641

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement, genuine Sellers Contact: 9902038118, 9449060605

WANTED SITE ANJANAPURA BCCHS Layout Narayan`Nagar Jayanagar Housing Society, Banashankari 6th`Stage 30x40,40x60. Direct Registration. Broker Excuse. Call:9663454878

Banashankari

BDA-SITES WANTED @ BSK 6th Stage all Blk Vishweshwaraiah Lyt Kempegowda Lyt 30x40, 40x60, 50x80 Call:9845555666

Multiple Locations

WANTED BDA Sites Anjanapura- Arkavathi, Banashankari 6th stage, Vishweswaraiah, Kempegowda, Dr. Shivaramkaranth Layout. Contact: Sapthagiri "(Opposite BDA Head Office) "9036360366.

Nagarabhavi

"WANTED 40X60, 50x80 SITE EAST or NORTH facing SITES in Nagarbhavi, Vishveshwaraiah Layout, Railway, Upkar Layout. Call:-6366903154"

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

FOR RENT/ SALE Fully Furnished Office 3rd Floor on Old Airport Road VDB TOUCHDOWN Next to HAL Museum 7447Sqft 96 Work Stations 5 Cabins 3 Meeting Room 1 Board 1 MD Cabin 6 Carparks. No PHONE CALLS WHATS APP MESSAGE ONLY TO: 9845031550

PRIME COMMERCIAL RR.NAGAR RENT 4000.sqft CORNER.& PRIME COMMERCIAL 100`FEET ROAD, HAROHALLI, JAIN UNIVERSITY OPP. RENT 7000.sqft. Call:8147618891

COMMERCIAL SPACE FOR RENT- GUBBI BH ROAD, GF: 3200sqft, 1st: 3200sqft, 2nd: 3600sqft, Ideal for: Banks, Car Showroom, College, Corporate Office. Contact- 9448040198

COMMERCIAL SPACE Available immediately: Suitable for Showroom 1000sqft. Ground Floor, Malleshwaram 8th Cross, Guttahalli Road Excellent frontage, equipped with 5KVA power. Expected Rent: Neg 1.20Lakhs. Serious enquiries only. Contact: 9632222213

Flats

3BHK APARTMENT RENT with All Amenities with 500 Sft backyard at Rajaprakruti Apartment Jayanagar 1st Block Close to Ashoka Pillar: 9916909430

"3BHK JAYANAGAR Rent ₹90000/-, Lease Rs.1 Crore 2BHK Kanakapura Road Near Konanakunte Metro Station. 9845286505"

3 BHK Flat- Lease, Sahakarnagar. 3 years 32 Lakhs- Car Parking + Terrace Garden, Lift. No Agents. 8660867713.

Industrial And Factory

AVAILABLE INDUSTRIAL Warehouse 160000 sqft Vijipura, Hoskote. Contact: 9341234288/ 9663224353/ 9845417487.

RENT, PEENYA, 50,000 Land with 9000 ACC Shed. 200 KVA. Rs. 20/- sqft. 9590909945, 9844083019

House

SINGLE ROOM with Attached Bathroom Available for Rent for Bachelor or Student. Near New Court, Hubballi. Contact: 8105401538.

JOB OPPORTUNITIES

Accounts & Finance

WANTED SENIOR ACCOUNTANT with 10-15 years experience for a Reputed Real Estate Company. Interested candidates may kindly mail their resumes to: info@ highgateshotel.com

Engg/ Production Technical

SERVICE ENGINEERS for ATLAS COPCO SCREW Compressors Location Bangalore ITI/ Diploma Electrical/ Mechanical Fresher/ 2-3 Years experience Email: chandra@synergics.in/ Mob: 9341856562

Graphic Designers

WANTED GRAPHIC DESIGNER/ DTP OPERATOR. Experience in CorelDRAW, Kannada, English Typing'skills, Fresher's can also apply. 9845597155. enquiry@spoorthiads.com

General

WANTED OFFICE ASSISTANTS and HELPERS for an Electronic Industry in JP-Nagar 7th Phase, Bangalore-78. Contact: 9141009161 between 10AM and 5PM.

WEEKEND CORNER
ಕ್ಲಾಸಿಫೈಡ್ಸ್

UGADI OFFER !



₹ 17,500/- Inclusive of all taxes
1 KVA UPS + 150 AH Amaron Quanta Tubular Battery + Trolley
9538773551, 9538097448 | www.synergytechups.in

FOR SALE
30000 SQ.FT.BUILDING WITH 3 FLOORS AND PARKING AT ESI LAYOUT, KUDLU GATE, CONTACT
9880498007
Email- associates.blr10@gmail.com

INTL. AIRPORT ROAD
West Facing 45,000sft
East Facing 11,500sft
Converted Commercial Property For Sale.
Suitable For MNC Office, Showroom, Bank, College.
High Rental Income Building.
Just 2 Km Before Devanahalli Airport
On Good Terms, Very High Appreciation.
7022446922

CONSTRUCTION MATERIALS FOR SALE
Large quantity of used construction materials in good conditions. Such as Shuttering Plate, Jacks, Spans, Cuplock scafolding & Machinery such as 1Bag, 2, 3&4 Bag Mixers, and Tractor Mounted 16 KVA D.G, Material hoist Electrical & Diesal 30 & 40 mts height, Cutting & Bar Bending Machines (Electrical) for sale.
Passenger hoist 40 mts height for sale.
Office space for rent near Shivananda Circle. (950 sq.ft & 250 sq.ft)
Contact: 6360605636 / 8431164733

Hospital & Medical Jobs

NABH Accredited P D Hinduja Sindhi Hospital, Multispeciality Bangalore Requires
1. Paediatrician: DNB/MD
2. General Medicine: DNB/MD
3. ENT/Otolaryngology: DNB/MS
4. Obstetrics and Gynaecology- Registrar: DGO/MS
5. Dermatologist: DNB/DVD/MD
6. HR Manager - MBA - HR
7. Marketing Manager / Marketing Executive
8. Insurance Manager
9. Deputy Nursing Superintendent - BSc, MSc, Nursing

Salary Negotiable
Mail Resume to the CEO Office ceo@hindujasindhihospital.com
Mobile: 78100 88750 77957 77355

Marketing & Sales

VANTAGE TECHNOLOGIESJ.P. Nagar 3rd Phase, BangaloreRequire Marketing Engineer,Aerospace IndustryEXP: 0 to 2 yrs, Salary 15k to 25kPh: 9019637966 / 080 42198501Email: cvs@vantage.org.in

WANTED SALE'S EXECUTIVES experienced in industrial products selling with two wheeler Contact; AMIT INDUSTRIES. 9739826852

Security & Detectives

JOB VACANCY Company Appointment SECURITY GUARD, SUPERVISOR, Salary Rs. 18,600 to 25,000, P.F., E.S.I., BONUS, FOUR Weekly off J.P.NAGAR, Marathahalli Kundalahalli. 9036374114 9686684009 9600325583 6361106051

MARKETING EXECUTIVES & Accountant required for Security & property management Company, Bangalore. Attractive salary + incentives. Contact: 9743265995/ 9019198255

Teachers/ Professors

REQUIRES EXPERIENCED Primary and High School Teachers with B.A / B.Sc., B.Ed / M.A / M.Sc., M.Ed to teach Science, English, Mathematics and Sanskrit. English fluency is must. Walk-in-Interview. Contact Max Muller Public School, Mahalakshmi Layout, B'lore-96. Ph: 23376050. E-mail- maxmullerpublicschool.mlayout@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

515 ABW HIGH SCHOOL
Halasuru, Bangalore-08
REQUIRES
TEACHING & NON TEACHING STAFF ON CONTRACT BASIS
Kindly visit: http:// 515armyschool.co.in/recruitment for detailed advertisement or
Contact: 080-25307559

IMPACT COLLEGE OF ENGINEERING & APPLIED SCIENCES
Kodigehalli, Sahakaranagar, Bangalore-560092.
REQUIRES FACULTY
invites applications from candidates eligible for the following positions for BE - CSE / AIML / Data Science / Cyber Security, ECE, Civil and Mechanical Engineering.
ASSOCIATE PROFESSOR
ASSISTANT PROFESSOR
WALK IN INTERVIEW
Monday to Friday - 10am to 3pm
VENUE: IMPACT Campus, Kodigehalli, Sahakaranagar, Bengaluru - 560092
(AICTE rules apply for eligibility and compensation)
IMP-25610

Sri Saraswathi Vidyaniketana Dommasandra
REQUIRE QUALIFIED TEACHERS
English: Any Degree with D.Ed
English / History: BA.B Ed
Science/Maths: BSc.B.Ed (PCM)
Computer: BCA
Yoga (Lady): Diploma / Degree
Good communication skills in English, Contact: 94480 28933 / 84978 55814
Drop Your CV within 09.03.2026
ssvn1980@gmail.com

REPUTED PU COLLEGE @ HESARAGHATTA ROAD REQUIRES PRINCIPAL AND OTHER FACULTY MEMBERS FOR ENGLISH, ACCOUNTANCY, COMPUTER SCIENCE, ECONOMICS, BUSINESS STUDIES AND HINDI. CONTACT: 6360291124. Mail: ashakashyap1380@gmail.com

ST FLOWERS ENGLISH SCHOOL ICSE- STATE, Bangalore. 9686732171, 080- 23399884/ 080- 23408832. stflowerenglishschool@gmail.com. Required Experience Trained Teachers for the Academic Year 2026- 2027. For Primary and High School. Kannada, Hindi, English, Social Teacher (MA, B.Ed) Maths, Science (M.Sc, B.Ed) Physical Education (BPEd, MPEd) Computer Science (M.Sc, B.Ed) Nursery Teachers NTT, Basic Degree with B.Ed Trained teachers.

"WANTED REPUTED School and College 1).PUC- Principal, 2).Qualified Teachers, 3).Office Clerks. Contact: 9845042360/ 8095554686"

Office Boys/ Peon

REQUIRED OFFICE Assistant with Driving Work @ Kengeri, Salary plus incentive. Contact Immediately: 9742564053

Wanted

IMMEDIATE HIRING. N B REALTY- BUSINESS DEVELOPMENT EXECUTIVES, REAL ESTATE AGENTS, FRESHERS, AND STUDENTS CAN APPLY. MAKE UP TO 35,000 PER MONTH TO *3,50,000 PER MONTH. APPLY TODAY! Send your Email ID, Phone Number & Location to WhatsApp: [+91 6366950134]

EDUCATIONAL

Admission

JOIN IMMEDIATELY B.com, LLB, M.com BBA, MBA, B.Tech BCA, Diploma, BNYS D.Pharma, AMIIE, P.hd 9341273990

MATRIMONIAL

Brides Wanted

Sindhi

Affluent Vegetarian Sindhi Bangalore Business Family Seeks Vegetarian Girl for B.Com., / Inter CA 28 / 5'5" Type-1 diabetic boy.
For more details E-mail: kg681599@gmail.com.

Grooms Wanted

Brahmin

A well of upper middle class family requires girl for marriage for their 42 yr old son. MA (Eng) & MBA. smartha Bramin family. Widows, divorce without issues & 10th or 12th pass ok. No expectation.
Contact me on 9483700875

TOURS & TRAVEL

Travel Agencies

DUBAI TOUR 6 Days, Vietnam Tour 6 Days, Bangkok Tour 5 Days,Krabi Phuket 5 Days SuvarnaYatra 6360146483/ 9008381022

Travel

8 DAYS Kshmir Vaishnodevi. 13 Days Chardham Yatra. 7 Days Kashi Ayodhya. 7 Days Amarnath Yatra. Nandi Holidays Banglore Mob: 9740228186, 9035513332

20-04-2026 7 days KULU. MANLI, CHANDIGAR, NAYANADEVI, CHINTAPURNI JWALAJI, BAJRESHWARI, CHAMUNDA, DHARMASHALA- SRIGANGA TOURIST: 9480253807

PUBLIC NOTICE

ಶಾಖಾ ಕಚೇರಿ ಸ್ಥಳಾಂತರ ಕುರಿತಾದ ಸಾರ್ವಜನಿಕ ಪ್ರಕಟಣೆ
ಒರಿಕ್ಸ್ ಲೀಸಿಂಗ್ & ಫೈನಾನ್ಶಿಯಲ್ ಸರ್ವೀಸಸ್ ಇಂಡಿಯಾ ಲಿಮಿಟೆಡ್
ನೋಂದಾಯಿತ ಕಚೇರಿ: ಪ್ಲಾಟ್ ನಂ. 94, ಮರೋಲ್ ಕೋ-ಆಪರೇಟಿವ್ ಇಂಡಸ್ಟ್ರಿಯಲ್ ಎಸ್ಟೇಟ್, ಅಂಧೇರಿ-ಕರ್ಲಾ ರೋಡ್, ಅಂಧೇರಿ (ಈಸ್ಟ್), ಮುಂಬೈ-400059
ವೆಬ್‌ಸೈಟ್: www.orixindia.com
ಫೋನ್: 022-67070100

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತುತ ನಂ.1, ಬಂಡಪ್ಪ ಕಾಲೋನಿ, ನ್ಯೂ ಬೈಯಪ್ಪನಹಳ್ಳಿ ಎಕ್ಸ್‌ಟೆನ್ಶನ್, ಮಾಂಟ್‌ಫರ್ಟ್ ಕಾಲೇಜ್ ಎದುರು, ಹಳೆಯ ಮದ್ರಾಸ್ ರಸ್ತೆ, ಇಂದಿರಾನಗರ, ಬೆಂಗಳೂರು-560038 ವಿಳಾಸದಲ್ಲಿರುವ ಕಂಪನಿಯ ಶಾಖಾ ಕಚೇರಿಯ ಕಾರ್ಯಚರಣೆಗಳನ್ನು, 01 ಜೂನ್, 2026 ರಿಂದ ಜಾರಿಗೊಂಡಂತೆ, ಹೊಸ ವಿಳಾಸ ಬಿಹೈವ್ ಸೆಂಚುರಿ ಟವರ್, 7ನೇ ಮಹಡಿ, ಎಕ್ಸ್‌ಜೆ6ಡಬ್ಲ್ಯು+58, ಹೆಚ್‌ಎಎಲ್ ಹಳೆಯ ವಿಮಾನ ನಿಲ್ದಾಣ ರಸ್ತೆ, ಹೆಚ್‌ಎಎಲ್ 2ನೇ ಹಂತ, ಹಂತ 2, ಕೋಡಿಹಳ್ಳಿ, ಬೆಂಗಳೂರು, ಕರ್ನಾಟಕ-560008 ವಿಳಾಸಕ್ಕೆ ಸ್ಥಳಾಂತರ ಮಾಡಲಾಗುತ್ತದೆ.

ಆದ್ದರಿಂದ, ಈ ಶಾಖೆಯ ಎಲ್ಲಾ ಖಾತೆಗಳನ್ನು ಮೇಲ್ಕಂಡ ಹೊಸ ವಿಳಾಸಕ್ಕೆ ವರ್ಗಾಯಿಸಲಾಗುತ್ತದೆ ಮತ್ತು ಉಲ್ಲೇಖಿತ ದಿನಾಂಕದಿಂದ ಸದರಿ ಶಾಖೆಯು ಹೊಸ ವಿಳಾಸದಿಂದ ಕಾರ್ಯಾಚರಣೆ ನಡೆಸುತ್ತದೆ.

ಗ್ರಾಹಕರು ಯಾವುದೇ ವಿಚಾರಣೆ ಅಥವಾ ಸ್ಪಷ್ಟೀಕರಣಗಳಿಗಾಗಿ, ಕಂಪನಿಯ ಬೆಂಗಳೂರು ಶಾಖೆಯನ್ನು ಅಥವಾ ನೋಂದಾಯಿತ ಕಚೇರಿಯನ್ನು ಸಂಪರ್ಕಿಸಬಹುದು ಅಥವಾ ನಮ್ಮ ಗ್ರಾಹಕ ಸೇವಾ ಪ್ರತಿನಿಧಿಗಳನ್ನು +91 9877333444 ಸಂಖ್ಯೆಯಲ್ಲಿ ಸಂಪರ್ಕಿಸಬಹುದು ಅಥವಾ customercare@orixindia.com ವಿಳಾಸಕ್ಕೆ ಇಮೇಲ್ ರವಾನಿಸಬಹುದು.

ಶಾಖಾ ಕಚೇರಿ ಸ್ಥಳಾಂತರ ಕುರಿತಾದ ಸಾರ್ವಜನಿಕ ಪ್ರಕಟಣೆ
ಒರಿಕ್ಸ್ ಲೀಸಿಂಗ್ & ಫೈನಾನ್ಶಿಯಲ್ ಸರ್ವೀಸಸ್ ಇಂಡಿಯಾ ಲಿಮಿಟೆಡ್
ನೋಂದಾಯಿತ ಕಚೇರಿ: ಪ್ಲಾಟ್ ನಂ. 94, ಮರೋಲ್ ಕೋ-ಆಪರೇಟಿವ್ ಇಂಡಸ್ಟ್ರಿಯಲ್ ಎಸ್ಟೇಟ್, ಅಂಧೇರಿ-ಕರ್ಲಾ ರೋಡ್, ಅಂಧೇರಿ (ಈಸ್ಟ್), ಮುಂಬೈ-400059
ವೆಬ್‌ಸೈಟ್: www.orixindia.com
ಫೋನ್: 022-67070100

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತುತ ಯೂನಿಟಸ್ ವೆಬ್ ಸರ್ವೀಸಸ್ ಶಕ್ತಿ ರೈಸ್ ಬಿಲ್ಡಿಂಗ್ ನಂ. 2150, 4ನೇ ಮಹಡಿ, 17ನೇ ಮೇನ್, ಹೆಚ್‌ಎಎಲ್ 2ನೇ ಹಂತ, ಇಂದಿರಾನಗರ, ಬೆಂಗಳೂರು-560008 ವಿಳಾಸದಲ್ಲಿರುವ ಕಂಪನಿಯ ಶಾಖಾ ಕಚೇರಿಯ ಕಾರ್ಯಾಚರಣೆಗಳನ್ನು, 01 ಜೂನ್, 2026 ರಿಂದ ಜಾರಿಗೊಂಡಂತೆ, ಹೊಸ ವಿಳಾಸ ಬಿಹೈವ್ ಸೆಂಚುರಿ ಟವರ್, 7ನೇ ಮಹಡಿ, ಎಕ್ಸ್‌ಜೆ6ಡಬ್ಲ್ಯು+58, ಹೆಚ್‌ಎಎಲ್ ಹಳೆಯ ವಿಮಾನ ನಿಲ್ದಾಣ ರಸ್ತೆ, ಹೆಚ್‌ಎಎಲ್ 2ನೇ ಹಂತ, ಹಂತ 2, ಕೋಡಿಹಳ್ಳಿ, ಬೆಂಗಳೂರು, ಕರ್ನಾಟಕ-560008 ವಿಳಾಸಕ್ಕೆ ಸ್ಥಳಾಂತರ ಮಾಡಲಾಗುತ್ತದೆ.

ಆದ್ದರಿಂದ, ಈ ಶಾಖೆಯ ಎಲ್ಲಾ ಖಾತೆಗಳನ್ನು ಮೇಲ್ಕಂಡ ಹೊಸ ವಿಳಾಸಕ್ಕೆ ವರ್ಗಾಯಿಸಲಾಗುತ್ತದೆ ಮತ್ತು ಉಲ್ಲೇಖಿತ ದಿನಾಂಕದಿಂದ ಸದರಿ ಶಾಖೆಯು ಹೊಸ ವಿಳಾಸದಿಂದ ಕಾರ್ಯಾಚರಣೆ ನಡೆಸುತ್ತದೆ.

ಗ್ರಾಹಕರು ಯಾವುದೇ ವಿಚಾರಣೆ ಅಥವಾ ಸ್ಪಷ್ಟೀಕರಣಗಳಿಗಾಗಿ, ಕಂಪನಿಯ ಬೆಂಗಳೂರು ಶಾಖೆಯನ್ನು ಅಥವಾ ನೋಂದಾಯಿತ ಕಚೇರಿಯನ್ನು ಸಂಪರ್ಕಿಸಬಹುದು ಅಥವಾ ನಮ್ಮ ಗ್ರಾಹಕ ಸೇವಾ ಪ್ರತಿನಿಧಿಗಳನ್ನು +91 9877333444 ಸಂಖ್ಯೆಯಲ್ಲಿ ಸಂಪರ್ಕಿಸಬಹುದು ಅಥವಾ customercare@orixindia.com ವಿಳಾಸಕ್ಕೆ ಇಮೇಲ್ ರವಾನಿಸಬಹುದು.

PERSONAL

Change of Name

I, SANSKRUTI S CHINCHEWADI, D/o Sudesh Shrikant Chinchewadi, residing at No. 7, Vijayashri, 3rd cross, 1st main, Basavasamithi Layout, Thindlu, Vidyaranyapura post Bengaluru - 560097, have corrected my name from SANSKRUTI CHINCHEWADI to SANSKRUTI S CHINCHEWADI. Hereafter I shall only be called as SANSKRUTI S CHINCHEWADI for all official purposes. This correction is made as per affidavit dated 06/01/2026, duly sworn before the Notary Public.

I, RENITA AGNES GALBOV D/o Robert Anthony Galbov, Residing at No. 30, Suvarna Nagara, Near Anjineya Temple, Doddabidarakallu, Nagasandra Post, Bangalore North, Bangalore- 560073, Karnataka. have changed my name from RENITA AGNES GALBAO to RENITA AGNES GALBOV vide affidavit date 26.02.2026 before Notary N Mahesha, Bangalore IN-KA93714564447990Y.

ರೌಡಿಶೀಟರ್ ಕಾಲಿಗೆ ಗುಂಡೇಟು

ಇನ್‌ಸ್ಪೆಕ್ಟರ್, ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ಕೊಲೆ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿಶೀಟರ್ ಪವನ್ ಕುಮಾರ್‌ನನ್ನು ಹತ್ಯೆ ಮಾಡಿದ್ದ ಪ್ರಕರಣದಲ್ಲಿ ಬಂಧಿಸಲು ತೆರಳಿದ್ದ ಪೊಲೀಸ್ ಇನ್‌ಸ್ಪೆಕ್ಟರ್ ಹಾಗೂ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ರೌಡಿಶೀಟರ್ ಕಾಲಿಗೆ ಪೊಲೀಸರು ಗುಂಡು ಹಾರಿಸಿ ಬಂಧಿಸಿದ್ದಾರೆ.

ಮಡಿವಾಳ ಠಾಣೆ ರೌಡಿಶೀಟರ್ ರಂಜಿತ್ (31) ಎಂಬಾತನ ಬಲಗಾಲಿಗೆ ಗುಂಡೇಟು ಬಿದ್ದಿದ್ದು, ಆರೋಪಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಘಟನೆಯಲ್ಲಿ ಹಲ್ಲೆಗೊಳಗಾಗಿದ್ದ ಈಶಾನ್ಯ ವಿಭಾಗದ ಮಹಿಳಾ ಠಾಣೆ ಇನ್‌ಸ್ಪೆಕ್ಟರ್ ವೆಂಕಟೇಶ್, ಸಂಪಿಗೆಹಳ್ಳಿ ಠಾಣೆಯ ಹೆಡ್‌ಕಾನ್‌ಸ್ಟೆಬಲ್ ಹನುಮಂತ ಬಿದರಹಳ್ಳಿ, ಕಾನ್‌ಸ್ಟೆಬಲ್ ಶಂಕರಪ್ಪ ಗಾಯಗೊಂಡಿದ್ದು, ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದಾರೆ.

ಇದೇ ವೇಳೆ ರೌಡಿಶೀಟರ್ ರಂಜಿತ್, ಈತನ ಸಹಚರರಾದ ಪ್ರೇಮ್, ಕಾರ್ತಿಕ್, ಪ್ರವೀಣ್ ಕುಮಾರ್, ಅರುಣ್, ವೇಲು ಎಂಬವವರನ್ನು ಬಂಧಿಸಲಾಗಿದೆ.

ಫೆಬ್ರುವರಿ 25ರಂದು ರೌಡಿಶೀಟರ್ ಪವನ್ ಕುಮಾರ್ ಎಂಬಾತನನ್ನು ಆತನ ಮನೆ ಬಳಿ ಮಾರಕಾಸ್ತ್ರಗಳಿಂದ ಕೊಲೆ ಮಾಡಲಾಗಿತ್ತು. ಪ್ರಕರಣ ದಾಖಲಿಸಿಕೊಂಡು ರಂಜಿತ್ ಸೇರಿ ಆರು ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಖಚಿತ ಮಾಹಿತಿ ಮೇರೆಗೆ ಶನಿವಾರ ಬೆಳಿಗ್ಗೆ ಬಾಗಲೂರಿನ ಮಿಟ್ಟಗಾನಹಳ್ಳಿಯ ನಿರ್ಜನ ಪ್ರದೇಶದಲ್ಲಿ ಅಡಗಿಕೊಂಡಿದ್ದ ರಂಜಿತ್ ಬಂಧಿಸಲು ವೆಂಕಟೇಶ್ ಮತ್ತು ತಂಡ ತೆರಳಿತ್ತು. ಆಗ ಪೊಲೀಸರನ್ನು ನೋಡಿದ ಆರೋಪಿ ಏಕಾಏಕಿ ಮಾರಕಾಸ್ತ್ರದಿಂದ ಅವರ ಮೇಲೆ ಹಲ್ಲೆ ನಡೆಸಿ, ಪರಾರಿಯಾಗಲು ಯತ್ನಿಸಿದ. ವೆಂಕಟೇಶ್ ಅವರು ಆತ್ಮರಕ್ಷಣೆಗಾಗಿ ಒಂದು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿ ಶರಣಾಗುವಂತೆ ಕೇಳಿದ್ದಾರೆ. ಆದರೂ ಮತ್ತೆ ದಾಳಿ ನಡೆಸಿದಾಗ ಆರೋಪಿಯ ಬಲಗಾಲಿಗೆ ಗುಂಡು ಹೊಡೆದಿದ್ದಾರೆ ಎಂದು ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದರು.

ಮೂರು ವರ್ಷದ ಹಿಂದೆ ಆರೋಪಿಗಳ ಪೈಕಿ ಪ್ರೇಮ್ ಸಹೋದರ ಕಪಿಲ್ ಹತ್ಯೆಯಾಗಿತ್ತು. ಈ ಪ್ರಕರಣದಲ್ಲಿ ಪವನ್ ಕುಮಾರ್ ಭಾಗಿಯಾಗಿದ್ದ. ಹಾಗಾಗಿ ಈತನ ಕೊಲೆ ಮಾಡಲು ಪ್ರೇಮ್ ಮತ್ತು ತಂಡ ಕಾಯುತ್ತಿತ್ತು. ಎಂಟು ತಿಂಗಳ ಹಿಂದೆ ಬಿಡುಗಡೆಯಾಗಿ ಬಂದಿದ್ದ ಪವನ್ ಕುಮಾರ್, ಮನೆ ಸಮೀಪವೇ ಬೇಕರಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದ.

ಫೆ.25ರಂದು ರಾತ್ರಿ ಥಣಿಸಂದ್ರ ಸಮೀಪದ ಅಮರಜ್ಯೋತಿ ಲೇಔಟ್‌ನಲ್ಲಿ ಬೇಕರಿ ಬಾಗಿಲು ಹಾಕಿಕೊಂಡು ಮನೆ ಬಳಿ ಬರುತ್ತಿದ್ದಂತೆಯೇ ಪವನ್ ಕುಮಾರ್‌ನನ್ನು ಅಡ್ಡಗಟ್ಟಿದ ಆರೋಪಿಗಳು, ಮಾರಕಾಸ್ತ್ರದಿಂದ ಹಲ್ಲೆ ನಡೆಸಿ, ಕೊಲೆ ಮಾಡಿ ಪರಾರಿಯಾಗಿದ್ದರು ಎಂದು ಪೊಲೀಸರು ಮಾಹಿತಿ ನೀಡಿದರು.

ಅತ್ಯಾಚಾರ ಪ್ರಕರಣ: ಇಬ್ಬರ ಬಂಧನ– ಗುತ್ತಿಗೆದಾರ ವಶಕ್ಕೆ

ಅಪರಾಧ ಸುದ್ದಿ

ಕಾಲೇಜು ವಿದ್ಯಾರ್ಥಿನಿಯನ್ನು ಪಾರ್ಟಿಗೆ ಕರೆದೊಯ್ದು ಅತ್ಯಾಚಾರವೆಸಗಿದ ಆರೋಪ ಪ್ರಕರಣದಲ್ಲಿ ಇಬ್ಬರು ಯುವಕರನ್ನು ಬಂಧಿಸಿರುವ ಅಮೃತಹಳ್ಳಿ ಠಾಣೆ ಪೊಲೀಸರು, ಮತ್ತೊಬ್ಬ ಯುವಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಪಶ್ಚಿಮ ಬಂಗಾಳದ ಡಿಕ್ಸನ್ ಸ್ಯಾಂಡ್ರ, ಮಲ್ಲೇಶ್ವರದ ಎಚ್‌.ಡಿ.ನಿಖಿಲ್ ಬಂಧಿತರು. ಧಾರವಾಡದ ಗುತ್ತಿಗೆದಾರ ಅನಿರುದ್ಧ್ ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಈತ ಸಹ ಪಾರ್ಟಿಯಲ್ಲಿ ಭಾಗಿಯಾಗಿರುವುದು ಗೊತ್ತಾಗಿದೆ.

ಫೆ.14 ರಂದು ರಾತ್ರಿ ಜಕ್ಕೂರಿನ ವಿಲ್ಲಾವೊಂದರಲ್ಲಿ 19 ವರ್ಷದ ವಿದ್ಯಾರ್ಥಿನಿ ಮೇಲೆ ಅತ್ಯಾಚಾರವೆಸಗಿದ ಆರೋಪದ ಮೇಲೆ ಆರೋಪಿಗಳಿಬ್ಬರನ್ನು ಬಂಧಿಸಲಾಗಿದೆ. ಆರೋಪಿಗಳು ಪಾರ್ಟಿ ಹೆಸರಿನಲ್ಲಿ ಯುವತಿಯರನ್ನು ಕರೆಸಿ, ದೌರ್ಜನ್ಯವೆಸಗಿರುವ ಅನುಮಾನವಿದೆ. ಜತೆಗೆ ಮಾದಕ ವಸ್ತು ನೀಡಿರುವ ಶಂಕೆಯಿದೆ. ಹಾಗಾಗಿ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸ್ನೇಹಿತರಾದ ಡಿಕ್ಸನ್ ಹಾಗೂ ಕಾರು ಡೀಲರ್ ನಿಖಿಲ್ ತಡರಾತ್ರಿ ವಿಲ್ಲಾಗಳಲ್ಲಿ ಪಾರ್ಟಿಗಳನ್ನು ಆಯೋಜಿಸಿ, ಕಾಲೇಜು ಯುವತಿಯರನ್ನು ಆಹ್ವಾನಿಸುತ್ತಿದ್ದರು. ಪಾರ್ಟಿಗಳ ಆಯೋಜನೆಗಾಗಿಯೇ ವಿಲ್ಲಾಗಳನ್ನು ಬಾಡಿಗೆ ಪಡೆದುಕೊಳ್ಳುತ್ತಿದ್ದರು ಎಂಬುದು ಗೊತ್ತಾಗಿದೆ.

ಪಾರ್ಟಿ ಮಾಡಿದ್ದ ಸ್ಥಳ ಮಹಜರು ಮಾಡಲಾಗಿದ್ದು, ಸ್ಥಳದಲ್ಲಿ ಫೋಟೊ ಶೂಟ್‌ಗೆ ಬಳಸುತ್ತಿದ್ದ ಉಪಕರಣಗಳು ಪತ್ತೆಯಾಗಿವೆ. ಅಲ್ಲದೇ ಈ ವಿಲ್ಲಾ ಪೊಲೀಸ್ ಅಧಿಕಾರಿ ಒಬ್ಬರಿಗೆ ಸೇರಿದ್ದಾಗಿದೆ ಎಂದು ಮೂಲಗಳು ಹೇಳಿವೆ.

ಈ ನಡುವೆ ಸಂತ್ರಸ್ತೆ ಆರೋಪಿಗಳ ಜತೆ ಪಾರ್ಟಿ ಮಾಡಿರುವ ವಿಡಿಯೊ ಸಿಕ್ಕಿದ್ದು, ಐವರು ಯುವತಿಯರು, ಮೂವರು ಯುವಕರು ನೃತ್ಯ ಮಾಡುತ್ತಿರುವ ದೃಶ್ಯ ಇದೆ.

‘ಆರೋಪಿಗಳು ಪಾರ್ಟಿಯಲ್ಲಿ ಮತ್ತು ಬರುವ ಮಾತ್ರೆ ನೀಡಿದರು. ಮಾತ್ರೆ ತಿಂದ ಬಳಿಕ ದೇಹದಲ್ಲಿ ಬೆವರು ಬಂದು ಕಣ್ಣು ಮಂಜಾಗಿತ್ತು’ ಎಂದು ಸಂತ್ರಸ್ತೆಯು ತನ್ನ ದೂರಿನಲ್ಲಿ ತಿಳಿಸಿದ್ದರು. ಹಾಗಾಗಿ ಮಾದಕ ವಸ್ತು ಸೇವನೆ ಬಗ್ಗೆಯೂ ಪರೀಕ್ಷೆ ನಡೆಸಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

ಚಿನ್ನ ಪಡೆದು ಪರಾರಿಯಾಗಿದ್ದ ಆರೋಪಿ ಸೆರೆ

ಕೆಲಸ ಮಾಡುತ್ತಿದ್ದ ಚಿನ್ನಾಭರಣ ಮಳಿಗೆ ಮಾಲೀಕರಿಗೆ ವಂಚಿಸಿದ ವ್ಯಕ್ತಿಯನ್ನು ಭಾರತಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಜಸ್ಥಾನದ ಧರ್ಮವೀರ್ ಸಿಂಗ್ ಬಂಧಿತ ಆರೋಪಿ. ಈತನಿಂದ ₹33.50 ಲಕ್ಷ ಮೌಲ್ಯದ 230 ಗ್ರಾಂ ತೂಕದ ಆರು ಚಿನ್ನದ ಸರಗಳನ್ನು ವಶಪಡಿಸಿಕೊಳ್ಳಲಾಗಿದೆ.

ಒಪಿಎಚ್ ಜುಮಾ ಮಸೀದಿ ರಸ್ತೆಯಲ್ಲಿರುವ ಆಭರಣ ಅಂಗಡಿ ಮಾಲೀಕರು ಸೆಪ್ಟೆಂಬರ್ 23ರಂದು ಈ ಬಗ್ಗೆ ದೂರು ನೀಡಿದ್ದರು.

ಆಭರಣ ಅಂಗಡಿಗೆ ಮಾಲೀಕರು ಮತ್ತೊಂದು ಆಭರಣ ಅಂಗಡಿಯಿಂದ ಚಿನ್ನಾಭರಣ ತರಲು ಆರೋಪಿಯನ್ನು ಕಳುಹಿಸಿದ್ದರು.

ಅಂಗಡಿಯಿಂದ ಏಳು ಸರಗಳನ್ನು ತೆಗೆದುಕೊಂಡು ಕೆಲಸ ಮಾಡುತ್ತಿದ್ದ ಅಂಗಡಿಗೆ ಹೋಗದೆ ಆರೋಪಿ ರಾಜಸ್ಥಾನಕ್ಕೆ ಪರಾರಿಯಾಗಿದ್ದ.

ಪ್ರಕರಣ ದಾಖಲಿಸಿಕೊಂಡು ವಿವಿಧ ಆಯಾಮಗಳಲ್ಲಿ ತನಿಖೆ ಕೈಗೊಂಡು ಖಚಿತ ಮಾಹಿತಿ ಮೇರೆಗೆ ಯಶವಂತಪುರ ರೈಲ್ವೆ ನಿಲ್ದಾಣ ಬಳಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಯಿತು. ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ಕೃತ್ಯವೆಸಗಿರುವುದು ಗೊತ್ತಾಗಿದೆ. ಆತನಿಂದ ಚಿನ್ನದ ಸರಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದರು.


ನೀರಿನ ಸಂಪ್ ಸ್ವಚ್ಛತೆಗೆ ಇಳಿದಿದ್ದ ವೇಳೆ ಘಟನೆ

ಉಸಿರುಗಟ್ಟಿ ಮೂವರ ಸಾವು

ಪ್ರಜಾವಾಣಿ ವಾರ್ತೆ



ಮುನಿಶಾಮಪ್ಪ



ರುದ್ರಕುಮಾರ್

ಬೆಂಗಳೂರು: ವೈಟ್‌ಫೀಲ್ಡ್ ಪೊಲೀಸ್ ಠಾಣಾ ವ್ಯಾಪ್ತಿಯ ಮನೆಯೊಂದರ ನೀರಿನ ಸಂಪ್ ಸ್ವಚ್ಛಗೊಳಿಸುವ ವೇಳೆ ಉಸಿರಾಟ ಸಮಸ್ಯೆಯಿಂದ ಮೂವರು ಮೃತಪಟ್ಟಿದ್ದಾರೆ.

ಮನೆ ಮಾಲೀಕ ಮುನಿಶಾಮಪ್ಪ (67), ಪ್ಲಂಬರ್ ರುದ್ರಕುಮಾರ್ (40), ಡೆಲಿವರಿ ಬಾಯ್ ವಿಶ್ವನಾಥ್ ಆಚಾರ್ (40) ಮೃತರು.

ಠಾಣಾ ವ್ಯಾಪ್ತಿಯ ಇಮ್ಮಡಿ ಹಳ್ಳಿ ದೇವಸ್ಥಾನ ವೃತ್ತದ ಬಳಿ ವಾಸವಾಗಿದ್ದ ಮುನಿಶಾಮಪ್ಪ, ಶನಿವಾರ ತಮ್ಮ ಮನೆಯ ನೀರಿನ ಸಂಪ್ ಅನ್ನು ರಾಸಾಯನಿಕದಿಂದ ಸ್ವಚ್ಛಗೊಳಿಸುತ್ತಿದ್ದರು. ಆಗ ಉಸಿರಾಟ ಸಮಸ್ಯೆಯಿಂದ ಮೂರ್ಛೆ ಹೋದರು. ಇವರ ರಕ್ಷಣೆಗೆ ಬಂದ ರುದ್ರಕುಮಾರ್ ಸಹ ಉಸಿರಾಟ ಸಮಸ್ಯೆಯಿಂದ ಪ್ರಜ್ಞೆ ತಪ್ಪಿದರು.

ಸಂಪ್‌ಗೆ ಇಳಿದಿದ್ದ ಇಬ್ಬರೂ ಹೊರಗೆ ಬರಲಿಲ್ಲ. ಆತಂಕಗೊಂಡು ಇವರನ್ನು ನೋಡಲು ಬಂದ ವಿಶ್ವನಾಥ್ ಸಹ ಮೂರ್ಛೆ ಹೋದರು. ಸ್ಥಳೀಯರು ತಕ್ಷಣ 112ಗೆ ಕರೆ ಮಾಡಿ ವಿಷಯ ತಿಳಿಸಿದರು. ಮೂವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ, ಮಾರ್ಗಮಧ್ಯೆಯೇ ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ ಎಂದು ಪೊಲೀಸರು ಹೇಳಿದರು.

ಮರಣೋತ್ತರ ಪರೀಕ್ಷೆಗಾಗಿ ಮೃತದೇಹಗಳನ್ನು ರವಾನಿಸಲಾಗಿದೆ. ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಆತ್ಮಹತ್ಯೆಗೆ ಯತ್ನಿಸಿದ್ದ ಮಹಿಳೆ ಇಬ್ಬರು ಮಕ್ಕಳ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತ್ಮಹತ್ಯೆಗೆ ಯತ್ನಿಸಿದ್ದ ಮಹಿಳೆ ಹಾಗೂ ಇಬ್ಬರು ಮಕ್ಕಳನ್ನು ಪೊಲೀಸರು ರಕ್ಷಣೆ ಮಾಡಿದ್ದಾರೆ. ಈ ಬಗ್ಗೆ ಸಂಪಿಗೆಹಳ್ಳಿ, ಮಲ್ಲೇಶ್ವರ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದೆ.

ಸಂಪಿಗೆಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಎಂಸಿಇಸಿಎಚ್‌ಎಸ್ ಲೇಔಟ್‌ನ ರೈಲ್ವೆ ಹಳಿ ಸಮೀಪ ಶುಕ್ರವಾರ ರಾತ್ರಿ 1.30ರ ಸುಮಾರಿಗೆ ಮಹಿಳೆಯೊಬ್ಬರು ತನ್ನ ಇಬ್ಬರು ಮಕ್ಕಳೊಂದಿಗೆ ಅಸಹಾಯಕರಾಗಿ ಕುಳಿತಿರುವುದನ್ನು ಸ್ಥಳೀಯರು ಗಮನಿಸಿ, ಪೊಲೀಸ್ ಸಹಾಯವಾಣಿ 112ಗೆ ಕರೆ ಮಾಡಿದ್ದಾರೆ.

ಸ್ಥಳಕ್ಕೆ ಹೊಯ್ಸಳ-174ರಲ್ಲಿ ಕರ್ತವ್ಯದಲ್ಲಿದ್ದ ಸಿಬ್ಬಂದಿ ತೆರಳಿ, ಬಿಹಾರದ ಮಹಿಳೆ ಹಾಗೂ ಅವರ ಮಕ್ಕಳಿಬ್ಬರನ್ನು ರಕ್ಷಣೆ ಮಾಡಿದ್ದಾರೆ. ಬಳಿಕ ಅವರನ್ನು ವಿಚಾರಿಸಿದಾಗ, ಬಿಹಾರದಿಂದ ಕಟ್ಟಡ ಕೆಲಸಕ್ಕೆಂದು ನಗರಕ್ಕೆ ಬಂದಿದ್ದು, ಪತಿ ನಿತ್ಯ ಕುಡಿದು ಬಂದು ಹಿಂಸೆ ನೀಡುತ್ತಿದ್ದಾನೆ. ಹಾಗಾಗಿ ಮಕ್ಕಳೊಂದಿಗೆ ಆತ್ಮಹತ್ಯೆಗೆ ಮುಂದಾಗಿರುವುದಾಗಿ ಮಹಿಳೆ ತಿಳಿಸಿದ್ದಾಳೆ.

ಬಳಿಕ ಮಹಿಳೆಯ ಪತಿಯನ್ನು ಪತ್ತೆ ಮಾಡಿ, ಆಕೆಗೆ ಹಿಂಸೆ ನೀಡದಂತೆ ಎಚ್ಚರಿಕೆ ನೀಡಿ, ಮೂವರನ್ನು ಸುರಕ್ಷಿತವಾಗಿ ಮನೆಗೆ ಬಿಟ್ಟು ಬರಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಲ್ಲೇಶ್ವರ ಪೊಲೀಸ್ ಠಾಣೆ ವ್ಯಾಪ್ತಿಯ ಕೆ.ಬಿ.ನಗರದ ಗಣೇಶ ದೇವಸ್ಥಾನದ ಸಮೀಪ ವಾಸವಿರುವ ಮಹಿಳೆಯೊಬ್ಬರು ವೈಯಕ್ತಿಕ ಸಮಸ್ಯೆಯಿಂದ ನೇಲ್ ಪಾಲಿಷ್ ಸೇವಿಸಿ ಆತ್ಮಹತ್ಯೆಗೆ ಮುಂದಾಗಿದ್ದರು. 112ಗೆ ಬಂದ ಮಾಹಿತಿಯಿಂದಾಗಿ ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು, ತಕ್ಷಣ ಹತ್ತಿರದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ. ಮಹಿಳೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸಂತ್ರಸ್ತೆಯನ್ನು ಕುಟುಂಬಸ್ಥರೊಂದಿಗೆ ಕಳುಹಿಸಿ ಕೊಡಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ದಂಪತಿ ಆತ್ಮಹತ್ಯೆ

ಚಂದಾಪುರ(ಆನೇಕಲ್): ವರ್ಷದ ಹಿಂದೆ ಪ್ರೀತಿಸಿ ಮದುವೆಯಾಗಿದ್ದ ದಂಪತಿ ಕ್ಷುಲ್ಲಕ ಕಾರಣಕ್ಕಾಗಿ ನಡೆದ ಜಗಳದಿಂದ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತಾಲ್ಲೂಕಿನ ಹೀಲಲಿಗೆ ಗ್ರಾಮದ ಬಾಡಿಗೆ ಮನೆಯಲ್ಲಿ ನೆಲಸಿದ್ದ ಒಡಿಶಾ ಮೂಲದ ಕಾರ್ಮಿಕ ದಂಪತಿ ದೀಪಾಂತ ಸಬರ (31) ಹಾಗೂ ಮಂಜುಳಾ (27) ಶುಕ್ರವಾರ ರಾತ್ರಿ ಮನೆಯಲ್ಲಿ ನೇಣು ಹಾಕಿಕೊಂಡಿದ್ದಾರೆ.

ಬೊಮ್ಮಸಂದ್ರ ಖಾಸಗಿ ಕಂಪನಿಯಲ್ಲಿ ದಂಪತಿ ಕೆಲಸ ಮಾಡುತ್ತಿದ್ದರು. ಶುಕ್ರವಾರ ರಾತ್ರಿ ಇಬ್ಬರ ನಡುವೆ ಜಗಳ ನಡೆದಿತ್ತು. ಇದರಿಂದ ನೊಂದ ಮಂಜುಳಾ ಶುಕ್ರವಾರ ತಡರಾತ್ರಿ 1ರ ವೇಳೆ ಸೀರೆಯಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಇದನ್ನು ಕಂಡ ಪತಿ ದೀಪಾಂತ ಕೂಡ ನೇಣಿಗೆ ಶರಣಾಗಿದ್ದಾರೆ. ಈ ಮಾಹಿತಿಯನ್ನು ಡೆತ್ ನೋಟ್‌ನಲ್ಲಿ ದೀಪಾಂತ ಉಲ್ಲೇಖಿಸಿದ್ದಾರೆ ಎಂದು ಪೊಲೀಸ್ ತಿಳಿಸಿದ್ದಾರೆ.

ಶಾರ್ಟ್ ಸರ್ಕಿಟ್: ಬೇಕರಿ ಭಸ್ಮ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ದಾಸರಹಳ್ಳಿಯ ಭುವನೇಶ್ವರಿ ನಗರದ 5ನೇ ಮುಖ್ಯ ರಸ್ತೆಯ ಎಸ್‌ವಿ ಕೇಕ್ ಪ್ಯಾಲೇಸ್ ಬೇಕರಿ ಶಾರ್ಟ್ ಸರ್ಕಿಟ್‌ನಿಂದಾಗಿ ಬೆಂಕಿಗೆ ಆಹುತಿಯಾಗಿದೆ.

ಆರು ವರ್ಷದಿಂದ ಕೃಷ್ಣ ಎಂಬವರು ಬೇಕರಿ ನಡೆಸುತ್ತಿದ್ದರು. ಏಕಾಏಕಿ ಶಬ್ದ ಬಂದು ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆ ಗಾಬರಿಯಿಂದ ಹೊರ ಬಂದ ಮಾಲೀಕ ಕೃಷ್ಣ ಅವರು, ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದಾರೆ.

ಅಷ್ಟರಲ್ಲಿ ಬೆಂಕಿಯ ಕೆನ್ನಾಲಿಗೆ ಇಡೀ ಬೇಕರಿ ಆವರಿಸಿದೆ. ಸಾರ್ವಜನಿಕರು ಅಗ್ನಿಶಾಮಕ ದಳ, ಪೊಲೀಸ್ ಸಿಬ್ಬಂದಿಗೆ ಕರೆ ಮಾಡಿದ್ದಾರೆ. ಅಗ್ನಿಶಾಮಕ ದಳ ಸಿಬ್ಬಂದಿ ಬೆಂಕಿ ನಂದಿಸುವಷ್ಟರಲ್ಲಿ ಬೇಕರಿಯ ತಿನಿಸು, ಪಾನೀಯ ಹಾಗೂ ಪೀಠೋಪಕರಣ ಸುಟ್ಟು ಹೋಗಿದ್ದವು.

ಅಕ್ಕ ಪಕ್ಕದ ಮನೆಗಳ ಕಿಟಕಿಯ ಗಾಜು ಪುಡಿಯಾಗಿವೆ. ದಟ್ಟವಾದ ಹೊಗೆ ಆವರಿಸಿಕೊಂಡ ಕಾರಣ ಬೇಕರಿ ಮೇಲಿರುವ ಕಚೇರಿ ಹಾಗೂ ಮನೆಯ ಸದಸ್ಯರು ಹೊರಗೆ ಓಡಿ ಬಂದಿದ್ದಾರೆ.

‘ಅವಘಡದಲ್ಲಿ ಸುಮಾರು ₹15 ಲಕ್ಷ ಬೆಲೆ ಬಾಳುವ ವಸ್ತುಗಳು ಭಸ್ಮವಾಗಿವೆ. ₹25 ಸಾವಿರ ನಗದು ಮತ್ತು ಮೊಬೈಲ್ ಸಹ ಸುಟ್ಟು ಹೋಗಿದೆ’ ಎಂದು ಮಾಲೀಕ ಕೃಷ್ಣ ಹೇಳಿದರು.



ಅಗ್ನಿ ಶಾಮಕ ಸಿಬ್ಬಂದಿ ಬೆಂಕಿ ನಂದಿಸಿದರು

ಸ್ನಾನಕ್ಕೆ ತೆರಳಿದ್ದ ಬಾಲಕಿ ಸಾವು

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ತಾಲ್ಲೂಕಿನ ಬಾಶೆಟ್ಟಿಹಳ್ಳಿಯಲ್ಲಿ ಶನಿವಾರ ಸ್ನಾನಕ್ಕೆ ಹೋಗಿದ್ದ ಬಾಲಕಿಯೊಬ್ಬಳು ಸ್ನಾನದ ಕೋಣೆಯಲ್ಲಿ ಉಸಿರುಗಟ್ಟಿ ಮೃತಪಟ್ಟಿದ್ದಾಳೆ.

ಬಿಂದುಶ್ರೀ ಶಂಕರಪ್ಪ (15) ಮೃತ ಬಾಲಕಿ.

ಗ್ಯಾಸ್ ಗೀಸರ್‌ನಿಂದ ಹೊರ ಹೊಮ್ಮುವ ವಿಷಾನಿಲದಿಂದ ಬಾಲಕಿ ಮೃತಪಟ್ಟಿರಬಹುದೆಂದು ಶಂಕಿಸಲಾಗಿದೆ. ಸ್ಥಳಕ್ಕೆ ಗ್ರಾಮಾಂತರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

‘ನೀನು ಅಲ್ಪಾಯುಷಿ’ ಎಂದು ಹೇಳಿದ್ದ ಜ್ಯೋತಿಷಿ

ಸಾಫ್ಟ್‌ವೇರ್ ಉದ್ಯೋಗಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಎಂಇಐ ಬಡಾವಣೆಯಲ್ಲಿ ವಾಸವಿದ್ದ ಸಾಫ್ಟ್‌ವೇರ್ ಉದ್ಯೋಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ವಿದ್ಯಾಜ್ಯೋತಿ (29) ಮೃತ ಯುವತಿ. ತಂದೆ ಉಮೇಶ್ ಎಂಬವರು ನೀಡಿದ ದೂರಿನ ಮೇರೆಗೆ ಬಾಗಲಗುಂಟೆ ಠಾಣೆ ಪೊಲೀಸರು ಯುಡಿಆರ್ (ಅಸಹಜ ಸಾವು ಪ್ರಕರಣ) ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

‘ನೀನು ಅಲ್ಪಾಯುಷಿ’ ಎಂದು ಜ್ಯೋತಿಷಿ ಹೇಳಿದ್ದರಿಂದ ಹೆದರಿ, ಈ ನಿರ್ಧಾರ ತೆಗೆದುಕೊಂಡಿರಬಹುದು ಎಂದು ಶಂಕಿಸಲಾಗಿದೆ.

ಕೋರಮಂಗಲದ ಖಾಸಗಿ ಕಂಪನಿಯ ಉದ್ಯೋಗಿಯಾಗಿದ್ದ ವಿದ್ಯಾ, ಮನೆಯಿಂದಲೇ ಕೆಲಸ ಮಾಡುತ್ತಿದ್ದರು. ಪ್ರೀತಿಸಿದ ಯುವಕನೊಂದಿಗೆ ಮದುವೆ ಆಗಲು ತಂದೆ- ತಾಯಿಯನ್ನು ಒಪ್ಪಿಸಿದ್ದರು. ಇದೇ ವೇಳೆ ಜ್ಯೋತಿಷಿಯೊಬ್ಬರು ಭವಿಷ್ಯ ಹೇಳಿದ್ದರು. ‘ಮದುವೆಯಾದ 2 ವರ್ಷ ಮಾತ್ರ ಸಂಸಾರ ಚೆನ್ನಾಗಿರುತ್ತದೆ. ನಂತರ ತೊಂದರೆಯಾಗಲಿದೆ. ಅದಕ್ಕಾಗಿ 9 ದಿನ ಪೂಜೆ ಮಾಡಿಸಬೇಕು’ ಎಂದಿದ್ದರು.

ಜ್ಯೋತಿಷಿ ಮಾತು ಕೇಳಿ 9 ದಿನ ಮಾರಮ್ಮ ದೇವಿ ಪೂಜೆ ಮಾಡಿದ್ದರು. ಕೊನೆ ದಿನ ಶುಕ್ರವಾರ ಪೂಜೆ ಮಾಡಿಸಿ ದೇವಿಗೆ ತಾಳಿ ಸಮರ್ಪಿಸಬೇಕಾಗಿತ್ತು. ಪೂಜೆಗೆ ಕುಟುಂಬಸ್ಥರು ಸಿದ್ಧತೆ ಮಾಡಿಕೊಂಡಿದ್ದರು. ಈ ವೇಳೆ ಯುವತಿ ಕೊಠಡಿಗೆ ತೆರಳಿ, ರಾತ್ರಿಯಾದರೂ ಬಾಗಿಲು ತೆರೆದಿರಲಿಲ್ಲ.



ವಿದ್ಯಾ ಜ್ಯೋತಿ

ಪೂಜೆ ತಡವಾಗುತ್ತಿರುವ ಪರಿಣಾಮ ತಾಯಿ ಮಗಳನ್ನು ಕರೆಯಲು ಹೋಗಿದ್ದಾರೆ. ಬಾಗಿಲು ಬಡಿದರೂ ತೆರೆಯದ ಕಾರಣ ಕಿಟಕಿಯಿಂದ ನೋಡಿದಾಗ, ಮಗಳು ಫ್ಯಾನ್‌ಗೆ ನೇಣು ಹಾಕಿಕೊಂಡಿರುವುದು ಗಮನಕ್ಕೆ ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಗಲಗುಂಟೆ ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಿದ್ದಾರೆ.

‘ಸಾಫ್ಟ್‌ವೇರ್ ಎಂಜಿನಿಯರ್ ವಿದ್ಯಾ ಜ್ಯೋತಿ ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಚಾಕುವಿನಿಂದ ಇರಿದು ಕೊಲೆ

ಪೀಣ್ಯ ದಾಸರಹಳ್ಳಿ: ಬಾಗಲಗುಂಟೆ ಠಾಣಾ ವ್ಯಾಪ್ತಿಯ ಮಂಜುನಾಥ ನಗರದ ವಿಜಯಲಕ್ಷ್ಮೀ ಬಡಾವಣೆಯಲ್ಲಿ ವ್ಯಕ್ತಿಯನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದೆ.

ನಟರಾಜ್ ಎಂಬವರು ಬಾಡಿಗೆಗೆ ನೀಡಿದ್ದ ಮನೆಯಿಂದ ಕೆಟ್ಟ ವಾಸನೆ ಬರುತ್ತಿರುವುದನ್ನು ಕಂಡು ಪರೀಕ್ಷಿಸಿದಾಗ ಕೊಳೆತ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ. ಹಾಸನದ ಮೋಹನ್ (45) ಕೊಲೆಯಾದವರು. ನಾಲ್ಕೈದು ದಿನಗಳ ಹಿಂದೆ ಕೊಲೆ ನಡೆದಿರಬೇಕು ಎಂದು ಅಂದಾಜಿಸಲಾಗಿದೆ.

ಎರಡು ತಿಂಗಳ ಹಿಂದೆ ಮೋಹನ್ ಕೃಷ್ಣ ಮತ್ತು ಬಿಂದು ಅಲಿಯಾಸ್ ಊರ್ವಶಿ ಎಂಬವವರು ಈ ಮನೆ ಬಾಡಿಗೆಗೆ ಪಡೆದಿದ್ದರು. ತಾನು ಸಿನಿಮಾ ಸಹನಿರ್ದೇಶಕಿ ಎಂದು ಊರ್ವಶಿ ಪರಿಚಯಿಸಿಕೊಂಡಿದ್ದರು. ಬಾಡಿಗೆಗೆ ನೀಡಿರುವ ಬಗ್ಗೆ ಕರಾರುಪತ್ರ ಮಾಡಿಸಲು ಮುಂದಾದಾಗ ಮುಂದಿನ ತಿಂಗಳು ಮನೆ ಖಾಲಿ ಮಾಡುವುದಾಗಿ ತಿಳಿಸಿದ್ದರಿಂದ ಕರಾರು ಮಾಡಿಕೊಂಡಿರಲಿಲ್ಲ ಎಂದು ಮನೆ ಮಾಲೀಕರು ತಿಳಿಸಿದ್ದಾರೆ.

ಆ ಬಳಿಕ ನಟರಾಜ್ ಮನೆ ಬಳಿ ಬಂದಾಗೆಲ್ಲ ಬಾಗಿಲಿಗೆ ಬೀಗ ಹಾಕಿರುತ್ತಿತ್ತು. ಅಕ್ಕಪಕ್ಕದ ನಿವಾಸಿಗಳಿಗೆ ವಾಸನೆ ಬಂದಿದ್ದರಿಂದ ಅವರು ನಟರಾಜ್ ಅವರ ಮಗ ರವಿಕಿರಣ್‌ಗೆ ಕರೆ ಮಾಡಿ ತಿಳಿಸಿದ್ದರು. ಅವರು ಬಂದು ನೋಡಿದಾಗ ಮೃತದೇಹ ಪತ್ತೆಯಾಗಿದೆ. ಈ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದು, ಪೊಲೀಸರು ಪರಿಶೀಲನೆ ನಡೆಸಿದರು.

ವಿಮಾನ ಪ್ರಯಾಣಿಕರ ಪ್ರತಿಭಟನೆ

ದೇವನಹಳ್ಳಿ: ನೇಪಾಳದ ರಾಜಧಾನಿ ಕಠ್ಮಂಡುವಿಗೆ ತೆರಳಬೇಕಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ ಎರಡನೇ ಬಾರಿಯೂ ಪ್ರಯಾಣಿಕರನ್ನು ಕರೆದುಕೊಂಡು ಹೋಗಿ ಮತ್ತೆ ವಾಪಸ್ ಬಂದಿದೆ.

ಇದರಿಂದ ರೊಚ್ಚಿಗೆದ್ದ ಪ್ರಯಾಣಿಕರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ಬುಧವಾರ ಬೆಳಗ್ಗೆ 10.30ಕ್ಕೆ ಬೆಂಗಳೂರಿನಿಂದ ಕಠ್ಮಂಡುವಿಗೆ ಹಾರಿದ್ದ ವಿಮಾನ ದಟ್ಟ ಮಂಜು ಕವಿದು ರನ್ ವೇ ಗೋಚರಿಸದ ಕಾರಣ 11 ತಾಸು ಆಗಸದಲ್ಲಿಯೇ ಹಾರಾಡಿ ಬೆಂಗಳೂರಿಗೆ ವಾಪಸ್ ಬಂದಿತ್ತು. ಅದಕ್ಕೂ ಮೊದಲು ಗೋರಖಪುರ ವಿಮಾನ ನಿಲ್ದಾಣದಲ್ಲಿ ಇಳಿಸಲಾಗಿತ್ತು.

ಶನಿವಾರ ಮತ್ತೆ ಅದೇ ವಿಮಾನ ಬೆಳಗ್ಗೆ ಕಠ್ಮಂಡುವಿಗೆ ಹೊರಟಿತು. ಆದರೆ ಈ ಬಾರಿಯೂ ಅದು ಕಠ್ಮಂಡುವಿನಲ್ಲಿ ಇಳಿಯಲು ಸಾಧ್ಯವಾಗದೆ ಲಖನೌ ವಿಮಾನ ನಿಲ್ದಾಣದಲ್ಲಿ ಇಳಿಯಿತು. ಬಳಿಕ ಪ್ರಯಾಣಿಕರನ್ನು ಹಲವಾರು ತಾಸು ವಿಮಾನದ ಒಳಗೆ ಕೂರಿಸಲಾಗಿತ್ತು. ಈ ವೇಳೆ ಪ್ರಯಾಣಿಕರಿಗೆ ಸ್ಪಷ್ಟ ಮಾಹಿತಿ ನೀಡಿಲ್ಲ ಎಂದು ಪ್ರಯಾಣಿಕರು ಆರೋಪಿಸಿದ್ದಾರೆ.

FORM-IV
PRAJAVANI

STATEMENT about ownership and other particulars about newspaper **"PRAJAVANI" Bangalore** as required to be published under Section 19-D(b) of the Press and Registration of Books Act, read with Rule-8 of the Registration of Newspapers (Central) Rules, 1956

1. Place of Publication: Bangalore
2. Periodicity of Publication: Daily

3. Printer : Mr B A Ravi, Citizen of India # 6606, 6th Floor, Trendz apartment, Bhogadi Gaddige Road, Mysore-570026.
4. Publisher : Mr B A Ravi Citizen of India # 6606, 6th Floor, Trendz apartment, Bhogadi Gaddige Road, Mysore-570026.
5. Editor : Praveen Kulkarni, Citizen of India, B103, Adarsh Astria Apartments, Kadirenahalli First Main Road, Banashankari 2nd Stage, Bangalore - 560070.
6. Names and addresses of individuals who own the newspaper and partners or shareholders holding more than one percent of the total capital.
Proprietors: The Printers (Mysore) Pvt. Ltd. CIN. No. U22110KA 1948PTC000521 Plot No. 7-12, Kumbalgodu Industrial Area II Phase, Mysore Road, Bangalore- 560 074.
Shareholders holding more than one percent of the total capital:
1. Mr. K. N. Hari Kumar, No. 22 1st 'A' Main, 1st Block, RMV 2nd Stage, Bangalore-560 094.
2. Mr. K. N. Tilak Kumar, No. 173, Subbaramachetty Road, Basavanagudi, Bangalore-560004.
3. Mr. K. N. Shanth Kumar, No. 298/A, 1st Main Road, 8th Block, Jayanagar, Bangalore - 560 082.
4. K .N. Guruswamy Properties LLP,No. 75, M. G. Road, Bangalore-560001. 5. Legal Heirs of Late Khan Bahadur Budan Saheb, Landlord, Hindupur, Andhra Pradesh. 6. Mr. S. N. Srinivasa Murthy, Mr. S.N. Shiva Shankar, No. 10, VI Main, II Cross, Gandhinagar, Bangalore-560 009. 7. Mr. S. D. Eswarasa, Sri. Durgamba Lodge, 305, Subedar Chatram Road, 6th Main, Gandhinagar, Bangalore - 560 009. 8. Mr. S.D. Aswathnarayana, Mr. S. D. Nageshwar, Mr. S. D. Shivaram, Mr. S. D. Krishnamurthy, Mr. S. N. Raghavendra, No. 361, II 'C' Cross, 4th Main Road, 3rd Stage, 3rd Block, Basaveswarnagar, Bangalore-560 079. 9. Mr. M. P. Manjunath, Apartment No.S6, Kings Dale Apartments, Dairy circle, Vihar marga, Siddhartha Layout, Mysore-570011. 10. Mr. S.D. Muniswamy, Swamy Dhondusa Fabric, Sri Lodge (Basement) No. 9, 6th Main, 2nd Cross, Gandhinagar, Bangalore-560009. 11. Mrs. Pratibha S. Moola, Mr. Siddartha S. Moola, Ms. Lakshmi S. Moola, Ms. Vidya S. Moola, Ms. Aparna S. Moola, No. 38, Wellington Street, Richmond Town, Bangalore-560 025. 12. Mrs. Dechu R. Moola, Mr. Vishnu R. Moola, Ms. Brinda Devi Moola, Ms. Maya R. Moola, Flat No. 32, August Mansion Apts. No. 42, Curley Street, Richmond Town, Bangalore-560 025.

I, B. A. Ravi hereby declare that the particulars given above are true to the best of my knowledge and belief.

Sd/-
(B.A. Ravi)
Publisher

Place : Bangalore
Date : 28-02-2026


ಸಾಂಪ್ರದಾಯಿಕ ಮಿತ್ರ ಪ್ಯಾಲೆಸ್ಟೀನ್ ಬದಲು ಇಸ್ರೇಲ್ ಪರ ಭಾರತ ಒಲವು ತೋರಿದ್ದು ಸರಿಯೇ?

• ಸರಿ • ತಪ್ಪು • ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಚಿಟಿಕೆ ಸುದ್ದಿ

‘ನನ್ನಲ್ಲಿ ವೈರಾಗ್ಯ ಆವರಿಸುತ್ತಿದೆ’



ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ‘ಸದ್ಯದ ರಾಜಕೀಯ ಬೆಳವಣಿಗೆ ನೋಡಿ ನನ್ನಲ್ಲಿ ವೈರಾಗ್ಯ ಆವರಿಸುತ್ತಿದೆ’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಶನಿವಾರ ಇಲ್ಲಿ ಹೇಳಿದರು.

ತಾಲ್ಲೂಕಿನ ಪಾಲಹಳ್ಳಿಯಲ್ಲಿ ತಿರುಮಲ ವೆಂಕಟರಮಣಸ್ವಾಮಿ ದೇವಾಲಯ ಮತ್ತು ಸಮುದಾಯ ಭವನ ಉದ್ಘಾಟನಾ ಸಮಾರಂಭದಲ್ಲಿ ಅವರು ‘ಐದು ಬಾರಿ ಸಾವಿನ ಮನೆಯ ಕದ ತಟ್ಟಿ ಬಂದಿದ್ದೇನೆ’ ಎಂದರು.

‘ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ರಾಜ್ಯ ಸರ್ಕಾರವು ಜನರ ಜೇಬಿಗೇ ಕತ್ತರಿ ಹಾಕುತ್ತಿದೆ. ಮದ್ಯ, ವಿದ್ಯುತ್ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುತ್ತಿದೆ’ ಎಂದು ಟೀಕಿಸಿದರು.

‘ವಾಯವ್ಯ ಸಾರಿಗೆ ನಿಗಮಕ್ಕೆ ರಾಣಿ ಚನ್ನಮ್ಮನ ಹೆಸರು’

ಬೆಳಗಾವಿ: ‘ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ (ಎನ್‌ಡಬ್ಲ್ಯುಕೆಆರ್‌ಟಿಸಿ) ‘ಕಿತ್ತೂರು ಚನ್ನಮ್ಮ ರಸ್ತೆ ಸಾರಿಗೆ ನಿಗಮ’ ಎಂದು ಮರುನಾಮಕರಣ ಮಾಡುತ್ತೇವೆ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.



ರಾಮಲಿಂಗಾ ರೆಡ್ಡಿ

ಶನಿವಾರ ನಡೆದ ನಿಗಮದ 28ನೇ ಸಂಸ್ಥಾಪನಾ ದಿನಾಚರಣೆ ಮತ್ತು ಹೊಸ ಬಸ್‌ಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಮರುನಾಮಕರಣ ಪ್ರಸ್ತಾವಕ್ಕೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ಪಡೆದು ಕ್ರಮವಹಿಸುತ್ತೇವೆ’ ಎಂದು ತಿಳಿಸಿದರು.

ವಸತಿ ಶಾಲೆಗೆ ಪ್ರವೇಶ: ಇಂದು ಪರೀಕ್ಷೆ

ಬೆಂಗಳೂರು: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ಎಲ್ಲ ವಸತಿ ಶಾಲೆಗಳ 6ನೇ ತರಗತಿ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮಾರ್ಚ್ 1ರಂದು ಲಿಖಿತ ಪರೀಕ್ಷೆ ನಡೆಸುತ್ತಿದ್ದು, ಎಲ್ಲ ಕೇಂದ್ರಗಳನ್ನೂ ಸಜ್ಜುಗೊಳಿಸಲಾಗಿದೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಿತ್ತೂರು ರಾಣಿ ಚನ್ನಮ್ಮ, ಏಕಲವ್ಯ ಮಾದರಿ ಶಾಲೆ, ಅಟಲ್ ಬಿಹಾರಿ ವಾಜಪೇಯಿ ಶಾಲೆ, ಇಂದಿರಾಗಾಂಧಿ, ಅಂಬೇಡ್ಕರ್, ಮಾಸ್ತಿ ವೆಂಕಟೇಶ ಅಯ್ಯಂಗಾರ್ ವಸತಿ ಶಾಲೆಗಳ ಪ್ರವೇಶಕ್ಕೆ 100 ಅಂಕಗಳಿಗೆ ಪರೀಕ್ಷೆ ನಡೆಯಲಿದೆ ಎಂದು ಪ್ರಾಧಿಕಾರದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ಹೇಳಿದ್ದಾರೆ.

2.31 ಲಕ್ಷ ಮಕ್ಕಳು ಪರೀಕ್ಷೆ ಬರೆಯಲು ಅರ್ಜಿ ಸಲ್ಲಿಸಿದ್ದು, 629 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಬಹುತೇಕ ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿ ಕೂಡ ಪರೀಕ್ಷಾ ಕೇಂದ್ರ ತೆರೆಯಲಾಗಿದೆ. ಐದನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಈ ಪರೀಕ್ಷೆ ಬರೆಯಲು ಅರ್ಹತೆ ಪಡೆದಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಕೆರೆಗೆ ಬಿದ್ದು ಇಬ್ಬರು ವಿದ್ಯಾರ್ಥಿಗಳು ಸಾವು

ಮುಳಗುಂದ (ಗದಗ ಜಿಲ್ಲೆ): ಪಟ್ಟಣದ ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದ ವಿದ್ಯಾರ್ಥಿಗಳಾದ ಬಸವರಾಜ ಹ. ಬಡಗೇರ (15) ಮತ್ತು ಪರಶುರಾಮ ಮ. ವಡ್ಡರ (15) ಇಲ್ಲಿನ ಕಲ್ಲೂರ ರಸ್ತೆ ಬದಿಯ ಕೆರೆಗೆ ಶನಿವಾರ ಈಜಲು ಹೋಗಿದ್ದಾಗ ನೀರು ಪಾಲಾಗಿದ್ದಾರೆ. ಇಬ್ಬರೂ ಎಸ್‌ಜೆಜೆಎಂ ಸಂಯುಕ್ತ ಪಿಯು ಮಹಾವಿದ್ಯಾಲಯದಲ್ಲಿ ಒಂಬತ್ತನೇ ತರಗತಿ ವಿದ್ಯಾರ್ಥಿಗಳು ಆಗಿದ್ದರು.

‘ತರಗತಿ ಮುಗಿದ ಕೂಡಲೇ 6 ಮಂದಿ ವಿದ್ಯಾರ್ಥಿಗಳು ಈಜಲು ತೆರಳಿದ್ದಾರೆ. ಇಬ್ಬರೂ ಆಳ ನೀರಿನಲ್ಲಿ ಮುಳುಗಿದ್ದಾರೆ. ದಡದಲ್ಲಿದ್ದ ನಾಲ್ವರು ಆತಂಕಗೊಂಡು, ಸ್ಥಳೀಯರಿಗೆ ವಿಷಯ ತಿಳಿಸಿದ್ದಾರೆ.

ಅಗ್ನಿಶಾಮಕದಳದ ಸಿಬ್ಬಂದಿ ಹಾಗೂ ಸ್ಥಳೀಯರ ನೆರವಿನಿಂದ ಸತತ 4 ತಾಸು ಶೋಧ ಕಾರ್ಯ ನಡೆಯಿತು. ಇಬ್ಬರೂ ಬಾಲಕರು ಕೈ ಹಿಡಿದುಕೊಂಡ ಸ್ಥಿತಿಯಲ್ಲಿ ಮೃತ ದೇಹಗಳ ಪತ್ತೆಯಾದವು’ ಎಂದು ಮುಳಗುಂದ ಠಾಣೆ ಪೊಲೀಸರು ತಿಳಿಸಿದ್ದಾರೆ.

ವಿದ್ಯಾರ್ಥಿನಿ ಮೇಲೆ ಲೈಂಗಿಕ ದೌರ್ಜನ್ಯ

ವಸತಿ ಶಾಲೆ ಮಾಲೀಕ, ಪ್ರಾಂಶುಪಾಲೆ ಬಂಧನ • ಪೋಕ್ಸೊ ಅಡಿ ಪ್ರಕರಣ

ಪ್ರಜಾವಾಣಿ ವಾರ್ತೆ



ಧನಂಜಯ್



ಶೈಲಜಾ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ): ಇಲ್ಲಿನ ಖಾಸಗಿ ವಸತಿ ಶಾಲೆಯಲ್ಲಿ ಓದುತ್ತಿದ್ದ ಅಕ್ಕ–ತಂಗಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಅಡಿ ಶಾಲೆಯ ಮಾಲೀಕ ಹಾಗೂ ಪ್ರಾಂಶುಪಾಲೆಯನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಮಾಲೀಕ ಧನಂಜಯ್ ಹಾಗೂ ಪ್ರಾಂಶುಪಾಲೆ ಶೈಲಜಾ ಬಂಧಿತರು. ಇಬ್ಬರ ವಿರುದ್ಧ ಪೋಕ್ಸೊ ಕಾಯ್ದೆ ಅಡಿ ದೇವನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೇವನಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಆರೋಪಿಗಳ ವೈದ್ಯಕೀಯ ತಪಾಸಣೆ ನಡೆಸಲಾಗಿದೆ. ಘಟನೆ ಬೆಳಕಿಗೆ ಬಂದ ನಂತರ ಶಾಲೆಗೆ ತಾತ್ಕಾಲಿಕ ರಜೆ ಘೋಷಿಸಲಾಗಿದೆ.

ಅಕ್ಕ,ತಂಗಿ ಇಬ್ಬರೂ ವಸತಿಶಾಲೆಯಲ್ಲಿ ಓದುತ್ತಿದ್ದರು. ಧನಂಜಯ್ ಈಚೆಗೆ ಅಕ್ಕನನ್ನು ಶಾಲೆಯ ಕೊಠಡಿಗೆ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಗರ್ಭಧಾರಣೆ ತಪ್ಪಿಸಲು ಆಹಾರದಲ್ಲಿ ಔಷಧಿ ನೀಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಬಳಿಕ ಆಕೆಯ ತಂಗಿಯ ಮೇಲೂ ದೌರ್ಜನ್ಯಕ್ಕೆ ಯತ್ನಿಸಿದ್ದಾನೆ. ಆದರೆ, ಆಕೆ ಶೌಚಾಲಯದಲ್ಲಿ ಅಡಗಿ ತಪ್ಪಿಸಿಕೊಂಡಿರುವುದಾಗಿ ತಿಳಿದು ಬಂದಿದೆ.

ಪ್ರಾಂಶುಪಾಲೆ ಶೈಲಜಾ, ಈ ವಿಷಯವನ್ನು ಯಾರಿಗೂ ತಿಳಿಸದಂತೆ ವಿದ್ಯಾರ್ಥಿನಿಯರಿಗೆ ಬೆದರಿಸಿದ್ದರು. ಹೆಚ್ಚಿನ ಅಂಕ, ಉಚಿತ ಶಿಕ್ಷಣದ ಆಮಿಷ ಒಡ್ಡಿದ್ದರು. ವಿಷಯ ಬಹಿರಂಗ ಪಡಿಸಿದರೆ ಪರೀಕ್ಷೆಯಲ್ಲಿ ಅನುತ್ತೀರ್ಣಗೊಳಿಸುವುದಾಗಿ ಬೆದರಿಕೆ ಹಾಕಲಾಗಿತ್ತು ಎಂದು ಪೋಷಕರು ಆರೋಪಿಸಿದ್ದಾರೆ.

ಘಟನೆ ಬಳಿಕ ಪೋಷಕರಿಗೆ ಮಕ್ಕಳ ಭೇಟಿಗೆ ಅವಕಾಶ ನೀಡಿಲ್ಲ. ದೂರವಾಣಿ ಸಂಪರ್ಕ ಕಡಿತಗೊಳಿಸಲಾಗಿತ್ತು. ‘ಪ್ರವಾಸಕ್ಕೆ ಕಳುಹಿಸಿದ್ದೇವೆ ಅಥವಾ ಓದುತ್ತಿದ್ದಾರೆ’ ಎಂಬ ನೆಪ ಹೇಳಲಾಗಿತ್ತು. ಪೋಷಕರು ಒತ್ತಾಯಿಸಿದ ಬಳಿಕ ಕೆಲವೇ ನಿಮಿಷದ ಮಾತುಕತೆಯಲ್ಲಿ ಬಾಲಕಿಯರು ನಡೆದ ಘಟನೆಯನ್ನು ತಿಳಿಸಿದ್ದಾರೆ.

ವಿದ್ಯಾರ್ಥಿನಿಯರು ಮಲಗುತ್ತಿದ್ದ ವಸತಿ ನಿಲಯದ ಕೊಠಡಿಗೆ ಬೀಗ ಅಥವಾ ಬೋಲ್ಟ್ ವ್ಯವಸ್ಥೆ ಇರಲಿಲ್ಲ. ಕೃತ್ಯ ನಡೆದ ದಿನ ವಾರ್ಡನ್‌ನನ್ನು ಮನೆಗೆ ಕಳುಹಿಸಲಾಗಿತ್ತು ಎಂಬ ಮಾಹಿತಿ ಪೊಲೀಸರಿಗೆ ಲಭ್ಯವಾಗಿದೆ.

ವಸತಿ ನಿಲಯದಲ್ಲಿರುವ ವಿದ್ಯಾರ್ಥಿನಿಯರ ಸುರಕ್ಷತೆಗೆ ಜಿಲ್ಲಾಡಳಿತ ಕ್ರಮ ವಹಿಸಿದ್ದು, 300ಕ್ಕೂ ಹೆಚ್ಚು ವಿದ್ಯಾರ್ಥಿನಿಯರಿಂದ ಮಾಹಿತಿ ಸಂಗ್ರಹಿಸಲಾಗುತ್ತಿದೆ ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ವಸತಿ ಶಾಲೆ ಮಕ್ಕಳ ಸುರಕ್ಷತೆಗೆ ಕ್ರಮ

ದೇವನಹಳ್ಳಿ: ವಸತಿ ಶಾಲೆಯ ಘಟನೆ ಆಯೋಗದ ಗಮನಕ್ಕೆ ಬಂದಿದೆ. ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಜತೆ ಚರ್ಚೆ ನಡೆಸಲಾಗಿದೆ. ಜಿಲ್ಲಾಡಳಿತ ಈ ಪ್ರಕರಣದ ಸಂಪೂರ್ಣ ಜವಾಬ್ದಾರಿ ತೆಗೆದುಕೊಳ್ಳಬೇಕು. ಶಾಲೆಯ ಮೇಲ್ವಿಚಾರಣೆಗೆ ತಕ್ಷಣ ಆಡಳಿತಾಧಿಕಾರಿ ನೇಮಕ ಮಾಡುವಂತೆ ಸೂಚಿಸಲಾಗಿದೆ ಎಂದು ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷ ಶಶಿಧರ್ ಕೋಸುಂಬೆ ತಿಳಿಸಿದ್ದಾರೆ.

ದೇವನಹಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಕ್ಕಳಿಗೆ ಮನೆ ನಂತರ ಅತ್ಯಂತ ಸುರಕ್ಷಿತ ಸ್ಥಳವೆಂದರೆ ಶಾಲೆ. ವಸತಿಶಾಲೆ ವಿದ್ಯಾರ್ಥಿನಿಯರಿಗೆ ಧೈರ್ಯ ತುಂಬುವ ಕೆಲಸ ನಡೆಯಬೇಕು. ಅವರ ಮಾನಸಿಕ ಸ್ಥಿತಿ ಹಾಗೂ ಸುರಕ್ಷತೆಗೆ ಆದ್ಯತೆ ನೀಡಬೇಕು ಎಂದರು.

ಡಿವಿಆರ್‌ನಲ್ಲಿ ಸಂಗ್ರಹವಾಗಿದ್ದ ಚಿತ್ರಗಳು ಡಿಲೀಟ್ ಆಗಿರುವ ಮಾಹಿತಿ ಬಂದಿದೆ. ಇದರ ಬಗ್ಗೆ ಸಮಗ್ರ ತನಿಖೆ ನಡೆಸಬೇಕು. ಈ ಪ್ರಕರಣದಲ್ಲಿ ಯಾರು ಭಾಗಿಯಾಗಿದ್ದಾರೆ ಎಂದು ಪೊಲೀಸ್ ಇಲಾಖೆ ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

> **ಡಿವಿಆರ್‌ನಲ್ಲಿ ಸಂಗ್ರಹವಾಗಿದ್ದ ಚಿತ್ರಗಳು ಡಿಲೀಟ್ ಆಗಿರುವ ಮಾಹಿತಿ ಬಂದಿದೆ. ಸಮಗ್ರ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು**
> **ಶಶಿಧರ್ ಕೋಸುಂಬೆ,** ಅಧ್ಯಕ್ಷ ರಾಜ್ಯ ಮಕ್ಕಳ ಹಕ್ಕುಗಳ ಆಯೋಗ


ಸುದ್ದಿ 2 ನಿಮಿಷ

‘3ನೇ ಡೇಟ್‌ನೊಳಗೆ ಡಿಕೆಶಿ ಸಿ.ಎಂ ಆಗದಿದ್ದರೆ ರಾಜಕಾರಣವೇ ಬೇಡ’

ರಾಮನಗರ: ‘ಧ್ಯಾನಕ್ಕೆ ಕುಳಿತಿರುವ ನಮ್ಮ ಗುರುಗಳು ಇನ್ನೂ ಎದ್ದಿಲ್ಲ. ಎದ್ದ ಬಳಿಕ ನಮ್ಮ ನಾಯಕ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುವುದಕ್ಕೆ ಮೂರನೆಯ, ಅಂತಿಮ ದಿನಾಂಕ ಕೊಡುತ್ತಾರೆ. ಆ ದಿನಾಂಕದೊಳಗೆ ಅವರು ಮುಖ್ಯಮಂತ್ರಿ ಆಗದಿದ್ದರೆ ನಮಗೆ ರಾಜಕಾರಣವೇ ಬೇಡ’ ಎಂದು ಡಿಸಿಎಂ ಆಪ್ತ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಹೇಳಿದ್ದಾರೆ.

ಮುಖ್ಯಮಂತ್ರಿ ಬದಲಾವಣೆ ಕುರಿತು ನಗರದಲ್ಲಿ ಶನಿವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ನಮ್ಮಲ್ಲಿ ಯಾವುದೇ ಬಣವಿಲ್ಲ. ಪಕ್ಷದ 140 ಶಾಸಕರೂ ಡಿಕೆಶಿ ಬಣವಾಗಿದ್ದು, ಎಲ್ಲರೂ ಅವರ ಪರವಾಗಿದ್ದೇವೆ. ನಾಯಕತ್ವ ಬದಲಾವಣೆ ಮಾಡುವಂತೆ ಒಕ್ಕೊರಲಿನಿಂದ ಹೈಕಮಾಂಡ್‌ಗೆ ಕೇಳಿದ್ದೇವೆ’ ಎಂದರು.

‘ಶಾಸಕ ಎಚ್.ಸಿ. ಬಾಲಕೃಷ್ಣ ಜನ್ಮದಿನದ ಪ್ರಯುಕ್ತ ಶಾಸಕರು ಭೋಜನಕ್ಕೆ ಸೇರಿದ್ದರು. ರಂಜಾನ್ ಪ್ರಯುಕ್ತ ಕ್ಷೇತ್ರದಲ್ಲಿ ನಾನು ಕಿಟ್ ವಿತರಿಸುತ್ತಿದ್ದೆ. ಹಾಗಾಗಿ, ನಾನು ಭೋಜನಕ್ಕೆ ಹೋಗಿರಲಿಲ್ಲ’ ಎಂದು ಹೇಳಿದರು.



‘ನಾಯಕತ್ವ ಗೊಂದಲ ಮುಂದುವರಿದರೆ ಮುಂದೆ ಪಕ್ಷ ಅಧಿಕಾರಕ್ಕೆ ಬರಲ್ಲ’ ಎಂಬ ಶಾಸಕ ಬಾಲಕೃಷ್ಣ ಹೇಳಿಕೆಗೆ, ‘ಅದು ಅವರ ವೈಯಕ್ತಿಕ ಅಭಿಪ್ರಾಯ. ಸರ್ಕಾರ ಚೆನ್ನಾಗಿ ಕೆಲಸ ಮಾಡುತ್ತಿದೆ. ಪಕ್ಷ ಮತ್ತೆ ಅಧಿಕಾರಕ್ಕೆ ಬರಲು ಸಂಘಟನೆ ಶಕ್ತಿ ಬೇಕು. ಅದಕ್ಕಾಗಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಬೇಕು’ ಎಂದರು.

ಡಿಕೆಶಿಗೆ ಹಿನ್ನಡೆಯಾಗುತ್ತಿಲ್ಲ: ಶಿವಗಂಗಾ ಬಸವರಾಜು

ದಾವಣಗೆರೆ: ‘ಅಧಿಕಾರ ಹಸ್ತಾಂತರ ವಿಚಾರದಲ್ಲಿ ಡಿ.ಕೆ. ಶಿವಕುಮಾರ್ ಅವರಿಗೆ ಹಿನ್ನಡೆಯಾಗುತ್ತಿಲ್ಲ. ಬದಲಿಗೆ, ಅವರಿಗೆ ಪೂರಕವಾದ ವಾತಾವರಣವೇ ಇದೆ. ಹೈಕಮಾಂಡ್ ತೀರ್ಮಾನ ಮಾಡಿದರೆ ಎಲ್ಲವೂ ಬಗೆಹರಿಯಲಿದೆ’ ಎಂದು ಚನ್ನಗಿರಿಯ ಕಾಂಗ್ರೆಸ್ ಶಾಸಕ ಶಿವಗಂಗಾ ಬಸವರಾಜು ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಅಧಿಕಾರ ಹಸ್ತಾಂತರದ ಗೊಂದಲದ ಬಗ್ಗೆ ಎಲ್ಲರೂ ನಮ್ಮನ್ನು ಪ್ರಶ್ನೆ ಮಾಡುತ್ತಿದ್ದಾರೆ. ಅಧಿಕಾರ ಹಂಚಿಕೆಯ ಗೊಂದಲವನ್ನು ಹೈಕಮಾಂಡ್ ತಕ್ಷಣವೇ ಬಗೆಹರಿಸಬೇಕು. ಹೈಕಮಾಂಡ್ ತೀರ್ಮಾನಕ್ಕೆ ಎಲ್ಲರೂ ಬದ್ಧ’ ಎಂದರು.

‘ಶೀಘ್ರವೇ ನಿರ್ಧಾರ ಕೈಗೊಳ್ಳದಿದ್ದರೆ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರುವುದು ಕಷ್ಟ’ ಎಂಬ ಶಾಸಕ ಬಾಲಕೃಷ್ಣ ಅವರ ಹೇಳಿಕೆಯಲ್ಲಿ ಅರ್ಥವಿದೆ. ‘ಬಿಜೆಪಿ ಆಡಳಿತದ ಅವಧಿಯಲ್ಲಿನ ಕುರ್ಚಿ ಕಿತ್ತಾಟದಿಂದ ಬೇಸತ್ತ ಜನ ಕಾಂಗ್ರೆಸ್ ಕಡೆ ಒಲವು ತೋರಿದ್ದರು ಎಂಬುದನ್ನು ನಾವು ಮರೆಯಬಾರದು’ ಎಂದರು.

ಮೈಸೂರು ರೇಷ್ಮೆ ಸೀರೆ ನೇಯ್ಗೆ ಆರಂಭ

ಪ್ರಜಾವಾಣಿ ವಾರ್ತೆ

ಮೈಸೂರು: ಕೆಎಸ್‌ಐಸಿಯ ಇಲ್ಲಿನ ಮೈಸೂರು ರೇಷ್ಮೆ ಸೀರೆಗಳ 13 ಮಾರಾಟ ಮಳಿಗೆಗಳಲ್ಲಿ ಶನಿವಾರವೂ ದಾಸ್ತಾನು ಕೊರತೆ ಮುಂದುವರೆದಿತ್ತು. ಬಹುತೇಕ ಮಳಿಗೆಗಳಲ್ಲಿ ಕೆಲವೇ ಸೀರೆಗಳು ಲಭ್ಯವಿವೆ. ವಾರಾಂತ್ಯದ ಕಾರಣ ಮಳಿಗೆಯತ್ತ ಧಾವಿಸಿದ ಗ್ರಾಹಕರಿಗೆ ಇಷ್ಟದ ಸೀರೆಗಳು ಸಿಗಲಿಲ್ಲ.



ಈ ನಡುವೆ ಮೈಸೂರಿನ ನೇಯ್ಗೆ ಘಟಕವು ಕಾರ್ಯಾರಂಭಗೊಂಡಿತು. ತಿ.ನರಸೀಪುರದ ಕೆಎಸ್‌ಐಸಿ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ವಿರೋಧಿಸಿ ಉತ್ಪಾದನಾ ಘಟಕದ ಸಿಬ್ಬಂದಿ ಕೆಲಸ ನಿಲ್ಲಿಸಿದ್ದರಿಂದ ಸೀರೆ ಉತ್ಪಾದನೆ ಸ್ಥಗಿತಗೊಂಡಿತ್ತು. ಮೈಸೂರಿನ ಸೀರೆ ನೇಯ್ಗೆಯ ಘಟಕದ ಸಿಬ್ಬಂದಿಯೂ ಬೆಂಬಲ ನೀಡಿದ್ದರು.

ನೇಯ್ಗೆ ಆರಂಭ: ಶನಿವಾರ ನೇಯ್ಗೆ ಘಟಕ ಕಾರ್ಯಾರಂಭಗೊಂಡಿದೆ. ‘ವಾರದಿಂದ ಕೆಲಸ ನಿಲ್ಲಿಸಿರುವುದಕ್ಕೆ ಬಣ್ಣಗಳಲ್ಲಿ ನೆನೆಸಿಟ್ಟಿದ್ದ, ಸೀರೆ ತಯಾರಿಸಲು ಬಳಸುವ ರೇಷ್ಮೆ ನೂಲುಗಳು ಹಾಳಾಗುವ ಸಂಭವಿತ್ತು. ಹೀಗಾಗಿ ಕೆಲಸ ಆರಂಭಿಸಿದ್ದೇವೆ’ ಎಂದು ನೌಕರರೊಬ್ಬರು ತಿಳಿಸಿದರು.

‘ತಿ.ನರಸೀಪುರದ ಕಾರ್ಖಾನೆ ಆವರಣದಲ್ಲಿ ಪ್ರತಿಭಟನೆ ಮುಂದುವರೆದಿದ್ದು, ಅಲ್ಲಿನ ಕಾರ್ಮಿಕರು ಕೆಲಸ ಆರಂಭಿಸಿಲ್ಲ. ಸಮಸ್ಯೆ ಮುಂದುವರಿದರೆ, ಮೈಸೂರು ಘಟಕಕ್ಕೆ ಅಲ್ಲಿಂದ ರೇಷ್ಮೆ ನೂಲು ದೊರೆಯದೇ ಉತ್ಪಾದನೆ ಸ್ಥಗಿತಗೊಳ್ಳಲಿದೆ’ ಎಂದರು.

‘ಕುಟುಂಬದಲ್ಲಿ ಕಾರ್ಯಕ್ರಮವಿದ್ದು, ಮೈಸೂರು ರೇಷ್ಮೆ ಸೀರೆಯೇ ಬೇಕೆಂದು ಶಿವಮೊಗ್ಗದಿಂದ ಬಂದಿದ್ದೇವೆ. ಆದರೆ ಹೆಚ್ಚಿನ ಆಯ್ಕೆಗಳೇ ಇಲ್ಲ’ ಎಂದು ಅಶ್ವಿನಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು.

ಕಥಕ್ಕಳಿ ಭಾವಲಹರಿ

ಪ್ರಜಾವಾಣಿ ಚಿತ್ರ: ರವಿಕುಮಾರ ಹುಲಕುಂದ



ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಬೆಳವಡಿಯಲ್ಲಿ ಶನಿವಾರ ಆಚರಿಸಲಾದ ಬೆಳವಡಿ ಮಲ್ಲಮ್ಮ ರಾಣಿಯ 349ನೇ ವಿಜಯೋತ್ಸವದ ಮೆರವಣಿಗೆಯಲ್ಲಿ, ತುಮಕೂರಿನ ಸುನೀಲ ಮತ್ತು ತಂಡದ ಕಥಕ್ಕಳಿ ವೇಷಧಾರಿಗಳು ಗಮನ ಸೆಳೆದರು

ಭಟ್ಕಳದಲ್ಲಿ ಮಾ. 8ರಂದು ಹಿಂದೂ ಸಂಗಮ • ದಿಕ್ಸೂಚಿ ಭಾಷಣಕ್ಕೆ ಒಪ್ಪಿಗೆ

ಸಕ್ರಿಯ ರಾಜಕಾರಣದತ್ತ ಅನಂತಕುಮಾರ

• ಗಣಪತಿ ಹೆಗಡೆ



ಅನಂತ ಕುಮಾರ

ಕಾರವಾರ: ಎರಡು ವರ್ಷಗಳ ಬಳಿಕ ಲೋಕಸಭೆಯ ಮಾಜಿ ಸದಸ್ಯ ಅನಂತಕುಮಾರ ಹೆಗಡೆ ಮತ್ತೆ ಸಕ್ರಿಯ ರಾಜಕಾರಣದತ್ತ ಮುಖ ಮಾಡಲಿದ್ದಾರೆ ಎಂಬ ಚರ್ಚೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಆರಂಭವಾಗಿದೆ.

ಮಾರ್ಚ್ 8ರಂದು ಭಟ್ಕಳ ನಗರದಲ್ಲಿ ನಡೆಯುವ ಹಿಂದೂ ಸಂಗಮ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಲು ಒಪ್ಪಿದ್ದಾರೆ. ಇದು ಈ ಚರ್ಚೆಗೆ ನಾಂದಿ ಹಾಡಿದೆ. 90ರ ದಶಕದಲ್ಲಿ ಭಟ್ಕಳದಲ್ಲಿ ನಡೆದಿದ್ದ ಕೋಮು ಸಂಘರ್ಷದ ವೇಳೆ ಪ್ರಚೋದನಕಾರಿ ಭಾಷಣಕ್ಕೆ ಅವರು ಹೆಸರಾಗಿದ್ದರು.

6 ಬಾರಿ ಉತ್ತರ ಕನ್ನಡ ಲೋಕಸಭೆ ಕ್ಷೇತ್ರದಿಂದ ಆಯ್ಕೆಯಾಗಿದ್ದ ಅನಂತಕುಮಾರ 2018ರಲ್ಲಿ ಕೆಲ ಅವಧಿಗೆ ಕೇಂದ್ರ ಕೌಶಲ್ಯಾಭಿವೃದ್ಧಿ ಖಾತೆ ರಾಜ್ಯ ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದರು. ಸಂವಿಧಾನದ ಕುರಿತಾಗಿ ಆಕ್ಷೇಪಾರ್ಹ ಹೇಳಿಕೆ ವಿವಾದ ಆಗಿದ್ದರಿಂದ, ಸಚಿವ ಸ್ಥಾನ ಅವರಿಗೆ ಕೈತಪ್ಪಿತ್ತು.

2024ರ ಲೋಕಸಭೆ ಚುನಾವಣೆಗೆ ಕೆಲವೇ ತಿಂಗಳು ಬಾಕಿ ಇರುವಾಗ ಮತ್ತೆ ಸಕ್ರಿಯರಾಗಿದ್ದ ಅವರು ಟಿಕೆಟ್ ಕೈತಪ್ಪಿದ್ದರಿಂದ ಪಕ್ಷದ ಚಟುವಟಿಕೆ, ಸಾರ್ವಜನಿಕ ಜೀವನದಿಂದ ದೂರ ಉಳಿದಿದ್ದರು.

ಟಿಕೆಟ್ ಕೈತಪ್ಪುತ್ತಿದ್ದಂತೆ ಫೇಸ್‌ಬುಕ್‌ನಲ್ಲಿ, ‘ಮೂರು ದಶಕಗಳಿಂದ ಹಿಂದವೀ ಹಿತದಲ್ಲಿ ಸೇವೆ ಸಲ್ಲಿಸುವ ಸುಯೋಗ್ಯ ಬದುಕಿನಲ್ಲಿ ನನಗೊಂದು ಗುರುತು ನೀಡಿದೆ. ನಿಜಕ್ಕೂ ಅಷ್ಟೇ ಸಾಕು! ಈ ಸಮಾಜ ದೇವತೆಯ ಪದತಲದಲ್ಲಿ ಹೂವಾಗುವ ಸೌಭಾಗ್ಯ ಅದೆಷ್ಟು ಜನರಿಗೆ ತಾನೇ ಸಿಕ್ಕೀತು?’ ಎಂದು ಬರೆದುಕೊಂಡಿದ್ದರು.

ಆದರೆ, ಇದೀಗ ಪುನಃ ಹಿಂದೂ ಸಮ್ಮೇಳನ ಸಮಿತಿಯ ಭಟ್ಕಳ ಘಟಕದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿರುವುದು ರಾಜಕೀಯ ವಲಯದಲ್ಲಿ ಅಚ್ಚರಿ ಮೂಡಿಸಿದೆ.

‘ಹಿಂದುತ್ವದ ವಿಚಾರಧಾರೆಯನ್ನು ಪ್ರಖರವಾಗಿ ಮಂಡಿಸುವವರರಲ್ಲಿ ಅನಂತಕುಮಾರ ಹೆಗಡೆ ಒಬ್ಬರು. ಹೀಗಾಗಿ, ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ’ ಎಂದು ಸಮ್ಮೇಳನ ಸಮಿತಿ ಅಧ್ಯಕ್ಷ ಶ್ರೀಧರ ನಾಯ್ಕ ತಿಳಿಸಿದರು.

‘ಸಕ್ರಿಯ ರಾಜಕೀಯಕ್ಕೆ ಅನಂತಕುಮಾರ ಮರಳುವ ಬಗ್ಗೆ ಚರ್ಚೆ ನಡೆದಿರುವುದು ಗೊತ್ತಿಲ್ಲ. ಉದ್ಯಮ ಕ್ಷೇತ್ರದಲ್ಲಿ ಅವರು ಹೆಚ್ಚು ತೊಡಗಿಕೊಂಡಿದ್ದಾರೆ’ ಎಂದು ಅನಂತಕುಮಾರ ಆಪ್ತರೊಬ್ಬರು ಹೇಳಿದರು.

‘ಅನಂತಕುಮಾರ ಹೆಗಡೆ ಬಿಜೆಪಿಯಲ್ಲೇ ಇದ್ದಾರೆ. ಅವರು ನಮ್ಮಿಂದ ದೂರವಾಗಿಲ್ಲ’ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರತಿಕ್ರಿಯಿಸಿದ್ದಾರೆ.

‘ಜನರ ಸಮಸ್ಯೆಗೆ ಧ್ವನಿ ಎತ್ತದವರು’

‘ಅನಂತಕುಮಾರ ಹೆಗಡೆ ಜನಪ್ರತಿನಿಧಿ ಆಗುವ ಅವಕಾಶ ಕೈತಪ್ಪಿದ ಬಳಿಕ ಜಿಲ್ಲೆಯಲ್ಲಿ ಸಾರ್ವಜನಿಕವಾಗಿಯೂ ಕಾಣಿಸಿಕೊಂಡಿರಲಿಲ್ಲ. ನದಿ ತಿರುವು ಯೋಜನೆ, ಶರಾವತಿ ಪಂಪ್ಡ್ ಸ್ಟೋರೇಜ್ ಸೇರಿ ವಿವಿಧ ಹೋರಾಟ ನಡೆದಾಗ ಜನರ ಪರ ನಿಲ್ಲುವ ಕೆಲಸ ಮಾಡಲಿಲ್ಲ. ಹಿಂದುತ್ವದ ಪರ ಕಾರ್ಯಕ್ರಮದಲ್ಲಿ ಪಾಲ್ಗೊಂಡಷ್ಟಕ್ಕೆ ರಾಜಕೀಯವಾಗಿ ಸಕ್ರಿಯ ಆಗಬಹುದು ಎನ್ನಲಾಗದು’ ಎಂದು ಹಿರಿಯ ರಾಜಕೀಯ ವಿಶ್ಲೇಷಕರೊಬ್ಬರು ಹೇಳಿದರು.


‘ಸಂಪುಟದ ತೀರ್ಮಾನಕ್ಕೆ ಒಪಿಎಸ್’

ಒಂದನೇ ಪುಟದಿಂದ...

‘ಮಕ್ಕಳಿಗೂ ಅದನ್ನೇ ಕಲಿಸಬೇಕು. ವೈಚಾರಿಕ, ವೈಜ್ಞಾನಿಕ ಶಿಕ್ಷಣ ನೀಡಿದರೆ ಸುಭದ್ರ, ಸುಂದರ ಸಮಾಜ, ದೇಶವನ್ನು ಕಟ್ಟಬಹುದು. ಸಮಾಜದಲ್ಲಿನ ಜಾತಿ, ಮೌಢ್ಯ, ಕಂದಾಚಾರಗಳನ್ನು ದೂರ ಮಾಡುವ ಮಕ್ಕಳನ್ನು ತಯಾರು ಮಾಡಬಹುದು’ ಎಂದರು.

ಸಿದ್ದರಾಮಯ್ಯಗೆ ‘ಶಿಕ್ಷಣ ರಾಮಯ್ಯ’, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ‘ಸಂಘ ಮಿತ್ರ’, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪಗೆ ‘ಗುರುಕುಲ’, ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣಗೆ ‘ಶಿಕ್ಷಕ ಸೈನಿಕ’ ಬಿರುದು ನೀಡಿ ಗೌರವಿಸಲಾಯಿತು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ, ಎಐಪಿಟಿಎಫ್ ರಾಷ್ಟ್ರೀಯ ಅಧ್ಯಕ್ಷ ಬಸವರಾಜ ಗುರಿಕಾರ, ವಿಧಾನ ಪರಿಷತ್ ಸದಸ್ಯ ರಾಮೋಜಿ ಗೌಡ, ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಉಪಸ್ಥಿತರಿದ್ದರು.



ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಬೆಂಗಳೂರಿನಲ್ಲಿ ಶನಿವಾರ ಆಯೋಜಿಸಿದ್ದ ರಾಜ್ಯಮಟ್ಟದ ಶೈಕ್ಷಣಿಕ ಮಹಾ ಸಮ್ಮೇಳನದಲ್ಲಿ ಸಿದ್ದರಾಮಯ್ಯ ಅವರು ಸುವರ್ಣ ಸಂಭ್ರಮದ ಲೋಗೊ ಬಿಡುಗಡೆ ಮಾಡಿದರು. ಪ್ರಜಾವಾಣಿ ಚಿತ್ರ

‘ಚುನಾವಣಾ ಕೆಲಸಕ್ಕೆ ಅನಿವಾರ್ಯ’

ಚುನಾವಣಾ ಕೆಲಸಗಳಿಂದ ಶಿಕ್ಷಕರನ್ನು ಕೈ ಬಿಡಲು ಸಾಧ್ಯವಿಲ್ಲ. ಅವರು ಮತಗಟ್ಟೆ ಮಟ್ಟದಲ್ಲಿ ಕಾರ್ಯ ನಿರ್ವಹಿಸಲೇಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಈಗಾಗಲೇ ಒಂದಷ್ಟು ಜನರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಶಿಕ್ಷಕರು ನ್ಯಾಯಬದ್ಧವಾಗಿ ಕೆಲಸ ಮಾಡುತ್ತಾರೆ. ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಸಿದ್ಧರಾಗಬೇಕು ಎಂದರು.

‘ಸುಮಾರು ₹10 ಸಾವಿರ ಕೋಟಿ ಸಿಎಸ್‌ಆರ್ ನಿಧಿ ಬಳಸಿಕೊಂಡು ಹಳ್ಳಿಗಳಲ್ಲಿ ಉತ್ತಮ ಶಿಕ್ಷಣ ನೀಡಲು ನಿರ್ಧರಿಸಿದ್ದೇವೆ. ಸರ್ಕಾರಿ ಶಾಲೆಗಳ ಮೂಲಸೌಕರ್ಯ ಅಭಿವೃದ್ಧಿ ಮಾಡಲಾಗುವುದು. ಮಕ್ಕಳು ಹಳ್ಳಿಯಿಂದ ಪಟ್ಟಣಕ್ಕೆ ವಲಸೆ ಬರುವುದು ತಪ್ಪಬೇಕು. ಖಾಸಗಿ ಶಾಲೆಗಳು ಸರ್ಕಾರಿ ಶಾಲೆಗಳನ್ನು ದತ್ತು ಪಡೆದು, ಶಿಕ್ಷಕರನ್ನು ನೇಮಿಸಬೇಕು’ ಎಂದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಟ್ಟಡಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಥವಾ ಗ್ರೇಟರ್ ಬೆಂಗಳೂರು ಪ್ರಾಧಿಕಾರದಿಂದ ನಿವೇಶನ ನೀಡಲಾಗುವುದು ಎಂದು ಭರವಸೆ ನೀಡಿದರು.

‘ದಾಖಲಾತಿ ಶೇ 20 ಏರಿಕೆ ಗುರಿ’

‘ಸರ್ಕಾರಿ ಶಾಲೆಗಳನ್ನು ಬಲಪಡಿಸುವುದು, ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುವುದು ಸರ್ಕಾರದ ಪ್ರಮುಖ ಗುರಿ. ಈ ಬಾರಿ ಸರ್ಕಾರಿ ಶಾಲೆಗಳ ದಾಖಲಾತಿಯನ್ನು ಶೇ 20ರಷ್ಟು ಹೆಚ್ಚಿಸಲು ಶಿಕ್ಷಕರು ಪಣತೊಡಬೇಕು’ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಕಳೆದ ಎರಡು ವರ್ಷಗಳಲ್ಲಿ 14,499 ಶಿಕ್ಷಕರ ನೇಮಕಾತಿ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ. ಉತ್ತರ ಕರ್ನಾಟಕ ಭಾಗದ ಶಿಕ್ಷಕರ ವರ್ಗಾವಣೆ ಸಮಸ್ಯೆ ಬಗೆಹರಿಸಲಾಗಿದೆ ಎಂದರು. ಮಕ್ಕಳಲ್ಲಿನ ಪರೀಕ್ಷಾ ಭಯ ಹೋಗಲಾಡಿಸಲು ವರ್ಷಕ್ಕೆ ಮೂರು ಪರೀಕ್ಷೆಗಳನ್ನು ನಡೆಸುವ ವ್ಯವಸ್ಥೆ ಜಾರಿಗೆ ತರಲಾಗಿದೆ. ಇದು ದೇಶದಲ್ಲೇ ಮಾದರಿ ಯೋಜನೆ ಎಂದರು.

‘ಶಿಕ್ಷಣದ ತಳಪಾಯ ಮುಖ್ಯ’

‘ಶಿಕ್ಷಣದ ತಳಪಾಯವಾದ ಪ್ರಾಥಮಿಕ ಶಿಕ್ಷಣಕ್ಕೆ ಯಾವತ್ತೂ ಅಪಾಯ ಬರಬಾರದು. ರಾಜ್ಯದಲ್ಲಿ ಸರ್ಕಾರಿ ಶಾಲೆಗಳ ಹತ್ಯೆಯೂ ಆಗಬಾರದು, ಆತ್ಮಹತ್ಯೆಯೂ ಆಗಬಾರದು’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

‘ಕೆಪಿಎಸ್‌ನಿಂದ ಸರ್ಕಾರಿ ಶಾಲೆಗಳು ಮುಚ್ಚಿ ಹೋಗುತ್ತಿವೆ ಎಂಬ ಆತಂಕವಿದೆ. ಒಂದೇ ಒಂದು ಶಾಲೆ ಮುಚ್ಚುವುದಿಲ್ಲ ಎಂದು ಮಧು ಬಂಗಾರಪ್ಪ ಅವರು ಹೇಳುತ್ತಿದ್ದಾರೆ. ಅವರನ್ನು ನಂಬೋಣ. ಆದರೆ, ಕೆಲವರು ಶಾಲೆಗಳು ಮುಚ್ಚಲಿವೆ ಎನ್ನುತ್ತಿದ್ದಾರೆ. ಇದರಲ್ಲಿ ಯಾವುದು ಸತ್ಯ? ಪರಸ್ಪರ ಚರ್ಚೆ ಮೂಲಕ ಗೊಂದಲಗಳನ್ನು ಪರಿಹರಿಸಬೇಕಿದೆ. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳವಾಗುತ್ತಿರುವ ಶಾಲೆಗಳ ಶಿಕ್ಷಕರು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿರುವವರ ಜತೆಗೂ ಸಭೆ ನಡೆಸಬೇಕು’ ಎಂದರು.

ತಂದೆಯನ್ನು ಕೊಂದ ಮಗ

ಲಕ್ಷ್ಮೇಶ್ವರ (ಗದಗ ಜಿಲ್ಲೆ): ತಾಲ್ಲೂಕಿನ ಗೋವನಾಳ ಗ್ರಾಮದಲ್ಲಿ ಹಣದ ವಿಷಯ ಕುರಿತ ಜಗಳ ತಾರಕಕ್ಕೇರಿ ಮಗನೇ ತಂದೆಯನ್ನು ಕೊಂದು ಪೊಲೀಸರಿಗೆ ಶರಣಾಗಿದ್ದಾನೆ.

ಶಂಕರಗೌಡ ದ್ಯಾವನಗೌಡ್ರ (56) ಮೃತರು. ಇವರ ಪುತ್ರ ಪ್ರಭು ದ್ಯಾವನಗೌಡ್ರ (24) ಆರೋಪಿ. ಜಮೀನನ್ನು ಬೇರೆಯವರಿಗೆ ಉಳುಮೆಗೆ ಕೊಟ್ಟಿದ್ದ ಹಣದ ವಿಷಯಕ್ಕೆ ಕುಡಿದ ಮತ್ತಿನಲ್ಲಿ ಇಬ್ಬರ ನಡುವೆ ನಡೆದ ಜಗಳ ಕೊಲೆಯಲ್ಲಿ ಅಂತ್ಯವಾಗಿದೆ’ ಎಂದು ಲಕ್ಷ್ಮೇಶ್ವರ ಠಾಣೆ ಪೊಲೀಸರು ತಿಳಿಸಿದ್ದಾರೆ.



ಕಾರ್ಯಕ್ರಮವನ್ನು ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಶನಿವಾರ ಉದ್ಘಾಟಿಸಿದರು

ಕೊಡವ ಸಾಧಕರಿಗೆ ಅಕಾಡೆಮಿ ಗೌರವ ಪ್ರಶಸ್ತಿ ಪ್ರದಾನ

ಗೋಣಿಕೊಪ್ಪಲು (ಕೊಡಗು ಜಿಲ್ಲೆ): ಇಲ್ಲಿನ ಕುಟ್ಟದಲ್ಲಿ ಶನಿವಾರ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಪ್ರದಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಸಂಭ್ರಮದಿಂದ ನಡೆಯಿತು.

ಕುಟ್ಟ ಕೊಡವ ಸಮಾಜದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಹಾಗೂ ಕುಟ್ಟ ಕೊಡವ ಸಮಾಜಕ್ಕೆ ಜಾಗ ದಾನ ನೀಡಿದ ಮುಕ್ಕಾಟಿರ ರಾಜ ಮಂದಣ್ಣ ಸಾಂಸ್ಕೃತಿಕ ಮೆರವಣಿಗೆಗೆ ಚಾಲನೆ ನೀಡಿದರು.

‘ಕೊಡವ ಸಂಸ್ಕೃತಿ ಮುಂದಿನ ತಲೆಮಾರಿಗೂ ಉಳಿಯಲಿ’ ಎಂದು ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಆಶಿಸಿದರು.

‘ಕೊಡವ ಭಾಷೆ, ಆಚಾರ, ವಿಚಾರ, ಸಂಸ್ಕೃತಿ, ಪರಂಪರೆ ಉಳಿಸಲು ಉಳಿಸುವಲ್ಲಿ, ಕೊಡವ ಭಾಷಿಕರಾದ 23 ಸಮಾಜಗಳನ್ನು ಒಟ್ಟುಗೂಡಿಸಿ ಅಕಾಡೆಮಿ ಮುನ್ನಡೆಯುತ್ತಿರುವುದು ವಿಶೇಷ’ ಎಂದು ವಿಧಾನ ಪರಿಷತ್ ಸದಸ್ಯ ಎಂ.ಪಿ. ಸುಜಾ ಕುಶಾಲಪ್ಪ ಶ್ಲಾಘಿಸಿದರು.

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ ಮಾತನಾಡಿ, ‘ಕೊಡವ ಸಾಹಿತ್ಯವೊಂದೇ ಕೊಡವ ಸಂಸ್ಕೃತಿಯ ಆಧಾರ ಸ್ತಂಭವಾಗಿದೆ’ ಎಂದು ಹೇಳಿದರು.

ಕೊಡವ ಸಂಸ್ಕೃತಿ ಗುಣ-ಲಕ್ಷಣ ಮತ್ತು ನೀತಿ-ನಡತೆ’ ಕುರಿತು ಅಭಿಮನ್ಯು ಫೌಂಡೇಷನ್ ಅಧ್ಯಕ್ಷ, ಖ್ಯಾತ ಅಂತರಾಷ್ಟ್ರೀಯ ಕ್ರೀಡಾಪಟು ತೀತಮಡ ಅರ್ಜುನ್ ದೇವಯ್ಯ, ‘ಕೊಡವ ಭಾಷೆ ಸಂರಕ್ಷಣೆಯಲ್ಲಿ ಜನಾಂಗದವರ ಜವಾಬ್ದಾರಿ’ ಕುರಿತು ಡಾ.ತೀತಿರ ರೇಖಾ ವಸಂತ ವಿಚಾರ ಮಂಡಿಸಿದರು.

‘ಕೊಡವ ಪುಸ್ತಕ ಪತ್ತಾಯ (ಪುಸ್ತಕ ಭಂಡಾರ)’ವನ್ನು ಕುಟ್ಟ ಕೊಡವ ಸಮಾಜದಲ್ಲಿ ಆರಂಭಿಸಲಾಯಿತು.

ನಿಷೇಧಾಜ್ಞೆ ಉಲ್ಲಂಘನೆ: ಸಂಸದ, ಶಾಸಕರ ವಿರುದ್ಧ ಪ್ರಕರಣ

ಉಡುಪಿ: ನಿಷೇಧಾಜ್ಞೆ ಉಲ್ಲಂಘಿಸಿ 80 ಬಡಗಬೆಟ್ಟು ಗ್ರಾಮದಲ್ಲಿ ಉಡುಪಿ ಕಂಬಳದ ಕರೆ ನಿರ್ಮಾಣದ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಆರೋಪದ ಮೇರೆಗೆ ಸಂಸದ, ಶಾಸಕರು ಸೇರಿದಂತೆ 37 ಮಂದಿಯ ವಿರುದ್ಧ ಮಣಿಪಾಲ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ, ಯಶ್‌ಪಾಲ್ ಸುವರ್ಣ, ಸುನಿಲ್ ಕುಮಾರ್, ಕಿರಣ್ ಕುಮಾರ್ ಕೊಡ್ಗಿ, ಗುರುರಾಜ್ ಗಂಟಿಹೊಳೆ, ಹರೀಶ್ ಪೂಂಜ, ರಾಜೇಶ್ ನಾಯಕ್, ವಿಧಾನಪರಿಷತ್ ಸದಸ್ಯ ಡಾ.ಧನಂಜಯ್ ಸರ್ಜಿ, ರಾಜ್ಯ ಕಂಬಳ ಆಸೋಸಿಯೇಶನ್ ಅಧ್ಯಕ್ಷ ಬೆಳಪು ದೇವಿಪ್ರಸಾದ್ ಶೆಟ್ಟಿ ಮೊದಲಾದವರ ವಿರುದ್ಧ ಪ್ರಕರಣ ದಾಖಲಾಗಿದೆ.

ಜಿಲ್ಲಾಡಳಿತ ಮತ್ತು ಯುವ ಸಬಲೀಕರಣ ಇಲಾಖೆ ವತಿಯಿಂದ ಉಡುಪಿ ಕಂಬಳದ ಕರೆಯ ಶಂಕುಸ್ಥಾಪನೆಯನ್ನು ಮಾ. 4 ರಂದು ನಡೆಸಲು ಜಿಲ್ಲಾಡಳಿತ ದಿನಾಂಕ ನಿಗದಿಪಡಿಸಿತ್ತು. ಅದರ ನಡುವೆಯೇ ಬಿಜೆಪಿಯ ಸಂಸದರು–ಶಾಸಕರು ಹಾಗೂ ಕಂಬಳ ಸಮಿತಿಯವರು ಶನಿವಾರ ಶಂಕುಸ್ಥಾಪನೆ ನೆರವೇರಿಸಿದರು.

ಕಂಬಳ ಕರೆ ಶಂಕುಸ್ಥಾಪನೆ ಕಾರ್ಯಕ್ರಮದ ಕುರಿತು ಗೊಂದಲ ಉಂಟಾದ ಕಾರಣ ಯುವ ಸಬಲೀಕರಣ ಇಲಾಖೆಯ 6.30 ಎಕರೆ ಜಮೀನಿನ ವ್ಯಾಪ್ತಿಯಲ್ಲಿ ಜಿಲ್ಲಾಧಿಕಾರಿ ನಿಷೇಧಾಜ್ಞೆ ಜಾರಿಗೊಳಿಸಿದ್ದರು.

‘ಕರ್ನಾಟಕ ಶಾಲಾ ಶಿಕ್ಷಣದ ಸ್ಥಿತಿಗತಿ’ ಕುರಿತ ವಿಚಾರ ಸಂಕಿರಣ

ಸಾರ್ವಜನಿಕ ಚರ್ಚೆಗೆ ಎಸ್‌ಇಪಿ: ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಶಿಕ್ಷಣ ನೀತಿಯ ಅಂತಿಮ ವರದಿ ಸಲ್ಲಿಸಿ ಆರು ತಿಂಗಳಾಗಿದ್ದು, ವರದಿ ಕುರಿತು ಸಾರ್ವಜನಿಕ ಚರ್ಚೆಗೆ ಅವಕಾಶ ನೀಡಬೇಕು. ಶಿಫಾರಸುಗಳನ್ನು ಜಾರಿಗೊಳಿಸುವ ಕುರಿತು ಬಜೆಟ್‌ನಲ್ಲೇ ಘೋಷಿಸಬೇಕು ಎಂದು ‘ಕರ್ನಾಟಕ ಶಾಲಾ ಶಿಕ್ಷಣದ ಸ್ಥಿತಿಗತಿ’ ಕುರಿತ ವಿಚಾರ ಸಂಕಿರಣದಲ್ಲಿ ನಿರ್ಣಯ ಅಂಗೀಕರಿಸಲಾಗಿದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರ, ನೀತಿ ನಿರೂಪಣೆಗಾಗಿ ಸಂಶೋಧನಾ ಸಂಸ್ಥೆ ಈ ವಿಚಾರ ಸಂಕಿರಣ ಆಯೋಜಿಸಿದ್ದವು.



ಕನ್ನಡ ಅಭಿವೃದ್ಧಿ ಪ್ರಾಧಿಕಾರ, ನೀತಿ ನಿರೂಪಣೆಗಾಗಿ ಸಂಶೋಧನಾ ಸಂಸ್ಥೆ ಹಮ್ಮಿಕೊಂಡಿದ್ದ ವಿಚಾರಸಂಕಿರಣದಲ್ಲಿ ರಾಜ್ಯ ಶಿಕ್ಷಣ ನೀತಿ ವರದಿ ಅನುಷ್ಠಾನಕ್ಕೆ ಒತ್ತಾಯಿಸಿ ನಿರ್ಣಯ ಅಂಗೀಕರಿಸಲಾಯಿತು

ಶಿಕ್ಷಣ ನೀತಿಯ ಅನುಷ್ಠಾನದ ಭಾಗೀದಾರರಾದ ವಿದ್ಯಾರ್ಥಿಗಳು, ಶಿಕ್ಷಕರು, ಪಾಲಕರು, ಪೋಷಕರು, ಶಿಕ್ಷಣ ತಜ್ಞರು ಹಾಗೂ ರಾಜ್ಯದ ಎಲ್ಲಾ ನಾಗರಿಕರು ಶಿಕ್ಷಣ ನೀತಿಯ ಆಶಯ, ಪ್ರಸ್ತಾವ ಮತ್ತು ಶಿಫಾರಸುಗಳನ್ನು ತಿಳಿದುಕೊಳ್ಳುವ ಹಕ್ಕನ್ನು ಹೊಂದಿರುತ್ತಾರೆ. ಒಂದು ಶಿಕ್ಷಣ ನೀತಿಯ ಕೇವಲ ಕೆಲವೇ ತಜ್ಞರ ವರದಿಯಾಗಿರದೇ, ನಾಡಿನ ಚಿಂತನೆಯ ಭಾಗವಾಗುವುದು ಮತ್ತು ಎಲ್ಲರ ಅಭಿಪ್ರಾಯಗಳು ನೀತಿಯ ಅನುಷ್ಠಾನಕ್ಕೆ ಮಾರ್ಗದರ್ಶಿಯಾಗುವುದು ಕರ್ತವ್ಯವಾಗಿದೆ ಎಂದು ಹಲವು ಶಿಕ್ಷಣ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದರು.

ಶಿಕ್ಷಣ ನೀತಿಯ ವರದಿಯು ಶಿಕ್ಷಣದ ಜತೆಗೆ ಅನೇಕ ಅರ್ಥಪೂರ್ಣ ಸಾಮಾಜಿಕ, ಸಾಂಸ್ಕೃತಿಕ ವಿಚಾರಗಳನ್ನು ಒಳಗೊಂಡಿರುತ್ತದೆ. ಇಂತಹ ನೀತಿಯ ಮೂಲಕ ರಾಜ್ಯವು ನಾಡು, ನುಡಿ, ಶಿಕ್ಷಣ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳ ಕುರಿತ ತನ್ನ ಆಶೋತ್ತರಗಳನ್ನು ಅಭಿವ್ಯಕ್ತಿಸುತ್ತದೆ. ಅವುಗಳ ಅನುಷ್ಠಾನ ಸಾಮುದಾಯಿಕವಾದ ಪ್ರಯತ್ನಗಳ ಕಾರ್ಯಸೂಚಿಯೂ ಆಗಿರುತ್ತದೆ. ಹಾಗಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 6ರಂದು ಮಂಡಿಸಲಿರುವ ಬಜೆಟ್‌ನಲ್ಲೇ ಈ ಕುರಿತು ನಿಲುವು ಪ್ರಕಟಿಸಬೇಕು ಎಂದು ಒತ್ತಾಯಿಸಿದರು.

ಕರ್ನಾಕದ ಶಾಲಾ ಶಿಕ್ಷಣ ಕ್ಷೇತ್ರದಲ್ಲಿನ ಸ್ಥಿತಿಗತಿ ಹಾಗೂ ಬಿಕ್ಕಟ್ಟುಗಳ ಕುರಿತು ಚರ್ಚಿಸಲಾಯಿತು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ವಿವಿಧ ವಿಷಯಗಳ ತಜ್ಞರಾದ ಜಿ.ರಾಮಕೃಷ್ಣ, ರಾಜೇಂದ್ರ ಚೆನ್ನಿ, ಸಬಿಹಾ ಭೂಮಿಗೌಡ, ವಿ.ಪಿ. ನಿರಂಜನಾರಾಧ್ಯ, ಟಿ.ಆರ್.ಚಂದ್ರಶೇಖರ್, ಬಸವರಾಜ ಗುರಿಕಾರ ಮತ್ತಿತರರು ಸಂಕಿರಣದಲ್ಲಿ ಭಾಗವಹಿಸಿದ್ದರು.

ಚಿಟಿಕೆ ಸುದ್ದಿ

ಸಾಮೂಹಿಕ ಸ್ವಚ್ಛತಾ ಅಭಿಯಾನ

ಬೆಂಗಳೂರು: ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ 5.6 ಕಿ.ಮೀ ಪಾದಚಾರಿ ಮಾರ್ಗ ಮತ್ತು ರಸ್ತೆಯಲ್ಲಿ ಶನಿವಾರ ಸ್ವಚ್ಛತೆ ನಡೆಸಲಾಗಿದೆ.

35 ಟ್ರ್ಯಾಕ್ಟರ್, ಏಳು ಜೆಸಿಬಿ ಬಳಕೆಯೊಂದಿಗೆ 55 ಲೋಡ್ ತ್ಯಾಜ್ಯ ಹಾಗೂ 20 ಬ್ಲ್ಯಾಕ್ ಸ್ಪಾಟ್ ನಿರ್ಮೂಲನೆ ಮಾಡಲಾಯಿತು. 108 ಪೌರಕಾರ್ಮಿಕರು ಹಾಗೂ ಸ್ವಚ್ಛತೆ ಸಿಬ್ಬಂದಿ ಸ್ವಚ್ಛತೆ ಕಾರ್ಯದಲ್ಲಿ ಭಾಗಿಯಾದ್ದರು ಎಂದು ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದರು.

ನಗರದ ವಿವಿಧ ಭಾಗಗಳಲ್ಲಿ ಕಸದ ಸಂಗ್ರಹಣೆ ಹೆಚ್ಚಾಗಿರುವ ಸ್ಥಳಗಳನ್ನು ಗುರುತಿಸಿ, ದೈನಂದಿನ ಸ್ವಚ್ಛತಾ ಕಾರ್ಯಗಳೊಂದಿಗೆ ವಿಶೇಷ ಸ್ವಚ್ಛತಾ ಕಾರ್ಯಗಳನ್ನು ನಿರಂತರವಾಗಿ ನಡೆಸುವ ಮೂಲಕ ನಾಗರಿಕರಿಗೆ ಸ್ವಚ್ಛ, ಆರೋಗ್ಯಕರ ಮತ್ತು ಸುಗಮ ಪರಿಸರ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದರು.

ಶಾಲಾ ಶಿಕ್ಷಕರಿಂದ ನಾಟಕ ಇಂದು

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ವತಿಯಿಂದ ವನಕಲ್ಲು ಮಲ್ಲೇಶ್ವರ ಜಾತ್ರೆ ಪ್ರಯುಕ್ತ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಮಾರ್ಚ್ 1ರ ಭಾನುವಾರ ರಾತ್ರಿ 8:30ಕ್ಕೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ 'ಕುರುಕ್ಷೇತ್ರ' ಎಂಬ ಪೌರಾಣಿಕ ನಾಟಕವನ್ನು ಏರ್ಪಡಿಸಲಾಗಿದೆ.

ಒಂಟಿ ಮನೆಗಳ ಆದೇಶ ಪತ್ರ ವಿತರಣೆ



ರಾಜರಾಜೇಶ್ವರಿನಗರ: ಮಾಗಡಿ ರಸ್ತೆಯ ಬಿಇಎಲ್ ಬಡಾವಣೆಯಲ್ಲಿರುವ ಶಾಸಕರ ಕಚೇರಿಯಲ್ಲಿ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವತಿಯಿಂದ ಒಂಟಿ ಮನೆ ಮತ್ತು ನಿವೇಶನ ಹಕ್ಕು ಪತ್ರ, 94 ಸಿಸಿ ಅಡಿಯಲ್ಲಿ ಹಕ್ಕು ಪತ್ರಗಳನ್ನು ವಿತರಿಸಲಾಯಿತು.

ಶಾಸಕ ಎಸ್.ಟಿ. ಸೋಮಶೇಖರ್ ಮಾತನಾಡಿ, 'ಸರ್ಕಾರದಿಂದ ಸಿಗುವ ಸವಲತ್ತುಗಳು ದುರುಪಯೋಗ ಆಗಬಾರದು. ಹತ್ತಾರು ದಶಕ ಬಾಳಿಕೆ ಬರುವಂತಹ ಮನೆ ಕಟ್ಟಿಕೊಂಡು ನೆಮ್ಮದಿಯ ಜೀವನ ಸಾಗಿಸಿ' ಎಂದು ತಿಳಿಸಿದರು.

ಮಾಗಡಿ ಮುಖ್ಯರಸ್ತೆಯಿಂದ ತುಮಕೂರು ರಸ್ತೆ, ಗರುಡಪ್ಪ ವೃತ್ತದಿಂದ ಚೇತನ್ ಸರ್ಕಲ್, ಡಿ. ಗ್ರೂಪ್ ವೃತ್ತದಿಂದ ಕೆಂಪೇಗೌಡ ವೃತ್ತದವರೆಗೆ ಕೈಗೊಂಡಿರುವ ₹23 ಕೋಟಿ ವೆಚ್ಚದ ಡಾಂಬರೀಕರಣ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಜಿಬಿಎ ಅಧಿಕಾರಿಗಳಾದ ನಾಗರಾಜ್ ಶಿಂಗ್ರಿ, ಬಿ.ರಮೇಶ್, ಚಿಕ್ಕಗೂಳಿಗೌಡ, ಕಲ್ಯಾಣಾಧಿಕಾರಿ ಶ್ರೀನಿವಾಸ್, ಬೆಸ್ಕಾಂ ಹಿರಿಯ ಅಧಿಕಾರಿ ಕೆ.ಶಿವಕುಮಾರ್ ಭಾಗವಹಿಸಿದ್ದರು.

ವಿಜ್ಞಾನ ದಿನ ವಿದ್ಯಾರ್ಥಿಗಳ ಸಂಭ್ರಮ

ಆರ್‌ಆರ್‌ಐಯಲ್ಲಿ ಮುಕ್ತ ದಿನ: ವಿಜ್ಞಾನ ಪ್ರದರ್ಶನ ಹಾಗೂ ಕ್ಯಾಂಪಸ್ ದರ್ಶನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 'ರಾಮನ್ ಪರಿಣಾಮ'ದ ಆವಿಷ್ಕಾರಕ್ಕೆ 98 ವರ್ಷ
- 'ಸಾಕ್ಷ್ಯಚಿತ್ರ' ಪ್ರದರ್ಶನ ಸಹಿತ ವಿವಿಧ ಕಾರ್ಯಕ್ರಮ
- ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗಿ

ಬೆಂಗಳೂರು: ರಾಷ್ಟ್ರೀಯ ವಿಜ್ಞಾನ ದಿನ ಹಾಗೂ 'ರಾಮನ್ ಪರಿಣಾಮ'ದ ಆವಿಷ್ಕಾರದ ಸ್ಮರಣೆ ದಿನವು ವಿದ್ಯಾರ್ಥಿಗಳಿಗೆ ಸಂಭ್ರಮವನ್ನುಂಟು ಮಾಡಿತ್ತು. ರಾಮನ್ ಸಂಶೋಧನಾ ಸಂಸ್ಥೆಯ (ಆರ್‌ಆರ್‌ಐ) ತುಂಬೆಲ್ಲ ಓಡಾಡಿ ಖುಷಿ ಪಟ್ಟರು.

ಆರ್‌ಆರ್‌ಐ ಸಂಸ್ಥಾಪಕ ಸಿ.ವಿ. ರಾಮನ್ ಅವರು ನೊಬೆಲ್ ಪಡೆದ ಮೊದಲ ಹಾಗೂ ಏಕೈಕ ವಿಜ್ಞಾನಿ. ಅವರು 'ರಾಮನ್ ಪರಿಣಾಮ'ದ ಆವಿಷ್ಕಾರವನ್ನು 1928ರ ಫೆ.28ರಂದು ಘೋಷಿಸಿದ್ದರು. ಈ ಆವಿಷ್ಕಾರಕ್ಕೆ ಈಗ 98 ವರ್ಷ ತುಂಬಿರುವ ಪ್ರಯುಕ್ತ ಆರ್‌ಆರ್‌ಐಯಲ್ಲಿ ಮುಕ್ತ ದಿನ: ವಿಜ್ಞಾನ ಪ್ರದರ್ಶನ ಹಾಗೂ ಕ್ಯಾಂಪಸ್ ದರ್ಶನ ಕಾರ್ಯಕ್ರಮವನ್ನು ಶನಿವಾರ ಹಮ್ಮಿಕೊಳ್ಳಲಾಗಿತ್ತು. ವಿದ್ಯಾರ್ಥಿಗಳು, ವಿಜ್ಞಾನಾಸಕ್ತರು ಮುಕ್ತವಾಗಿ ಪಾಲ್ಗೊಳ್ಳಲು ಅವಕಾಶವಿತ್ತು.

ವಿಜ್ಞಾನ-ವಿಷಯದ ಸಂಭ್ರಮ ದಿನ ಇದಾಗಿದ್ದು, 'ವಿಜ್ಞಾನಿಗಳ ಭೇಟಿ', 'ವಿದ್ಯಾರ್ಥಿಗಳ ಭೇಟಿ', 'ನಿಧಿ ಹುಡುಕಾಟ', 'ಸಾಕ್ಷ್ಯಚಿತ್ರ' ಪ್ರದರ್ಶನ ಸಹಿತ ವಿವಿಧ ಕಾರ್ಯಕ್ರಮಗಳು ಏಕಕಾಲದಲ್ಲಿ ನಡೆದವು. ವಿದ್ಯಾರ್ಥಿಗಳು, ಪೋಷಕರು ಮತ್ತು ಇತರ ಸಂದರ್ಶಕರು ಆರ್ಕೈವಲ್ ಗ್ಯಾಲರಿಗೆ ಭೇಟಿ ನೀಡಿದರು. ಸಂಸ್ಥೆಯಲ್ಲಿ ಹಿಂದೆ ಮಾಡಿದ್ದ ಸಂಶೋಧನೆಗಳು, ಈಗ ನಡೆಯುತ್ತಿರುವ ಸಂಶೋಧನೆಗಳನ್ನು ವೀಕ್ಷಿಸಿ ವಿವರ ಪಡೆದರು.

ರಾಮನ್ ವಸ್ತು ಸಂಗ್ರಹಾಲಯ-ಕ್ಕೆ ಭೇಟಿ ನೀಡಿ ಸಿ.ವಿ. ರಾಮನ್ ಅವರ ಇತಿಹಾಸ ಸಾರುವ ಚಿತ್ರ, ಕಲಾಕೃತಿಗಳನ್ನು ವೀಕ್ಷಿಸಿದರು. ಆಸಕ್ತಿದಾಯಕ ವಿಜ್ಞಾನ ಪ್ರದರ್ಶನಗಳು, ಮಾದರಿಗಳು ಮತ್ತು ಪ್ರಯೋಗಗಳನ್ನು ಪ್ರದರ್ಶಿಸುವ ಮಳಿಗೆಗಳು ಮತ್ತು ಕಿಯೋಸ್ಕ್‌ಗಳು ಗಮನ ಸೆಳೆದವು. ಖಗೋಳ ವಿಜ್ಞಾನ, ಕ್ವಾಂಟಮ್ ಡೊಮೇನ್‌ಗಳಲ್ಲಿ ಆರ್‌ಆರ್‌ಐನ ಪ್ರಯತ್ನಗಳು ಸೇರಿದಂತೆ ಸಂಸ್ಥೆಯಲ್ಲಿನ ಪ್ರಸ್ತುತ ಸಂಶೋಧನೆಗೆ ಸಂಬಂಧಿಸಿದ ಪ್ರದರ್ಶನಗಳು ವಿದ್ಯಾರ್ಥಿಗಳನ್ನು ಆಕರ್ಷಿಸಿದವು.

ಯಂಗ್ ಇನೋವೇಟರ್ಸ್ ಎಜುಕೇಷನಲ್ ಸರ್ವೀಸಸ್ ಪ್ರೈವೆಟ್ ಲಿಮಿಟೆಡ್, ಸೈನ್ಸ್ ಗ್ಯಾಲರಿ ಬೆಂಗಳೂರು, ಇನೋವೇಶನ್ ಮತ್ತು ಸೈನ್ಸ್ ಪ್ರಮೋಷನ್ ಫೌಂಡೇಶನ್, ರಾಮ್ಸ್ ಅಬ್ಸರ್ವೇಟರಿ, ಪ್ರೊವೆಸ್ಟ್ ಕಾನ್ಸೆಪ್ಟ್ಸ್, ಗಿಫ್ಟೆಡ್ ಮೈಂಡ್ಸ್, ಕ್ರಿಯೇಟಿವ್ ಮತ್ತು ಐಸಿಟಿಎಸ್ ಸೇರಿವೆ. ಇಂಡಿಯಾ ಪೋಸ್ಟ್ ಸಹಿತ ಹಲವು ಸಂಸ್ಥೆಗಳು 20ಕ್ಕೂ ಅಧಿಕ ವೈಜ್ಞಾನಿಕ ಪ್ರದರ್ಶನಗಳ ಮಳಿಗೆಗಳನ್ನು ಹಾಕಿ, ಆಸಕ್ತರಿಗೆ ವಿವರ ನೀಡಿದವು. ವಿದ್ಯಾರ್ಥಿಗಳಿಗಾಗಿ ರಸಪ್ರಶ್ನೆ, ಛಾಯಾಗ್ರಹಣ ಸ್ಪರ್ಧೆ ಮತ್ತು ವೇಷಭೂಷಣ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು, ಅದರಲ್ಲಿ ವಿಜೇತರನ್ನು ಆರ್‌ಆರ್‌ಐ ಸಂಸ್ಥೆಯ ನಿರ್ದೇಶಕ ತರುಣ್ ಸೌರದೀಪ್ ಸನ್ಮಾನಿಸಿದರು. ಬೆಂಗಳೂರು ಸುತ್ತಮುತ್ತಲಿನ 20 ಸರ್ಕಾರಿ ಮತ್ತು ಖಾಸಗಿ ಶಾಲೆಗಳು ಮತ್ತು ಕಾಲೇಜುಗಳ ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು.





ರಾಷ್ಟ್ರೀಯ ವಿಜ್ಞಾನ ದಿನ ಹಾಗೂ 'ರಾಮನ್ ಪರಿಣಾಮ'ದ ಆವಿಷ್ಕಾರದ ಸ್ಮರಣಾರ್ಥ ರಾಮನ್ ಸಂಶೋಧನಾ ಸಂಸ್ಥೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮುಕ್ತ ದಿನ: ವಿಜ್ಞಾನ ಪ್ರದರ್ಶನವನ್ನು ವಿದ್ಯಾರ್ಥಿಗಳು ವೀಕ್ಷಿಸಿದರು

ಜಿಬಿಎ ಆವರಣದಲ್ಲಿ ಕ್ಯಾಂಟೀನ್: ಭೂಮಿಪೂಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ಆವರಣದಲ್ಲಿ ಸುಸಜ್ಜಿತವಾದ ಕ್ಯಾಂಟೀನ್ ನಿರ್ಮಾಣ ಕಾಮಗಾರಿಗೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಶುಕ್ರವಾರ ಚಾಲನೆ ನೀಡಿದರು.

ಅಧಿಕಾರಿ, ಸಿಬ್ಬಂದಿ ಮತ್ತು ಕಚೇರಿಗೆ ಭೇಟಿ ನೀಡುವ ನಾಗರಿಕರ ಅನುಕೂಲಕ್ಕಾಗಿ, ಡಾ. ರಾಜ್‌ಕುಮಾರ್ ಗಾಜಿನ ಮನೆಯ ಪಕ್ಕದಲ್ಲಿ ಕ್ಯಾಂಟೀನ್ ನಿರ್ಮಿಸಲಾಗುತ್ತಿದೆ. 40 × 30 ಅಡಿ ವಿಸ್ತೀರ್ಣದ ಜಾಗದಲ್ಲಿ ನೆಲ ಮಹಡಿ ಹಾಗೂ ಮೊದಲ ಮಹಡಿಯನ್ನು ಒಳಗೊಂಡ ಕಟ್ಟಡಕ್ಕೆ ಒಟ್ಟು ₹98 ಲಕ್ಷ ವೆಚ್ಚ ಮಾಡಲಾಗುತ್ತಿದೆ ಎಂದು ಮಹೇಶ್ವರ್ ರಾವ್ ತಿಳಿಸಿದರು.

ಕ್ಯಾಂಟೀನ್‌ನಲ್ಲಿ ಗುಣಮಟ್ಟದ ಉಪಾಹಾರ, ವಿವಿಧ ಆಹಾರ ಪದಾರ್ಥಗಳು, ಕಾಫಿ/ ಟೀ, ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲಾಗುತ್ತದೆ.



ಜಿಬಿಎ ಕಚೇರಿಯಲ್ಲಿ ಆವರಣದಲ್ಲಿ ನಿರ್ಮಾಣವಾಗುವ ಕ್ಯಾಂಟೀನ್ ಕಟ್ಟಡದ ಮಾದರಿ

ಕಟ್ಟಡದ ನೆಲ ಮಹಡಿಯಲ್ಲಿ ಸ್ವಸಹಾಯ ವ್ಯವಸ್ಥೆ ಮತ್ತು ಮೊದಲ ಮಹಡಿಯಲ್ಲಿ ಸರ್ವೀಸ್ ವ್ಯವಸ್ಥೆ ಕಲ್ಪಿಸಲು ಯೋಜನೆ ರೂಪಿಸಲಾಗಿದೆ. ಒಂದು ವರ್ಷದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು.

ವಿಶೇಷ ಆಯುಕ್ತರಾದ ಡಾ. ಕೆ. ಹರೀಶ್ ಕುಮಾರ್, ಕೇಂದ್ರ ನಗರ ಪಾಲಿಕೆ ಜಂಟಿ ಆಯುಕ್ತರಾದ ಹೇಮಂತ್ ಶರಣ್ ಉಪಸ್ಥಿತರಿದ್ದರು.

'ಸಾವಿರಾರು ಜನರಿಗೆ ಅನುಕೂಲ'

ಜಿಬಿಎ, ನಗರ ಪಾಲಿಕೆ ಸಿಬ್ಬಂದಿ ಹಾಗೂ ನಾಗರಿಕರಿಗೆ ಗುಣಮಟ್ಟದ ಆಹಾರ ಕಲ್ಪಿಸುವ ಅಗತ್ಯವಿತ್ತು. ಕಾಫಿ ಕುಡಿಯಲೂ ಜಿಬಿಎ ಆವರಣದ ಹೊರಗೇ ಹೋಗಬೇಕಾಗಿತ್ತು. ಹೀಗಾಗಿ, ಸಂಘದ ಮನವಿಗೆ ಜಿಬಿಎ ಮುಖ್ಯ ಆಯುಕ್ತರು ಸ್ಪಂದಿಸಿ, ಸುಸಜ್ಜಿತವಾದ ಕ್ಯಾಂಟೀನ್ ನಿರ್ಮಿಸಲು ಸಮ್ಮತಿಸಿದರು. ಗುಣಮಟ್ಟದ ಆಹಾರ ಹಾಗೂ ಸಕಲ ಸೌಲಭ್ಯಗಳೊಂದಿಗೆ ಕ್ಯಾಂಟೀನ್ ಶೀಘ್ರವೇ ಕಾರ್ಯಾರಂಭ ಮಾಡಲಿದ್ದು, ನಿತ್ಯವೂ ಸಾವಿರಾರು ಜನರಿಗೆ ಅನುಕೂಲವಾಗಲಿದೆ ಎಂದು ಜಿಬಿಎ– ನಗರ ಪಾಲಿಕೆಗಳ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಹೇಳಿದರು.

'ನವ ಭಾರತದ ಭವಿಷ್ಯ ಯುವಕರ ಕೈಯಲ್ಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನವ ಭಾರತದ ಭವಿಷ್ಯ ಯುವ ಜನತೆಯ ಕೈನಲ್ಲಿದ್ದು, ಪರಿಶ್ರಮವೇ ಯಶಸ್ಸಿನ ಕೀಲಿಯಾಗಿದೆ' ಎಂದು ಲೈಟ್ ಕ್ಯಾಸ್ಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕಿ ಸರಸ್ವತಿ ರಾಮಚಂದ್ರ ಹೇಳಿದರು.

ಬಿಎನ್‌ಎಂಐಟಿ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಮಾತನಾಡಿದರು.

'ಪದವಿ ಪಡೆದ ವಿದ್ಯಾರ್ಥಿಗಳಿಗೆ ಇಂದು ಸಂಭ್ರಮದ ದಿನವಾಗಿದೆ. ಆದರೆ, ನಾಳೆಯಿಂದ ನಿಮ್ಮ ಜವಾಬ್ದಾರಿ ಆರಂಭವಾಗುತ್ತದೆ. ಸ್ಪರ್ಧಾತ್ಮಕ ಜಗತ್ತಿಗೆ ನೀವು ಕಾಲು ಇಡುತ್ತಿದ್ದೀರಿ, ಹೊಸ ತಂತ್ರಜ್ಞಾನ ಮತ್ತು ಅನ್ವೇಷಣೆಗಳ ಕಡೆ ಹೆಚ್ಚಿನ ಗಮನ ನೀಡಿ' ಎಂದು ಸಲಹೆ ಹೇಳಿದರು.

'ವಿದ್ಯಾರ್ಥಿಗಳು ದೊಡ್ಡ ದೊಡ್ಡ ಕನಸುಗಳನ್ನು ಕಾಣಬೇಕು. ಜತೆಗೆ ಅವುಗಳನ್ನು ಸಕಾರಗೊಳಿಸಲು ಶ್ರದ್ಧೆ ಮತ್ತು ಕಠಿಣ ಪರಿಶ್ರಮ ಹಾಕಬೇಕು' ಎಂದರು. ಎಂಬಿಎ ವಿಭಾಗದಲ್ಲಿ 10 ಚಿನ್ನದ ಪದಕಗಳನ್ನು ನೀಡಲಾಯಿತು. ಎಂಟೆಕ್ ವಿಭಾಗದಲ್ಲಿ ಇಬ್ಬರು ವಿದ್ಯಾರ್ಥಿ ಗಳು ಚಿನ್ನದ ಪದಕ ಪಡೆದುಕೊಂಡರು.

'ವಿದ್ಯಾರ್ಥಿಗಳು ಜೀವನದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಿ. ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಿ. ಹಿರಿಯ ವಿದ್ಯಾರ್ಥಿಗಳು ಕಿರಿಯ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವಂತೆ ಎತ್ತರಕ್ಕೆ ಬೆಳೆಯಬೇಕು' ಎಂದು ಬಿಎನ್‌ಎಂ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ನಾರಾಯಣ ರಾವ್ ಆರ್. ಮಾನೆ ಹೇಳಿದರು.

ಬಿಎನ್‌ಎಂಐಟಿ ಜಂಟಿ ಕಾರ್ಯದರ್ಶಿ ಅಶೋಕ್ ಆರ್. ಮಾನೆ, ಕಾಲೇಜಿನ ಹೆಚ್ಚುವರಿ ನಿರ್ದೇಶಕ ಡಾ. ಎಸ್.ವೈ. ಕುಲಕರ್ಣಿ, ನಿರ್ದೇಶಕ ಪ್ರೊ.ಟಿ.ಜೆ ರಾಮಮೂರ್ತಿ, ಟ್ರಸ್ಟಿ ಈಶ್ವರ್ ಎನ್. ಮಾನೆ, ಕಾಲೇಜಿನ ಪ್ರಾಂಶುಪಾಲರಾದ ಡಾ.ಜಿ.ಎನ್.ಕೃಷ್ಣಮೂರ್ತಿ, ಡಾ.ಕೆ. ವೆಂಕಟೇಶ್, ಡಾ. ಜಿ.ಎನ್. ಕೇಶವ ಮೂರ್ತಿ ಉಪಸ್ಥಿತರಿದ್ದರು.



ಬಿಎನ್‌ಎಂಐಟಿ ಘಟಿಕೋತ್ಸವದಲ್ಲಿ ಸರಸ್ವತಿ ರಾಮಚಂದ್ರ ಅವರು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು. ನಾರಾಯಣ ರಾವ್ ಆರ್.ಮಾನೆ, ಡಾ.ಎನ್. ರಾಘವೇಂದ್ರ, ಡಾ.ಬಿ.ಕೆ.ಜಯಣ್ಣ, ಡಾ.ಜಿ.ಎನ್.ಕೃಷ್ಣ ಮೂರ್ತಿ ಉಪಸ್ಥಿತರಿದ್ದರು

'ವಚನಗಳನ್ನು ಜಗತ್ತಿಗೆ ಪಸರಿಸಬೇಕಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಡಿನ ಶರಣರ ವಚನಗಳನ್ನು ಜಗತ್ತಿಗೆ ಪಸರಿಸುವ ಕೆಲಸ ನಡೆಯುತ್ತಿದ್ದು, ಇದನ್ನು ನಿರಂತರ ಮುಂದುವರಿಸಿಕೊಂಡು ಹೋಗಬೇಕಿದೆ' ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ವಚನಾಸ್ ಆಫ್ ಅಲ್ಲಮಪ್ರಭು-ಕಾಮೆಂಟರಿ' ಸಂಪುಟ ಜನಾರ್ಪಣೆ-ಯಾಯಿತು. ಇದು ವಿಜಯಪುರದ ಜ್ಞಾನಯೋಗಾಶ್ರಮದ ಸಿದ್ದೇಶ್ವರ ಸ್ವಾಮೀಜಿ ಅವರ 'ಅಲ್ಲಮ ಪ್ರಭುದೇವರ ವಚನ-ನಿರ್ವಚನ' ಕೃತಿಯ ಭಾಷಾಂತರ ಕೃತಿಯಾಗಿದೆ.

ಎಂ.ಬಿ. ಪಾಟೀಲ ಮಾತನಾಡಿ, 'ವಚನ ಸಾಹಿತ್ಯದಲ್ಲಿ ಶ್ರೀಮಂತಿಕೆಯಿದೆ. ಅಲ್ಲಮ ಪ್ರಭು ಅವರ ವಚನಗಳು ಅರ್ಥೈಯಿಸಿಕೊಳ್ಳಲು ಕಷ್ಟವಾದರೂ, ಓದಿ ಅರ್ಥೈಯಿಸಿಕೊಂಡರೆ ಅದರಲ್ಲಿ ಹಿತಾನುಭವವಿದೆ. ವಚನ ಸಾಹಿತ್ಯ ಜಾಗತಿಕ ಮಟ್ಟದಲ್ಲಿ ತಲುಪಬೇಕಿದೆ. ಹಲವು ಭಾಷೆಗಳಲ್ಲಿ ವಚನ ಸಾಹಿತ್ಯ ಅನುವಾದವಾಗಬೇಕಿದೆ. ಈ ನಿಟ್ಟಿನಲ್ಲಿ ಅಲ್ಲಮ ಪ್ರಭು ಅವರ ವಚನವನ್ನು ಆಂಗ್ಲ ಭಾಷೆಗೆ ಭಾಷಾಂತರ ಮಾಡಿರುವುದು ಶ್ಲಾಘನೀಯ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಶತಮಾನದ ಸಂತರೆನಿಸಿಕೊಂಡಿರುವ ಸಿದ್ದೇಶ್ವರ ಸ್ವಾಮೀಜಿ, ಅಲ್ಲಮ ಪ್ರಭು ಅವರ ವಚನಗಳ ಬಗ್ಗೆ ಅಪಾರ ಅರಿವು ಹೊಂದಿದ್ದರು. ಶೂನ್ಯ ಪೀಠದ ಬಗ್ಗೆ ವಿಶೇಷವಾದ ಜ್ಞಾನ ಅವರಲ್ಲಿತ್ತು. ಅಲ್ಲಮ ಪ್ರಭು ಅವರು ಶ್ರೇಷ್ಠ ವಚನಕಾರರಾಗಿದ್ದರು. ಎಲ್ಲಿಯೂ ನಿಲ್ಲದೇ, ಯಾವುದೇ ಪ್ರಭಾವಕ್ಕೂ ಒಳಗಾಗದೆ ದೇಶ ಸಂಚಾರ ಮಾಡಿದರು. ಇಂತಹ ವಿಶೇಷಣಗಳನ್ನು ಸಿದ್ದೇಶ್ವರ ಸ್ವಾಮೀಜಿ ಅವರಲ್ಲಿ ಕಾಣಬಹುದು' ಎಂದರು.

ಬಹುಭಾಷಾ ವಿದ್ವಾಂಸ ಮಲ್ಲೇಂಪುರ ಜಿ. ವೆಂಕಟೇಶ್, 'ಸಿದ್ದೇಶ್ವರ ಸ್ವಾಮೀಜಿ ಅವರಿಗೆ ಶೂನ್ಯ ಪೀಠದ ಬಗ್ಗೆ ಹೆಚ್ಚಿನ ತಿಳುವಳಿಕೆಯಿತ್ತು. ಅಧ್ಯಾತ್ಮಿಕ ಲೋಕಕ್ಕೆ ಪ್ರವೇಶಿಸಬೇಕಾದವರಿಗೆ ಈ ಸಂಪುಟ ದಾರಿ ತೋರಲಿದೆ' ಎಂದು ಶ್ಲಾಘಿಸಿದರು.

ಸುತ್ತೂರು ಮಠದ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, ವಿಜಯಪುರದ ಜ್ಞಾನಯೋಗಾಶ್ರಮದ ಅಧ್ಯಕ್ಷ ಬಸವಲಿಂಗ ಸ್ವಾಮೀಜಿ, ಒಡಿಶಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಗೌರವ ಸಲಹೆಗಾರ ಗೊ.ರು. ಚನ್ನಬಸಪ್ಪ, ಅಧ್ಯಕ್ಷ ಸಿ. ಸೋಮಶೇಖರ್, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್. ಪಾಟೀಲ ಉಪಸ್ಥಿತರಿದ್ದರು.

'ಮಾನವ ಸಾಮರ್ಥ್ಯ ವೃದ್ಧಿಗೆ ಎ.ಐ ಪೂರಕವಾಗಿರಲಿ'

ಕೆಂಗೇರಿ: 'ಎಐ ತಂತ್ರಜ್ಞಾನದಿಂದ ದೊರಕುವ ಫಲಿತಾಂಶದ ನೈಜತೆ ಹಾಗೂ ನಿಖರತೆಯನ್ನು ಪರಾಮರ್ಶಿಸುವ ಸಾಮರ್ಥ್ಯವನ್ನು ಮಾನವ ಜನಾಂಗ ಎಂದಿಗೂ ಕಳೆದುಕೊಳ್ಳಬಾರದು' ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ.ಎ. ಪಾಟೀಲ ಎಚ್ಚರಿಸಿದರು.

ಉಲ್ಲಾಳು ಕೆಎಲ್‌ಇ ಕಾನೂನು ಕಾಲೇಜು ವತಿಯಿಂದ ಆಯೋಜಿಸಲಾಗಿದ್ದ 8ನೇ ಸಾಂವಿಧಾನಿಕ ಕಾನೂನು ಅಣಕು ನ್ಯಾಯಾಲಯ ಸ್ಪರ್ಧೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪ್ರತಿಯೊಂದು ತಂತ್ರಜ್ಞಾನವು ಸಕಾರಾತ್ಮಕ ಹಾಗೂ ನಕಾರಾತ್ಮಕ ಅಂಶಗಳನ್ನು ಒಳಗೊಂಡಿರುತ್ತದೆ. ಈ ತಂತ್ರಜ್ಞಾನದ ಬಳಕೆಗೆ ಪೂರಕವಾಗಿ ಮನುಜನು ತನ್ನ ಸ್ವಂತ ಬುದ್ಧಿಮತ್ತೆಯನ್ನೂ ಕಾಪಿಟ್ಟುಕೊಳ್ಳುವ ಜರೂರಿದೆ. ತಂತ್ರಜ್ಞಾನದ ಸದ್ಬಳಕೆ ಹಾಗೂ ದುರ್ಬಳಕೆಯ ಆಯ್ಕೆ ನಮ್ಮದೇ ಆಗಿರುತ್ತದೆ ಎಂದು ಕಿವಿಮಾತು ಹೇಳಿದರು.

ಸ್ಪರ್ಧೆಯ ಜಂಟಿ ಆಯೋಜಕರಾದ ಸುರಾನ ಹಾಗೂ ಸುರಾನ ಸಂಸ್ಥೆಯ ಪ್ರೀತಂ ಸುರಾನ ಮಾತನಾಡಿ, ಅಣಕು ನ್ಯಾಯಾಲಯದಲ್ಲಿ ಪಾಲ್ಗೊಳ್ಳುವುದರಿಂದ ವಿದ್ಯಾರ್ಥಿಗಳ ಯೋಚನಾ ಶಕ್ತಿ ಹಾಗೂ ವಾದದ ಗುಣ ಮಟ್ಟದ ಹೆಚ್ಚಲಿದೆ. ತಜ್ಞ ಹಾಗೂ ಬದ್ಧತೆಯುಳ್ಳ ವಕೀಲರನ್ನು ಸೃಷ್ಟಿಸುವಲ್ಲಿ ಅಣಕು ನ್ಯಾಯಾಲಯ ಸ್ಪರ್ಧೆಗಳು ಮಹತ್ತರ ಪಾತ್ರ ವಹಿಸುತ್ತವೆ ಎಂದರು.

ಕಾಲೇಜಿನ ರಜತ ಮಹೋತ್ಸವ ಸಂಭ್ರಮದ ಸಂದರ್ಭದಲ್ಲಿ ಆಯೋಜನೆಗೊಂಡಿರುವ ಈ ರಾಷ್ಟಮಟ್ಟದ ಸ್ಪರ್ಧೆಯಲ್ಲಿ ಸುಮಾರು ಐವತ್ತು ತಂಡಗಳು ಭಾಗವಹಿಸುತ್ತಿವೆ. ಎರಡು ದಿನದ ಈ ಸ್ಪರ್ಧೆ ಭಾನುವಾರ ಸಂಜೆ ಸಮಾರೋಪಗೊಳ್ಳಲಿದೆ ಎಂದು ಕಾಲೇಜಿನ ಪ್ರಾಂಶುಪಾಲ ಜೆ.ಎಂ. ಮಲ್ಲಿಕಾರ್ಜುನಯ್ಯ ಮಾಹಿತಿ ನೀಡಿದರು.

'ನಷ್ಟದಿಂದ ಲಾಭದತ್ತ ಬಮೂಲ್ ಹೆಜ್ಜೆ'

ರಾಮನಗರ: 'ಬೆಂಗಳೂರು ಸಹಕಾರ ಹಾಲು ಒಕ್ಕೂಟಕ್ಕೆ (ಬಮೂಲ್) ನಾನು ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡಾಗ ಸುಮಾರು ₹45 ಕೋಟಿಯಷ್ಟು ನಷ್ಟದಲ್ಲಿತ್ತು. ಹಲವು ಸುಧಾರಣಾ ಕ್ರಮಗಳನ್ನು ಕೈಗೊಂಡ ಬಳಿಕ ಇದೀಗ ಮಾಸಿಕ ₹20 ಕೋಟಿ ಲಾಭದಲ್ಲಿದೆ' ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಹೇಳಿದರು.

ತಾಲ್ಲೂಕಿನ ಹಾಗಲಹಳ್ಳಿಯಲ್ಲಿ ನೂತನ ಡೇರಿ ಕಟ್ಟಡ ಉದ್ಘಾಟಿಸಿ ಮಾತನಾಡಿ, 'ಹಿಂದೆ ಬಮೂಲ್ ಪ್ರತಿ ತಿಂಗಳು ₹14.5 ಕೋಟಿ ನಷ್ಟ ಅನುಭವಿಸುತ್ತಿತ್ತು. ಅದನ್ನು ಹಂತ ಹಂತವಾಗಿ ಇಳಿಸಿ, ಇದೀಗ ಲಾಭದ ಹಳಿಗೆ ತರಲಾಗಿದೆ. ಜನವರಿ ತಿಂಗಳಲ್ಲಿ ₹20 ಕೋಟಿ ಲಾಭ ಗಳಿಸಿದೆ' ಎಂದರು.

'ಅಧಿಕಾರಿಗಳು ಮತ್ತು ಸಿಬ್ಬಂದಿ ತಮಗೆ ಸಿಗಬೇಕಾದ ₹5 ಕೋಟಿ ಡಿ.ಎ ಭತ್ಯೆಗೆ ಆಗ್ರಹಿಸಿ ಪ್ರತಿಭಟನೆಗೆ ಮುಂದಾಗಿದ್ದರು. ವಿಷಯ ನನ್ನ ಬಳಿಗೆ ಬಂದಾಗ, ಮೊದಲು ಅವರಿಗೆ ಲಾಭದ ಕೊಡುಗೆ ಕೊಡೋಣ. ನಂತರ ನಿಮಗೆ ನೀಡುತ್ತೇನೆ ಎಂದು ಭರವಸೆ ನೀಡಿದ ಬಳಿಕ ಪ್ರತಿಭಟನೆ ನಿರ್ಧಾರದಿಂದ ಹಿಂದೆ ಸರಿದರು' ಎಂದು ತಿಳಿಸಿದರು.

ಎಚ್‌ಪಿವಿ ಲಸಿಕೆ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗರ್ಭಕಂಠ ಕ್ಯಾನ್ಸರ್ ತಡೆಗಟ್ಟಲು ಸಹಕಾರಿಯಾದ 'ಹ್ಯೂಮನ್ ಪ್ಯಾಪಿಲೋಮವೈರಸ್ ಲಸಿಕೆ'ಯನ್ನು (ಎಚ್‌ಪಿವಿ) 14 ವರ್ಷದ ಹೆಣ್ಣುಮಕ್ಕಳಿಗೆ ವಿತರಿಸುವ ಅಭಿಯಾನಕ್ಕೆ ನಗರದಲ್ಲಿ ಶನಿವಾರ ಚಾಲನೆ ನೀಡಲಾಯಿತು.

ಬಿಜಿಎ, ಆರೋಗ್ಯ ಇಲಾಖೆ ಹಾಗೂ ರಾಷ್ಟ್ರೀಯ ಆರೋಗ್ಯ ಅಭಿಯಾನ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಾಂಕೇತಿಕವಾಗಿ ಲಸಿಕೆ ವಿತರಿಸಲಾಯಿತು.

ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಡಾ. ಸುಜಾತಾ ರಾಥೋಡ್, ರಾಷ್ಟ್ರೀಯ ಆರೋಗ್ಯ ಅಭಿಯಾನದ ವ್ಯವಸ್ಥಾಪಕ ನಿರ್ದೇಶಕ ಅವಿನಾಶ್ ಮೆನನ್, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಕಾವ್ಯಾ ಎಸ್.ಟಿ., ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ ಡಾ.ಟಿ.ನವೀನ್ ಪಾಲ್ಗೊಂಡಿದ್ದರು.

ಗರ್ಭಕಂಠ ಕ್ಯಾನ್ಸರ್

'ಕೇಂದ್ರ ಸರ್ಕಾರದ ಆದೇಶದಂತೆ ಈ ಲಸಿಕಾ ಅಭಿಯಾನವನ್ನು ರಾಜ್ಯದಲ್ಲಿಯೂ ಹಮ್ಮಿಕೊಳ್ಳಲಾಗಿದೆ. ದೇಶದಲ್ಲಿ 14 ವರ್ಷದ ಸುಮಾರು 1.15 ಕೋಟಿ ಹುಡುಗಿಯರಿಗೆ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಈ ಲಸಿಕೆಯನ್ನು ಹಾಕಲಾಗುತ್ತದೆ. ಈ ಅಭಿಯಾನವು ಮೂರು ತಿಂಗಳು ನಡೆಯಲಿದ್ದು, 14 ವರ್ಷದ ಎಲ್ಲ ಬಾಲಕಿಯರು ಲಸಿಕೆ ಪಡೆದುಕೊಳ್ಳಬೇಕು' ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

'ಮಹಿಳೆಯರಲ್ಲಿ ಹೆಚ್ಚಾಗಿ ಗರ್ಭಕಂಠ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ. ಈ ಕ್ಯಾನ್ಸರ್ ತಡೆಗೆ ಎಚ್‌ಪಿವಿ ಲಸಿಕೆ ಸಹಕಾರಿ' ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಲಸಿಕೆ ಪಡೆದ ಬಾಲಕಿಯರಿಗೆ ಪ್ರಮಾಣಪತ್ರವನ್ನು ಡಾ. ಸುಜಾತಾ ರಾಥೋಡ್ ವಿತರಿಸಿದರು. ಅವಿನಾಶ್ ಮೆನನ್, ಕಾವ್ಯಾ ಎಸ್.ಟಿ., ಡಾ.ಟಿ.ನವೀನ್ ಹಾಗೂ ಅಧಿಕಾರಿಗಳು ಪಾಲ್ಗೊಂಡಿದ್ದರು

ನಗರದಲ್ಲಿ ಇಂದು

ಭಕ್ತಿ ಭಾವಾನಂದ ಅಖಂಡ ಭಜನೆ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ಬೆಳಿಗ್ಗೆ 9

ನಮ್ಮ ಕರ್ನಾಟಕ ಪ್ರತಿಷ್ಠಾನದ ಉದ್ಘಾಟನೆ: ಪ್ರಿಯಕೃಷ್ಣ, ಅಧ್ಯಕ್ಷತೆ: ರಾಗಂ, ಅತಿಥಿಗಳು: ಬಿ.ಟಿ. ರುದ್ರೇಶ್, ರಾಜೇಂದ್ರ ಪ್ರಸಾದ್, ಭಾರತಿ, ವೀರಕಪುತ್ರ ಶ್ರೀನಿವಾಸ್, ಜಿ.ಆರ್. ಬಸವರಾಜ್, ಜೋಸೆಫ್ ಅಮೃತ್ ರಾಜ್, ಸುರೇಶ ಕೋಟ್ಯಾನ್ ಚಿತ್ರಾಪು, ಮುರುಳಿ, ಆಯೋಜನೆ: ನಮ್ಮ ಕರ್ನಾಟಕ ಪ್ರತಿಷ್ಠಾನ, ಸ್ಥಳ: ಜ್ಞಾನಸೌಧ ಸಭಾಂಗಣ, ಕಲ್ಯಾಣನಗರ, ನಾಗರಬಾವಿ, ಬೆಳಿಗ್ಗೆ 9.15

'ಮಕ್ಕಳ ರಕ್ಷಣೆ' ಕುರಿತು ರಾಜ್ಯಮಟ್ಟದ ನ್ಯಾಯಾಂಗ ಸಭೆ: ಉದ್ಘಾಟನೆ: ಅನು ಶಿವರಾಮನ್, ಅಧ್ಯಕ್ಷತೆ: ಸುನಿಲ್ ದತ್ತ ಯಾದವ್, ಅತಿಥಿ: ರವಿಕಾಂತ್, ಆಯೋಜನೆ: ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಸ್ಥಳ: ಕರ್ನಾಟಕ ನ್ಯಾಯಾಂಗ ಅಕಾಡೆಮಿ, ಬೆಳಿಗ್ಗೆ 9.30ರಿಂದ

'ತಾಳಮದ್ದಳೆ ಅರ್ಥಗಾರಿಕೆ' ಕುರಿತು ಕಾರ್ಯಾಗಾರ: ಸಂಪನ್ಮೂಲ ವ್ಯಕ್ತಿಗಳು: ರಾಧಾಕೃಷ್ಣ ಕಲ್ಚಾರ್, ಅನಂತ ದಂತಳಿಗೆ, ದಿವಾಕರ ಹೆಗಡೆ, ಅಜಿತ್ ಕಾರಂತ, ಉಪಸ್ಥಿತಿ: ಶ್ರೀಪಾದ ಹೆಗಡೆ, ಕೃಷ್ಣಮೂರ್ತಿ ತುಂಗ, ಗಜಾನನ ಗೋಖಲೆ, ಬೇಗಾರ್ ಶಿವಕುಮಾರ್, ದೀಪಕ್ ಶೆಟ್ಟಿ, ಹರಿಗಾರು ಗಣಪತಿ ಭಟ್ಟ, 'ಊರ್ವಶಿ ಶಾಪ' ತಾಳಮದ್ದಳೆ ಪ್ರದರ್ಶನ, ಆಯೋಜನೆ: ಘಾಟಕ ಯಕ್ಷ ಸಂಸ್ಕೃತಿ ಟ್ರಸ್ಟ್, ಸ್ಥಳ: ಚಿತ್ಪಾವನ ಸಭಾಭವನ, ರಾಜಾಜಿನಗರ ಐದನೇ ಬ್ಲಾಕ್, ಬೆಳಿಗ್ಗೆ 9.30ರಿಂದ

ಸಮಾನತೆ ಸಭೆ: ಭಾಗವಹಿಸುವವರು: ಚೇತನ್ ಅಹಿಂಸಾ, ಆಯೋಜನೆ: ಟೀಂ ಅಹಿಂಸಾ, ಸ್ಥಳ: ವೈಟ್ ಪೆಟಲ್ಸ್, ಗೇಟ್ ಸಂಖ್ಯೆ–2, ಅರಮನೆ ಮೈದಾನ, ಬೆಳಿಗ್ಗೆ 10ರಿಂದ

'ಕೃಷಿಯಲ್ಲಿ ಗೋಕೃಪಾಮೃತದ ಮಹತ್ವ' ರೈತರೊಂದಿಗೆ ಸಂವಾದ: ಗೋಪಾಲ್ ಭಾಯ್ ಸುತಾರಿಯ, ಆಯೋಜನೆ: ದಿ ಫಾರ್ವರ್ಡ್ ಫೌಂಡೇಷನ್, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10ರಿಂದ

'ತ್ರಿಪಾತ್' ಕಾರ್ಯಕ್ರಮದ ಸಮಾರೋಪ: ಭಾಷಣ: ಸುರೇಶ ಸೋನಿ, ಸಂವಾದ: ಆರ್. ಗಣೇಶ್, ಆಯೋಜನೆ: ವೇದ ವಿಜ್ಞಾನ ಶೋಧ ಸಂಸ್ಥಾನಂ, ಸ್ಥಳ: ಚನ್ನೇನಹಳ್ಳಿ ಜನಸೇವಾ ಟ್ರಸ್ಟ್‌ನ ವೇದ ವಿಜ್ಞಾನ ಗುರುಕುಲಮ್ ಆವರಣ, ಮಾಗಡಿ ರಸ್ತೆ, ಬೆಳಿಗ್ಗೆ 10.30

ಹಿರಿಯೂರು ನಾಗೇಂದ್ರ ಅವರ 'ಮರುಹುಟ್ಟು' ಪುಸ್ತಕ ಬಿಡುಗಡೆ: ಇಂದೂ ವಿಶ್ವನಾಥ್, ಅಧ್ಯಕ್ಷತೆ: ಎಸ್. ಶಂಕರ್, ಅತಿಥಿ: ಅಬ್ಬೂರು ಜಯತೀರ್ಥ, ಪುಸ್ತಕ ಪರಿಚಯ: ಜಿ.ಪಿ. ನಾಗರಾಜನ್, ಆಯೋಜನೆ: ವನಾಶ್ರಯೀ ಪ್ರಕಾಶನ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

'ಜಾಂಬವತಿ ಕಲ್ಯಾಣ' ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಭಾಗವತರು: ಬಾಲಕೃಷ್ಣ ಹಿಲ್ಲೋಡಿ, ರಕ್ಷಿತ್ ಭಟ್ಟ, ಮದ್ದಳೆ: ಅಗ್ನೇಯ ಭಟ್ ಕ್ಯಾಸನೂರು, ನಾರಾಯಣ ಮೂರ್ತಿ ಹೊಸಬಾಳೆ, ಚೆಂಡೆ: ಶ್ರೀರಮಣ ಭಟ್ಟ, ಮುಮ್ಮೇಳ: ಶ್ರೀಕೃಷ್ಣ: ಸುಬ್ರಾಯ ಹಿಲ್ಲೋಡಿ, ಜಾಂಬವ: ರವಿ ಐತುಮನೆ, ಬಲರಾಮ: ಚಂದನ್ ಕಲಾಹಂಸ, ನಾರದ: ಮನೋಜ್ ಭಟ್, ಆಯೋಜನೆ: ನಿರ್ಮಾಣ್ ಯಕ್ಷಬಳಗ, ಸ್ಥಳ: ಬಾಲಕೃಷ್ಣ ಎಚ್.ಸಿ. ನಂ. 13, ಎರಡನೇ ಮುಖ್ಯರಸ್ತೆ, ಮಾರುತಿನಗರ, ಸೊನ್ನೇನಹಳ್ಳಿ ಉಲ್ಲಾಳು ಉಪನಗರ, ಮಧ್ಯಾಹ್ನ 3

'ಗದಾಯುದ್ಧ' ಪೌರಾಣಿಕ ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಪ್ರಸನ್ನ ಹೆಗಡೆ, ನಂದನ ಹೆಗಡೆ, ನಾರಾಯಣ ಹೆಬ್ಬಾರ, ಕಾರ್ತೀಕ ಧಾರೇಶ್ವರ್, ಮುಮ್ಮೇಳ: ರಾಧಾಕೃಷ್ಣ ಬೆಳಿಯೂರು, ಶ್ರೀಪಾದ ಹೆಗಡೆ, ಶ್ರೀಪಾದ ಹೆಗಡೆ, ಶುಂಠಿ, ರವಿ ಮಡೋಡಿ, ಆದಿತ್ಯ ಹಲ್ಲೋಡ, ರಾಘವೇಂದ್ರ ವಾಜಗೋಡ, ಅನ್ವಿ ಭಟ್, ಅಕ್ಷಯ ಹೆಗಡೆ, ಕಾರ್ತೀಕ ದಂಟ್ಕಲ್, ಆಯೋಜನೆ: ಉತ್ತರ ಕನ್ನಡ ಸಂಘ, ಸ್ಥಳ: ಉತ್ತರ ಕನ್ನಡ ಭವನ, ನಂದಿನಿ ಬಡಾವಣೆ, ಮಧ್ಯಾಹ್ನ 3



ಪಿ.ವೈ. ರಾಜೇಂದ್ರ ಕುಮಾರ್ ಅವರ 'ಗ್ರಾಮೀಣ ಜ್ಞಾನ ಸಮುಚ್ಛಯಗಳು–ಒಂದು ಪರಿಕಲ್ಪನೆ' ಪುಸ್ತಕ ಬಿಡುಗಡೆ: ಅತಿಥಿಗಳು: ವಿ. ಸೋಮಣ್ಣ, ಬಸವರಾಜ ಎಸ್. ಹೊರಟ್ಟಿ, ಅಧ್ಯಕ್ಷತೆ: ಕೆ.ಇ. ರಾಧಾಕೃಷ್ಣ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11ರಿಂದ

ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ರೇವಣ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ಎಸ್. ತಂಗಡಗಿ, ಅತಿಥಿ: ಈಶ್ವರ ಖಂಡ್ರೆ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11ರಿಂದ

ಮಾಸದ ಮಂಥನ: ಅತಿಥಿ: ಎಸ್. ಸುರೇಶಕುಮಾರ್, ಸ್ಥಳ: ನಂ. 17, ಸಾನ್ನಿಧ್ಯ, ಒಂದನೇ ಅಡ್ಡರಸ್ತೆ, ದೊಡ್ಡಕನ್ನೆಲ್ಲಿ, ಬೆಳಿಗ್ಗೆ 11

ಹಿಂದೂಸ್ತಾನಿ ಸಂಗೀತೋತ್ಸವ: ಉದ್ಘಾಟನೆ: ಹಫೀಜ್ ಬಾಲೇಖಾನ್, ಅತಿಥಿಗಳು: ಅರವಿಂದ್ ಜಿ. ಕುಲಕರ್ಣಿ, ಅಚ್ಯುತ ಬಿದರಹಳ್ಳಿ, ಅಧ್ಯಕ್ಷತೆ: ಸತೀಶ್ ಹಂಪಿಹೊಳಿ, ಆಯೋಜನೆ: ಶ್ರೀಗುರು ಸಮರ್ಥ ಸಂಗೀತ ವಿದ್ಯಾಲಯ ಟ್ರಸ್ಟ್, ಸ್ಥಳ: ಶಿವರಾತ್ರಿ ಚಿಂತನ ರಾಜೇಂದ್ರ ಮಂಟಪ, ಜೆಎಸ್‌ಎಸ್ ಸಭಾಂಗಣ, ಜಯನಗರ, ಮಧ್ಯಾಹ್ನ 3.30ರಿಂದ (ಸಭಾ ಕಾರ್ಯಕ್ರಮ ಸಂಜೆ 6)




ಹಫೀಜ್ ಬಾಲೇಖಾನ್

ಬಾಗಲಕೋಟೆ ಹೋಳಿ ಹಲಗೆ ಮೇಳ: ಆಯೋಜನೆ: ಚಾಲುಕ್ಯ ಸಾಂಸ್ಕೃತಿಕ ಸಂಘ, ಸ್ಥಳ: ಕೆಎಲ್‌ಇ ಕಾಲೇಜಿನ ಮೈದಾನ, ಎರಡನೇ ಬ್ಲಾಕ್, ರಾಜಾಜಿನಗರ, ಸಂಜೆ 5.30

'ಜನ ಏನಂತಾರೆ?' ನಾಟಕ ಪ್ರದರ್ಶನ: ನಿರ್ದೇಶನ: ಚಂದನ್ ಕುಮಾರ್, ಆಯೋಜನೆ: ಎಸ್‌ಟಿಡಿ, ಸ್ಥಳ: ಕೆಇಎ ಪ್ರಭಾತ್ ರಂಗಮಂದಿರ, ಕರ್ನಾಟಕ ಎಂಜಿನಿಯರ್ಸ್ ಅಕಾಡೆಮಿ, ಎಂಟನೇ ಮುಖ್ಯರಸ್ತೆ, ಕಮಲಾನಗರ, ಬಸವೇಶ್ವರನಗರ, ಸಂಜೆ 6.30

'ನೀರು ಕುಡಿಸಿದ ನೀರೆಯರು' ನಾಟಕ ಪ್ರದರ್ಶನ: ನಿರ್ದೇಶನ: ಮಂಜುನಾಥ್ ಎಲ್. ಬಡಿಗೇರ, ಆಯೋಜನೆ: ಸಮಷ್ಟಿ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಮಧ್ಯಾಹ್ನ 3.30 ಹಾಗೂ ಸಂಜೆ 7.30ಕ್ಕೆ



ಭರತನಾಟ್ಯ ರಂಗಪ್ರವೇಶ: ವಿಶ್ವನೇತಾ ಡಿ., ಅತಿಥಿಗಳು: ಸತ್ಯನಾರಾಯಣ ರಾಜು, ಸಾಯಿ ವೆಂಕಟೇಶ್, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ಯಲಹಂಕ, ಸಂಜೆ 6

25ನೇ ವರ್ಷದ ಪ್ರವಚನ ವಾಹಿನಿ ಕಾರ್ಯಕ್ರಮದ ಸಮಾರೋಪ, 26ನೇ ವರ್ಷದ ಉದ್ಘಾಟನಾ ಸಮಾರಂಭ: ಸಾನ್ನಿಧ್ಯ: ವಿದ್ಯಾಧೀಶ ತೀರ್ಥ ಸ್ವಾಮೀಜಿ, ಅಧ್ಯಕ್ಷತೆ: ಶ್ರೀಪತಿರಾವ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಒಂಬತ್ತನೇ ಬಡಾವಣೆ, ಜಯನಗರ, ಸಂಜೆ 6.30

ಕಾಮಣ್ಣನ ಹಬ್ಬದ ಆಚರಣೆ: ಮನ್ಮಥನಿಂದ ಸಂರಾಸುರನ ವಧೆ, ಆಯೋಜನೆ ಮತ್ತು ಸ್ಥಳ: ಕಾಮಣ್ಣನ ಗುಡಿ ಸೇವಾ ಸಮಿತಿ ಟ್ರಸ್ಟ್, ಅರಳೇಪೇಟೆ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಟಿ.ಪಿ. ಅಶೋಕ, ನಾಗಮಣಿ ಎಸ್‌ ರಾವ್‌ಗೆ ಬಿ.ಎಂ.ಶ್ರೀ. ಪ್ರತಿಷ್ಠಾನದ ದತ್ತಿ ಪ್ರಶಸ್ತಿಗಳ ಪ್ರದಾನ

'ಶಿಷ್ಟ ಸಾಹಿತ್ಯಕ್ಕೆ ಸೀಮಿತವಾದ ವಿಮರ್ಶೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ವಿಮರ್ಶೆಯು ಶಿಷ್ಟ ಸಾಹಿತ್ಯಕ್ಕೆ ಸೀಮಿತವಾಗಿದೆ. ವಿದ್ವತ್ ವಲಯವನ್ನು ಮಾತ್ರ ಗುರಿಯಾಗಿಟ್ಟುಕೊಳ್ಳದೆ, ಜನಪದ ಸಾಹಿತ್ಯವನ್ನೂ ವಿಮರ್ಶೆಗೆ ಒಳಪಡಿಸಬೇಕು' ಎಂದು ಲೇಖಕಿ ಕೆ.ಆರ್. ಸಂಧ್ಯಾ ರೆಡ್ಡಿ ಹೇಳಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿಮರ್ಶಕ ಟಿ.ಪಿ. ಅಶೋಕ ಅವರಿಗೆ 'ಪ್ರೊ.ಎಲ್.ಎಸ್. ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ' ಹಾಗೂ ಪತ್ರಕರ್ತೆ ನಾಗಮಣಿ ಎಸ್. ರಾವ್ ಅವರಿಗೆ 'ವಿ. ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ' ಪ್ರದಾನ ಮಾಡಿ, ಮಾತನಾಡಿದರು.

'ಆಯ್ದ ಸಾಹಿತಿಗಳ ಕೃತಿಗಳನ್ನು ಮಾತ್ರ ವಿಮರ್ಶೆಗೆ ಒಳಪಡಿಸಲಾಗುತ್ತಿದೆ. ಸಾಮಾನ್ಯ ಓದುಗರನ್ನು ಬೆಳೆಸಿದವರೇ ಕಾದಂಬರಿಕಾರರು, ಲೇಖಕರು. ಹೀಗಾಗಿ, ಅವರನ್ನು ಮರೆಯಬಾರದು. ಕನ್ನಡ ಓದುಗರ ಸಂಖ್ಯೆ ಕಡಿಮೆಯಾಗಲು ಓದುಗರಿಗೆ ಆಸಕ್ತಿ ಹುಟ್ಟಿಸುವ ಸಾಹಿತ್ಯ ಸೃಷ್ಟಿಸುತ್ತಿಲ್ಲ. ಜಾನಪದ ರಾಮಾಯಣದಲ್ಲಿಯೇ ಮತ್ತಷ್ಟು ಕಥೆಗಳನ್ನು ಸೃಷ್ಟಿಸಬಹುದಾಗಿದೆ. ಜನಪದ ಮನಸ್ಸು ರಾಮಾಯಣ, ಮಹಾಭಾರತವನ್ನು ಹೇಗೆ ಗ್ರಹಿಸಿದೆ ಎಂಬುದನ್ನು ನೋಡಬೇಕಿದೆ' ಎಂದು ಹೇಳಿದರು.

ಪ್ರತಿಷ್ಠಾನದ ಗೌರವಾಧ್ಯಕ್ಷ ಆರ್. ಲಕ್ಷ್ಮೀನಾರಾಯಣ, 'ವಿಮರ್ಶೆಗೆ ಸಿಗಬೇಕಾದ ಪುರಸ್ಕಾರ ಸಿಗುತ್ತಿಲ್ಲ. ವಿಮರ್ಶಕನಿಗೆ ಸರಿಯಾದ ಗೌರವ ದೊರೆಯುತ್ತಿಲ್ಲ. ಕೆಲವು ಸಾರಿ ಸರಿಯಾದ ವಿಮರ್ಶೆಯೂ ಬರುತ್ತಿಲ್ಲ. ಬೇಕಾದವರು ಎಂಬ ಕಾರಣಕ್ಕೆ ಸಾಮಾನ್ಯ ಕೃತಿಯನ್ನೂ ಎತ್ತಿ ಹಿಡಿಯುವ ಪ್ರಕ್ರಿಯೆ ನಡೆಯುತ್ತಿದೆ. ವಿಮರ್ಶಕರ ಸಂಖ್ಯೆಯೂ ಕಡಿಮೆಯಾಗಿದೆ. ವಿಮರ್ಶೆ ಮತ್ತು ಮಾಧ್ಯಮ ಬಿಕ್ಕಟ್ಟು ಎದುರಿಸುತ್ತಿವೆ. ಕನ್ನಡ ವಿಮರ್ಶಾ ಕ್ಷೇತ್ರ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು' ಎಂದರು.

ಟಿ.ಪಿ. ಅಶೋಕ, 'ಲೇಖಕರ ಸಂಖ್ಯೆ ಜಾಸ್ತಿಯಾಗಿದೆ. ವರ್ಷಕ್ಕೆ 8 ಸಾವಿರ ಪುಸ್ತಕಗಳು ಪ್ರಕಟವಾಗುತ್ತಿವೆ. ಅರ್ಧದಷ್ಟು ಕೃತಿಗಳು ಕವಿತೆ ಹಾಗೂ ಕಥಾ ಸಂಕಲನವಾಗಿವೆ. ವಿಮರ್ಶೆಯ ಬರಹ ಕಡಿಮೆಯಾಗಿರುವ ಜತೆಗೆ, ಅದಕ್ಕೆ ಬೇಕಿರುವ ವೇದಿಕೆಯೂ ಸಿಗುತ್ತಿಲ್ಲ' ಎಂದು ಹೇಳಿದರು.

ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.



ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ನಾಗಮಣಿ ಎಸ್‌ ರಾವ್ ಅವರಿಗೆ 'ವಿ.ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ' ಮತ್ತು ಟಿ.ಪಿ. ಅಶೋಕ ಅವರಿಗೆ 'ಪ್ರೊ.ಎಲ್‌ಎಸ್‌ ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಕೆ.ಆರ್‌ ಸಂಧ್ಯಾ ರೆಡ್ಡಿ, ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು, ಆರ್‌ ಲಕ್ಷ್ಮೀನಾರಾಯಣ ಮತ್ತು ಬೈರಮಂಗಲ ರಾಮೇಗೌಡ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ನೆಡುತೋಪಿನಿಂದ ವನ ವಿಸ್ತರಣೆ?

ಒಂದನೇ ಪುಟದಿಂದ...

ನೆಡುತೋಪುಗಳನ್ನು ಅರಣ್ಯವೆಂದು ಸಮೀಕರಿಸುವುದು ಅರಣ್ಯ ನಾಶವನ್ನು ಮುಚ್ಚಿಹಾಕುವ ಅಪಾಯಕಾರಿ ಪ್ರವೃತ್ತಿಗೆ ದಾರಿ ಮಾಡಿಕೊಡುತ್ತದೆ' ಎಂದು ಅವರು ಎಚ್ಚರಿಸಿದ್ದಾರೆ.

'ಪಶ್ಚಿಮ ಘಟ್ಟದಲ್ಲಿ ನಾಲ್ಕು ನದಿಗಳು ಹುಟ್ಟಿ ಹರಿಯುವ ಪ್ರದೇಶಗಳಲ್ಲಿ 1978ರಿಂದ 2018ರ ನಡುವೆ ಆಗಿರುವ ಭೂ ಬಳಕೆ ಬದಲಾವಣೆ ಬಗ್ಗೆ ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ವಿಜ್ಞಾನಗಳ ಕೇಂದ್ರ ಅಧ್ಯಯನ ನಡೆಸಿತ್ತು. ಪಶ್ಚಿಮ ಘಟ್ಟದ ದಟ್ಟ ಹಸಿರು ವರ್ಣದ ಕಾಡು ಶೇ 41ರಷ್ಟು ನಾಶವಾಗಿರುವುದನ್ನು ಹಾಗೂ ನಿರಂತರ ಕಾಡುಗಳು ಶೇ 60ರಷ್ಟು ಛಿದ್ರವಾಗಿರುವ ಬಗ್ಗೆ ಬೆಳಕು ಚೆಲ್ಲಿತ್ತು' ಎಂದು ವಿಜ್ಞಾನಿ ಟಿ.ವಿ.ರಾಮಚಂದ್ರ ವಿಶ್ಲೇಷಿಸುತ್ತಾರೆ.

'ಈ ವರದಿಯ ಪ್ರಕಾರ, ಉತ್ತರ ಕನ್ನಡ ಜಿಲ್ಲೆಯೊಂದರಲ್ಲೇ ಅಭಿವೃದ್ಧಿ ಚಟುವಟಿಕೆ ಹಾಗೂ ಮಾನವ ಚಟುವಟಿಕೆಗಳಿಂದಾಗಿ ಅರಣ್ಯ ಕವಚವು ಶೇ 74.19ರಿಂದ ಶೇ 48.04ಕ್ಕೆ ಕುಸಿದಿದೆ. ಸದಾ ಹಸಿರು ಬಣ್ಣದ ಕಾಡಿನ ಪ್ರಮಾಣವು ಶೇ 56.07ರಿಂದ ಶೇ 24.85ಕ್ಕೆ ಇಳಿದಿದೆ. ಇದಕ್ಕೆ ಅಣೆಕಟ್ಟೆಗಳ ನಿರ್ಮಾಣ, ಸಾಗುವಾನಿ, ನೀಲಗಿರಿ, ಅಕೇಷಿಯಾದಂತಹ ಏಕಪ್ರಭೇದದ ಸಸ್ಯಗಳನ್ನು ಬೆಳೆಸುವುದು, ಅರಣ್ಯ ಭೂಮಿಯನ್ನು ಕೃಷಿ ಭೂಮಿಯನ್ನಾಗಿ ಪರಿವರ್ತಿಸಿರುವುದು ಪ್ರಮುಖ ಕಾರಣಗಳು. ಕಾಡನ್ನು ತೋಟಗಳನ್ನಾಗಿ ಮಾರ್ಪಾಡು ಮಾಡಿರುವುದು, ನಿರ್ಮಾಣ ಪ್ರದೇಶಗಳ ಹೆಚ್ಚಳ, ಅರಣ್ಯ ಆಧರಿತ ಕೈಗಾರಿಕೆಗಳ ಸ್ಥಾಪನೆಯೂ ಇದಕ್ಕೆ ಕಾರಣ' ಎಂದು ಅವರು ಬೆಳಕು ಚೆಲ್ಲುತ್ತಾರೆ.

'ಅರಣ್ಯವನ್ನು ಛಿದ್ರಗೊಳಿಸುವಿಕೆಯಿಂದ ನೀರಿನ ಚಕ್ರದ ಮೇಲೂ ದುಷ್ಪರಿಣಾಮ ಉಂಟಾಗಿದೆ. ನಾಲ್ಕು ದಶಕಗಳಲ್ಲಿ 64,355 ಹೆಕ್ಟೇರ್‌ಗಳಷ್ಟು ಕಾಡನ್ನು ಕಾಗದ ತಯಾರಿ, ಜಲವಿದ್ಯುತ್, ವಾಣಿಜ್ಯ ಬೆಳೆ ಬೆಳೆಸಲು, ಅಣು ವಿದ್ಯುತ್ ಸ್ಥಾವರ ನಿರ್ಮಾಣ ಮುಂತಾದ ಅರಣ್ಯೇತರ ಚಟುವಟಿಕೆಗೆ ಬಳಸಲಾಗಿದೆ. ನಿರಂತರತೆ ಹೊಂದಿರುವ ಕಾಡುಗಳ ಪ್ರಮಾಣ ಶೇ 62.71ರಿಂದ (1970ರಲ್ಲಿ) ಶೇ 24.74ಕ್ಕೆ (2018ರಲ್ಲಿ) ಕುಸಿದಿದೆ. ತತ್ಪರಿಣಾಮವಾಗಿ ಸ್ಥಳೀಯ ಸಸ್ಯ ವರ್ಗಗಳ ನಡುವೆ ನಂಟು ಕಳೆದುಹೋಗಿ ಕಾಡು ಪ್ರಾಣಿಗಳು ಊರಿಗೆ ನುಗ್ಗುವ ಪ್ರಕರಣಗಳು ಹೆಚ್ಚಿವೆ' ಎಂದು ಅವರು ಹೇಳುತ್ತಾರೆ.

ಪಶ್ಚಿಮ ಘಟ್ಟವನ್ನು ಒಳಗೊಂಡಿರುವ ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಭೂಮಿಯ ಪ್ರಮಾಣ ಎರಡು ವರ್ಷದಲ್ಲಿ 13 ಚದರ ಕಿ.ಮೀನಷ್ಟು ಹೆಚ್ಚಿದೆ ಎಂಬುದಾಗಿ ಭಾರತೀಯ ಅರಣ್ಯ ವರದಿ ಹೇಳಿದೆ.

2021ರಲ್ಲಿ ಉತ್ತರ ಕನ್ನಡದಲ್ಲಿ 8,130 ಚ.ಕಿ.ಮೀ ಅರಣ್ಯ ಪ್ರದೇಶ ಇತ್ತು. 2023ರ ವೇಳೆಗೆ ಅದು 8,143 ಚ.ಕಿ.ಮೀಗೆ ಹಿಗ್ಗಿದೆ. ಸದ್ಯ ಉತ್ತರ ಕನ್ನಡ ಜಿಲ್ಲೆಯಲ್ಲಿ 8,29,693 ಹೆಕ್ಟೇರ್ ಅರಣ್ಯ ಭೂಮಿ ಇದೆ. ಜಿಲ್ಲೆಯ ಒಟ್ಟಾರೆ ಭೂಪ್ರದೇಶದ ಪೈಕಿ ಈ ಪ್ರಮಾಣ ಶೇ 80 ರಷ್ಟಿದೆ ಎನ್ನುತ್ತಾರೆ ಕೆನರಾ ಅರಣ್ಯ ವೃತ್ತದ ಸಿಸಿಎಫ್ ಟಿ.ಹೀರಾಲಾಲ್.



ವಿಜಯಪುರ ನಗರ ಸಮೀಪದ ಭೂತನಾಳ ಕೆರೆ ದಡದಲ್ಲಿ ಬೆಳೆಸಲಾಗಿರುವ ಗಿಡಗಳ ರಾಶಿ

'ಮಳೆಗಾಲದಲ್ಲಿ ಭೂಕುಸಿತ, ಒತ್ತುವರಿಯಿಂದ ಪ್ರತಿ ವರ್ಷ ಅರಣ್ಯ ಪ್ರದೇಶ ಕಡಿಮೆಯಾಗುತ್ತಿರುವ ಸಾಧ್ಯತೆ ಇದೆ. ವರದಿಯಲ್ಲಿನ ಕೆಲವು ಅಂಶಗಳು ಉತ್ಪ್ರೇಕ್ಷೆಯಿಂದ ಕೂಡಿರುವ ಸಾಧ್ಯತೆ ಇರಬಹುದು. ಇಲ್ಲವೇ ನೆಡುತೋಪಿನಿಂದ ಹಸಿರು ಹೆಚ್ಚಾಗಿರಬಹುದು' ಎಂಬುದು ಪರಿಸರವಾದಿಯೊಬ್ಬರ ಅಭಿಪ್ರಾಯ.

ಇನ್ನೊಂದೆಡೆ, ರಾಜ್ಯದ ಪಶ್ಚಿಮ ಘಟ್ಟ ಪ್ರದೇಶದಲ್ಲಿನ ಶೇ 60ಕ್ಕೂ ಹೆಚ್ಚು ಭಾಗವು ಸಂಭವನೀಯ ಭೂಕುಸಿತದ ಪ್ರದೇಶವಾಗಿದ್ದು, ರಾಜ್ಯದ ಏಳು ಜಿಲ್ಲೆಗಳಲ್ಲಿ ಭೂಕುಸಿತ ಸಾಧ್ಯತೆಗಳು ಇವೆ. ಈ ಪೈಕಿ ಅತಿ ಹೆಚ್ಚು ಭೂಕುಸಿತ ಸಾಧ್ಯತೆ ಇರುವುದು ಉತ್ತರ ಕನ್ನಡ ಜಿಲ್ಲೆಯಲ್ಲಿ ಎಂದು ಧಾರವಾಡ ಐಐಟಿ ವರದಿ ಎಚ್ಚರಿಸಿದೆ.

ಉತ್ತರ ಕನ್ನಡದಲ್ಲಿ ವಿಶೇಷವಾಗಿ ಕಾಂಡ್ಲಾ ವನ ವೃದ್ಧಿಯಾಗುತ್ತಿದ್ದು, 8.96 ಚ.ಕಿ.ಮೀ ವ್ಯಾಪಿಸಿದೆ. 2021ರಲ್ಲಿ ಜಿಲ್ಲೆಯಲ್ಲಿ 8.75 ಚ.ಕಿ.ಮೀ ಪ್ರದೇಶದಲ್ಲಿ ಕಾಂಡ್ಲಾ ವನ ಹಬ್ಬಿತ್ತು.

ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿ ಪ್ರಾದೇಶಿಕ ಅರಣ್ಯ ಇಲಾಖೆಯಡಿ ಆರು ಅರಣ್ಯ ವಲಯಗಳು ಮತ್ತು ಸಾಮಾಜಿಕ ಅರಣ್ಯ ಇಲಾಖೆಯ ಒಂದು ಅರಣ್ಯ ವಲಯವಿದೆ. ಕಳೆದ ಹತ್ತು ವರ್ಷಗಳಿಗೆ ಹೋಲಿಸಿದಾಗ ಪ್ರಾದೇಶಿಕ ವಲಯಗಳಲ್ಲಿ ಅರಣ್ಯದ ಪ್ರಮಾಣ 1,200 ಹೆಕ್ಟೇರ್ ಪ್ರದೇಶದಲ್ಲಿ ವೃದ್ಧಿಸಿದೆ. ಸಾಮಾಜಿಕ ಅರಣ್ಯ ಇಲಾಖೆಯಿಂದ ಸಾರ್ವಜನಿಕ ಸ್ಥಳಗಳಲ್ಲಿ, ರಸ್ತೆ ಪಕ್ಕದಲ್ಲಿ, ಸರ್ಕಾರಿ ಜಮೀನುಗಳಲ್ಲಿ ಒಟ್ಟು 40 ಸಾವಿರ ಸಸಿಗಳನ್ನು ನೆಡಲಾಗಿದೆ.

ವಿಜಯನಗರ ಜಿಲ್ಲೆಯಲ್ಲಿ 1.25 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯ ಇದೆ. ಜಿಲ್ಲೆಯಲ್ಲಿ ದಟ್ಟ ಅರಣ್ಯ ಪ್ರದೇಶ ತೀರಾ ಕಳವಳಕರ ರೀತಿಯಲ್ಲಿ ಕುಸಿದಿಲ್ಲ. ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ (ಕೆಎಂಇಆರ್‌ಸಿ), ನಗರ ಹಸಿರೀಕರಣ, ರಸ್ತೆ ಬದಿ ಗಿಡ ನೆಡುವುದು, ನರೇಗಾ ಯೋಜನೆ ಅಡಿಯಲ್ಲಿ ಪಾಳು ಭೂಮಿ ಹಸಿರೀಕರಣ ಯೋಜನೆಗಳಂತಹ ಕ್ರಮಗಳಿಂದ ಜಿಲ್ಲೆಯ ಹಸಿರು ಹೊದಿಕೆ ಕಡಿಮೆಯಾಗಿಲ್ಲ. ಮೇಲಾಗಿ ಜಿಲ್ಲೆಯಲ್ಲಿ ಗಣಿಗಾರಿಕೆ ಅಷ್ಟಾಗಿ ನಡೆಯುತ್ತಿಲ್ಲ. ಇದೆಲ್ಲಾ ಕಾರಣಕ್ಕೆ ಜಿಲ್ಲೆಯಲ್ಲಿ ಅರಣ್ಯಪ್ರದೇಶ ಕುಸಿದಿಲ್ಲ ಎಂದು ಇಲಾಖೆಯ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಪರಿಸರ ಸಂರಕ್ಷಣೆ ಬಗ್ಗೆ ನಿರಂತರ ಜಾಗೃತಿ ಮೂಡಿಸುತ್ತಿರುವುದರಿಂದ ದಾವಣಗೆರೆ ಹಾಗೂ ಪಕ್ಕದ ಚಿತ್ರದುರ್ಗ ಜಿಲ್ಲೆಗಳಲ್ಲಿ ಅರಣ್ಯದ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಆದರೆ, ಶಿವಮೊಗ್ಗ ಜಿಲ್ಲೆಯಲ್ಲಿ ಈ ಪ್ರಮಾಣ ಕುಸಿತದ ಹಾದಿ ಹಿಡಿದಿದೆ.

ಚಿತ್ರದುರ್ಗ ನಗರದಿಂದ 1 ಕಿ.ಮೀ. ಅಂತರದಲ್ಲಿರುವ ಜೋಗಿಮಟ್ಟಿ ಅರಣ್ಯ ಪ್ರದೇಶವನ್ನು 2015ರಲ್ಲಿ 'ವನ್ಯಜೀವಿ ಧಾಮ' ಎಂದು ಘೋಷಣೆ ಮಾಡಿದ ನಂತರ ಈ ಭಾಗದಲ್ಲಿ ಅರಣ್ಯದ ಪ್ರಮಾಣ ಹೆಚ್ಚಳವಾಗಿದೆ.

ಜೋಗಿಮಟ್ಟಿ ವನ್ಯಧಾಮ ಅಪರೂಪದ ಕುರುಚಲು ಕಾಡು ಎಂದು ಗುರುತಿಸಿಕೊಂಡಿದೆ. ಕರಡಿಗಳ ಅವಾಸಸ್ಥಾನವಾಗಿಯೂ ಪ್ರಸಿದ್ಧಿ ಪಡೆದಿದೆ. ವನ್ಯಜೀವಿ ಧಾಮ ಘೋಷಣೆಯ ನಂತರ ಸೀಳುನಾಯಿಗಳು ಕೂಡ ಪತ್ತೆಯಾಗಿವೆ. ವನ್ಯಜೀವಿ ಧಾಮ ಘೋಷಣೆಯ ನಂತರ ಜನ ಮತ್ತು ದನಕರುಗಳ ಓಡಾಟಕ್ಕೆ ನಿಯಂತ್ರಣ ಹೇರಲಾಗಿದ್ದು ಬೆಟ್ಟಗುಡ್ಡ ಪ್ರದೇಶದಲ್ಲಿ ಹಸಿರು ಹೆಚ್ಚಾಗಿದೆ.

ಅರಣ್ಯ ಇಲಾಖೆಯ ಸಾಮಾಜಿಕ ಅರಣ್ಯ ಯೋಜನೆಯಲ್ಲಿ ರಸ್ತೆ ಬದಿಯಲ್ಲಿ ನೆಡುತೋಪು ಪೋಷಿಸಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸಕ್ತ ವರ್ಷ ಒಟ್ಟು 133 ಕಿ.ಮೀ ಉದ್ದದ ರಸ್ತೆ ಬದಿಗಳಲ್ಲಿ ನೆಡುತೋಪು ಬೆಳೆಸಲಾಗಿದೆ. 39.50–ಹೆಕ್ಟೇರ್ ಪ್ರದೇಶದಲ್ಲಿ ಬ್ಲಾಕ್ ನೆಡುತೋಪುಗಳನ್ನು ಬೆಳೆಸಲಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿಯಲ್ಲೂ 18.75 ಕಿ.ಮೀ ಉದ್ದಕ್ಕೆ ರಸ್ತೆ ಬದಿ ನೆಡುತೋಪು ಬೆಳೆಸಲು ಉದ್ದೇಶಿಸಲಾಗಿದ್ದು, ಇದರಲ್ಲಿ 9 ಕಿ.ಮೀ ಉದ್ದಕ್ಕೆ ನೆಡುತೋಪನ್ನು ಬೆಳೆಸಲಾಗಿದೆ. ಒಟ್ಟಾರೆ ನೆಡುತೋಪು ಸಹ ಕಾಡು ಹೆಚ್ಚಳಕ್ಕೆ ಕಾರಣವಾಗಿದೆ.

ಪೂರಕ ಮಾಹಿತಿ: ಮಂಜುನಾಥ ಹೆಬ್ಬಾರ್, ಸುಮಾ ಬಿ., ಗಣೇಶ ಹೆಗಡೆ, ಸಂತೋಷ ಚಿನಗುಡಿ, ಪ್ರವೀಣ್ ಕುಮಾರ್ ಪಿ.ವಿ., ಬಾಲಕೃಷ್ಣ ಎಂ.ಜಿ, ವೆಂಕಟೇಶ್ ಜಿ.ಎಚ್.

ಮಲೆನಾಡಿಗೆ ಅಕೇಶಿಯಾ ಶಾಪ

ಶಿವಮೊಗ್ಗ: ಅಕೇಶಿಯಾ ಬೆಳೆ ಪ್ರದೇಶ ಹೆಸರಿಗಷ್ಟೇ ಅರಣ್ಯ. ಆ ಮರದಲ್ಲಿ ಪಕ್ಷಿಗಳು ಗೂಡು ಕಟ್ಟೊಲ್ಲ. ಪ್ರಾಣಿಗಳಿಗೂ ನೆಲೆ ಸಾಧ್ಯವಿಲ್ಲ. ಇನ್ನು ಅಕೇಶಿಯಾ ಬುಡದಲ್ಲಿ ಬೇರೆ ಗಿಡಗಳು ಇರಲಿ ಹುಲ್ಲು ಕೂಡ ಹುಟ್ಟುವುದಿಲ್ಲ. ನಮ್ಮ ಮಲೆನಾಡಿಗೆ ಅಕೇಶಿಯಾ ಶಾಪವಾಗಿದೆ ಎಂದು ಶಿವಮೊಗ್ಗದ 'ನಮ್ಮೂರಿಗೆ ಅಕೇಶಿಯಾ ಬೇಡ' ಸಂಘಟನೆಯ ಸಂಚಾಲಕ ಕೆ.ಪಿ.ಶ್ರೀಪಾಲ್ ಆಕ್ರೋಶ ವ್ಯಕ್ತಪಡಿಸುತ್ತಾರೆ.

ಶಿವಮೊಗ್ಗ–ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಅಕೇಶಿಯಾ ಬೆಳೆ ನಿಲ್ಲಿಸುವಂತೆ ಒತ್ತಾಯಿಸಿ 'ನಮ್ಮೂರಿಗೆ ಅಕೇಶಿಯಾ ಬೇಡ' ಸಂಘಟನೆ ಕಳೆದ ಐದು ವರ್ಷಗಳಿಂದ ಹೋರಾಟ ಕೈಗೆತ್ತಿಕೊಂಡಿದೆ.


ಕಾಗದ ಕಾರ್ಖಾನೆಗೆ ಗುತ್ತಿಗೆ: ಭದ್ರಾವತಿಯ ಮೈಸೂರು ಕಾಗದ ಕಾರ್ಖಾನೆಗೆ (ಎಂಪಿಎಂ) ಕಚ್ಚಾ ವಸ್ತುವಾದ ಅಕೇಶಿಯಾ ಬೆಳೆದುಕೊಳ್ಳಲು ರಾಜ್ಯ ಸರ್ಕಾರ 1980ರಲ್ಲಿ 33 ಸಾವಿರ ಹೆಕ್ಟೇರ್ ಅರಣ್ಯ ಪ್ರದೇಶವನ್ನು 40 ವರ್ಷಗಳ ಅವಧಿಗೆ ಗುತ್ತಿಗೆ ನೀಡಿತ್ತು. ಈ ಅರಣ್ಯ ಪ್ರದೇಶ ಶಿವಮೊಗ್ಗ ಜಿಲ್ಲೆ ಮಾತ್ರವಲ್ಲ ಅದರ ಒಂದಷ್ಟು ಭಾಗ ದಾವಣಗೆರೆ ಜಿಲ್ಲೆಯ ಚನ್ನಗಿರಿ, ಹೊನ್ನಾಳಿ ಹಾಗೂ ನ್ಯಾಮತಿ ತಾಲ್ಲೂಕು ಹಾಗೂ ಚಿತ್ರದುರ್ಗ ಜಿಲ್ಲೆಯ ಚನ್ನಗಿರಿ ತಾಲ್ಲೂಕಿಗೂ ವಿಸ್ತರಿಸಿದೆ. ಎಂಪಿಎಂ 2015ರಲ್ಲಿ ಬಾಗಿಲು ಹಾಕಿದೆ. ಆದರೆ ಅದಕ್ಕೆ ಕಚ್ಚಾ ವಸ್ತು ಅಕೇಶಿಯಾ ಬೆಳೆದುಕೊಳ್ಳಲು ಕೊಟ್ಟಿರುವ ಜಾಗ ಮಾತ್ರ ಈಗಲೂ ಎಂಪಿಎಂ ಅರಣ್ಯ ಎಂಬ ದಾಖಲೆಯಲ್ಲಿಯೇ ಇದೆ. ಜೊತೆಗೆ ಅರಣ್ಯ ಇಲಾಖೆ ಪ್ರತೀ ವರ್ಷ ಕೊಡುವ ಜಿಲ್ಲೆಯ ಅರಣ್ಯ ಪ್ರದೇಶದ ವಿಸ್ತರಣೆಯ ಪಟ್ಟಿಯಲ್ಲೂ ಇದು ಒಳಗೊಂಡಿರುತ್ತದೆ.

ಗುತ್ತಿಗೆ ಅವಧಿ ವಿಸ್ತರಣೆ: ರಾಜ್ಯ ಸರ್ಕಾರ ಕೊಟ್ಟಿದ್ದ ಗುತ್ತಿಗೆ ಅವಧಿ 2020ರ ಆಗಸ್ಟ್‌ಗೆ ಮುಕ್ತಾಯಗೊಂಡಿದೆ. ಅರಣ್ಯ ಭೂಮಿಯ ಗುತ್ತಿಗೆ ಅವಧಿಯೂ ಮುಗಿದಿದೆ. ಈಗ ಕಾರ್ಖಾನೆಯೂ ಚಾಲನೆಯಲ್ಲಿ ಇಲ್ಲ. ಹೀಗಾಗಿ ಮತ್ತೆ ಗುತ್ತಿಗೆ ಅವಧಿ ವಿಸ್ತರಣೆ ಬೇಡ. ಆ ಭೂಮಿಯನ್ನು ಮತ್ತೆ ಅರಣ್ಯ ಇಲಾಖೆಗೆ ಹಿಂದಿರುಗಿಸಿ ಅಲ್ಲಿರುವ ಅಕೇಶಿಯಾ ಮರಗಳನ್ನು ಕತ್ತರಿಸಿ ಅದರಲ್ಲಿ ಬರುವ ಆದಾಯದಿಂದ ಎಂಪಿಎಂ ಕಾರ್ಖಾನೆಯ ಸಾಲ (₹300 ಕೋಟಿ) ತೀರಿಸುವಂತೆ ಹಾಗೂ ಖಾಲಿ ಜಾಗದಲ್ಲಿ ನೈಸರ್ಗಿಕವಾಗಿ ಅರಣ್ಯ ಗಿಡಗಳ ಬೆಳೆಸಬೇಕು ಎಂದು 'ನಮ್ಮೂರಿಗೆ ಅಕೇಶಿಯಾ ಬೇಡ' ಸಂಘಟನೆ ಕಳೆದ ಐದು ವರ್ಷಗಳಿಂದ ಜಿಲ್ಲೆಯಲ್ಲಿ ಹೋರಾಟ ನಡೆಸುತ್ತಾ ಬಂದಿದೆ.

ಎಂಪಿಎಂಗೆ ಮಾತ್ರವಲ್ಲ. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮಕ್ಕೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಕೇಶಿಯಾ ಬೆಳೆಯಲು 10 ಸಾವಿರ ಹೆಕ್ಟೇರ್ ಅರಣ್ಯ ಪ್ರದೇಶವನ್ನು ಸರ್ಕಾರ ಕೊಟ್ಟಿದೆ. ಅದನ್ನು ವಾಪಸ್ ಪಡೆಯುವಂತೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ನಮ್ಮೂರಿಗೆ ಅಕೇಶಿಯಾ ಬೇಡ ಸಂಘಟನೆ ಹೋರಾಟ ಕೈಗೆತ್ತಿಕೊಂಡಿದೆ.

'ಪ್ರತೀ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜಾಥಾಗಳ ಕೈಗೆತ್ತಿಕೊಂಡು ಜನಜಾಗೃತಿ ಮೂಡಿಸಲಾಗಿದೆ. ಇದರ ಫಲವಾಗಿ ಹೊಸದಾಗಿ ಅಕೇಶಿಯಾ ನೆಡುವುದನ್ನು ನಿಲ್ಲಿಸಲಾಗಿದೆ' ಎಂದು ಶ್ರೀಪಾಲ್ ಹೇಳುತ್ತಾರೆ.

'ಅಕೇಶಿಯಾ ನೆಡುವುದು ನಿಲ್ಲಿಸಿದ ತಕ್ಷಣ ನಮ್ಮ ಹೋರಾಟ ನಿಲ್ಲಿಸಲ್ಲ. ಮತ್ತೆ 40 ವರ್ಷಗಳ ಅವಧಿಗೆ ಗುತ್ತಿಗೆ ಪ್ರಸ್ತಾವವನ್ನು ವಾಪಸ್ ಪಡೆಯುವಂತೆ ರಾಜ್ಯ ಸರ್ಕಾರದ ಮೇಲೆ ಒತ್ತಡ ಹಾಕುತ್ತಿದ್ದೇವೆ. ಪಶ್ಚಿಮಘಟ್ಟದ ಸೂಕ್ಷ್ಮ ಪರಿಸರಕ್ಕೆ ಮಾರಕವಾದ ಅಕೇಶಿಯಾ ಬೆಳೆಯನ್ನು ಮಲೆನಾಡಿನಿಂದ ಸಂಪೂರ್ಣ ಹೊರಗೆ ಹಾಕುವುದು ನಮ್ಮ ಹೋರಾಟದ ಅಂತಿಮ ಗುರಿ' ಎಂದು ಕೆ.ಪಿ. ಶ್ರೀಪಾಲ್ ಹೇಳುತ್ತಾರೆ.



ಕೋಟಿ ವೃಕ್ಷ ಅಭಿಯಾನಕ್ಕೆ ಜನ ಸಹಭಾಗಿತ್ವ

ಹಸಿರಾಗುತ್ತಿದೆ ವಿಜಯಪುರ

• ಬಸವರಾಜ್ ಸಂಪಳ್ಳಿ

ವಿಜಯಪುರ: ರಾಜ್ಯದಲ್ಲೇ ಅತೀ ಕಡಿಮೆ ಅಂದರೆ, ಕೇವಲ ಶೇ 0.17ರಷ್ಟು ಅರಣ್ಯ ಪ್ರದೇಶ ಇರುವ ವಿಜಯಪುರ ಜಿಲ್ಲೆಯಲ್ಲಿ ಕಳೆದ ಒಂದೂವರೆ ದಶಕದ ಈಚೆಗೆ ಅನುಷ್ಠಾನಗೊಂಡ ವಿವಿಧ ನೀರಾವರಿ ಯೋಜನೆಗಳು, ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ (ನರೇಗಾ), ಅರಣ್ಯ ಇಲಾಖೆಯ ಪ್ರೋತ್ಸಾಹ ಕಾರ್ಯಕ್ರಮ, ಸಚಿವ ಎಂ.ಬಿ.ಪಾಟೀಲ ಕೈಗೊಂಡ 'ಕೋಟಿ ವೃಕ್ಷ ಅಭಿಯಾನ' ಹಾಗೂ ಎಲ್ಲದಕ್ಕೂ ಹೆಚ್ಚಾಗಿ ಜನ ಸಹಭಾಗಿತ್ವದ ಫಲವಾಗಿ ಇದೀಗ ಶೇ 2ರಷ್ಟು ಭೂ ಪ್ರದೇಶ ಹಸಿರೀಕರಣವಾಗಿದೆ.

ಕೃಷ್ಣಾ, ಭೀಮಾ, ಡೋಣಿ ನದಿಗಳ ಹರಿವಿನಿಂದ ಕೂಡಿರುವ ಜಿಲ್ಲೆಯಾದರೂ ಸತತವಾಗಿ ಬರಗಾಲ ಎದುರಿಸುವ ಬಿಸಿಲು ನಾಡಾಗಿದೆ ವಿಜಯಪುರ. ಜಿಲ್ಲೆಯು ಕಡಿಮೆ ಮಳೆ ಬೀಳುವ ಪ್ರದೇಶವಾಗಿದೆ. ವಾರ್ಷಿಕ ಸರಾಸರಿ 529 ಮಿ.ಮೀ. ಮಳೆಯಾಗುತ್ತದೆ. ವರ್ಷದಲ್ಲಿ 37 ರಿಂದ 40 ದಿನಗಳು ಮಾತ್ರ ಮಳೆಗಾಲದ ದಿನಗಳಾಗಿವೆ.

ಜಿಲ್ಲೆಯ ಹವಾಮಾನ ಸಹ ಏಕಪ್ರಕೃತಿಯಿಂದ ಕೂಡಿದೆ. ಬೇಸಿಗೆಯಲ್ಲಿ 42.5 ಡಿಗ್ರಿ ಸೆಲ್ಸಿಯಸ್ ವರೆಗೂ ಉಷ್ಣಾಂಶವಿರುತ್ತದೆ. ಅಲ್ಲದೇ, ಅರಣ್ಯ ಪ್ರದೇಶವೂ ಕಡಿಮೆ. ದಶಕದ ಮೊದಲು ಅರಣ್ಯ ಇಲಾಖೆಯು ಪ್ರತಿ ವರ್ಷ ಆಚರಿಸುತ್ತಿದ್ದ ವನಮಹೋತ್ಸವದ ವೇಳೆಯಲ್ಲಿ ನೆಟ್ಟ ಲಕ್ಷಾಂತರ ಗಿಡಗಳು ನೀರು, ನಿರ್ವಹಣೆ, ರಕ್ಷಣೆ ಇಲ್ಲದೇ ಹೇಳ ಹೆಸರಿಲ್ಲದಂತಾಗುತ್ತಿದ್ದವು.

ಆಲಮಟ್ಟಿ ಜಲಾಶಯದಲ್ಲಿ ಕೃಷ್ಣಾ ನದಿ ನೀರು ಜಿಲ್ಲೆಯ ಕೆರೆಗಳಿಗೆ ತುಂಬಿಸಿದ ಬಳಿಕ ಅಂತರ್ಜಲ ಮಟ್ಟ ಹೆಚ್ಚಾಯಿತು, ನೀರು ಎಲ್ಲೆಂದರಲ್ಲಿ ಸಿಗತೊಡಗಿತು. ಪರಿಣಾಮ ರೈತರು ತಮ್ಮ ಹೊಲಗಳ ಬದುಗಳಲ್ಲಿ ಬಗೆಬಗೆಯ ಗಿಡಗಳನ್ನು ನೆಡತೊಡಗಿದರು. ಅಲ್ಲದೇ, ಪಾಳು ಬಿದ್ದಿದ್ದ ನೂರಾರು ಎಕರೆ ಹೊಲಗಳಲ್ಲಿ ಗಿಡಗಳನ್ನು ನೆಡತೊಡಗಿದರು. ಇದಕ್ಕೆ ಅರಣ್ಯ ಇಲಾಖೆ ನೆರವಾಯಿತು ಎನ್ನುತ್ತಾರೆ ಕೆಡಿಪಿಎನ್‌ಎಲ್ ಅರಣ್ಯ ವಿಭಾಗದ ಆರ್‌ಎಫ್‌ಒ ಮಹೇಶ ಪಾಟೀಲ.

ಕೆಬಿಜೆಎನ್‌ಎಲ್ ಅರಣ್ಯ ವಿಭಾಗ ಆಲಮಟ್ಟಿ ನರ್ಸರಿಯಲ್ಲಿ ಪ್ರತಿ ವರ್ಷ ಲಕ್ಷಾಂತರ (65 ಲಕ್ಷ) ಸಸಿಗಳನ್ನು ಬೆಳೆಸಿ ರೈತರಿಗೆ ರಿಯಾಯಿತಿ ದರದಲ್ಲಿ ವಿತರಿಸಲು ಆರಂಭಿಸಿತು. ಅಲ್ಲದೇ, 2010ರಿಂದ ಸಸಿ ನೆಟ್ಟು, ಅವುಗಳನ್ನು ಉಳಿಸಲು ವಿಶೇಷ ಆದ್ಯತೆ ನೀಡಿತು. ಅರಣ್ಯ ಇಲಾಖೆಯು (ಪ್ರಾದೇಶಿಕ ಅರಣ್ಯ ವಿಭಾಗ 43 ಲಕ್ಷ ಹಾಗೂ ಸಾಮಾಜಿಕ ಅರಣ್ಯ ವಿಭಾಗ 45 ಲಕ್ಷ ಸಸಿಗಳನ್ನು ಬೆಳೆಸಿತು) ಈ ಕಾರ್ಯಕ್ಕೆ ನರೇಗಾ ಯೋಜನೆ ಬೆನ್ನೆಲುಬಾಗಿ ನಿಂತಿತು. ಇದರಿಂದ ಪ್ರತಿ ವರ್ಷ ದೊಡ್ಡ ಮಟ್ಟದಲ್ಲಿ ಹಸಿರೀಕರಣ ಮಾಡಲು ಸಾಧ್ಯವಾಯಿತು ಎನ್ನುತ್ತಾರೆ ಮಹೇಶ ಪಾಟೀಲ.

ವಿಜಯಪುರ ಜಿಲ್ಲೆಯ ರೈತರು ಎಂದೂ ನೋಡದ, ಕೇಳದ, ಬೆಳೆಯದ ಗಿಡಗಳನ್ನು ಅರಣ್ಯ ಇಲಾಖೆ ಪರಿಚಯಿಸಿತು. ಅರಣ್ಯ ಇಲಾಖೆಯ ನೆರವು ಪಡೆದು ರೈತರು ಪಾಳೆ ಹಚ್ಚಿ ನಿಂತು, ಶ್ರೀಗಂಧ, ರಕ್ತ ಚಂದನ, ಸಾಗುವಾನಿ, ಮಾವು, ಹಲಸಿನ ಗಿಡಗಳನ್ನು ತೆಗೆದುಕೊಂಡು ಹೋಗಿ ತಮ್ಮ ಹೊಲಗಳಲ್ಲಿ ನೆಟ್ಟು ಪೋಷಿಸತೊಡಗಿದರು. ಅರಣ್ಯ ಇಲಾಖೆ ರೈತರಿಗೆ ಗುಣಮಟ್ಟದ ಸಸಿಗಳನ್ನು ಶೇ 70ರಷ್ಟು ರಿಯಾಯಿತಿ ದರದಲ್ಲಿ ವಿತರಿಸಿತು.

2015–16ರಲ್ಲಿ ಜಲ ಸಂಪನ್ಮೂಲ ಸಚಿವರಾಗಿದ್ದ ಎಂ.ಬಿ.ಪಾಟೀಲ ಅವರು ಜಿಲ್ಲೆಯಲ್ಲಿ ಅರಣ್ಯ ಪ್ರದೇಶ ಕಡಿಮೆ ಇರುವುದನ್ನು ಮನಗಂಡು 'ಕೋಟಿ ವೃಕ್ಷ ಅಭಿಯಾನ' ಆರಂಭಿಸಿದರು. ಈ ಅಭಿಯಾನದ ಪರಿಣಾಮ ಜಿಲ್ಲೆಯಲ್ಲಿ ಐದು ವರ್ಷಗಳಲ್ಲಿ ಒಂದು ಕೋಟಿ ವೃಕ್ಷ ನೆಟ್ಟು ಕಾಪಾಡಲಾಯಿತು. ಸಚಿವ ಪಾಟೀಲ ಅವರಿಂದ ಪ್ರೇರಿತರಾದ ಇತರ ಶಾಸಕರು, ಸಚಿವರು ಕೂಡ ತಮ್ಮ ಕ್ಷೇತ್ರಗಳಲ್ಲಿ ಕಾಡು ಬೆಳೆಸತೊಡಗಿದರು. 'ಇದೊಂದು ಟ್ರೆಂಡ್ ಆಗಿ ರೂಪುಗೊಂಡಿತು. ಪರಿಣಾಮ ಹಸಿರೀಕರಣ ಹೆಚ್ಚಾಗಿದೆ' ಎನ್ನುತ್ತಾರೆ ಅವರು.

ಜೊತೆಗೆ, ಕೂಡಗಿ ಎನ್‌ಟಿಪಿಸಿ (ರಾಷ್ಟ್ರೀಯ ಉಷ್ಣ ವಿದ್ಯುತ್ ಘಟಕ) ಯು ಜಿಲ್ಲೆಯಲ್ಲಿ ಹಸಿರೀಕರಣಕ್ಕೆ ಕೈಜೋಡಿಸಿತು. ತನ್ನ ಹತ್ತಾರು ಕೋಟಿ ಸಿಎಸ್‌ಆರ್ ಅನುದಾನವನ್ನು ವಿನಿಯೋಗಿಸಿತು. 'ಇದೆಲ್ಲದರ ಪರಿಣಾಮ ಅರಣ್ಯ ಪ್ರದೇಶ ಹೆಚ್ಚಳವಾಗತೊಡಗಿದೆ' ಎಂದು ತಿಳಿಸಿದರು.


ವಿಜಯಪುರ ಜ್ಞಾನ ಯೋಗಾಶ್ರಮದ ಸಿದ್ಧೇಶ್ವರ ಶ್ರೀಗಳು ತಮ್ಮ ಪ್ರವಚನದ ವೇಳೆ ಗಿಡಮರಗಳನ್ನು ಬೆಳೆಸಲು ಪ್ರೇರಣೆ ನೀಡಿದ ಪರಿಣಾಮ ಜಿಲ್ಲೆಯಲ್ಲಿ ನಡೆಯುವ ಬಹುತೇಕ ಮದುವೆ, ನಾಮಕರಣ ಮತ್ತಿತರ ಶುಭ ಕಾರ್ಯಗಳಲ್ಲಿ ಸಸಿಗಳನ್ನು ನೀಡುವ ಸಂಪ್ರದಾಯ ಹೆಚ್ಚಿತು. 'ಇದೆಲ್ಲದರ ಪರಿಣಾಮ ಜಿಲ್ಲೆ ನಿಧಾನವಾಗಿ ಹಸಿರಾಗತೊಡಗಿದೆ' ಎನ್ನುತ್ತಾರೆ ಅವರು.

6.5 ಸಾವಿರ ಹೆಕ್ಟೇರ್‌ನಲ್ಲಿ ಹಸಿರೀಕರಣ: ವಿಜಯಪುರ ಜಿಲ್ಲೆಯ ಆಲಮಟ್ಟಿಯಲ್ಲಿ 1300 ಹೆಕ್ಟೇರ್, ಭೂತನಾಳದಲ್ಲಿ 200 ಹೆಕ್ಟೇರ್, ಮಮದಾಪುರದಲ್ಲಿ 400 ಹೆಕ್ಟೇರ್, ಎನ್‌ಟಿಪಿಸಿ 100, ಬೇಗಂ ತಲಾಬ್ 100 ಹೆಕ್ಟೇರ್, ಮದಬಾವಿ, ಹಲಗಣಿ, ಬಬಲಾದ, ಸಾವಳಗಿ, ಮರಗೂರು, ಗೂಗಿಹಾಳ, ಬಿಜ್ಜರಗಿ, ತಂಗಡಗಿ, ಮಲಗಾಣ, ಚಿಕ್ಕರೂಗಿ ಸೇರಿದಂತೆ ಜಿಲ್ಲೆಯಲ್ಲಿ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಮತ್ತು ಜಿಲ್ಲಾ ರಸ್ತೆಗಳ ಇಕ್ಕೆಲಗಳಲ್ಲಿ, ವಿವಿಧ ಸಂಘ–ಸಂಸ್ಥೆ, ಇಲಾಖೆಯ ಖಾಲಿ ಜಾಗದಲ್ಲಿ ಕಳೆದ ಒಂದು ದಶಕದಲ್ಲಿ 6.5 ಸಾವಿರ ಹೆಕ್ಟೇರ್‌ನಲ್ಲಿ 1.5 ಕೋಟಿಗೂ ಅಧಿಕ ಸಸಿಗಳನ್ನು ನೆಟ್ಟು ಪೋಷಿಸಲಾಗುತ್ತಿದೆ ಎಂದು ವಿಜಯಪುರ ವಲಯ ಅರಣ್ಯಾಧಿಕಾರಿ (ಆರ್‌ಎಫ್‌ಒ) ಸಂತೋಷ ಆಜೂರ ತಿಳಿಸಿದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ (ಎಂಎನ್‌ಆರ್‌ಇಜಿ) ಅನುದಾನ, ಅರಣ್ಯ ಇಲಾಖೆ ಅನುದಾನ, ಎನ್‌ಟಿಪಿಸಿ ಸಿಎಸ್‌ಆರ್ ಅನುದಾನ, ರಾಜ್ಯ ಸರ್ಕಾರದ ವಿಶೇಷ ಅನುದಾನ ಸೇರಿದಂತೆ ಸುಮಾರು ₹100 ಕೋಟಿಗೂ ಅಧಿಕ ಹಣವನ್ನು ಜಿಲ್ಲೆಯ ಹಸಿರೀಕರಣಕ್ಕೆ ಈಗಾಗಲೇ ವಿನಿಯೋಗಿಸಲಾಗಿದೆ ಎಂದು ಹೇಳಿದರು.

ಹಸಿರು ಹೊದಿಕೆ ಹೆಚ್ಚಳ: 'ವಿಜಯಪುರ ಜಿಲ್ಲೆಯಲ್ಲಿ ಲಭ್ಯವಿರುವ ಕಂದಾಯ (ಸಿ ಮತ್ತು ಡಿ ವರ್ಗದ) ಜಮೀನುಗಳನ್ನು ಅರಣ್ಯ ಇಲಾಖೆಗೆ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಹಂಚಿಕೆ ಮಾಡುವಂತೆ ಕೋರಿದ ಹಿನ್ನೆಲೆಯಲ್ಲಿ ವಿಜಯಪುರ ಜಿಲ್ಲಾಧಿಕಾರಿಯವರು 187 ಹೆಕ್ಟೇರ್ ಅರಣ್ಯೇತರ ಪ್ರದೇಶವನ್ನು ಇಲಾಖೆಯ ಹೆಸರಿಗೆ ಇಂಡೀಕರಣಗೊಳಿಸುವ ಪ್ರಕ್ರಿಯೆ ಈಗಾಗಲೇ ಪ್ರಗತಿಯಲ್ಲಿದೆ. ಇದಲ್ಲದೇ, ವಿಜಯಪುರ ಜಿಲ್ಲೆಯಲ್ಲಿ 325 ಹೆಕ್ಟೇರ್ ಪರಿಭಾವಿತ ಅರಣ್ಯ ಪ್ರದೇಶವನ್ನು (ಡೀಮ್ಡ್) ಅಧಿಸೂಚಿತಗೊಳಿಸುವ ಪ್ರಕ್ರಿಯೆ ಕೂಡ ಜಾರಿಯಲ್ಲಿದೆ. ಇದರಿಂದ ಮುಂದಿನ ದಿನಗಳಲ್ಲಿ ಒಟ್ಟು 2318 ಹೆಕ್ಟೇರ್ ಅರಣ್ಯ ಪ್ರದೇಶ ಲಭ್ಯವಾಗುವುದರಿಂದ ಜಿಲ್ಲೆಯಲ್ಲಿ ಶೇ 2.07 ರಷ್ಟು ಹಸಿರು ಹೊದಿಕೆ ಹೆಚ್ಚಳವಾಗಲಿದೆ' ಎಂದು ಬೆಳಗಾವಿ ಅರಣ್ಯ ವಿಭಾಗದ ಸಿಎಫ್ ಮಂಜುನಾಥ ಚವ್ಹಾಣ ಖಚಿತಪಡಿಸಿದ್ದಾರೆ.


ಇಳಿದ ಬಿಸಿಲಿನ ಝಳ, ಏರಿದ ಮಳೆ ದಿನ



ಅದು 2016ನೇ ಇಸವಿ. ಇಡೀ ವಿಜಯಪುರ ಜಿಲ್ಲೆಯಲ್ಲಿ ಕೇವಲ ಶೇಕಡ 0.17ರಷ್ಟು ಮಾತ್ರ ಅರಣ್ಯ ಪ್ರದೇಶವಿದೆ ಎಂದು ತಿಳಿದಾಗ ಆಘಾತವಾಯಿತು. ಆಗ ಕೂಡಲೇ ಎಚ್ಚೆತ್ತುಕೊಂಡು ಬಿ.ಎಲ್.ಡಿ.ಇ ಅಸೋಸಿಯೇಷನ್ ನೇತೃತ್ವದಲ್ಲಿ ಪ್ರತಿಷ್ಠಾನವಾಗಿ ಹಲವು ಸಂಘಟನೆಗಳು ಮತ್ತು ಸರಕಾರಿ ಇಲಾಖೆಗಳ ಸಹಯೋಗದೊಂದಿಗೆ ವೃಕ್ಷಥಾನ್–ಕೋಟಿ ವೃಕ್ಷ ಅಭಿಯಾನ ರೂಪಿಸಲಾಯಿತು. ಪರಿಣಾಮವಾಗಿ ಒಂಬತ್ತು ವರ್ಷಗಳಲ್ಲಿ ಜಿಲ್ಲೆಯಲ್ಲಿ ಒಂದೂವರೆ ಕೋಟಿ ಗಿಡಗಳನ್ನು ನೆಡಲಾಗಿದೆ. ಜೊತೆಗೆ ಇವನ್ನೆಲ್ಲ ಹನಿ ನೀರಾವರಿ ಮೂಲಕ ಪೋಷಿಸಲಾಗಿದೆ. ಇದರಲ್ಲಿ ರೈತರನ್ನೂ ಸೇರಿಸಿಕೊಳ್ಳಲಾಗಿದ್ದು, ಅವರು ಕೇಳಿದ ಗಿಡಗಳನ್ನು ಪೂರೈಸಲಾಗುತ್ತಿದೆ. ಈ ಉಪಕ್ರಮದಿಂದ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ ಸುಧಾರಿಸಿದ್ದು, ಬಿಸಿಲಿನ ಝಳವು 0.5 ರಿಂದ 1.5 ಡಿ.ಸೆ.ನಷ್ಟು ಕಡಿಮೆಯಾಗಿದೆ. ಜೊತೆಗೆ ಸರಾಸರಿ ಮಳೆಯ ಪ್ರಮಾಣವು 550 ಮಿ.ಮೀ.ನಿಂದ 650 ಮಿ.ಮೀ.ಗೆ ಏರಿದೆ. ಜಿಲ್ಲೆಯ ಹಸಿರು ಕವಚ ಈಗ ಶೇಕಡ 2.4ರಷ್ಟಾಗಿದೆ. ಮುಂದಿನ ಐದು ವರ್ಷಗಳಲ್ಲಿ ಜಿಲ್ಲೆಯಲ್ಲಿ ಇನ್ನೂ 3.50 ಕೋಟಿ ಗಿಡಗಳನ್ನು ನೆಡಲಾಗುವುದು. ಈ ಮೂಲಕ ವೃಕ್ಷಥಾನ್ ಅಡಿಯಲ್ಲಿ ನಾವು ನೆಡುವ ಗಿಡಗಳ ಸಂಖ್ಯೆ 5 ಕೋಟಿ ಆಗಲಿದೆ. ಒಟ್ಟಾರೆಯಾಗಿ ಇದರಿಂದ ಮಣ್ಣಿನ ಸವಕಳಿ ತಡೆ ಬಿದ್ದಿದ್ದು, ಮರು ಅರಣ್ಯೀಕರಣ ಕೂಡ ಸಾಧ್ಯವಾಗಿದೆ. ಪರಿಸರವನ್ನು ಕಾಪಾಡಿಕೊಳ್ಳುವುದು ಹೀಗೆ ಒಂದು ಆಂದೋಲನವಾಗಿ, ಸಾಮೂಹಿಕ ಹೊಣೆಗಾರಿಕೆಯ ರೂಪ ಪಡೆದುಕೊಳ್ಳಬೇಕು. ಇಂತಹ ಒಂದು ಹೆಜ್ಜೆಯಿಂದ ವಿಜಯಪುರವು ಈಗ ಬರಪೀಡಿತ ಮತ್ತು ರಣಬಿಸಿಲಿನ ಪ್ರದೇಶ ಎನ್ನುವ ಕುಖ್ಯಾತಿ ಹಳೆಯ ಮಾತಾಗಿದ್ದು, ಈಗ ಹಸಿರಿನ ಕವಚ ಸೃಷ್ಟಿಯಾಗಿದೆ.

ಎಂ.ಬಿ.ಪಾಟೀಲ, ವಿಜಯಪುರ ಜಿಲ್ಲಾ ಉಸ್ತುವಾರಿ ಮತ್ತು ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 1-3-2001

• **ಬಜೆಟ್: ಉದ್ಯಮಿಗಳಿಗೆ ಉತ್ತೇಜನ–ರೈತರಿಗೆ ನಿರಾಶೆ**

ನವದೆಹಲಿ, ಫೆ.28– ಪರೋಕ್ಷ ತೆರಿಗೆ ವ್ಯವಸ್ಥೆಯಲ್ಲಿ ಸುಧಾರಣೆ, ಸೇವಾ ತೆರಿಗೆಯ ವ್ಯಾಪ್ತಿ ವಿಸ್ತರಣೆ, ಗುಜರಾತ್ ಸರ್ಚಾರ್ಜ್ ಹೊರತು ಪಡಿಸಿ ಉಳಿದೆಲ್ಲಾ ಸರ್ಚಾರ್ಜ್‌ಗಳ ರದ್ದತಿ, ಚಹಾ, ಕಾಫಿ, ತೆಂಗಿನಕಾಯಿ ಮತ್ತು ಕೊಬ್ಬರಿ ಆಮದು ಮೇಲಿನ ಕಸ್ಟಮ್ ಸುಂಕ ಏರಿಕೆ ಮತ್ತು ಹೆಚ್ಚಳ, ಬೀಡಿ, ಸಿಗರೇಟ್ ಮತ್ತು ಪಾನ್ ಮಸಾಲ ಮೇಲೆ ಹೆಚ್ಚಿನ ಸರ್ಚಾರ್ಜ್, ಸೂಪರ್ ಸಾಲದ ಬಡ್ಡಿ ದರ ಕಡಿತ, ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ರಾಜ್ಯಕ್ಕೆ ಹೆಚ್ಚಿನ ಹೊಣೆ.

75 ವರ್ಷಗಳ ಹಿಂದೆ

ಗುರುವಾರ, 1-3-1951

• **ಕೋಟಾ ನಿವಾರಣೆಗೆ ನಾನಾ ತೆರಿಗೆಗಳ ಏರಿಕೆಯ ಹೊರೆ**

ನವದೆಹಲಿ, ಫೆ.28– 1951–52ನೇ ಸಾಲಿನಲ್ಲಿ 5.54 ಕೋಟಿ ರೂಪಾಯಿಗಳ ಖೋತಾ ನಿರೀಕ್ಷಿಸಲಾಗಿದೆ ಎಂಬುದಾಗಿ ಅರ್ಥ ಸಚಿವ ಶ್ರೀ ಚಿಂತಾಮಣ್ ದೇಶಮುಖ್ ಅವರು ಇಂದು ಪಾರ್ಲಿಮೆಂಟ್‌ಗೆ ತಿಳಿಸಿದರು.

1950–51ರ ಆಯವ್ಯಯದ ಪುನರ್ ವಿಮರ್ಶೆ, ಮುಂದಿನ ನಿರೀಕ್ಷೆಯಂತೆ 71 ಲಕ್ಷ ರೂ. ಹೆಚ್ಚುವರಿಯ ಬದಲು 793 ಕೋಟಿ ರೂ.ಗಳ ಹೆಚ್ಚುವರಿಯನ್ನು ತೋರಿಸುತ್ತದೆ. ವರ್ಷದ ಆದಾಯ 387.21 ಕೋಟಿ ರೂ.ಗಳಿಂದ ವೆಚ್ಚ 379.28 ಕೋಟಿ ರೂ.ಗಳಿಂದ ಅಂದಾಜಾಗಿದೆ.

ದಿನ ಭವಿಷ್ಯ

ವಿದ್ವಾಂಶಂಕರ ಸೋಮಯಾಜಿ, ಕಮ್ಮರಡಿ

01 ಮಾರ್ಚ್ 2026 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ತ್ರಯೋದಶಿ ಗಂ. 19-10, **ನಕ್ಷತ್ರ:** ಪುಷ್ಯ ಗಂ. 8-35, **ಯೋಗ:** ಶೋಭನ ಗಂ. 14-33, **ಕರಣ:** ಕೌಲವ ಗಂ 7-55 ಶುಭವಾರದ 16 ನೇ ದಿನ. **ಮಳೆ ನಕ್ಷತ್ರ:** ಶತಭಿಷ 4 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 – 06-00, **ಸೂರ್ಯೋದಯ:** 06-50, **ಸೂರ್ಯಾಸ್ತ:** 06-36, **ಮುಸ್ಸಂಜೆ ನಾಳಿಕ:** 11 ರಂಜಾನ್, **ಅದೃಷ್ಟ ಸಂಖ್ಯೆ:** 11, 7.

ಮೇಷ: ಕಾರ್ಯಕ್ಷೇತ್ರದಲ್ಲಿ ವಿಚ್ಛಿದ್ರ ವಹಿಸದೆ ಅತಿಯಾದ ಆತ್ಮವಿಶ್ವಾಸ, ಎಲ್ಲವೂ ತಿಳಿದಿದೆ ಎಂಬ ಅಹಂಕಾರ ಮುಂದುವರಿದರೆ ಅಧಿಕಾರ ವರ್ಗದವರಿಂದ ಕಷ್ಟ–ನಷ್ಟ ಮತ್ತು ಸ್ಥಾನಮಾನಕ್ಕೆ ಹಾನಿಯಾಗುವ ಸನ್ನಿವೇಶ ಬರುವುದು.

ವೃಷಭ: ಕಾಯಿಗಳ ಒತ್ತಡದ ನಡುವೆ ಕುಟುಂಬದ ಸಮಸ್ಯೆಯತ್ತ ಗಮನ ನೀಡಿ. ಕಟ್ಟಡದ ಕಂಟ್ರಾಕ್ಟರ್‌ಗಳಿಗೆ ಕೆಲಸಗಾರರ ಕೊರತೆ ಕಾಡಲಿದೆ. ಸಮಸ್ಯೆಗಳು ಹೆಚ್ಚುವುದಕ್ಕೆ ಮುಂಚಿತವಾಗಿಯೇ ಜಾಣ್ಮೆಯಿಂದ ಪರಿಹರಿಸಿಕೊಳ್ಳಿ.

ಮಿಥುನ: ನಿಮ್ಮ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯ ಸಮ್ಮತವಾಗಿ ಬಗೆಹರಿಸಿಕೊಳ್ಳುವಲ್ಲಿ ಯಶಸ್ಸು ಲಭಿಸುವುದು. ಕಾರ್ಯಕ್ಷೇತ್ರದಲ್ಲಿ ಶತ್ರುಗಳ ಹಿನ್ನಡೆ ಅನುಭವಿಸಿ ಮನಸ್ಸಿಗೆ ಸಮಾಧಾನ ದೊರಕಲಿದೆ.

ಕರ್ಕಾಟಕ: ದಿನಸಿ ವರ್ತಕರು ಹೆಚ್ಚಿನ ಬಂಡವಾಳ ಹಾಕುವ ಬಗ್ಗೆ ಸಂಶಯ ಬೇಡ. ರಾಜಕೀಯ ವಿದ್ಯಮಾನಗಳಿಂದಾಗಿ, ಸಾಮಾಜಿಕ ಕೆಲಸಗಳಿಗಾಗಿ ಓಡಾಟ. ನಿಮ್ಮ ನಿಷ್ಠುರದಿಂದ ಧರ್ಮಾರ್ಥಗಳಿಗೆ ಅಡ್ಡಿಯಾಗಲಿದೆ.

ಸಿಂಹ: ಸಂದರ್ಭಕ್ಕೆ ಅನುಗುಣವಾಗಿ ಹೇಗೆ ವರ್ತಿಸಬೇಕೆಂಬ ಪಾಠ ಇಂದು ಆಗಲಿದೆ. ನಿಮ್ಮ ಸಹಭಾಗಿತ್ವ ಅಥವಾ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ಹೆಚ್ಚಿನ ಆನಂದ ಸಿಗುವುದು.

ಕನ್ಯಾ: ಮೇಲಧಿಕಾರಿಗಳ ಒತ್ತಾಯಕ್ಕೆ ಮಣಿದು ಕೆಲಸದಲ್ಲಿ ಸತ್ಯ ಮಾರ್ಗವನ್ನು ಬಿಡಬೇಕಾದ ಪರಿಸ್ಥಿತಿ ಎದುರಾಗಬಹುದು. ಸೋದರಿಯ ಹಿತ್ಸದ ನಿಮ್ಮ ಗುಣವು ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡಿಸುವುದು.

ತುಲಾ: ನಿಮ್ಮ ಬುದ್ಧಿವಂತಿಕೆಗೆ ಅಕ್ಕಪಕ್ಕದವರಿಂದ ಅಥವಾ ಪಾಲುದಾರರಿಂದ ಉತ್ತಮ ಪ್ರೋತ್ಸಾಹ ದೊರೆಯಲಿದೆ. ತೆರಿಗೆ ಪಾವತಿಯ ವಿಚಾರದಲ್ಲಿ ಹಿರಿಯರ ಸಲಹೆ ಕೇಳುವುದು ಸರಿ ಎನಿಸಲಿದೆ.

ವೃಶ್ಚಿಕ: ವ್ಯವಹಾರದಲ್ಲಿ ವಿಶೂತನ ತಿರುವು ಸಿಕ್ಕಿ, ನಿಮ್ಮ ಆಲೋಚನೆಗಳಲ್ಲಿ ವ್ಯತ್ಯಾಸವಾಗಬಹುದು. ಬೆಸ್ತ ಕೊಡುವ ಕಾಣಿಕೆಯಿಂದ ವೈದ್ಯರನ್ನು ಭೇಟಿ ಮಾಡಿ. ನ್ಯಾಶಿಕರಿಗೆ ಸವಾಲೊಡ್ಡುವ ಸನ್ನಿವೇಶಗಳು ಎದುರಾಗುವುದು.

ಧನು: ನಿಮ್ಮ ಸುತ್ತಮುತ್ತಲಿನವರ ಬಗ್ಗೆ ನೀವು ಪೌರುಷದಿಂದಿರುವುದು ನಿಮ್ಮ ವ್ಯಕ್ತಿತ್ವಕ್ಕೆ ಶೋಭೆ ತರುವುದು. ಸೋದರ ಬಂಧುತ್ವದ ಬೆಸುಗೆ ಸಾಂಸಾರಿಕವಾಗಿ ಹೆಚ್ಚು ಫಲ ನೀಡುವುದು. ಆಹಾರವನ್ನು ಹಾಳು ಮಾಡುವುದು ಸರಿಯಲ್ಲ.

ಮಕರ: ಕಳೆದ ವಾರದ ನಿಮ್ಮ ಎಲ್ಲ ಕೆಲಸಗಳು ಪೂರ್ಣಗೊಂಡು ಹೆಚ್ಚು ಆದಾಯ ಪಡೆದುಕೊಳ್ಳುವಿರಿ. ಸಂಘ–ಸಂಸ್ಥೆಯಲ್ಲಿ ಜವಾಬ್ದಾರಿಯುತವಾದ ಸ್ಥಾನಮಾನ ಲಭ್ಯವಾಗುವುದು. ಅಭ್ಯರ್ಥ ಶಯನರಹಿತ ವಿಶೇಷ ದಿನ.

ಕುಂಭ: ನಿರುದ್ಯೋಗಿಗಳಿಗೆ ಅನಿರೀಕ್ಷಿತವಾಗಿ ಲಿಖಿತ ಪತ್ರಗಳ ಜವಾಬ್ದಾರಿ ನೋಡುವ ಉದ್ಯೋಗ ಪ್ರಾಪ್ತಿಯಾಗುತ್ತದೆ. ಹಣ್ಣು–ಹೂವು ಮಾರಾಟಗಾರರಿಗೆ ಅಧಿಕ ಲಾಭದ ನಿರೀಕ್ಷೆ ಸರಿಯಲ್ಲ. ಸಮಾಜ ಸೇವೆಯಲ್ಲಿ ನಿಮ್ಮ ಶ್ರಮವಿರಲಿ.

ಮೀನ: ವೈಯಕ್ತಿಕ ವಿಷಯಗಳನ್ನು ಅಪ್ಪರಲ್ಲಿ ಹಂಚಿಕೊಳ್ಳಲು ಸಮಯ ಕೂಡಿ ಬಂದಿದೆ. ವಿವಾಹ ಸಂಬಂಧಗಳಿಂದ ಕುಟುಂಬದ ಆನಂದ ಕೂಡಿರುಗಳು ಪರಿಹಾರವಾಗಲಿವೆ. ಸಾಂಕ್ರಾಮಿಕ ರೋಗ ಕಾಣಿಸಿಕೊಳ್ಳಬಹುದು.

ಪದಬಂಧ 6330

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಮಾನವೀಯತೆ ಬೆಂದು ಮಾಡಿರುವ ಹೋಲಿಕೆ (4)
3. ಅಂತ್ಯವು ಈ ರೀತಿ ಬಂದಿದೆ (4)
5. ಆಕಾಶ ಇಲ್ಲಿ ಕಾಣುತ್ತಿದೆ (5)
6. ತರಲೆಯು ತಿರುವಿದು! (2)
7. ಕೆಲಸಕ್ಕೆ ಬಾರದ ಮಾತಿದು (5)
10. ಕೆಡುಕಾಗಲೆಂದು ಬಯಸಿ ಹೇಳುವ ಮಾತು (2)
12. ಒಡೆಯಲ್ಪಡುದು ಇದು (3)
14. ಈತ ಅದೃಷ್ಟವಿಲ್ಲದವನು (4)
15. ವನದಲ್ಲಿ ಕಂಡ ಬೆಳವಣಿಗೆ (4)

ಮೇಲಿಂದ ಕೆಳಕ್ಕೆ

1. ಏನಿವಾರ ಇಲ್ಲಿದೆ (4)
2. ಹಳೆಯದನ್ನು ಪುನಃ ಹೊಸತು ಮಾಡುವಿಕೆ (5)
3. ಹಿರಿಯ ಸಹೋದರನಿವನು (2)
4. ಹೊಸದಾಗಿ ಅಭಿನಯಿಸುತ್ತಿರುವವಳು (4)
5. ಇಲ್ಲಿ ಗದ್ದಲವಿದೆ (3)
7. ನೆನಪು ಮಾಡಿಕೊಂಡು ತೋರಿದ ಬಿನ್ನಾಣ (3)
8. ಬೆಳ್ಳಿ ಹಬ್ಬವಿದು (5)
9. ಮಾನವಂತನ ಮೇಲೆಯೇ ಈ ಸಂದೇಹ! (4)
11. ಸಂಪೂರ್ಣವಾದ ಅರಿವು (4)
13. ತೊಂದರೆ ಹೀಗೆ ಬಂದಿದೆ (2)

1		2		3			4
					5		
6							
		7		8			
						10	11
12							
			13				
14				15			

6329ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1. ಗುಡವಾರ 3. ಬಾಲರವಿ 5. ವಿಷಲ 6. ಕಿಲಾಸ 8. ಸಂಪತ್ತು 9. ಜಳಕ 10. ವಾದನೆ 11. ಅಯಣ 12. ಕಸಿತ 14. ಹವೀಜಾ 16. ಕವಣೆಗೆ 17. ಗಡಗಸ

ಮೇಲಿಂದ ಕೆಳಕ್ಕೆ: 1. ಗೂಡಿರೆ 2. ವಿ 3. ಬಾಲ 4. ವಿವಾದ 7. ಸಮೀಕರಣ 8. ಸಂಭ್ರಾವವಣ 11. ಅಪ್ಪತ 13. ಕಿಸಸ 14. ಹಗ 15. ಜಗ

ಸುಡೊಕು 6714

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		5	6		2			3
	3				4	6	8	
6				1			5	
	8	3		6				4
1				4				8
2			8		1	5	6	
					3			
4		2		9			3	1
	1		4		6			5

6713 ಸುಡೊಕು

8	7	6	1	4	9	3	2	5
1	3	4	5	2	7	8	6	9
5	9	2	6	3	8	7	4	1
2	1	5	9	7	3	6	8	4
6	4	7	8	1	2	9	5	3
3	8	9	4	5	6	1	7	2
9	2	8	3	6	5	4	1	7
7	6	1	2	9	4	5	3	8
4	5	3	7	8	1	2	9	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074, News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without written permission is prohibited. To know more about The Printers (Mysore) Private Ltd, visit www.printersmysore.com.

‘ಬುಕ್ ಬ್ರಹ್ಮ’ ಕಥಾ ಸ್ಪರ್ಧೆಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬುಕ್ ಬ್ರಹ್ಮ ಸ್ವಾತಂತ್ರ್ಯೋತ್ಸವ ಕಥಾ ಸ್ಪರ್ಧೆ’ಗೆ ಲೇಖಕ, ಲೇಖಕಿಯರಿಂದ ಕಥೆಗಳನ್ನು ಆಹ್ವಾನಿಸಲಾಗಿದೆ.

ಪ್ರಥಮ ಬಹುಮಾನ ₹50 ಸಾವಿರ, ದ್ವಿತೀಯ ಬಹುಮಾನ ₹25 ಸಾವಿರ ಹಾಗೂ ತೃತೀಯ ಬಹುಮಾನ ₹15 ಸಾವಿರ ನೀಡಲಾಗುತ್ತದೆ. ಉಳಿದಂತೆ ಐದು ಕಥೆಗಳಿಗೆ ತಲಾ ₹5 ಸಾವಿರ ಸಮಾಧಾನಕರ ಬಹುಮಾನ ಹಾಗೂ ಅಂತಿಮ ಸುತ್ತಿಗೆ ಆಯ್ಕೆಯಾಗುವ ಉಳಿದ 17 ಕಥೆಗಳಿಗೆ ತಲಾ ₹2 ಸಾವಿರ ಗೌರವಧನ ನೀಡಲಾಗುವುದು. ಆಯ್ಕೆಯಾದ ಒಟ್ಟು 25 ಕಥೆಗಳನ್ನು ಒಳಗೊಂಡ ಪುಸ್ತಕವನ್ನು ಪ್ರಕಟಿಸಲಾಗುವುದು ಎಂದು ಆಯೋಜಕರು ತಿಳಿಸಿದ್ದಾರೆ.

ಕಥೆಯು ಸ್ವತಂತ್ರವಾಗಿರಬೇಕು. ಮೇ 15ರ ಒಳಗೆ ಕಥೆಗಳನ್ನು ಕಳುಹಿಸಬೇಕು. ಜುಲೈ 6ರಂದು ಅಂತಿಮ ಸುತ್ತಿನ 25 ಕಥೆಗಳ ಪಟ್ಟಿಯನ್ನು ಪ್ರಕಟಿಸಲಾಗುವುದು.

ಕಥೆಗಳನ್ನು ಇ-ಮೇಲ್ ಮೂಲಕ (ನುಡಿ/ಯೂನಿಕೋಡ್ ಫಾಂಟ್ ಬಳಸಿ ಟೈಪ್ ಮಾಡಿದ ಪ್ರತಿ) bbks2026@bookbrahma.com ಅಥವಾ ಹಸ್ತಪ್ರತಿಯನ್ನು ಪ್ರಧಾನ ಸಂಪಾದಕರು, ಬುಕ್ ಬ್ರಹ್ಮ ಕನ್ನಡ ಮೂರನೇ ಮಹಡಿ, ಆರ್. ಕೆ. ಕಾಂಪ್ಲೆಕ್ಸ್, ಕೆಎಸ್‌ಎಸ್‌ಐಡಿಸಿ ಆವರಣ, ಎಲೆಕ್ಟ್ರಾನಿಕ್ಸ್ ಸಿಟಿ, ಮೊದಲ ಹಂತ, ಬೆಂಗಳೂರು-560100 ಕ್ಕೆ ಕಳುಹಿಸಿಕೊಡಬಹುದು. ವಿವರಗಳಿಗೆ ಸಂಪರ್ಕಿಸಿ: 8495024253

ಚಿಟಿಕೆ ಸುದ್ದಿ

ಹೃದಯಾಘಾತ: ಪಿಯುಸಿ ವಿದ್ಯಾರ್ಥಿನಿ ಸಾವು

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ಪಟ್ಟಣದ ಸಿ.ಎಸ್.ಎಸ್. ಪಿಯು ಕಾಲೇಜಿನ ಕಲಾ ವಿಭಾಗದ ದ್ವಿತೀಯ ವರ್ಷದ ವಿದ್ಯಾರ್ಥಿನಿ ಭೂಮಿಕಾ ಕರೆಪ್ಪ ಮಾಳಿಂಗೆ (17) ಹೃದಯಾಘಾತದಿಂದ ಶನಿವಾರ ನಿಧನರಾದರು.



ಭೂಮಿಕಾ ಮಾಳಿಂಗೆ

‘ತಾಲ್ಲೂಕಿನ ಬಂಬಲವಾಡ ಗ್ರಾಮದ ಭೂಮಿಕಾ ಅಭ್ಯಾಸ ಪೂರ್ಣಗೊಳಿಸಿ ಸ್ನಾನಕ್ಕೆ ಸಿದ್ಧವಾಗುತ್ತಿದ್ದ ವೇಳೆ ಹೃದಯಾಘಾತವಾಗಿದೆ. ಅವರು ದ್ವಿತೀಯ ಪಿಯು ಪರೀಕ್ಷೆ ತೆರಳಬೇಕಿತ್ತು’ ಎಂದು ಮೂಲಗಳು ತಿಳಿಸಿವೆ.

ಅತ್ಯಾಚಾರ: 20 ವರ್ಷ ಜೈಲು

ಧಾರವಾಡ: 12 ವರ್ಷದ ಬಾಲಕಿಯ ಅತ್ಯಾಚಾರ ಪ್ರಕರಣದಲ್ಲಿ ಕಲಘಟಗಿ ತಾಲ್ಲೂಕಿನ ನೆಲ್ಲಿಹರವಿ ತಾಂಡಾದ ಉಮೇಶ ರತ್ನಪ್ಪ ಲಮಾಣಿ (30) ಎಂಬಾತನಿಗೆ 20 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಮತ್ತು ₹ 60,500 ದಂಡ ವಿಧಿಸಿ ನಗರದ 2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ವಿಶೇಷ ಪೊಕ್ಸೊ ಕೋರ್ಟ್ ಆದೇಶಿಸಿದೆ.

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆಯಡಿ (ಪೊಕ್ಸೊ) ಶಿಕ್ಷೆ ವಿಧಿಸಲಾಗಿದೆ. ದಂಡದ ಮೊತ್ತ ಮತ್ತು ₹ 6 ಲಕ್ಷ ಪರಿಹಾರವನ್ನು ಸಂತ್ರಸ್ತ ಬಾಲಕಿಗೆ ನೀಡುವಂತೆ ನ್ಯಾಯಾಧೀಶ ರಾಜಕುಮಾರ.ಸಿ ಆದೇಶಿಸಿದ್ದಾರೆ.

ಏನಿದು ಪ್ರಕರಣ?: 2022 ಆಗಸ್ಟ್ 16ರಂದು ಬಸ್ ನಿಲ್ದಾಣದಲ್ಲಿ ನಿಂತಿದ್ದ ಬಾಲಕಿಯನ್ನು ಉಮೇಶ ಬೈಕ್‌ನಲ್ಲಿ ಕರೆದೊಯ್ದು ಕೃತ್ಯ ಎಸಗಿದ್ದ. ಈ ಕುರಿತು ಕಲಘಟಗಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ನಕಲಿ ಜಿಪಿಎಸ್ ದಾಖಲೆ: 13 ಮಂದಿ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಹೊನ್ನಾವರ (ಉತ್ತರ ಕನ್ನಡ): ಅರಣ್ಯ ಭೂಮಿಗೆ ನಕಲಿ ಜಿಪಿಎಸ್ ದಾಖಲೆ ಸೃಷ್ಟಿಸಿದ ಪ್ರಕರಣದಲ್ಲಿ ಭಟ್ಕಳ ತಾಲ್ಲೂಕು ಬೆಳಕೆ ಅರಣ್ಯ ವಲಯದ ವನಪಾಲಕ ಮಹಾಬಲ ಮಂಜುಗೌಡ ಸೇರಿ 13 ಮಂದಿ ವಿರುದ್ಧ ಹೊನ್ನಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಲವಳ್ಳಿಯ ಅರಣ್ಯ ಭೂಮಿಯನ್ನು ಮಂಜೂರು ದುರುದ್ದೇಶದಿಂದ ನಕಲಿ ದಾಖಲೆ ಸೃಷ್ಟಿಸಿದ್ದ 8 ಮಂದಿ, ಇದಕ್ಕೆ ಸಹಕರಿಸಿದ್ದ ಸಮಾಜ ಕಲ್ಯಾಣ ಇಲಾಖೆಯ ಇಬ್ಬರು ಸಿಬ್ಬಂದಿ ಸಹಿತ ನಾಲ್ವರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ವನಪಾಲಕ ಮಹಾಬಲ ಗೌಡ ನಕಲಿ ಜಿಪಿಎಸ್ ತೆಗೆದು ಕೊಟ್ಟಿದ್ದಾರೆ. ಮಂಕಿ ಲಕೋಟಕೇರಿಯ ನಾಗೇಶ ನಾಯ್ಕ ನಕಲಿ ನಕಾಶೆ ಸಿದ್ಧಪಡಿಸಿದ್ದಾರೆ’ ಎಂದು ಆರ್‌ಎಫ್‌ಒ ಸವಿತಾ ದೇವಾಡಿಗ ತಿಳಿಸಿದ್ದಾರೆ.

‘ವಲಯ ಅರಣ್ಯಾಧಿಕಾರಿ ಕಚೇರಿಯ ನಕಲಿ ಸೀಲು ಬಳಸಿ, ದಾಖಲೆಗೆ ಮೊಹರು ಹಾಕಲಾಗಿದೆ. ಈ ದಾಖಲೆಯನ್ನು ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿ ಭಾಸ್ಕರ ಗೌಡ ಮತ್ತು ಮಾಸ್ತಿ ಗೊಂಡ ಇಲಾಖೆಯ ಕಚೇರಿಯಲ್ಲಿನ ಅರಣ್ಯ ಹಕ್ಕು ಸಮಿತಿಯ (ಎಫ್‌ಆರ್‌ಸಿ) ಹಳೆಯ ಕಡತಕ್ಕೆ ಸೇರಿಸಿದ್ದಾರೆ’ എಂದು ವಿವರಿಸಿದ್ದಾರೆ.

‘ಭಾರತ ಕಥಾಮಂಜರಿ’ ಮರುಮುದ್ರಣ

38 ವರ್ಷದ ನಂತರ ಮುದ್ರಣಕ್ಕೆ ದಾನಿಗಳ ನೆರವು – ಮಾರ್ಚ್ 5ಕ್ಕೆ ಬಿಡುಗಡೆ

● ಕೆ.ನರಸಿಂಹಮೂರ್ತಿ

ಮೈಸೂರು: ಕುಮಾರವ್ಯಾಸ ಮಹಾಕವಿಯ ಜನಪ್ರಿಯ ‘ಕರ್ನಾಟ ಭಾರತ ಕಥಾಮಂಜರಿ’ ಕಾವ್ಯ ಕೃತಿಯನ್ನು 38 ವರ್ಷಗಳ ನಂತರ ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗವು ದಾನಿಗಳ ನೆರವಿನಿಂದ ಪ್ರಕಟಿಸಿದೆ. ಸುದೀರ್ಘ ಅವಧಿಯ ಬಳಿಕ ಈ ಕೃತಿಯು 4ನೇ ಮುದ್ರಣ ಕಾಣುತ್ತಿದೆ.

1958ರಲ್ಲಿ ಮೈಸೂರು ಸರ್ಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ಮೂಲಕ ಮೊದಲ ಮುದ್ರಣ ಕಂಡಾಗ ಈ ಕೃತಿಯ ಬೆಲೆ ಕೇವಲ ₹2. ನಂತರ 1974, 1988ರಲ್ಲಿ ಪ್ರಸಾರಾಂಗವೇ ಮುದ್ರಿಸಿತ್ತು.


ಈಗ 740 ಪುಟಗಳ, 8,500 ಷಟ್ಪದಿಗಳಿರುವ ಈ ಕೃತಿಯ ಬಿಡುಗಡೆ ಕಾರ್ಯಕ್ರಮ ಮಾರ್ಚ್ 5ರಂದು ಪ್ರಸಾರಾಂಗದಲ್ಲೇ ನಡೆಯಲಿದೆ.

ಮುಖ್ಯಾಂಶಗಳು

- ಪ್ರಸಾರಾಂಗದ ಮಹತ್ವದ ಪ್ರಕಟಣೆ
- ದಾನಿ ನೆರವಿನಿಂದ ಮರುಮುದ್ರಣ

₹150 ಮುಖಬೆಲೆಯ ಕೃತಿಯು ಅಂದು ₹ 120ಕ್ಕೆ ಸಿಗಲಿದೆ. ಕಾವ್ಯವನ್ನು ಹಲವರು ಸಂಪಾದಿಸಿ ಪ್ರಕಟಿಸಿದ್ದರೂ ಈ ಕೃತಿಗೆ ಅವೆಲ್ಲಕ್ಕಿಂತ ಹೆಚ್ಚಿನ ಬೇಡಿಕೆ ಇದೆ.

ಪ್ರಸಾರಾಂಗದ ಮುದ್ರಣಾಲಯದಲ್ಲೇ ಉಳಿದಿದ್ದ ಕೃತಿಯ ಕರಡನ್ನು ಪ್ರೊ.ಕೃಷ್ಣಮೂರ್ತಿ ಹನೂರು ತಿದ್ದಿದ್ದಾರೆ. ನ್ಯೂಯಾರ್ಕ್‌ನ ಸ್ಟೋನಿಬ್ರೂಕ್ ವಿ.ವಿಯ ಭಾರತೀಯ ಅಧ್ಯಯನ ಕೇಂದ್ರದ ಮುಖ್ಯಸ್ಥ ಎಸ್.ಎನ್. ಶ್ರೀಧರ ಅವರು ಆರ್ಥಿಕ ನೆರವು ನೀಡಿದ್ದಾರೆ. ನಗರದ ಸಂವಹನ ಪ್ರಕಾಶನದ ಡಿ.ಎನ್.ಲೋಕಪ್ಪ ಮುದ್ರಿಸಿದ್ದಾರೆ.



ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಸಂಪಾದಕತ್ವದಲ್ಲಿ ಪ್ರಕಟವಾಗಿದ್ದ ಕುಮಾರವ್ಯಾಸನ ‘ಕರ್ಣಾಟ ಭಾರತ ಕಥಾಮಂಜರಿ’

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಪ್ರೊ.ಹನೂರು, ‘1850ರಿಂದ 1990ರವರೆಗೆ ಕುಮಾರವ್ಯಾಸನ ಕಾವ್ಯದ ಭಾಗಗಳು ದೇಶಿ, ವಿದೇಶಿ ವಿದ್ವಾಂಸರಿಂದ ಇಡಿಯಾಗಿ, ಬಿಡಿಬಿಡಿಯಾಗಿ 50ಕ್ಕೂ ಹೆಚ್ಚು ಆವೃತ್ತಿಗಳಲ್ಲಿ ಪ್ರಕಟವಾಗಿವೆ. ಈ ಆವೃತ್ತಿಗಳ ನಡುವೆ ಕುವೆಂಪು–ಮಾಸ್ತಿ ಸಂಪಾದಿಸಿದ ಭಾರತ ಕಥಾಮಂಜರಿ ಪಠ್ಯವು ಪ್ರಕಟವಾದ ಬಳಿಕ ಜನಪ್ರಿಯ ಆವೃತ್ತಿಯಾಗಿ ಹೆಚ್ಚಿನ ಓದುಗರನ್ನು ತಲುಪುವಂತಾಯಿತು’ ಎಂದು ಹೇಳಿದರು.

‘ಕೆಂಗಲ್ ಹನುಮಂತಯ್ಯ ಕಾಳಜಿ’

‘ಕುಮಾರವ್ಯಾಸ ಭಾರತ’ ಅಥವಾ ‘ಕರ್ಣಾಟ ಭಾರತ ಕಥಾಮಂಜರಿ’ ಕೃತಿ ಆಗಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರ ಕಾಳಜಿ, ಆಸಕ್ತಿಯಿಂದ ಪ್ರಕಟವಾಯಿತು. ಎ.ಎನ್.ಮೂರ್ತಿಯವರು ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ನಿರ್ದೇಶಕರಾಗಿದ್ದರು’ ಎಂದು ಪ್ರೊ.ಕೃಷ್ಣಮೂರ್ತಿ ಹನೂರು ತಿಳಿಸಿದರು.



‘ಕರ್ಣಾಟ ಭಾರತ ಕಥಾಮಂಜರಿ’ ಕೃತಿಯು ಮರುಮುದ್ರಣ ಹೆಮ್ಮೆಯ ಸಂಗತಿ. ಜನಸಾಮಾನ್ಯರಿಗೆ ಮತ್ತು ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುವುದು

ಪ್ರೊ.ನಂಜಯ್ಯ ಹೊಂಗನೂರು, ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿ.ವಿ

‘ಪ್ರಸಾರಾಂಗದ ಮಹತ್ವದ ಕೃತಿಗಳಲ್ಲಿ ಕರ್ಣಾಟ ಭಾರತ ಕಥಾಮಂಜರಿಯೂ ಒಂದು. ಈಗ ವಿಶ್ವವಿದ್ಯಾಲಯದ ಉತ್ತೇಜನ ಹಾಗೂ ದಾನಿಗಳಿಂದ ನೆರವು ಸಿಕ್ಕಿದ್ದು ಮರುಮುದ್ರಣ ಮಾಡಲಾಗಿದೆ. ಪ್ರೊ. ಸಿಪಿಕೆ ಲೋಕಾರ್ಪಣೆ ಮಾಡಲಿದ್ದಾರೆ’ ಎಂದು ಪ್ರಸಾರಾಂಗದ ನಿರ್ದೇಶಕ ಪ್ರೊ. ನಂಜಯ್ಯ ಹೊಂಗನೂರು ಅವರು ತಿಳಿಸಿದರು.

ನಿಗಮ, ಪ್ರಾಧಿಕಾರ: ಅಧ್ಯಕ್ಷರ ಅಧಿಕಾರ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ನಿಗಮ, ಮಂಡಳಿ ಹಾಗೂ ಪ್ರಾಧಿಕಾರಗಳಿಗೆ ನಾಮನಿರ್ದೇಶನ ಮಾಡಿದ್ದ ಅಧ್ಯಕ್ಷರ ಅಧಿಕಾರ ಅವಧಿಯನ್ನು ವಿಸ್ತರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಹೀಗಾಗಿ, ಈಗಾಗಲೇ ಅವಧಿ ಮುಗಿದಿರುವ ಮತ್ತು ಅವಧಿ ಮುಗಿಯಲಿರುವ ಎಲ್ಲ ನಿಗಮ, ಮಂಡಳಿಗಳು ಮತ್ತು ಪ್ರಾಧಿಕಾರಗಳ ಅಧ್ಯಕ್ಷರು ತಮ್ಮ ಸ್ಥಾನದಲ್ಲಿ ಯಾವುದೇ ಅಡ್ಡಿ ಆತಂಕ ಇಲ್ಲದೇ ಮುಂದುವರಿಯಬಹುದಾಗಿದೆ.

ವಿವಿಧ ನಿಗಮ, ಮಂಡಳಿಗಳ ಅಧ್ಯಕ್ಷರ ಅವಧಿಯನ್ನು ಮುಂದಿನ ಆದೇಶದವರೆಗೆ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ತಿಳಿಸಿದೆ. ಇಲಾಖೆಗಳು ತಮ್ಮ ವ್ಯಾಪ್ತಿಯ ಆಡಳಿತ ಕಾಯ್ದೆಗಳ ಪ್ರಕಾರ ಅಧ್ಯಕ್ಷರುಗಳಿಗೆ ಕಾರ್ಯ ನಿರ್ವಹಿಸಲು ಪೂರಕವಾದ ಅಧಿಸೂಚನೆ ಹೊರಡಿಸಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ವಿವಿಧ ನಿಗಮ, ಮಂಡಳಿಗಳು, ಪ್ರಾಧಿಕಾರಗಳಿಗೆ ಜಿಲ್ಲಾ ಕಾಂಗ್ರೆಸ್ ಘಟಕಗಳ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಮುಖಂಡರನ್ನು ಅಧ್ಯಕ್ಷರನ್ನಾಗಿ ಎರಡು ವರ್ಷಗಳ ಅವಧಿಗೆ ನೇಮಿಸಿ 2024ರ ಫೆ. 28ರಂದು ಆದೇಶ ಹೊರಡಿಸಲಾಗಿತ್ತು. ಈ ಪೈಕಿ, ಕೆಲವರಿಗೆ ರಾಜ್ಯ ಸಚಿವ ಸ್ಥಾನಮಾನ ನೀಡಿ ಮುಂದಿನ ಆದೇಶದವರೆಗೆ ಮುಂದುವರೆಸಿ ಫೆ. 7ರಂದು ಮತ್ತೆ ಆದೇಶಿಸಲಾಗಿದೆ.

ಫೆ.7ರ ಪಟ್ಟಿಯಲ್ಲಿ ಕಾಡಾ ಅಭಿವೃದ್ಧಿ ಪ್ರಾಧಿಕಾರಗಳ ಅಧ್ಯಕ್ಷರು ಸೇರಿದಂತೆ ಕೆಲವು ನಗರಾಭಿವೃದ್ಧಿ ಪ್ರಾಧಿಕಾರಗಳ ಅಧ್ಯಕ್ಷರ ಹೆಸರನ್ನು ಕೈಬಿಡಲಾಗಿದೆ. ಈ ಪ್ರಾಧಿಕಾರಗಳಿಗೆ ಬೇರೆ ಅಧ್ಯಕ್ಷರನ್ನು ನೇಮಕ ಮಾಡದ ಕಾರಣ ಹಾಲಿ ಇರುವವರ ಅವಧಿಯನ್ನು ಮುಂದುವರಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಫೆ. 26ರಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪತ್ರ ಬರೆದಿದ್ದರು. ಆ ಬೆನ್ನಲ್ಲೇ, ಈ ಆದೇಶ ಹೊರಡಿಸಲಾಗಿದೆ.

ಪುಷ್ಪವೃಷ್ಟಿ ಸ್ವಾಗತ

ಪ್ರಜಾವಾಣಿ ಚಿತ್ರ



ಬನಹಟ್ಟಿ ಸಮೀಪದ ಯಲ್ಲಟ್ಟಿಯ ಕೊಣ್ಣೂರ ವಿಜ್ಞಾನ ಪದವಿಪೂರ್ವ ಕಾಲೇಜಿನಲ್ಲಿ ಪರೀಕ್ಷೆ ಬರೆಯಲು ಬಂದ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಪುಷ್ಪವೃಷ್ಟಿ ಮಾಡಿ, ಸ್ವಾಗತಿಸಲಾಯಿತು.

‘ಹಣೆಬರಹದಲ್ಲಿದ್ದರೆ ಅಣ್ಣ ಸಿ.ಎಂ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಣೆಬರಹದಲ್ಲಿದ್ದರೆ ನನ್ನ ಅಣ್ಣ (ಡಿ.ಕೆ. ಶಿವಕುಮಾರ್) ಮುಖ್ಯಮಂತ್ರಿ ಆಗುತ್ತಾರೆ. ಹಣೆಬರಹ ಇಲ್ಲದೇ ಇದ್ದರೆ ಯಾರೂ ಏನೂ ಮಾಡಲು ಆಗುವುದಿಲ್ಲ’ ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಹೇಳಿದರು.



ಡಿ.ಕೆ. ಸುರೇಶ್

ಅಧಿಕಾರ ಹಂಚಿಕೆ ಕುರಿತ ವಿಷಯ ಪ್ರಸ್ತಾಪಿಸಿ, ‘ನೀವು ಶಸ್ತ್ರತ್ಯಾಗ ಮಾಡಿದ್ದೀರಾ’ ಎಂದು ಸುದ್ದಿಗಾರರು ಕೇಳಿದರು. ಅದಕ್ಕೆ ಪ್ರತಿಕ್ರಿಯಿಸಿದ ಅವರು, ‘ತ್ಯಾಗ ಮಾಡಲು ಶಸ್ತ್ರ ಇರಬೇಕಲ್ಲವೇ? ಶಸ್ತ್ರವೇ ಇಲ್ಲದಿದ್ದಾಗ ತ್ಯಾಗದ ಪ್ರಶ್ನೆಯೇ ಬಾರದು’ ಎಂದರು.

‘ತಾಳ್ಮೆಯ ಅಸ್ತ್ರ ಇದೆ’ ಎಂದಿದ್ದೀರಿ ಎಂದಾಗ, ‘ಈಗಲೂ ತಾಳ್ಮೆ ಇರಲಿ ಎಂದು ಹೇಳುತ್ತಿದ್ದೇನೆ. ರಾಜಕಾರಣದಲ್ಲಿ ಶಸ್ತ್ರ ಹಾಗೂ ಅಸ್ತ್ರ ಬೇಕಾಗಿಲ್ಲ’ ಎಂದರು.

ಶಾಸಕರು ದೆಹಲಿಗೆ ತೆರಳಿ ನಾಯಕತ್ವ ಬದಲಾವಣೆ ವಿಚಾರವಾಗಿ ಹೈಕಮಾಂಡ್ ನಾಯಕರನ್ನು ಕೇಳುವ ಬಗ್ಗೆ ಪ್ರಶ್ನಿಸಿದಾಗ, ‘ನನಗೆ ಯಾವುದೇ ಮಾಹಿತಿ ಇಲ್ಲ. ಈ ಬಗ್ಗೆ ಶಾಸಕರನ್ನೇ ಕೇಳಿ’ ಎಂದರು.

ಭೋಜನಕೂಟ ಸೇರಿದ ಶಾಸಕರು ನಾಯಕತ್ವದ ವಿಚಾರದಲ್ಲಿ ಸ್ಪಷ್ಟನೆ ಕೇಳಿದ್ದಾರೆ ಎಂದಾಗ, ‘ನಾನು ಊರಲ್ಲಿ ಇರಲಿಲ್ಲ. ನನಗೆ ಈ ಬಗ್ಗೆ ಮಾಹಿತಿ ಇಲ್ಲ. ಅವರು ಯಾವ ತೀರ್ಮಾನ ಕೈಗೊಂಡಿದ್ದಾರೆ, ಯಾವ ಹೇಳಿಕೆ ಕೊಟ್ಟಿದ್ದಾರೆ ಎಂಬುದೂ ಗೊತ್ತಿಲ್ಲ. ಇದು ಅವರ ವೈಯಕ್ತಿಕ ವಿಚಾರ. ಪಕ್ಷ ಅದನ್ನು ಗಮನಿಸಲಿದೆ’ ಎಂದರು.

‘ಸಿದ್ದರಾಮಯ್ಯ ಅವರನ್ನು ಬದಲಿಸುವುದಾದರೆ ದಲಿತ ಮುಖ್ಯಮಂತ್ರಿ ಮಾಡಬೇಕು’ ಎಂಬ ಸಚಿವ ಎಚ್.ಸಿ ಮಹದೇವಪ್ಪ ಅವರ ಹೇಳಿಕೆ ಬಗ್ಗೆ ಕೇಳಿದಾಗ, ‘ಎಲ್ಲರಿಗೂ ಆಸೆ ಇದೆ. ಇದರಲ್ಲಿ ತಪ್ಪೇನಿಲ್ಲ’ ಎಂದು ಹೇಳಿದರು..

ಎಲ್ಲರೂ ಅದೇ ರೀತಿ ಹೇಳುತ್ತಾರೆ: ಡಿಕೆಶಿ



ಶಿವಕುಮಾರ್

‘ಎಲ್ಲರೂ ಅದೇ ರೀತಿ ಹೇಳುತ್ತಾರೆ. ನಾನೇನು ಆ ಸುದ್ದಿಯನ್ನು ಮಾತನಾಡಿಲ್ಲವಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಅಣ್ಣನ ಹಣೆಬರಹದಲ್ಲಿ ಬರೆದಿದ್ದರೆ ಮುಖ್ಯಮಂತ್ರಿ ಆಗುತ್ತಾರೆ’ ಎಂಬ ಸುರೇಶ್ ಮಾತಿಗೆ ಅವರು ಮೇಲಿನಂತೆ ಪ್ರತಿಕ್ರಿಯಿಸಿದರು.

‘ಶಾಸಕರು ದೆಹಲಿಗೆ ಹೋಗುವ, ವಿದೇಶಕ್ಕೆ ಹೋಗುವ ವಿಚಾರ ನನಗೆ ಗೊತ್ತಿಲ್ಲ. ಈ ಬಗ್ಗೆ ನನ್ನನ್ನು ಯಾರೂ ಕೇಳಿಯೂ ಇಲ್ಲ. ಈ ವಿಚಾರದಲ್ಲಿ ನಾನು ಬಾಯಿ ಹಾಕುವುದೂ ಇಲ್ಲ’ ಎಂದೂ ಅವರು ಹೇಳಿದರು.

‘ನಿಮ್ಮ ಪರವಾಗಿ ಜನರು, ಬೆಂಬಲಿಗರು, ಶಾಸಕರು ಮಾತನಾಡುತ್ತಿದ್ದಾರೆ’ ಎಂದು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಮುಖ್ಯಮಂತ್ರಿಯವರೂ ಸೇರಿ 139 ಜನ ಶಾಸಕರೂ ನನ್ನ ಬೆಂಬಲಕ್ಕೆ ಇದ್ದೇ ಇದ್ದಾರೆ’ ಎಂದರು.

‘ಶೇ 56ರ ಮೀಸಲಾತಿ ಪಾಲಿಸಲಿ’

ನೇಮಕಾತಿ: ಕೋರ್ಟ್ ತೀರ್ಪಿಗೂ ಮುನ್ನ ನಿರ್ಧಾರ ಸಲ್ಲ

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಸರ್ಕಾರ ಖಾಲಿ ಹುದ್ದೆಗಳ ಭರ್ತಿಗೆ ನಿರ್ಧರಿಸಿರುವುದು ಸ್ವಾಗತಾರ್ಹ. ಶೇ 56ರಷ್ಟು ಮೀಸಲಾತಿ ಅನ್ವಯವೇ ನೇಮಕಾತಿ ಮಾಡಬೇಕು. ನ್ಯಾಯಾಲಯದ ನೆಪ ಹೇಳಿ, ಮೀಸಲಾತಿಯನ್ನು ಕಾಯ್ದಿರಿಸುವುದು ಸೂಕ್ತ ನಿರ್ಧಾರವಲ್ಲ’ ಎಂದು ಕೆಪಿಸಿಸಿ ಉಪಾಧ್ಯಕ್ಷ ಎಚ್.ಆಂಜನೇಯ ಎಂದರು.

‘ಹಳೆಯ ಮೀಸಲಾತಿ ಪದ್ಧತಿ ಅನ್ವಯ 56,432 ಹುದ್ದೆಗಳಿಗೆ ನೇರ ನೇಮಕಾತಿ ಪ್ರಕ್ರಿಯೆ ಆರಂಭಿಸುವ ಸರ್ಕಾರದ ನಡೆ ಸರಿಯಲ್ಲ. ಕೋರ್ಟ್ ಆದೇಶಕ್ಕೂ ಮುನ್ನ ಸರ್ಕಾರವೇ ಈ ಬಗ್ಗೆ ತೀರ್ಮಾನಿಸಿರುವುದು ಪರಿಶಿಷ್ಟ ಸಮುದಾಯಗಳಿಗೆ ಮಾಡಿರುವ ಅನ್ಯಾಯ’ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಮೀಸಲಾತಿ ಪ್ರಮಾಣ ಶೇ 50 ಮೀರುವಂತಿಲ್ಲ ಎಂಬ ಕೋರ್ಟ್ ಆದೇಶವಿದ್ದರೂ, ನೇಮಕಾತಿ ಅಧಿಸೂಚನೆ ಹೊರಡಿಸಲು, ಹಾಗೂ ಪರೀಕ್ಷೆ ನಡೆಸಲು ಅಡ್ಡಿಯಿಲ್ಲ. ಫಲಿತಾಂಶವನ್ನು ತೀರ್ಪಿನ ಬಳಿಕ ಪ್ರಕಟಿಸಬಹುದು ಎಂಬುದಾಗಿ ಕೋರ್ಟ್ ತಿಳಿಸಿದೆ. ಹೀಗಿರುವಾಗ, ಎರಡೂ ಸಮುದಾಯಗಳಿಗೆ ನೀಡಲಾಗಿರುವ ಒಟ್ಟಾರೆ ಶೇ 24ರ ಮೀಸಲಾತಿಯನ್ನು ಶೇ 18ಕ್ಕೆ ಇಳಿಸಿ ನೇಮಕಾತಿಗೆ ಮುಂದಾಗಿರುವುದು ಏಕೆ?’ ಎಂದು ಪ್ರಶ್ನಿಸಿದರು.

‘ಒಳಮೀಸಲಾತಿ ಕಾರಣ ಮೂರ್ನಾಲ್ಕು ವರ್ಷಗಳಿಂದ ನೇಮಕಾತಿ ಕಾಯ್ದಿರಿಸಲಾಗಿತ್ತು. ಹಳೆಯ ಪದ್ಧತಿಗೆ ಮರಳುವುದಾದರೆ ಇಷ್ಟು ವರ್ಷ ಕಾದಿದ್ದಕ್ಕೆ ಏನು ಪ್ರಯೋಜನ?’ ಎಂದು ಪ್ರಶ್ನಿಸಿದರು. ಒಳಮೀಸಲಾತಿ ಕೈಬಿಟ್ಟಲ್ಲಿ ಪರಿಶಿಷ್ಟ ಜಾತಿಯಲ್ಲಿರುವ ಬಲಿಷ್ಠರು ಹೆಚ್ಚು ಹುದ್ದೆ ಕಬಳಿಸಲಿದ್ದಾರೆ. ಇದಕ್ಕಾಗಿ ಷಡ್ಯಂತ್ರ ರೂಪಿಸಿದ್ದಾರೆ ಎಂದು ದೂರಿದರು.

ಶೇ 24ರಷ್ಟು ಮೀಸಲಾತಿ ನೀಡಿಯೇ ನೇಮಕಾತಿ ನಡೆಸಲು ಒತ್ತಾಯಿಸಿ ಸಮುದಾಯದ ಸಚಿವರು, ಶಾಸಕರೊಂದಿಗೆ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು.

‘ನಿಯೋಗ ಒಯ್ಯಲಿ’



ಆಂಜನೇಯ

ಎಸ್‌ಸಿ, ಎಸ್‌ಟಿ ಸಮುದಾಯಗಳಿಗೆ ಮೀಸಲಾತಿ ಏರಿಕೆಯನ್ನು ಸಂವಿಧಾನದ 9ನೇ ಪರಿಚ್ಛೇದದ ಅಡಿ ಸೇರ್ಪಡೆ ಕುರಿತು ಕೇಂದ್ರಕ್ಕೆ ಮನವರಿಕೆ ಮಾಡಿಕೊಡಲು ಪ್ರಧಾನಿ ಬಳಿಗೆ ರಾಜ್ಯದಿಂದ ಸರ್ವಪಕ್ಷ ನಿಯೋಗ ಕರೆದೊಯ್ಯಲು ಮುಖ್ಯಮಂತ್ರಿ ಮುಂದಾಗಬೇಕು ಎಂದು ಎಚ್.ಆಂಜನೇಯ ಕೋರಿದರು.

ಆಸ್ಟ್ರೇಲಿಯಾ ಕಾಡಿಗೆ ಗಿರಿವಾಸಿಗಳ ನಡಿಗೆ

ಪ್ರಜಾವಾಣಿ ವಾರ್ತೆ

ಯಳಂದೂರು (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟದ ಐವರು ಸೋಲಿಗರು ತಮ್ಮ ಸಮುದಾಯದ ಪಾರಂಪರಿಕ ಜ್ಞಾನ ಹಂಚಿಕೊಳ್ಳಲು ಮೊದಲ ಬಾರಿಗೆ ಆಸ್ಟ್ರೇಲಿಯಾ ಪ್ರವಾಸಕ್ಕೆ ಆಯ್ಕೆಯಾಗಿದ್ದಾರೆ.

ಸಾಂಸ್ಕೃತಿಕ ಜ್ಞಾನ ವಿನಿಮಯ ಕಾರ್ಯಕ್ರಮದ ಅಡಿ ಈ ಪ್ರವಾಸಕ್ಕೆ ಸಿ.ಮಾದೇಗೌಡ, ಕಾರನಕೇತೇಗೌಡ, ಮಾದಮ್ಮ, ಬಸವರಾಜು ಮತ್ತು ಕುಂಬೇಗೌಡ ಆಯ್ಕೆಯಾಗಿದ್ದಾರೆ. ಈ ತಂಡಕ್ಕೆ ಏಟ್ರೀ ಸಂಸ್ಥೆಯ ಪ್ರಾಧ್ಯಾಪಕ ಸಿದ್ದಪ್ಪಶೆಟ್ಟಿ ನೇತೃತ್ವ ವಹಿಸಿದ್ದಾರೆ.

ಮಾರ್ಚ್ 1 ರಿಂದ 11ರವರೆಗೂ ಅಲ್ಲಿನ ಆದಿವಾಸಿಗಳ ಜೀವನಶೈಲಿ, ಕಾಡಿನ ವಾಸ, ವನ ವೈವಿಧ್ಯ, ವನ್ಯ ಜೀವಿಗಳೊಡನೆ ಅಲ್ಲಿನ ಮೂಲನಿವಾಸಿಗಳ ಸಹ ಜೀವನ ಸೇರಿದಂತೆ ವಿವಿಧ ವಿಷಯಗಳ ಕುರಿತು ತಂಡವು ಅಧ್ಯಯನ ನಡೆಸಲಿದೆ.

ಗದಗ: 800ಕ್ಕೂ ಅಧಿಕ ಮಹಿಳೆಯರ ನಿರ್ಧಾರ

ದೇಗುಲಕ್ಕೆ ‘ಗೃಹಲಕ್ಷ್ಮಿ’ ಹಣ ದೇಣಿಗೆ

ಪ್ರಜಾವಾಣಿ ವಾರ್ತೆ

ಗದಗ: ತಾಲ್ಲೂಕಿನ ತಿಮ್ಮಾಪುರ ಗ್ರಾಮದ 800ಕ್ಕೂ ಹೆಚ್ಚು ಮಹಿಳೆಯರು ಒಂದು ತಿಂಗಳ ಗೃಹಲಕ್ಷ್ಮಿ ಹಣವನ್ನು ಗ್ರಾಮದಲ್ಲಿ ರೇಣುಕಾದೇವಿ ಯಲ್ಲಮ್ಮ ದೇವಸ್ಥಾನದ ನಿರ್ಮಾಣ ಕಾರ್ಯಕ್ಕಾಗಿ ದೇಣಿಗೆಯಾಗಿ ನೀಡಲು ತೀರ್ಮಾನಿಸಿದ್ದಾರೆ.

ಹಣಕಾಸಿನ ಸಮಸ್ಯೆಯಿಂದ 4 ವರ್ಷದಿಂದ ದೇವಸ್ಥಾನದ ಕಾಮಗಾರಿ ಸ್ಥಗಿತೊಂಡಿದ್ದು, ಅದನ್ನು ಪೂರ್ಣಗೊಳಿಸಲು ಮಹಿಳೆಯರು ಗೃಹಲಕ್ಷ್ಮಿ ನೆರವಿನ ಹಣವನ್ನು ದೇಣಿಗೆಯಾಗಿ ನೀಡಲು ನಿರ್ಧರಿಸಿದರು.

‘ಪ್ರಸ್ತುತ ನೂರು ಮಹಿಳೆಯರು ತಲಾ ₹2 ಸಾವಿರ ನೀಡಿದ್ದಾರೆ. ಎಲ್ಲ ಮಹಿಳೆಯರು ನೀಡಿದರೆ, ₹16 ಲಕ್ಷಕ್ಕೂ ಹೆಚ್ಚು ಸಂಗ್ರಹವಾಗಲಿದೆ. ಅಷ್ಟು ಹಣ ಸಿಕ್ಕರೆ ಮುಂದಿನ ಆರು ತಿಂಗಳಲ್ಲಿ ದೇವಸ್ಥಾನ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳಲಿದೆ’ ಎಂದು ರೈತ ಮುಖಂಡ ಯಲ್ಲಪ್ಪ ಎಚ್.ಬಾಬರಿ ತಿಳಿಸಿದರು.

‘ಗ್ರಾಮದ 800ಕ್ಕೂ ಹೆಚ್ಚು ಮಹಿಳೆಯರು ದೇಣಿಗೆ ನೀಡುತ್ತೇವೆ. ಇನ್ನೂ ಕೊರತೆ ಆದಲ್ಲಿ, ಇನ್ನೊಂದು ತಿಂಗಳ ಹಣವನ್ನೂ ಕೊಡುತ್ತೇವೆ’ ಎಂದು ಗ್ರಾಮದ ಮಹಿಳೆ ಶಾಂತವ್ವ ಬಸಾಪುರ ತಿಳಿಸಿದರು.

‘ಗೃಹಲಕ್ಷ್ಮಿ’ ಹಣ ತಾಯಂದಿರ ಭಕ್ತಿ ಮೂಲಕ ಧಾರ್ಮಿಕ ಕಾರ್ಯಕ್ಕೂ ವಿನಿಯೋಗ ಆಗುತ್ತಿರುವುದು ಹೆಮ್ಮೆಯ ಸಂಗತಿ’ ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರು ಅಭಿನಂದನಾ ಪತ್ರ ಕಳುಹಿಸಿಕೊಟ್ಟಿದ್ದಾರೆ.



ಗದಗ ತಾಲ್ಲೂಕಿನ ತಿಮ್ಮಾಪುರ ಗ್ರಾಮದ ಮಹಿಳೆಯರು ಒಂದು ತಿಂಗಳ ಗೃಹಲಕ್ಷ್ಮಿ ಹಣವನ್ನು ದೇವಸ್ಥಾನಕ್ಕೆ ದೇಣಿಗೆ ನೀಡಿದ್ದು, ಟ್ರಸ್ಟ್‌ನವರು ರಸೀದಿ ನೀಡಿದರು


‘ದುರ್ಬಲರ ಧ್ವನಿಯಾದಾಗ ಅಭಿವೃದ್ಧಿ’

ಒಕ್ಕಲಿಗರ ಸಂಘ–ಸಂಸ್ಥೆಗಳ ಪದಾಧಿಕಾರಿಗಳ ಸಮಾವೇಶ: ಸ್ವಾಮೀಜಿ ಅಭಿಮತ

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ‘ಸಂಘ ಸಂಸ್ಥೆಗಳು ಸಮಾಜಮುಖಿಯಾಗಿ ಕಾರ್ಯನಿರ್ವಹಿಸಿ ಆರ್ಥಿಕವಾಗಿ ಹಿಂದುಳಿದವರನ್ನು ಮೇಲೆತ್ತಬೇಕು. ಆಗ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ’ ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಆದಿಚುಂಚನಗಿರಿ ಮಠದಲ್ಲಿ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀ ಮಠದ ಬಿಜಿಎಸ್ ಸಭಾ ಭವನದಲ್ಲಿ ಶನಿವಾರ ಆಯೋಜಿಸಿದ್ದ ಒಕ್ಕಲಿಗರ ಸಂಘ ಸಂಸ್ಥೆಗಳ ಪದಾಧಿಕಾರಿಗಳ ಸಮಾವೇಶದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.



ನಿರ್ಮಲಾನಂದ

‘ಬಾಲಗಂಗಾಧರನಾಥ ಶ್ರೀಗಳು ಸಮುದಾಯ ಹಾಗೂ ಸಮಾಜದ ಜ್ಯೋತಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಇಂತಹ ಶ್ರೇಷ್ಠ ಗುರುಗಳ ಸಮಾಜಮುಖಿ ಕೆಲಸಗಳು ಆದರ್ಶವಾಗಬೇಕು. ಶ್ರೀಮಠದ ವತಿಯಿಂದ ಹಲವು ಸಮಾಜಮುಖಿ ಕಾರ್ಯಗಳು ನಿರಂತರವಾಗಿ ನಡೆಯುತ್ತಿವೆ’ ಎಂದು ತಿಳಿಸಿದರು.

ಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ ಮಾತನಾಡಿ, ‘ಸಮಾಜದ ಅಭಿವೃದ್ಧಿಗೆ ತೊಡಗಿಸಿಕೊಳ್ಳುವ ಸಲುವಾಗಿ ಸಮಾವೇಶ ಆಯೋಜಿಸಲಾಗಿದೆ’ ಎಂದರು.

ಕೆಸಿಡಿಸಿಎಲ್ ಅಧ್ಯಕ್ಷ ಎ.ಎನ್.ನಟರಾಜ್, ಶಿವಮೊಗ್ಗ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ರಮೇಶ್, ಮೈಸೂರಿನ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ನ ಅಧ್ಯಕ್ಷ ರವಿಕುಮಾರ್ ಹಾಗೂ ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಶ್ರೀನಿವಾಸ್ ಮಾತನಾಡಿದರು.

ಶ್ರೀಮಠದ ಚೈತನ್ಯನಾಥ ಸ್ವಾಮೀಜಿ, ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಗಂಗಾಧರ್, ನಿರ್ದೇಶಕ ನೆಲ್ಲಿಗೆರೆ ಬಾಲು, ಕೋನಪ್ಪರೆಡ್ಡಿ, ಮೈಸೂರಿನ ಗಂಗಾಧರ್, ಶ್ರೀಧರ್, ಮಂಜೇಗೌಡ, ಚಿತ್ರದುರ್ಗದ ರಾಘವೇಂದ್ರ, ತುಮಕೂರಿನ ಹನುಮಂತರಾಯಪ್ಪ, ಒಕ್ಕಲಿಗರ ಸಂಘದ ಮಾಜಿ ಉಪಾಧ್ಯಕ್ಷ ಎಚ್.ಟಿ. ಕೃಷ್ಣೇಗೌಡ, ಶ್ರೀನಿವಾಸಯ್ಯ, ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯ ಎ.ಟಿ.ಶಿವರಾಮು ಪಾಲ್ಗೊಂಡಿದ್ದರು.

ಮಕ್ಕಳ ಕಳ್ಳಿ ಎಂದು ಥಳಿಸಿದರು...

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಹೊಸ ಗಾಂಧಿ ನಗರದಲ್ಲಿ ಶನಿವಾರ ಮಹಿಳೆಯೊಬ್ಬರನ್ನು ಮಕ್ಕಳ ಕಳ್ಳಿ ಎಂದು ಭಾವಿಸಿ ಜನರು ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಬಟ್ಟೆ ಹರಿದು ಅರೆಬೆತ್ತಲೆ ಮಾಡಿ, ಕಾಲಿನಿಂದ ಒದ್ದು ಹಿಂಸೆ ಕೊಟ್ಟಿದ್ದಾರೆ. ಇದರಿಂದ ಸ್ಥಳದಲ್ಲಿ ಕೆಲ ಹೊತ್ತು ತ್ವೇಷಮಯ ವಾತಾವರಣ ನಿರ್ಮಾಣವಾಗಿತ್ತು.

ಬೆಳಗಾವಿ ತಾಲ್ಲೂಕಿನ ಹಳ್ಳಿಯೊಂದರ ಮಹಿಳೆ ರಂಜಾನ್ ಮಾಸದ ಪ್ರಯುಕ್ತ ಹೊಸ ಗಾಂಧಿ ನಗರದ ಮುಸ್ಲಿಮರ ವಸತಿ ಪ್ರದೇಶದಲ್ಲಿ ಭಿಕ್ಷೆ ಬೇಡುತ್ತಿದ್ದರು. ಬಿಸಿಲಿನ ಧಗೆ ಕಾರಣ ಹತ್ತಿರದ ಕಟ್ಟಡವೊಂದರ ಎದುರು ಕೂತಿದ್ದರು. ಅವರನ್ನು ಕಂಡು ಅನುಮಾನಗೊಂಡ ಇತರ ಮಹಿಳೆಯರು ಪುರುಷರಿಗೆ ತಿಳಿಸಿದರು.

ಈಕೆ ಮಕ್ಕಳನ್ನು ಕಳವು ಮಾಡಲು ಬಂದಿದ್ದಾಳೆ ಎಂದು ಕೂಗಿ ಕರೆದರು. ಅಪಾರ ಸಂಖ್ಯೆಯಲ್ಲಿ ಸೇರಿದ ಜನ ಮಹಿಳೆಯನ್ನು ಎಳೆದಾಡಿ ಪ್ರಶ್ನಿಸಿದರು. ಆಕೆ ಎಷ್ಟು ಬೇಡಿಕೊಂಡರೂ ಬಿಡದೇ ಮುಷ್ಟಿಗೆ ಮಾಡಿ ಹೊಟ್ಟೆ, ಎದೆ, ಭುಜ, ತಲೆ, ಮುಖಕ್ಕೆ ಗುದ್ದಿದರು. ಕೂದಲು ಹಿಡಿದರು ಎಳೆದಾಡಿದರು. ರವಿಕೆ ಹರಿದು ಓಡಿಸಿದರು. ಪುರುಷರ ಜತೆಗೆ ಕೆಲ ಮಹಿಳೆಯರೂ ಬೆನ್ನತ್ತಿದರು. ಸುತ್ತ ಸೇರಿದ ಹಲವರು ಇದರ ವಿಡಿಯೊ ಮಾಡಿಕೊಂಡರು.

ಸ್ಥಳಕ್ಕೆ ಬಂದ ಮಾಳಮಾರುತಿ ಠಾಣೆ ಪೊಲೀಸರು, ಮಹಿಳೆಯನ್ನು ರಕ್ಷಿಸಿ ತಗಡಿನ ಶೆಡ್‌ನಲ್ಲಿ ಇರಿಸಿದರು. ಅಲ್ಲಿಗೂ ನುಗ್ಗಿದ ಇತರ ಮಹಿಳೆಯರು ಕೆನ್ನೆಗೆ ಹೊಡೆದರು. ಕಾನೂನು ಕೈಗೆತ್ತಿಕೊಳ್ಳದಂತೆ ಪೊಲೀಸರು ಎಷ್ಟೇ ವಿನಂತಿಸಿದರೂ ಜನ ಕೇಳಲಿಲ್ಲ. ಇದರಿಂದ ವಾದ– ವಾಗ್ವಾದ ಜೋರಾಯಿತು. ಯುವಕರು ಕೂಗಾಟ ಶುರು ಮಾಡಿದರು. ಕೊನೆಗೆ ಮಹಿಳೆಯನ್ನು ವಾಹನದಲ್ಲಿ ಹತ್ತಿಸಿಕೊಂಡ ಪೊಲೀಸರು ಠಾಣೆಯತ್ತ ಕರೆದೊಯ್ದರು.

ಕಮಿಷನರ್ ಪ್ರತಿಕ್ರಿಯೆ: ‘ಆ ಮಹಿಳೆಯನ್ನು ವಿಚಾರಣೆ ನಡೆಸಿದ್ದು, ಕಳ್ಳಿ ಅಲ್ಲ ಎಂಬುದು ಸ್ಪಷ್ಟವಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ ತಿಳಿಸಿದ್ದಾರೆ.

ಕೈಲಾಸ ಆಶ್ರಮ ಮಹಾಸಂಸ್ಥಾನದ ಜಯೇಂದ್ರ ಪುರಿ ಸ್ವಾಮೀಜಿ ಹೇಳಿಕೆ

‘ವೇದಗಳ ಸಾರವೇ ಪ್ರಕೃತಿಯ ಸಂರಕ್ಷಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೇದಗಳ ಸಾರವೇ ಪ್ರಕೃತಿಯನ್ನು ಸಂರಕ್ಷಣೆ ಮಾಡುವುದು. ಆದರೆ ಇಂದು ಜನರಿಗೆ ಪ್ರಕೃತಿಗಿಂತ ಕಾಂಕ್ರೀಟ್ ಕಟ್ಟಡಗಳೇ ಸುಂದರವಾಗಿ ಕಾಣುತ್ತಿರುವುದು ವಿಪರ್ಯಾಸದ ಸಂಗತಿ’ ಎಂದು ರಾಜರಾಜೇಶ್ವರಿನಗರದ ಕೈಲಾಸ ಆಶ್ರಮ ಮಹಾಸಂಸ್ಥಾನದ ಜಯೇಂದ್ರ ಪುರಿ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಕೃಷಿ ಭಾರತ ಫೌಂಡೇಷನ್ ಭಾನುವಾರ ಆಯೋಜಿಸಿದ್ದ ಅ.ನ. ಯಲ್ಲಪ್ಪ ರೆಡ್ಡಿ ಅವರಿಗೆ ಗೌರವಾಭಿನಂದನೆ ಹಾಗೂ ಅವರ ‘ಸಮೃದ್ಧವಾಗಲಿ ಭೂತಾಯ ಒಡಲು’ ಪುಸ್ತಕ ಜನಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಪ್ರಕೃತಿಯ ಬಗ್ಗೆ ಅಪಾರ ಕಾಳಜಿ ವಹಿಸಿ, ಪರಿಸರಕ್ಕಾಗಿಯೇ ಜೀವನವನ್ನು ಮುಡಿಪಾಗಿಟ್ಟಿರುವ ಯಲ್ಲಪ್ಪ ರೆಡ್ಡಿ ಅವರ ಕಾರ್ಯವು ನಿಜಕ್ಕೂ ಶ್ಲಾಘನೀಯ ಎಂದರು.

ವಿದ್ವಾಂಸ ಲಕ್ಷ್ಮೀಶ ತೋಳ್ಪಾಡಿ ಮಾತನಾಡಿ, ‘ಸರ್ಕಾರದ ಎರಡು ಪ್ರಮುಖ ಇಲಾಖೆಗಳಾದ ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಅರಣ್ಯ ಇಲಾಖೆಗಳು ಅರಣ್ಯವನ್ನು ಸಂರಕ್ಷಿಸುವ ಕಾವಲುಗಾರರಂತೆ ಕಾರ್ಯನಿರ್ವಹಿಸಬೇಕು. ಆದರೆ ದುರದೃಷ್ಟವಶಾತ್, ಅವೇ ಇಂದು ದೋಚುವುದು ಹೇಗೆ ಎಂಬುದನ್ನು ಕಲಿಸುತ್ತಿವೆ. ಇಂತಹ ವ್ಯವಸ್ಥೆಯ ನಡುವೆಯೂ ಅರಣ್ಯ ಇಲಾಖೆಯಲ್ಲಿದ್ದುಕೊಂಡು ಯಲ್ಲಪ್ಪ ರೆಡ್ಡಿ ಅವರು ಮಾಡಿದ ಸಾಧನೆ ಅಪೂರ್ವವಾಗಿದೆ’ ಎಂದರು.



ಜಯೇಂದ್ರ ಪುರಿ ಸ್ವಾಮೀಜಿ ಅವರು ಅ.ನ. ಯಲ್ಲಪ್ಪ ರೆಡ್ಡಿ ಅವರನ್ನು ಗೌರವಿಸಿದರು. ಬಿ. ದಯಾನಂದ, ಲಕ್ಷ್ಮೀಶ ತೋಳ್ಪಾಡಿ ಉಪಸ್ಥಿತರಿದ್ದರು

ಪ್ರಜಾವಾಣಿ ಚಿತ್ರ

ಇದೇ ಸಂದರ್ಭದಲ್ಲಿ ಅ.ನ. ಯಲ್ಲಪ್ಪ ರೆಡ್ಡಿ ಅವರ ಪರಿಸರ ಸೇವೆಯನ್ನು ಸ್ಮರಿಸಿ ಅವರಿಗೆ ಅಭಿನಂದನಾ ಗ್ರಂಥವನ್ನು ಸಮರ್ಪಿಸಲಾಯಿತು.

ಐಪಿಎಸ್ ಅಧಿಕಾರಿ ಬಿ. ದಯಾನಂದ, ಬೆಂಗಳೂರು ಸೈನ್ಸ್ ಫೋರಂನ ಕಾರ್ಯದರ್ಶಿ ಸುಚರಿತಾ ಚಂದ್ರ ಹಾಗೂ ಲೇಖಕ ನಿರಂಜನ ಪರಾಂಜಪೆ, ಕೃಷಿ ಭಾರತ ಸಂಪಾದಕ ಚಂದ್ರಶೇಖರ ಬಾಳೆ, ಗಾಯಕ ಆನಂದ ಮಾದಲಗೆರೆ, ಟಿ.ಸಿ. ರವೀಂದ್ರ ತುಂಬರಮನೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವಿಐಟಿಎಪಿಯಿಂದ ವಿಜ್ಞಾನ ದಿನಾಚರಣೆ

ಬೆಂಗಳೂರು : ವಿಐಟಿ-ಎಪಿ ವಿಶ್ವ ವಿದ್ಯಾಲಯದ ಸ್ಕೂಲ್ ಆಫ್ ಅಡ್ವಾನ್ಸ್ಡ್ ಸೈನ್ಸಸ್ ವತಿಯಿಂದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಅತ್ಯಂತ ಸಡಗರದಿಂದ ಆಚರಿಸಲಾಯಿತು. ವಿದ್ಯಾರ್ಥಿಗಳಲ್ಲಿ ಕುತೂಹಲ, ತಾರ್ಕಿಕ ಚಿಂತನೆ ಮತ್ತು ದೈನಂದಿನ ಜೀವನದಲ್ಲಿ ವೈಜ್ಞಾನಿಕ ದೃಷ್ಟಿಕೋನವನ್ನು ಬೆಳೆಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಇಸ್ರೋ ಮಾಜಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ಮಾತನಾಡಿ, 'ತಂತ್ರಜ್ಞಾನವು ದಿನದಿಂದ ದಿನಕ್ಕೆ ವಿಕಸನಗೊಳ್ಳುತ್ತಿದೆ. ವಿದ್ಯಾರ್ಥಿಗಳು ಉದಯೋನ್ಮುಖ ತಂತ್ರಜ್ಞಾನಗಳ ಶಕ್ತಿಯನ್ನು ಅನ್ವೇಷಿಸಲು ಮತ್ತು ಭಾರತದ ಭವಿಷ್ಯದ ನಾಯಕರಾಗಲು ಇದು ಸೂಕ್ತ ಸಮಯ. 2047ರ ವೇಳೆಗೆ 'ವಿಕಸಿತ ಭಾರತ'ದ ಗುರಿಯನ್ನು ತಲುಪಲು ವಿಜ್ಞಾನ ಮತ್ತು ಆವಿಷ್ಕಾರಗಳನ್ನು ಅಳವಡಿಸಿಕೊಳ್ಳುವುದು ಅತ್ಯಗತ್ಯ ಎಂದರು.

ಕಲ್ಕತ್ತಾದ ಐಐಎಸ್‌ಇಆರ್‌ನ ಎಮೆರಿಟಸ್ ಪ್ರೊಫೆಸರ್ ಪ್ರಶಾಂತ ಕೆ. ಪಾಣಿಗ್ರಾಹಿ ಮಾತನಾಡಿ, ರಾಷ್ಟ್ರೀಯ ವಿಜ್ಞಾನ ದಿನವು ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವ ಮತ್ತು ಪ್ರಯೋಗ ಮಾಡುವ ಮನೋಭಾವವನ್ನು ಉತ್ತೇಜಿಸುತ್ತದೆ ಎಂದರು. ಮಾಜಿ ಡಿಆರ್‌ಡಿಒ ವಿಜ್ಞಾನಿ ಪ್ರೊ.ರಾವ್ ತಟವರ್ತಿ, ಎಂಫಾಸಿಸ್ ಸಂಸ್ಥೆಯ ಎಐ ಗವರ್ನೆನ್ಸ್ ಲೀಡರ್ ಡಾ.ರಾಜಕುಮಾರ್ ಎಳಗಿರಿ ರಾಮಲಿಂಗಂ, ವಿಐಟಿ-ಎಪಿ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಪಿ.ಅರುಳ್ಮೋಳಿವರ್ಮನ್ ಮಾತನಾಡಿದರು.

ಗುಂಟೂರು, ವಿಜಯವಾಡದ 30 ಶಾಲೆಗಳ ವಿದ್ಯಾರ್ಥಿಗಳು ಈ ವಿಜ್ಞಾನ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು.

ರಿಜಿಸ್ಟ್ರಾರ್ ಡಾ.ಜಗದೀಶ್ ಮುಡಿಗಂಟಿ, ಎಸ್‌ಎಎಸ್ ಡೀನ್ ಪ್ರೊ.ಎಸ್. ಶ್ರೀನಿವಾಸ್, ಎನ್‌ಎಸ್‌ಡಿ ಸಂಚಾಲಕ ಡಾ.ಮನ್ಮಥ ರಾವ್ ಬಂಕಿ ಸೇರಿದಂತೆ ಹಲವು ವಿಭಾಗದ ಮುಖ್ಯಸ್ಥರು ಮತ್ತು ಗಣ್ಯರು ಉಪಸ್ಥಿತರಿದ್ದರು.



ವಿಐಟಿ-ಎಪಿ ಕ್ಯಾಂಪಸ್‌ನಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಲ್ಲಿ ಇಸ್ರೋ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್ ಕುಮಾರ್ ಮಾತನಾಡಿದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಪಶ್ಚಿಮ ಏಷ್ಯಾದಲ್ಲಿ ಅಮೆರಿಕದ ಸೇನಾ ಪ್ರಾಬಲ್ಯ

ವಾಷಿಂಗ್ಟನ್ (ಎಎಫ್‌ಪಿ): ಇರಾನ್ ವಿರುದ್ಧ ಸಮರ ಸಾರಿರುವ ಅಮೆರಿಕವು ಪಶ್ಚಿಮ ಏಷ್ಯಾದಲ್ಲಿ ತನ್ನ ಸೇನಾ ಪ್ರಾಬಲ್ಯವನ್ನು ಹೊಂದಿದೆ. ಅಮೆರಿಕದ ಯುದ್ಧನೌಕೆ, ಯುದ್ಧವಿಮಾನ ಮತ್ತು ಇಂಧನ ಮರುಪೂರಣಕ್ಕೆ ಬಳಸುವ ವಿಮಾನ ಸೇರಿದಂತೆ ಹಲವು ಸೇನಾ ಪರಿಕರಗಳು ಅಲ್ಲಿವೆ.

ಅಮೆರಿಕವು ಪಶ್ಚಿಮ ಏಷ್ಯಾದಲ್ಲಿ 12ಕ್ಕೂ ಹೆಚ್ಚು ಯುದ್ಧನೌಕೆಗಳನ್ನು ಹೊಂದಿದೆ. ಅರಬ್ಬಿ ಸಮುದ್ರದಲ್ಲಿ ಯುದ್ಧನೌಕೆ ಯುಎಸ್‌ಎಸ್ ಅಬ್ರಹಾಂ ಲಿಂಕನ್ ನಿಯೋಜನೆಗೊಂಡಿದೆ. ವಿಶ್ವದ ಅತಿದೊಡ್ಡ ಯುದ್ಧವಿಮಾನ ವಾಹಕ ನೌಕೆ ಯುಎಸ್‌ಎಸ್ ಗೆರಾಲ್ಡ್ ಆರ್ ಫೋರ್ಡ್ ಮೆಡಿಟರೇನಿಯನ್ ಸಾಗರದಲ್ಲಿದೆ. ದೇಶವೊಂದು ಪಶ್ಚಿಮ ಏಷ್ಯಾದಲ್ಲಿ ತನ್ನ ಎರಡು ಯುದ್ಧ ವಿಮಾನ ವಾಹಕ ನೌಕೆಗಳನ್ನು ಹೊಂದಿರುವುದು ತೀರಾ ಅಪರೂಪ.

ಎಫ್–22 ರಾಪ್ಟರ್ ಮತ್ತು ರಹಸ್ಯವಾಗಿ ಕಾರ್ಯಾಚರಣೆ ನಡೆಸುವ ಎಫ್–35 ಯುದ್ಧವಿಮಾನ, ಎಫ್–15 ಮತ್ತು ಎಫ್–16 ಯುದ್ಧವಿಮಾನ ಮತ್ತು ಕೆಸಿ–135 ಇಂಧನ ಮರುಪೂರಣ ವಿಮಾನ ಸೇರಿದಂತೆ 12ಕ್ಕೂ ಹೆಚ್ಚು ಯುದ್ಧ ವಿಮಾನಗಳು ಪಶ್ಚಿಮ ಏಷ್ಯಾದಲ್ಲಿ ನಿಯೋಜನೆಗೊಂಡಿವೆ. ಇದರೊಂದಿಗೆ ಹಲವಾರು ಕ್ಷಿಪಣಿ ನಾಶಕಗಳು ಇವೆ.

ಕ್ಷಿಪಣಿ ದಾಳಿ: 85 ಮಂದಿ ಸಾವು

ಇರಾನ್‌ನ 2 ಶಾಲೆಗಳ ಮೇಲೆ ಇಸ್ರೇಲ್ ಪಡೆಗಳಿಂದ ವೈಮಾನಿಕ ದಾಳಿ

ಟೆಹರಾನ್ (ಪಿಟಿಐ/ರಾಯಿಟರ್ಸ್): ದಕ್ಷಿಣ ಇರಾನ್‌ನ ಹೊರ್ಮ್‌ಜ್‌ಗನ್ ಪ್ರಾಂತ್ಯದ ಮಿನಾಬ್ ಪಟ್ಟಣದಲ್ಲಿರುವ ಪ್ರಾಥಮಿಕ ಶಾಲೆಯನ್ನು ಗುರಿಯಾಗಿರಿಸಿಕೊಂಡು ಇಸ್ರೇಲ್ ನಡೆಸಿದ ಸೇನಾ ದಾಳಿಯಲ್ಲಿ ಮಕ್ಕಳು ಸೇರಿದಂತೆ 85 ಮಂದಿ ಮೃತಪಟ್ಟಿದ್ದಾರೆ.

ವಿದ್ಯಾರ್ಥಿನಿಯರ ಶಾಲೆಯ ಮೇಲೆ ಈ ದಾಳಿ ನಡೆದಿದೆ. ಮೃತಪಟ್ಟವರಲ್ಲಿ ಮಕ್ಕಳೇ ಹೆಚ್ಚಿದ್ದಾರೆ ಎಂದು ಅಲ್ ಜಜೀರಾ ಸುದ್ದಿಸಂಸ್ಥೆ ವರದಿ ಮಾಡಿದೆ.

ಶಾಲೆಯ ಮೇಲೆ ಮೂರು ಕ್ಷಿಪಣಿ ದಾಳಿ ನಡೆದಿದ್ದು, ಅವಶೇಷಗಳನ್ನು ತಕ್ಷಣವೇ ಸ್ಥಳಾಂತರಿಸಲಾಗಿದೆ. ಘಟನೆಯಲ್ಲಿ 63ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದು ಶಿಕ್ಷಣ ಇಲಾಖೆ ತಿಳಿಸಿದೆ.

> **ಇರಾನ್ ಮೇಲೆ ದಾಳಿ ನಡೆಸುವುದಕ್ಕಾಗಿ ವಿವಿಧ ದೇಶಗಳಲ್ಲಿನ ತನ್ನ ಸೇನಾ ನೆಲೆಗಳನ್ನು ಅಮೆರಿಕ ಹಾಗೂ ಇಸ್ರೇಲ್ ಬಳಸಿಕೊಂಡಿವೆ. ಈ ಎಲ್ಲ ಸ್ಥಳಗಳು ನಮ್ಮ ಸಶಸ್ತ್ರ ಪಡೆಗಳ ಗುರಿಗಳಾಗಿವೆ**
> **ಅಬ್ಬಾಸ್ ಅರಾಘ್ಚಿ,** ಇರಾನ್ ವಿದೇಶಾಂಗ ಸಚಿವ

ಇಸ್ರೇಲ್ ಪಡೆಗಳು ನಡೆಸಿದ ದಾಳಿಯಲ್ಲಿ ಇರಾನ್‌ನ ಸೇನಾ ಮುಖ್ಯಸ್ಥ ಜನರಲ್ ಅಮೀರ್ ಹತಾಮಿ ಕೂಡ ಮೃತಪಟ್ಟಿದ್ದಾರೆ ಎಂದು ಇಸ್ರೇಲ್‌ನ ಮಾಧ್ಯಮಗಳು ವರದಿ ಮಾಡಿವೆ.



ಅಮೆರಿಕ, ಇಸ್ರೇಲ್ ದಾಳಿಯನ್ನು ಖಂಡಿಸಿ ಇರಾನ್‌ನಲ್ಲಿ ಸರ್ಕಾರವನ್ನು ಬೆಂಬಲಿಸಿ ಸ್ಥಳೀಯರು ಟೆಹರಾನ್‌ನಲ್ಲಿ ರಾಷ್ಟ್ರಧ್ವಜ ಪ್ರದರ್ಶಿಸಿದರು –ಎಪಿ ಚಿತ್ರ

'ಇರಾನ್ ದಾಳಿಗೆ ಬ್ರಿಟನ್ ಯುದ್ಧ ವಿಮಾನಗಳ ಬಳಕೆ'

ಲಂಡನ್ (ಎಎಫ್‌ಪಿ): 'ಇರಾನ್ ಮೇಲೆ ಶನಿವಾರ ಅಮೆರಿಕ ಹಾಗೂ ಇಸ್ರೇಲ್ ಸೇನೆಯು ಜಂಟಿಯಾಗಿ ನಡೆಸಿದ ಸೇನಾ ದಾಳಿಯಲ್ಲಿ ಬ್ರಿಟನ್‌ನ ಯುದ್ಧ ವಿಮಾನಗಳು ಭಾಗಿಯಾಗಿದ್ದವು' ಎಂದು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ತಿಳಿಸಿದ್ದಾರೆ.

'ದೇಶದ ಜನರ ರಕ್ಷಣೆಯ ಜೊತೆಗೆ ಮಿತ್ರಪಡೆಗಳ ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ಸಂಘಟಿತ ಪ್ರಾದೇಶಿಕ ರಕ್ಷಣಾ ಕಾರ್ಯಾಚರಣಾ ಭಾಗವಾಗಿ ಆಕಾಶದಲ್ಲಿ ನಾವು ಕೂಡ ಕೈ ಜೋಡಿಸಿದ್ದೆವು' ಎಂದು ಅವರು ವಿವರಿಸಿದ್ದಾರೆ.

ದಾಳಿ ಬಳಿಕ ಮೊದಲ ಬಾರಿಗೆ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಅಂತರರಾಷ್ಟ್ರೀಯ ಕಾನೂನಿಗೆ ಅನುಗುಣವಾಗಿಯೇ ಈ ದಾಳಿ ನಡೆಸಲಾಗಿದೆ' ಎಂದು ಹೇಳಿದ್ದಾರೆ.

ಕೆನಡಾ ಬೆಂಬಲ: ಇರಾನ್ ಮೇಲೆ ಅಮೆರಿಕ ನಡೆಸಿರುವ ಸೇನಾ ದಾಳಿಗೆ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಬೆಂಬಲ ವ್ಯಕ್ತಪಡಿಸಿದ್ದಾರೆ.

ಟೆಹರಾನ್ ತನ್ನ ಪರಮಾಣು ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸಲು ಹಾಗೂ ಉಗ್ರಗಾಮಿ ಗುಂಪುಗಳಿಗೆ ಬೆಂಬಲ ನಿಲ್ಲಿಸಲು ವಿಫಲವಾಗಿತ್ತು ಎಂದು ಆರೋಪಿಸಿದ್ದಾರೆ.

'ಇರಾನ್ ಪರಮಾಣು ಶಸ್ತ್ರಾಸ್ತ್ರ ಹೊಂದುವುದನ್ನು ತಪ್ಪಿಸಲು, ಅಲ್ಲಿನ ಆಡಳಿತವು ಅಂತರರಾಷ್ಟ್ರೀಯ ಶಾಂತಿ ಹಾಗೂ ಭದ್ರತೆಗೆ ಧಕ್ಕೆ ಉಂಟಾಗುವುದನ್ನು ತಡೆಯಲು ಅಮೆರಿಕ ಸೇನಾ ದಾಳಿಯನ್ನು ಕೆನಡಾ ಕೂಡ ಬೆಂಬಲಿಸುತ್ತದೆ' ಎಂದು ಅವರು ಬಿಡುಗಡೆಗೊಳಿಸಿರುವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಪ್ರಸ್ತುತ ಅವರು, ಮುಂಬೈನಲ್ಲಿದ್ದಾರೆ.

ಬುರ್ಜ್ ಖಲೀಫಾದಿಂದ ಜನರ ಸ್ಥಳಾಂತರ

ದುಬೈ: ಇರಾನ್ ದಾಳಿಯಿಂದ ದುಬೈ ನಗರದಲ್ಲಿ ಕೂಡ ಸ್ಫೋಟಗಳು ಉಂಟಾದವು. ಇದರ ಬೆನ್ನಲ್ಲೇ, ವಿಶ್ವದಲ್ಲೇ ಅತ್ಯಂತ ಎತ್ತರದ ಕಟ್ಟಡ ಎಂದು ಖ್ಯಾತಿ ಪಡೆದ 'ಬುರ್ಜ್ ಖಲೀಫಾ'ದಿಂದ ಜನರನ್ನು ಸ್ಥಳಾಂತರ ಮಾಡಲಾಯಿತು.

ಇರಾನ್ ನಡೆಸಿದ ಕ್ಷಿಪಣಿ ದಾಳಿಯಿಂದ ಏಷ್ಯಾದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ ಎಂದು ಯುಎಇ ರಕ್ಷಣಾ ಇಲಾಖೆ ತಿಳಿಸಿದೆ.

ನಗರದ ಮಾನವ ನಿರ್ಮಿತ ದ್ವೀಪ ಪಾಮ್ ಜುಮೈರಾದ ಒಳಭಾಗದಲ್ಲಿ ಕೂಡ ಬಾಂಬ್ ಸ್ಫೋಟಿಸಿದ್ದು, ದಟ್ಟಣೆಯ ಹೊಗೆ ಆವರಿಸಿದೆ. ಘಟನೆ ನಡೆದಿರುವುದನ್ನು ದುಬೈನ ಅಧಿಕಾರಿಗಳು ಖಚಿತಪಡಿಸಿದ್ದು, ತುರ್ತು ನಿರ್ವಹಣಾ ಪಡೆಯನ್ನು ಸ್ಥಳಕ್ಕೆ ಕಳುಹಿಸಲಾಗಿದ್ದು, ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದು ತಿಳಿಸಿದ್ದಾರೆ.



ಪಾಮ್ ಜುಮೈರಾದಲ್ಲಿ ಕಾಣಿಸಿಕೊಂಡ ಬೆಂಕಿ

ಅಲೀಪುರದಲ್ಲಿ ಆತಂಕ

● ಡಿ.ಎಂ.ಕುರ್ಕೆ ಪ್ರಶಾಂತ್

ಚಿಕ್ಕಬಳ್ಳಾಪುರ: ಅತ್ತ ಇರಾನ್‌ನಲ್ಲಿ ಯುದ್ಧ ಆರಂಭವಾದರೆ ಇತ್ತ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಅಲೀಪುರದ ಗಲ್ಲಿ, ಗಲ್ಲಿಗಳಲ್ಲಿ, ಹತ್ತು ಹಲವು ಮನೆಗಳಲ್ಲಿ ಆತಂಕ ಶುರುವಾಗುತ್ತದೆ.

ಅಲೀಪುರ ಮತ್ತು ಇರಾನ್ ನಡುವೆ ಹಲವು ದಶಕಗಳಿಂದ ನಂಟಿದೆ. ವೈದ್ಯಕೀಯ ಶಿಕ್ಷಣ, ಧಾರ್ಮಿಕ ಶಿಕ್ಷಣ, ಧಾರ್ಮಿಕ ಪ್ರವಾಸದ ಕಾರಣಕ್ಕೆ ಅಲೀಪುರದ 100ಕ್ಕೂ ಹೆಚ್ಚು ಶಿಯಾ ಮುಸ್ಲಿಮರು ಇರಾನ್‌ನ ರಾಜಧಾನಿ ಟೆಹರಾನ್, ಕುಮ್, ಮಶಾದ್ ಸೇರಿದಂತೆ ವಿವಿಧ ನಗರಗಳಲ್ಲಿ ನೆಲೆಸಿದ್ದಾರೆ.

'ಇರಾನ್‌ನಲ್ಲಿರುವ ಅಕ್ಕನ ಮಗನಿಗೆ ಬೆಳಗ್ಗೆ 11ರಿಂದ ಫೋನ್ ಮಾಡುತ್ತಲೇ ಇದ್ದೇನೆ. ಆತ ಸಂಪರ್ಕಕ್ಕೆ ಸಿಗುತ್ತಿಲ್ಲ' ಅಲೀಪುರದ ಸೈಯದ್ ಮೆಹದಿ ಆತಂಕ ಹಂಚಿಕೊಂಡರು.

2025ರ ಜೂನ್‌ನಲ್ಲಿ ಇರಾನ್ ಮತ್ತು ಇಸ್ರೇಲ್ ನಡುವೆ ಯುದ್ಧ ನಡೆದಾಗ 105 ಜನರು ಇರಾನ್ ತೊರೆದು ಸ್ವಗ್ರಾಮ ಅಲೀಪುರಕ್ಕೆ ಬಂದಿದ್ದರು. ಶಾಂತಿ ನೆಲೆಸಿದ ತರುವಾಯ ಇರಾನ್‌ಗೆ ಮರಳಿದ್ದರು.

> **ಶಾಂತಿ ನೆಲಸಲಿ. ಮನುಷ್ಯತ್ವ ಕಾಪಾಡುವವರಿಗೆ ಒಳ್ಳೆಯದಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇವೆ**
> **ಅಲಿ ಅಬ್ಬಾಸ್,** ಅಂಜುಮನ್ ಎ ಜಾಫರಿಯಾ ಸಂಘದ ಅಧ್ಯಕ್ಷ, ಅಲೀಪುರ

'ಇರಾನ್‌ನಲ್ಲಿರುವ ಇಸ್ರೇಲ್ ಗೂಢಚಾರರು ದೇಶದ ಬೆಳವಣಿಗೆಗಳ ಬಗ್ಗೆ ತಮ್ಮವರಿಗೆ ಮಾಹಿತಿ ಕಳುಹಿಸುವರು ಎಂದು ಇರಾನ್‌ನಲ್ಲಿ ಅಂತರ್ಜಾಲ ಸ್ಥಗಿತಗೊಳಿಸಲಾಗಿದೆ. ಅಕ್ಕನ ಮಗ ಕುಮ್‌ನಲ್ಲಿ ಧಾರ್ಮಿಕ ಶಿಕ್ಷಣ ಪಡೆಯುತ್ತಿದ್ದಾನೆ. ಅಕ್ಕ, ಭಾವ ನಿತ್ಯ ಕರೆ ಮಾಡಿ ಮಾತನಾಡುತ್ತಿದ್ದರು. ಈಗ ಸಾಧ್ಯವಾಗುತ್ತಿಲ್ಲ. ಟಿವಿ ನೋಡಿ ಅಲ್ಲಿನ ಸ್ಥಿತಿ ತಿಳಿಯುತ್ತಿದ್ದೇವೆ ಎಂದು ಸೈಯದ್ ಮೆಹದಿ 'ಪ್ರಜಾವಾಣಿ'ಗೆ ತಿಳಿಸಿದರು.



ಗೌರಿಬಿದನೂರು ತಾಲ್ಲೂಕಿನ ಅಲೀಪುರಕ್ಕೆ ಅಯಾತೊಲ್ಲಾ ಅಲಿ ಖಮೇನಿ ಅವರು ಭೇಟಿ ನೀಡಿದ ಸಂದರ್ಭ

ಇರಾನ್ ಜತೆ ಅಲೀಪುರಕ್ಕೆ ದಶಕಗಳ ನಂಟು!

20 ಸಾವಿರ ಜನಸಂಖ್ಯೆಯ ಅಲೀಪುರದಲ್ಲಿ ಶಿಯಾ ಮುಸ್ಲಿಮರದ್ದೇ ಪ್ರಾಬಲ್ಯ. 'ಇರಾನ್' ನಮ್ಮ ಧರ್ಮ ಭೂಮಿ ಎನ್ನುವ ಪೂಜ್ಯ ಭಾವನೆ ಇಲ್ಲಿನ ಜನರಲ್ಲಿದೆ.

ಇರಾನ್‌ನ ಇಂದಿನ ಪರಮೋಚ್ಚ ನಾಯಕ ಅಯಾತೊಲ್ಲಾ ಅಲಿ ಖಮೇನಿ ಅವರ ಧಾರ್ಮಿಕ ಆದೇಶಗಳನ್ನು ಪಾಲಿಸುವ ದೊಡ್ಡ ವರ್ಗವಿದೆ.

ಖಮೇನಿ 1986ರಲ್ಲಿ ಅಲೀಪುರಕ್ಕೆ ಭೇಟಿ ನೀಡಿದ್ದರು. ಈ ಭೇಟಿಯೇ ಇರಾನ್ ಮತ್ತು ಅಲೀಪುರದ ನಡುವಿನ ಬಾಂಧವ್ಯ ಸಾರುತ್ತದೆ. ಅಯಾತೊಲ್ಲಾ ಅಲಿ ಖಮೇನಿ ಅವರ ಗುರು ಅಯಾತೊಲ್ಲಾ ಇಮಾಮ್ ಖಮೇನಿ ಹೆಸರಿನಲ್ಲಿ ಪಟ್ಟಣದಲ್ಲಿ ಆಸ್ಪತ್ರೆ ಇದೆ. ಈ ಆಸ್ಪತ್ರೆ ಉದ್ಘಾಟನೆಗಾಗಿ ಅಯಾತೊಲ್ಲಾ ಅಲಿ ಖಮೇನಿ ಅಲೀಪುರಕ್ಕೆ ಬಂದಿದ್ದರು.

'ಸಂಘರ್ಷ ಕೊನೆಗೊಳಿಸಿ, ಸಾರ್ವಭೌಮತೆ ಕಾಪಾಡಿ'

'ಇರಾನ್ ಮೇಲಿನ ಸಂಘರ್ಷವನ್ನು ಕೊನೆಗೊಳಿಸಿ, ಸಾರ್ವಭೌಮತೆ ಹಾಗೂ ಪ್ರಾದೇಶಿಕ ಸಮಗ್ರತೆಯನ್ನು ಗೌರವಿಸಬೇಕು' ಎಂದು ಭಾರತ ಮನವಿ ಮಾಡಿದೆ.

ಇರಾನ್ ಹಾಗೂ ಗಲ್ಫ್ ಬೆಳವಣಿಗೆಗಳ ಕುರಿತಂತೆ ಮೊದಲ ಬಾರಿ ಪ್ರತಿಕ್ರಿಯೆ ನೀಡಿದ ಭಾರತ, ತೀವ್ರ ಕಳವಳ ಉಂಟುಮಾಡಿದೆ ಎಂದು ತಿಳಿಸಿದೆ.

'ಎಲ್ಲಾ ಕಡೆಯವರು ಸಂಯಮದಿಂದ ವರ್ತಿಸಬೇಕು, ಉದ್ವಿಗ್ನತೆಯಿಂದ ತಪ್ಪಿಸಬೇಕು. ಜನರ ಪ್ರಾಣ ರಕ್ಷಣೆಗೆ ಆದ್ಯತೆ ನೀಡಬೇಕು' ಎಂದು ವಿದೇಶಾಂಗ ಇಲಾಖೆಯು ತಿಳಿಸಿದೆ. ಪರಿಸ್ಥಿತಿ ಉದ್ವಿಗ್ನಗೊಳ್ಳದಂತೆ, ಮಾತುಕತೆ ಹಾಗೂ ರಾಜತಾಂತ್ರಿಕ ಮಾರ್ಗವನ್ನು ಅನುಸರಿಸಬೇಕು. ಸಾರ್ವಭೌಮತೆ ಹಾಗೂ ಪ್ರಾದೇಶಿಕ ಸಮಗ್ರತೆಯನ್ನು ಎಲ್ಲರೂ ಗೌರವಿಸಬೇಕು' ಎಂದು ತಿಳಿಸಿದೆ.

ದುಬೈ ವಿಮಾನ ನಿಲ್ದಾಣದಲ್ಲಿ ಸಿಲುಕಿದ ಶಾಸಕ ಭೋಜೇಗೌಡ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ದುಬೈ ವಿಮಾನ ನಿಲ್ದಾಣದಲ್ಲಿ ವಿಧಾನ ಪರಿಷತ್ ಸದಸ್ಯ ಎಸ್.ಎಲ್.ಭೋಜೇಗೌಡ ಸಿಲುಕಿದ್ದಾರೆ.

ದುಬೈ ವಿಮಾನ ನಿಲ್ದಾಣದಿಂದ 'ಪ್ರಜಾವಾಣಿ' ಜತೆ ದೂರವಾಣಿಯಲ್ಲಿ ಮಾತನಾಡಿದ ಅವರು, 'ನಾನು ಜೊಹನ್ಸ್ ಬರ್ಗ್‌ನಿಂದ ದುಬೈ ಮೂಲಕ ಭಾರತಕ್ಕೆ ಬರಬೇಕಿತ್ತು. ದುಬೈನಲ್ಲಿ ವಿಮಾನಗಳ ಸಂಚಾರ ಸ್ಥಗಿತಗೊಂಡಿವೆ. ವಿಮಾನದಿಂದ ನಮ್ಮನ್ನು ಕೆಳಗೆ ಇಳಿಸಿದ್ದಾರೆ. ಮುಂದೇನು ಎಂದು ಯಾರೂ ಹೇಳುತ್ತಿಲ್ಲ' ಎಂದರು.



ಎಸ್.ಎಲ್. ಭೋಜೇಗೌಡ

ಇಲ್ಲಿ ಎಲ್ಲರೂ ಆತಂಕದಲ್ಲಿದ್ದಾರೆ. ಊಟಕ್ಕೂ ತೊಂದರೆಯಾಗಿದೆ. ವಿಮಾನ ನಿಲ್ದಾಣದಲ್ಲಿ ಜನ ಹೆಚ್ಚಿದ್ದು, ಮೊಬೈಲ್ ಫೋನ್ ಚಾರ್ಜ್ ಮಾಡಿಕೊಳ್ಳುವುದು ಕಷ್ಟವಿದೆ' ಎಂದು ಹೇಳಿದರು.

'ವೀಸಾ ಇದ್ದವರಿಗೆ ಮಾತ್ರ ವಿಮಾನ ನಿಲ್ದಾಣದಿಂದ ಆಚೆ ಹೋಗಲು ಅವಕಾಶ ಇದೆ. ನನಗೆ ಅಮೆರಿಕ ವೀಸಾ ಇದೆ. ಆದರೆ, ಆಚೆ ಹೋದರೆ ಎಷ್ಟು ಸುರಕ್ಷಿತ ಎನ್ನುವುದು ಕೂಡ ಮುಖ್ಯ. ಆದ್ದರಿಂದ ಪತ್ನಿ ಜತೆಗೆ ಇಲ್ಲೇ ಇದ್ದೇನೆ. ಸದ್ಯಕ್ಕೆ ಯಾವುದೇ ತೊಂದರೆ ಇಲ್ಲ. ಮುಂದೇನು ಎಂಬ ಆತಂಕವಿದೆ' ಎಂದರು.

ಪಶ್ಚಿಮ ಏಷ್ಯಾ: ವಿಮಾನಗಳ ಹಾರಾಟ ರದ್ದು

ಪ್ರಜಾವಾಣಿ ವಾರ್ತೆ

ನವದೆಹಲಿ: ಇರಾನ್ ಮೇಲೆ ಅಮೆರಿಕ ಹಾಗೂ ಇಸ್ರೇಲ್ ದಾಳಿ ನಡೆಸಿರುವಂತೆಯೇ ಏರ್ ಇಂಡಿಯಾ, ಏರ್ ಇಂಡಿಯಾ ಎಕ್ಸ್‌ಪ್ರೆಸ್, ಇಂಡಿಗೊ ಸೇರಿದಂತೆ ಹಲವು ವಿಮಾನಯಾನ ಸಂಸ್ಥೆಗಳು ಪಶ್ಚಿಮ ಏಷ್ಯಾ ದೇಶಗಳಿಗೆ ವಿಮಾನ ಸೇವೆಗಳನ್ನು ಶನಿವಾರ ತಾತ್ಕಾಲಿಕವಾಗಿ ರದ್ದುಗೊಳಿಸಿವೆ.



ದುಬೈ, ಜೆದ್ದಾ, ದೋಹಾ, ಅಬುಧಾಬಿ, ಬಹರೇನ್, ಕುವೈತ್, ಶಾರ್ಜಾಗಳಿಂದ ಬರುವ ಹಾಗೂ ಅಲ್ಲಿಗೆ ತೆರಳುವ ವಿಮಾನಗಳ ಸಂಚಾರವನ್ನು ತಾತ್ಕಾಲಿಕವಾಗಿ ರದ್ದುಗೊಳಿಸಿರುವುದಾಗಿ ಇಂಡಿಗೊ ತಿಳಿಸಿದೆ. ಪ್ರಯಾಣಿಕರು ಹಾಗೂ ವಿಮಾನ ಸಿಬ್ಬಂದಿಯ ಸುರಕ್ಷತೆಗಾಗಿ ಈ ಕ್ರಮ ಕೈಗೊಂಡಿರುವುದಾಗಿ ಹೇಳಿದೆ.

ಪಶ್ಚಿಮ ಏಷ್ಯಾ ದೇಶಗಳಿಗೆ ತೆರಳುವ ಎಲ್ಲಾ ಅಂತರರಾಷ್ಟ್ರೀಯ ವಿಮಾನಗಳನ್ನು ರದ್ದುಗೊಳಿಸಲಾಗಿದ್ದು, ಪರಿಸ್ಥಿತಿಯನ್ನು ಅವಲೋಕಿಸುತ್ತಿದ್ದೇವೆ. ಅಗತ್ಯಕ್ಕೆ ತಕ್ಕಂತೆ ಕಾರ್ಯಾಚರಣೆ ಆರಂಭಿಸಲಾಗುವುದು ಎಂದು ಏರ್ ಇಂಡಿಯಾ ಎಕ್ಸ್‌ಪ್ರೆಸ್ ತಿಳಿಸಿದೆ.

ಇಸ್ರೇಲ್‌ನ ವಾಯುಪ್ರದೇಶದ ನಿರ್ಬಂಧದಿಂದಾಗಿ ದೆಹಲಿ–ಟೆಲ್ ಅವಿವ್ ಏರ್ ಇಂಡಿಯಾ ವಿಮಾನವನ್ನು ಸೌದಿ ಅರೇಬಿಯಾಗೆ ಮಾರ್ಗ ಬದಲಿಸಲಾಗಿತ್ತು. ಬಳಿಕ ಅಲ್ಲಿಂದ ಮುಂಬೈಗೆ ವಿಮಾನ ಹಿಂದಿರುಗಿದೆ.

ತಿರುವನಂತಪುರ ವಿಮಾನ ನಿಲ್ದಾಣವೂ ಕೂಡ ಪ್ರಯಾಣಿಕರ ಮಾರ್ಗಸೂಚಿ ಹೊರಡಿಸಿದ್ದು, ಕೆಲವು ಅಂತರ ರಾಷ್ಟ್ರೀಯ ವಿಮಾನಗಳ ಸಂಚಾರದಲ್ಲಿ ವ್ಯತ್ಯಯವಾಗಬಹುದು ಎಂದು ತಿಳಿಸಿದೆ.

ವಿವಿಧ ರಾಷ್ಟ್ರಗಳಿಂದ ಮುಂಜಾಗ್ರತಾ ಕ್ರಮ

ದುಬೈ(ರಾಯಿಟರ್ಸ್): ಇಸ್ರೇಲ್, ಇರಾನ್, ಇರಾಕ್ ಸೇರಿದಂತೆ ವಿವಿಧ ದೇಶಗಳ ವಾಯುಪ್ರದೇಶಗಳಲ್ಲಿ ವಿಮಾನ ಹಾರಾಟಕ್ಕೆ ನಿರ್ಬಂಧ ಹೇರಿರುವ ನಡುವೆಯೇ ಹಲವು ರಾಷ್ಟ್ರ ಗಳ ವಿಮಾನಯಾನ ಸಂಸ್ಥೆಗಳು ಮುಂಜಾಗ್ರತಾ ಕ್ರಮವಾಗಿ ವಿಮಾನಗಳ ಪ್ರಯಾಣವನ್ನು ರದ್ದುಗೊಳಿಸಿವೆ.

ಕತಾರ್‌ನಿಂದ ಹೊರಟಿದ್ದ ವಿಮಾನಗಳು ಕುವೈತ್–ಸೌದಿ ಅರೇಬಿಯಾ ಮಾರ್ಗವಾಗಿ ಮತ್ತೆ ಕತಾರ್‌ಗೆ ವಾಪಸಾಗಿವೆ. ರಷ್ಯಾದ ವಿಮಾನಯಾನ ಸಂಸ್ಥೆಗಳು ಇರಾನ್ ಹಾಗೂ ಇಸ್ರೇಲ್‌ಗೆ ವಿಮಾನ ಸಂಚಾರ ರದ್ದುಗೊಳಿಸಿವೆ.

ಜರ್ಮನಿಯ ಲುಫ್ತಾನ್ಸಾ ಸಂಸ್ಥೆಯು ಟೆಲ್ ಅವಿವ್, ಬೈರುತ್, ಒಮಾನ್ ಮಾರ್ಗದ ವಿಮಾನಗಳನ್ನು ಮಾ.7ರ ವರೆಗೆ ತಾತ್ಕಾಲಿಕವಾಗಿ ರದ್ದುಗೊಳಿಸಿದೆ. ಒಮಾನ್‌ನಿಂದಲೂ ಬಾಗ್ದಾದ್‌ಗೆ ಎಲ್ಲಾ ವಿಮಾನಗಳನ್ನೂ ರದ್ದುಗೊಳಿಸಲಾಗಿದೆ.

ಬ್ರಿಟಿಷ್ ಏರ್‌ವೇಸ್, ವಿಜ್ ಏರ್ ಹಾಗೂ ಗ್ರೀಸ್‌ನ ಏಜಿಯನ್ ವಿಮಾನಯಾನ ಸಂಸ್ಥೆಯೂ ಕೂಡ ವಿಮಾನಗಳ ಹಾರಾಟವನ್ನು ತಾತ್ಕಾಲಿಕವಾಗಿ ರದ್ದುಗೊಳಿಸಿವೆ.

ಕೊಲ್ಲಿ ಯುದ್ಧ: ಪರಿಸ್ಥಿತಿ ಉದ್ವಿಗ್ನ

ಒಂದನೇ ಪುಟದಿಂದ...

ಟೆಹರಾನ್‌ನ ಸ್ಥಳೀಯ ಕಾಲಮಾನ ಬೆಳಿಗ್ಗೆ 9.30ರ ಸುಮಾರಿಗೆ ನಗರದ ಪ್ರಮುಖ ಸ್ಥಳಗಳಲ್ಲಿ ಸ್ಫೋಟಗಳು ಉಂಟಾದವು. ನಗರದ ಜೊಮ್ಹೌರಿ ವೃತ್ತ, ಹಸನ್ ಅಬಾದ್ ವೃತ್ತದಲ್ಲಿ ದಟ್ಟ ಹೊಗೆ ಆವರಿಸಿಕೊಂಡಿತು.

ಉಳಿದಂತೆ, ಇರಾನ್‌ನ ಇತರೆ ನಗರಗಳಾದ ಇಸ್ಫಾನ್, ಖೊಮ್, ಕರಾಜ್ ಹಾಗೂ ಕೆರ್ಮಾನ್‌ಶಾದಲ್ಲಿ ಕೂಡ ಸ್ಫೋಟಗಳು ಸಂಭವಿಸಿದವು. ದಾಳಿಯ ಬೆನ್ನಲ್ಲೇ, ಇಡೀ ಇರಾನ್‌ನಲ್ಲಿ ಪ್ರಮುಖ ಸ್ಥಳಗಳಲ್ಲಿ ಸೈರನ್‌ಗಳು ಮೊಳಗಿದವು.

ದಾಳಿಯ ಬಳಿಕ ಇರಾನ್ ತನ್ನ ವಾಯುಪ್ರದೇಶವನ್ನು ಮುಚ್ಚಿದೆ ಎಂದು ಅಲ್ಲಿನ 'ತಾಸ್ನಿಮ್' ಸುದ್ದಿಸಂಸ್ಥೆ ವರದಿ ಮಾಡಿದೆ. ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್‌ನ ಹಿರಿಯ ಸೇನಾಧಿಕಾರಿಗಳು ಹಾಗೂ ರಾಜಕಾರಣಿಗಳು ದಾಳಿಯಲ್ಲಿ ಮೃತಪಟ್ಟಿದ್ದಾರೆ ಎಂದು ಇರಾನ್‌ನ ಮೂಲಗಳು ತಿಳಿಸಿವೆ.

ಟ್ರಂಪ್ ಸಮರ್ಥನೆ: ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್ ಮೇಲಿನ ದಾಳಿಯನ್ನು ಸಮರ್ಥಿಸಿಕೊಂಡಿದ್ದು, ದಾಳಿಯ ಸಮಯದಲ್ಲಿ ಇರಾನಿಯನ್ನರು ರಕ್ಷಣೆ ಪಡೆಯಬೇಕು ಎಂದು ಕೋರಿದ್ದಾರೆ.

'ಕೆಲ ನಿಮಿಷಗಳ ಹಿಂದೆ ಅಮೆರಿಕ ಸೇನಾ ಪಡೆಯು ಇರಾನ್‌ನ ಮೇಲೆ ದೊಡ್ಡ ಮಟ್ಟದ ದಾಳಿ ನಡೆಸಿದೆ. ಇರಾನ್‌ನ ಸರ್ಕಾರದಿಂದ ಎದುರಾಗುವ ಬೆದರಿಕೆಗಳನ್ನು ಮಟ್ಟಹಾಕುವ ಮೂಲಕ ಅಮೆರಿಕದ ಜನರನ್ನು ರಕ್ಷಿಸುವುದು ಇದರ ಉದ್ದೇಶವಾಗಿದೆ. ನಮ್ಮ ಕೆಲಸ ಮುಗಿದ ಮೇಲೆ ನಿಮ್ಮ ಸರ್ಕಾರವನ್ನು ನೀವೇ ವಹಿಸಿಕೊಳ್ಳಬೇಕು' ಎಂದು ವಿಡಿಯೊದಲ್ಲಿ ತಿಳಿಸಿದ್ದಾರೆ.

> **ತಾಯ್ನಾಡನ್ನು ರಕ್ಷಿಸಿಕೊಳ್ಳುವ ಹಾಗೂ ಶತ್ರು ಸೇನೆಯ ದಾಳಿಗಳನ್ನು ಎದುರಿಸುವ ಸಮಯ ಬಂದಿದೆ. ದೇಶವು ಯಾವುದಕ್ಕೂ ಹಿಂಜರಿಯುವುದಿಲ್ಲ**
> **ಇರಾನ್ ವಿದೇಶಾಂಗ ಇಲಾಖೆ**

ಇಸ್ರೇಲ್ ಬೆಂಬಲ: 'ದಬ್ಬಾಳಿಕೆಯ ನೊಗವನ್ನು ಕಿತ್ತೊಗೆದು ಮುಕ್ತ ಹಾಗೂ ಶಾಂತಿಯುತ ಇರಾನ್ ನಿರ್ಮಾಣಕ್ಕೆ ಇರಾನ್‌ನ ಎಲ್ಲ ನಾಗರಿಕರು ಕೈ ಜೋಡಿಸಬೇಕು' ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕರೆ ನೀಡಿದ್ದಾರೆ.

'ದಾಳಿಗೆ ಕೈ ಜೋಡಿಸಿದ ಟ್ರಂಪ್‌ಗೆ ಧನ್ಯವಾದ ಸಲ್ಲಿಸಿದ ಅವರು, ಮಾನವ ಕುಲಕ್ಕೆ ಕಂಟಕಪ್ರಾಯವಾಗಿರುವ ಇರಾನ್ ಪರಮಾಣು ಶಸ್ತ್ರಾಸ್ತ್ರ ಹೊಂದಿರಬಾರದು' ಎಂದು ಹೇಳಿದ್ದಾರೆ.

'ನಮ್ಮ ಜಂಟಿ ಕಾರ್ಯಾಚರಣೆಯಿಂದ ಧೈರ್ಯಶಾಲಿ ಇರಾನ್‌ನ ಜನರು ತಮ್ಮ ಹಣೆಬರಹವನ್ನು ತಾವೇ ಕೈಗೆ ತೆಗೆದುಕೊಳ್ಳಲಿದ್ದಾರೆ' ಎಂದು ಹೇಳಿದ್ದಾರೆ.

'ಇಸ್ರೇಲ್‌ನಲ್ಲಿ ವಿಶೇಷ ತುರ್ತು ಪರಿಸ್ಥಿತಿ ಘೋಷಿಸಲಾಗಿದೆ' ಎಂದು ಇಸ್ರೇಲ್‌ನ ರಕ್ಷಣಾ ಸಚಿವರು ಘೋಷಿಸಿದ್ದಾರೆ.

ಇರಾನ್‌ನಿಂದ ಪ್ರತಿದಾಳಿ

ಒಂದನೇ ಪುಟದಿಂದ...

ತನ್ನ ರಾಜಧಾನಿ ಮನಮಾದಲ್ಲಿರುವ ಅಮೆರಿಕ ನೌಕಾ ಪಡೆಯ ಕೇಂದ್ರ ಕಚೇರಿ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿದೆ ಎಂದು ಬಹರೇನ್ ತಿಳಿಸಿದೆ. ಅಮೆರಿಕದ ಸೇನಾ ನೆಲೆಗಳನ್ನು ಹೊಂದಿರುವ ಸಂಯುಕ್ತ ಅರಬ್ ಸಂಸ್ಥಾನದಲ್ಲಿರುವ (ಯುಎಇ) ಅಲ್ ದಫ್ರ ಏರ್‌ಬೇಸ್, ದುಬೈನ ಜೆಬೆಲ್ ಅಲಿ ಪೋರ್ಟ್, ದೋಹಾದ ಅಲ್ ಉದೈದ್ ಏರ್‌ಬೇಸ್, ರಿಯಾದ್ ಪಟ್ಟಣಗಳ ಮೇಲೂ ಇರಾನ್ ತೀವ್ರತರವಾದ ಕ್ಷಿಪಣಿ ದಾಳಿಗಳನ್ನು ನಡೆಸಿದೆ.

ಇರಾನ್‌ನ ತೀವ್ರತರದ ಕ್ಷಿಪಣಿ, ಡ್ರೋನ್ ದಾಳಿಯ ಬಳಿಕ ಯುಎಇ ಕೂಡ ತನ್ನ ವಾಯುಪ್ರದೇಶವನ್ನು ಮುಚ್ಚಿದೆ. ಜೋರ್ಡನ್‌ನಲ್ಲಿ ಸೈರನ್‌ಗಳು ಮೊಳಗಿದವು.

'ಕುವೈತ್‌ನಲ್ಲಿರುವ ಅಲಿ ಅಲ್ ಸಲೇಂ ಏರ್‌ಬೇಸ್ ಗುರಿಯಾಗಿರಿಸಿ ಇರಾನ್ ನಡೆಸಿದ ಖಂಡಾಂತರ ಕ್ಷಿಪಣಿಗಳನ್ನು ಕುವೈತ್‌ನ ವಾಯುರಕ್ಷಣಾ ಪಡೆಯು ಯಶಸ್ವಿಯಾಗಿ ತಡೆದಿದೆ' ಎಂದು ರಕ್ಷಣಾ ಇಲಾಖೆ ವಕ್ತಾರ ಕರ್ನಲ್ ಸೌದ್ ಅಬ್ದುಲ್‌ಅಜೀಜ್ ಅಲ್– ಅತ್ವಾನ್ ತಿಳಿಸಿದ್ದಾರೆ.

ಇರಾನ್‌ಗೆ ಹುಥಿಗಳ ಬೆಂಬಲ: 'ಇರಾನ್ ಬೆಂಬಲಿತ ಯೆಮನ್‌ನ ಹುಥಿ ಬಂಡುಕೋರರು ಕೆಂಪು ಸಮುದ್ರದಲ್ಲಿ ದಾಳಿ ಪುನರಾರಂಭಿಸಿದ್ದು, ಇಸ್ರೇಲ್ ಮೇಲೂ ದಾಳಿ ನಡೆಸಿದ್ದೇವೆ' ಎಂದು ಹುಥಿ ಸಂಘಟನೆಯ ಇಬ್ಬರು ಪ್ರಮುಖ ಮುಖಂಡರು ಖಚಿತಪಡಿಸಿದ್ದಾರೆ.

ಭಾರತೀಯರಿಗೆ ಸಲಹೆ

ಒಂದನೇ ಪುಟದಿಂದ...

ಇಸ್ರೇಲ್‌ನಲ್ಲಿನ ಭಾರತ ರಾಯಭಾರ ಕಚೇರಿ ಕೂಡ ಅಲ್ಲಿನ ಭಾರತೀಯರಿಗೆ ಈ ಕುರಿತಂತೆ ಮಾರ್ಗಸೂಚಿ ಬಿಡುಗಡೆ ಮಾಡಿದೆ.

ಅನಗತ್ಯ ಪ್ರಯಾಣ ಮಾಡಬಾರದು ಮತ್ತು ಮನೆಯಲ್ಲಿಯೇ ಜಾಗರೂಕತೆಯಿಂದ ಇರುವಂತೆ ಯುಎಇಯಲ್ಲಿರುವ ಭಾರತೀಯ ರಾಯಭಾರ ಕಚೇರಿ ಸೂಚಿಸಿದೆ. ಜೋರ್ಡನ್‌ನಲ್ಲಿರುವ ಭಾರತೀಯ ಪ್ರವಾಸಿಗರು ನಾಗರಿಕ ವಿಮಾನಗಳ ಸಂಚಾರ ಸ್ಥಗಿತಗೊಳ್ಳುವ ಮುನ್ನ ದೇಶವನ್ನು ತೊರೆಯುವಂತೆ ಅಲ್ಲಿನ ಭಾರತೀಯ ರಾಯಭಾರ ಕಚೇರಿಯು ಮಾರ್ಗಸೂಚಿಯಲ್ಲಿ ತಿಳಿಸಿದೆ.

ಬಹರೇನ್, ಸೌದಿ ಅರೇಬಿಯಾ ದೇಶಗಳಲ್ಲಿರುವ ಭಾರತದ ರಾಯಭಾರ ಕಚೇರಿಗಳು ಕೂಡ ಅಲ್ಲಿನ ಭಾರತೀಯರಿಗೆ ಸುರಕ್ಷತೆ ಕುರಿತು ನಿರ್ದೇಶನ ನೀಡಿವೆ.

ಮಾತುಕತೆಗೆ ರಷ್ಯಾ ಆಗ್ರಹ

ಮಾಸ್ಕೊ (ಪಿಟಿಐ): ಅಮೆರಿಕ ಹಾಗೂ ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ದಾಳಿ ನಡೆಸಿರುವುದನ್ನು ರಷ್ಯಾ ಖಂಡಿಸಿದೆ.

'ಅಂತರರಾಷ್ಟ್ರೀಯ ಕಾನೂನು ಉಲ್ಲಂಘಿಸಿ, ಸಾರ್ವಭೌಮ ರಾಷ್ಟ್ರದ ವಿರುದ್ಧ ಅಪ್ರಚೋದಿತ ಆಕ್ರಮಣಶೀಲತೆಯು ಖಂಡನೀಯವಾಗಿದ್ದು, ಕೂಡಲೇ ರಾಜತಾಂತ್ರಿಕ ಮಾತುಕತೆಗೆ ಮುಂದಾಗಬೇಕು' ಎಂದು ಆಗ್ರಹಿಸಿದೆ.

ಸ್ವತಂತ್ರ ದೇಶವಾಗಿರುವ ಇರಾನ್ ಮೇಲೆ ಎರಡು ರಾಷ್ಟ್ರಗಳು ಪೂರ್ವಯೋಜಿತವಾಗಿ ದಾಳಿ ನಡೆಸಿವೆ ಎಂದು ರಷ್ಯಾ ವಿದೇಶಾಂಗ ಇಲಾಖೆಯು ಬಣ್ಣಿಸಿದೆ.

ಕೊಲ್ಲಿ ರಾಷ್ಟ್ರಗಳಿಗೆ ವಿಮಾನ ಸಂಚಾರ ರದ್ದು

ಒಂದನೇ ಪುಟದಿಂದ...

ಮಂಗಳೂರಿನಿಂದ ದುಬೈಗೆ ಹೋಗಬೇಕಿದ್ದ ಐಎಕ್ಸ್ 831 (ಐಎಕ್ಸ್ಇ–ಡಿಎಕ್ಸ್‌ಬಿ) ವಿಮಾನವು ಮಧ್ಯಾಹ್ನ 3ಕ್ಕೆ ಹಾರಾಟ ನಡೆಸಲು ರನ್‌ವೇಯತ್ತ ತೆರಳಿತ್ತು. ಇರಾನ್‌ನ ಆಗಸದಲ್ಲಿ ವಿಮಾನಗಳ ಹಾರಾಟ ನಿರ್ಬಂಧಿಸಿದ ಮಾಹಿತಿ ಸಿಕ್ಕಿದ ಬಳಿಕ ಆ ವಿಮಾನವನ್ನು ನಿಲ್ದಾಣಕ್ಕೆ ಮರಳಿ ಕರೆಸಿಕೊಳ್ಳಲಾಯಿತು. ಆ ವಿಮಾನದಲ್ಲಿ 174 ಮಂದಿ ಪ್ರಯಾಣಿಕರು ಹಾಗೂ ಆರು ಸಿಬ್ಬಂದಿ ಇದ್ದರು ಎಂದು ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ.

'ಇಲ್ಲಿಂದ ದೋಹಾಕ್ಕೆ ತೆರಳುತ್ತಿದ್ದ ಐಎಕ್ಸ್ 821 (ಐಎಕ್ಸ್ಇ–ಡಿಒಎಚ್) ವಿಮಾನವನ್ನು ಮುಂಬೈನಲ್ಲಿ ಇಳಿಸಲಾಯಿತು. ಆ ವಿಮಾನವು ವಾಪಸ್ ಮಂಗಳೂರಿಗೆ ಬಂತು. ಇಲ್ಲಿಂದ ದುಬೈಗೆ ತೆರಳಬೇಕಾದ ಮೂರು ವಿಮಾನಗಳು, ದಮಾಮ್, ಕುವೈತ್ ಹಾಗೂ ಅಬುಧಾಬಿಗೆ ತೆರಳಬೇಕಿದ್ದ ವಿಮಾನಗಳ ಹಾರಾಟ ರದ್ದುಪಡಿಸಲಾಗಿದೆ. ದೋಹಾದಿಂದ ಹಾಗೂ ದುಬೈನಿಂದ ಮಂಗಳೂರಿಗೆ ಬರಬೇಕಿದ್ದ ವಿಮಾನಗಳ ಹಾರಾಟವೂ ರದ್ದಾಗಿದೆ' ಎಂದು ಮೂಲಗಳು ತಿಳಿಸಿವೆ.

ಹೊರ್ಮುಜ್ ಜಲಸಂಧಿಗೆ ಅಡ್ಡಿ ಮಾರುಕಟ್ಟೆಗಳ ಮೇಲೆ ಪರಿಣಾಮ?

ದುಬೈ (ಎಪಿ/ಎಎಫ್‌ಪಿ): ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ವಿರುದ್ಧ ಆರಂಭಿಸಿರುವ ಯುದ್ಧವು ಜಾಗತಿಕ ಮಟ್ಟದಲ್ಲಿ ಮಾರುಕಟ್ಟೆಗಳ ಮೇಲೆ ಭಾರಿ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ತಜ್ಞರು ಹೇಳಿದ್ದಾರೆ.

ವಾಣಿಜ್ಯ ಉದ್ದೇಶದ ಸರಕು ಸಾಗಣೆಗೆ ಹೊರ್ಮುಜ್ ಜಲಸಂಧಿಯು ಸುರಕ್ಷಿತವಲ್ಲ ಎಂಬ ಸನ್ನಿವೇಶವನ್ನು ಇರಾನ್ ಸೃಷ್ಟಿಸಿದರೆ ಮಾರುಕಟ್ಟೆಗಳ ಮೇಲೆ ಅಗಾಧ ಪರಿಣಾಮ ಉಂಟಾಗುತ್ತದೆ ಎನ್ನಲಾಗಿದೆ.

ಕಚ್ಚಾ ತೈಲದ ವಹಿವಾಟಿನಲ್ಲಿ ತೊಡಗಿರುವ ಕೆಲವು ಪ್ರಮುಖ ಕಂಪನಿಗಳ ಪ್ರತಿನಿಧಿಗಳು ಹಾಗೂ ವರ್ತಕರು ಹೊರ್ಮುಜ್ ಕೊಲ್ಲಿಯ ಮೂಲಕ ಕಚ್ಚಾ ತೈಲ, ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಸಾಗಣೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಈ ಜಲಸಂಧಿಯ ಮೂಲಕ 2025ರಲ್ಲಿ ಪ್ರತಿದಿನ 1.4 ಕೋಟಿ ಬ್ಯಾರೆಲ್ ಕಚ್ಚಾ ತೈಲ ಸಾಗಣೆ ಆಗಿತ್ತು. ಇದು ಜಾಗತಿಕವಾಗಿ ಸಮುದ್ರ ಮಾರ್ಗವಾಗಿ ಸಾಗಣೆ ಆಗುವ ಒಟ್ಟು ಕಚ್ಚಾ ತೈಲದ ಅಂದಾಜು ಶೇ 33ರಷ್ಟು.

ಸಂಘರ್ಷ, ಬಿಕ್ಕಟ್ಟಿನ ಸಂದರ್ಭಗಳಲ್ಲಿ ಈ ಜಲಸಂಧಿಯ ಮೂಲಕ ಸರಕು ಸಾಗಣೆಗೆ ಅಡ್ಡಿ ಉಂಟುಮಾಡುವುದಾಗಿ ಇರಾನ್ ಈ ಹಿಂದೆ ಎಚ್ಚರಿಕೆ ನೀಡಿದ ನಿದರ್ಶನಗಳು ಇವೆ.

ಹೊರ್ಮುಜ್ ಜಲಸಂಧಿಯು ಕೊಲ್ಲಿ ರಾಷ್ಟ್ರಗಳನ್ನು ಹಿಂದೂ ಮಹಾಸಾಗರದ ಜೊತೆ ಸಂಪರ್ಕಿಸುತ್ತದೆ. 50 ಕಿ.ಮೀ. ಅಗಲವಾಗಿರುವ, 200 ಅಡಿಯಷ್ಟು ಆಳದ ಇದನ್ನು ಮಿಲಿಟರಿ ಬಲ ಬಳಸಿ ಸರಕು ಸಾಗಣೆ ಸಾಧ್ಯವಾಗದಂತೆ ಮಾಡಿಬಿಡಬಹುದು.

ಅಮೆರಿಕದ 'ಎನರ್ಜಿ ಇನ್ಫಾರ್ಮೇಷನ್ ಅಡ್ಮಿನಿಸ್ಟ್ರೇಷನ್' (ಇಐಎ) ಸಂಸ್ಥೆಯ ಪ್ರಕಾರ, ಜಾಗತಿಕ ಮಟ್ಟದಲ್ಲಿ ಎಲ್‌ಎನ್‌ಜಿಯ ಶೇ 20ರಷ್ಟು ವಹಿವಾಟು ಈ ಜಲಸಂಧಿಯ ಮೂಲಕ ಆಗುತ್ತದೆ.

ಈ ಜಲಸಂಧಿಯನ್ನು ಬಳಸದೆಯೇ ಕಚ್ಚಾ ತೈಲ ರವಾನೆ ಮಾಡುವ ಮೂಲಸೌಕರ್ಯವು ಸೌದಿ ಅರೇಬಿಯಾ ಮತ್ತು ಯುಎಇ ಬಳಿ ಇದೆ. ಆದರೆ ಹೀಗೆ ಮಾಡುವ ಸಾಮರ್ಥ್ಯ ಬಹಳ ಸೀಮಿತವಾಗಿದೆ. ಅವು ಜಲಸಂಧಿಯನ್ನು ಬಳಸದೆ ದಿನವೊಂದಕ್ಕೆ 26 ಲಕ್ಷ ಬ್ಯಾರೆಲ್ ಕಚ್ಚಾ ತೈಲ ಮಾತ್ರ ರವಾನಿಸಬಲ್ಲವು.

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1690 (1690)
ಸೋಯಾ (ರಿಫೈನ್ಡ್)	₹1360 (1360)
ಸೂರ್ಯಕಾಂತಿ (ರಿಫೈನ್ಡ್)	₹1585 (1585)
ಪಾಮೋಲಿನ್	₹1285 (1285)

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹530
	12 ಕ್ಕೆ	₹78
ಮೈಸೂರು:	100 ಕ್ಕೆ	₹530

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹505-786
ದ್ವಿತಳಿ (ಬಿ.ವಿ)	₹355-915

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹214.50
ಆರ್‌ಎಸ್‌ಎಸ್-5	₹208.50
ಗುಡ್ ಲಾಟ್	₹195.50

ಮುದ್ರಮನೆ ಕಾಫಿ (50 ಕೆಜಿಗೆ)	
ಎಪಿ	₹23000
ಎಸಿ	₹13000
ಆರ್‌ಪಿ	₹18200
ಆರ್‌ಸಿ	₹9850

ಮತ್ತೆ ₹3 ಲಕ್ಷ ದಾಟಿದ ಬೆಳ್ಳಿ

10 ಗ್ರಾಂ ಶುದ್ಧ ಚಿನ್ನದ ಧಾರಣೆ ₹1,73,500

ಪ್ರಜಾವಾಣಿ ವಾರ್ತೆ/ಪಿಟಿಐ

ಬೆಂಗಳೂರು: ಬೆಂಗಳೂರಿನ ರಿಟೇಲ್ ಮಾರುಕಟ್ಟೆಯಲ್ಲಿ ಶನಿವಾರ ನಡೆದ ವಹಿವಾಟಿನಲ್ಲಿ ಕೆ.ಜಿ ಬೆಳ್ಳಿ ದರವು ಮತ್ತೆ ₹3 ಲಕ್ಷದ ಗಡಿ ದಾಟಿದೆ.



10 ಗ್ರಾಂ ಚಿನ್ನದ ದರವು (ಶೇ 99.9ರಷ್ಟು ಪರಿಶುದ್ಧತೆ) ₹1,73,750ರಂತೆ ಮಾರಾಟವಾಗಿದ್ದರೆ, ಬೆಳ್ಳಿ ₹3,00,700ಕ್ಕೆ ತಲುಪಿದೆ.

ಈ ವರ್ಷದ ಜನವರಿ 1ರಂದು ಕೆ.ಜಿ ಬೆಳ್ಳಿ ಧಾರಣೆ ₹2,42,300 ಆಗಿತ್ತು, ಚಿನ್ನದ ದರವು ₹1,39,100 ಆಗಿತ್ತು. ಫೆಬ್ರುವರಿ 2ರಂದು ಈ ದರವು ಕ್ರಮವಾಗಿ ₹2,70,900 ಮತ್ತು ₹1,56,050ಕ್ಕೆ ತಲುಪಿತ್ತು.

ಜನವರಿ 19ರಂದು ಬೆಳ್ಳಿ ಧಾರಣೆ ಯು ಬೆಂಗಳೂರಿನಲ್ಲಿ ಮೊದಲ ಬಾರಿಗೆ ಮೂರು ಲಕ್ಷದ ಗಡಿ ದಾಟಿ, ₹3,07,900 ಆಗಿತ್ತು. ಇದಾದ ಹತ್ತೇ ದಿನಗಳಲ್ಲಿ (ಜನವರಿ 29ರಂದು) ಬೆಳ್ಳಿ ದರವು ₹4,10,900 ಆಗಿತ್ತು. ಆಗ ಚಿನ್ನದ ಬೆಲೆಯು ₹1,84,200 ಆಗಿತ್ತು. ಚಿನ್ನ ಮತ್ತು ಬೆಳ್ಳಿಯ ದರವು ಈ ದಾಖಲೆ ಬರೆದ ಬಳಿಕ ಕ್ರಮೇಣವಾಗಿ ಇಳಿಕೆ ಕಂಡಿವೆ.

ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಅನಿಶ್ಚಿತತೆ, ಅಮೆರಿಕದಲ್ಲಿನ ಸುಂಕ, ಲಾಭ ಗಳಿಕೆಗಾಗಿ ಹೂಡಿಕೆದಾರರು ಅಮೂಲ್ಯ ಲೋಹಗಳನ್ನು ಮಾರಾಟ ಮಾಡಲು ಮುಂದಾಗಿದ್ದು, ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿಮೆ ಮಾಡಬಹುದು ಎಂಬ ನಿರೀಕ್ಷೆ, ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿನ ಡಾಲರ್ ಮೌಲ್ಯ ಏರಿಳಿತವು ಸೇರಿದಂತೆ ವಿವಿಧ ಅಂಶಗಳು ಚಿನ್ನ ಮತ್ತು ಬೆಳ್ಳಿ ಧಾರಣೆಯ ಏರಿಳಿತಕ್ಕೆ ಕಾರಣವಾಗಿವೆ.

ಮುಂಬೈ ಧಾರಣೆ (ಶೇಂಗಾ) 28-02-2026	
ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ (ಹೊಸ)	8200-8300
ದಪ್ಪ ಗುಜರಾತ್ (ಹೊಸ)	9500-9600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1700 (1700)
ಒಂದು ವಾರದ ಡೆಲಿವರಿ	1695 (1695)
ಪಾಮ್ ವಾರದ ಡೆಲಿವರಿ	1283 (1283)
ಸೂರ್ಯಕಾಂತಿ ಎಣ್ಣೆ ಕಚ್ಚಾ	1510 (1510)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,69,300 (1,59,300)
ಬೆಳ್ಳಿ ಕೆ.ಜಿಗೆ	2,95,000 (2,70,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಚಟಕೆ ಸುದ್ದಿ

ಕುನೊ ಉದ್ಯಾನಕ್ಕೆ ಬಂದ 9 ಚೀತಾ



ಶಿಯೋಪುರ್ (ಪಿಟಿಐ): ದಕ್ಷಿಣ ಆಫ್ರಿಕಾದಿಂದ 9 ಚೀತಾಗಳನ್ನು ಮಧ್ಯ ಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಶನಿವಾರ ತರಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಚೀತಾಗಳನ್ನು ಭಾರತೀಯ ವಾಯುಪಡೆ ವಿಮಾನದಲ್ಲಿ ಉದ್ಯಾನಕ್ಕೆ ತರಲಾಗಿದ್ದು, ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅವರು ಆರು ಹೆಣ್ಣು ಚೀತಾಗಳು ಮತ್ತು ಮೂರು ಗಂಡು ಚೀತಾಗಳನ್ನು ಉದ್ಯಾನದಲ್ಲಿರುವ ಕ್ವಾರಂಟೈನ್ ಪ್ರದೇಶಕ್ಕೆ ಬಿಟ್ಟರು ಎಂದು ಅಧಿಕಾರಿ ಎಲ್ ಕೃಷ್ಣಮೂರ್ತಿ ತಿಳಿಸಿದರು.

ಆಫ್ರಿಕಾದಿಂದ ಭಾರತಕ್ಕೆ ತರಲಾದ ಚೀತಾಗಳ ಮೂರನೇ ಬ್ಯಾಚ್ ಇದಾಗಿದ್ದು, ಈ ಮೂಲಕ ಭಾರತದಲ್ಲಿರುವ ಚೀತಾಗಳ ಸಂಖ್ಯೆಯು 48ಕ್ಕೆ ಏರಿಕೆಯಾಗಿದೆ. ಭಾರತದಲ್ಲಿ 2023ರಿಂದ ಈವರೆಗೆ 39 ಚೀತಾ ಮರಿಗಳು ಜನಿಸಿದ್ದು, 27 ಮರಿಗಳು ಬದುಕುಳಿದಿವೆ.

ಟಿಟಿಡಿ: ₹1 ಕೋಟಿ ದೇಣಿಗೆ

ತಿರುಪತಿ (ಪಿಟಿಐ): ಹೈದರಾಬಾದ್‌ನ ಭಕ್ತರೊಬ್ಬರು ತಿರುಪತಿ ತಿರುಮಲ ದೇವಸ್ಥಾನಂನ (ಟಿಟಿಡಿ) ಶ್ರೀ ವೆಂಕಟೇಶ್ವರ ಗೋಸಂರಕ್ಷಣಾ ಟ್ರಸ್ಟ್‌ಗೆ ₹1 ಕೋಟಿ ದೇಣಿಗೆ ನೀಡಿದ್ದಾರೆ.

ರಾಚಮಲ್ಲು ವೆಂಕಟ ಸುಜಿತ ಅವರು ಟಿಟಿಡಿ ಅಧ್ಯಕ್ಷ ಬಿ.ಆರ್. ನಾಯ್ಡು ಅವರಿಗೆ ₹1 ಕೋಟಿ ಮೊತ್ತದ ಚೆಕ್ ಅನ್ನು ದೇಣಿಗೆಯಾಗಿ ನೀಡಿದರು ಎಂದು ಟಿಟಿಡಿ ಶುಕ್ರವಾರ ಹೇಳಿಕೆಯಲ್ಲಿ ತಿಳಿಸಿದೆ.

ಗೋವುಗಳ ಸಂರಕ್ಷಣೆಯ ಉದ್ದೇಶದಿಂದ ವೆಂಕಟೇಶ್ವರ ಗೋಸಂರಕ್ಷಣಾ ಟ್ರಸ್ಟ್ ಅನ್ನು ಸ್ಥಾಪಿಸಲಾಗಿದೆ.

‘ಸಂಸ್ಕೃತಿ, ನೈತಿಕತೆ ಸಂಘದ ಅಡಿಪಾಯ’

ಕುರುಕ್ಷೇತ್ರ (ಪಿಟಿಐ): ಸಂಸ್ಕೃತಿ, ಮೌಲ್ಯಗಳು, ಮತ್ತು ನೈತಿಕತೆಯು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಅಡಿಪಾಯವನ್ನು ರೂಪಿಸಿವೆ ಎಂದು ಅದರ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದರು.



ಮೋಹನ್ ಭಾಗವತ್

ಆರ್‌ಎಸ್‌ಎಸ್‌ನ ಶತಮಾನೋತ್ಸವದ ಅಂಗವಾಗಿ ಕುರುಕ್ಷೇತ್ರ ವಿಶ್ವವಿದ್ಯಾಲಯ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವತ್ ಮಾತನಾಡಿದರು. ‘ಆರೋಗ್ಯಕರ ಮತ್ತು ಸದೃಢ ಸಮಾಜವನ್ನು ನಿರ್ಮಿಸಲು ನೈತಿಕ ಮೌಲ್ಯಗಳು, ಶಿಸ್ತಿನ ನಡವಳಿಕೆ, ಸಾಂಸ್ಕೃತಿಕ ನೆಲೆಗಟ್ಟು ಮತ್ತು ಸರಿಯಾದ ಪ್ರಯತ್ನಗಳ ಸಾಮರಸ್ಯದ ಮಿಶ್ರಣದ ಅಗತ್ಯವಿದೆ’ ಎಂದರು.

‘ಕುಟುಂಬ ಪ್ರಬೋಧನ’ದ (ಕುಟುಂಬ ಜಾಗೃತಿ) ಮಹತ್ವವನ್ನು ಅವರು ಒತ್ತಿ ಹೇಳಿದರು. ಮನೆಗಳಲ್ಲಿ ಅರ್ಥಪೂರ್ಣವಾಗಿ ಸಂಭಾಷಣೆ ನಡೆಸುವ ಸಂಸ್ಕೃತಿಯನ್ನು ಪೋಷಿಸಬೇಕು. ಇಲ್ಲಿಂದಲೇ ಮಕ್ಕಳು ಸರಿ ತಪ್ಪುಗಳನ್ನು ಕಲಿಯುತ್ತಾರೆ. ಕೇವಲ ಉಪದೇಶಗಳು ಸಾಕಾಗುವುದಿಲ್ಲ. ಒಳ್ಳೆಯ ವಾತಾವರಣವು ಮಾತ್ರವೇ ಮಕ್ಕಳನ್ನು ತಪ್ಪು ದಾರಿಗೆ ಹೋಗದಂತೆ ತಡೆಯುತ್ತದೆ’ ಎಂದರು.

‘ಹೊರಗಿನಿಂದ ನೋಡಿ ಸಂಘವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಸಂಘದಲ್ಲಿ ಇದ್ದಲ್ಲಿ ಮಾತ್ರವೇ ಅದರ ಕುರಿತು ಸಂಪೂರ್ಣವಾಗಿ ತಿಳಿದುಕೊಳ್ಳಬಹುದಾಗಿದೆ. ಕಲೆ ಮತ್ತು ಕ್ರೀಡೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ನಮ್ಮ ಸ್ವಯಂಸೇವಕರು ಸಕ್ರಿಯರಾಗಿದ್ದಾರೆ’ ಎಂದು ಹೇಳಿದರು.

ಡಿಎಂಕೆ–ಕಾಂಗ್ರೆಸ್ ಮೈತ್ರಿ ಕಗ್ಗಂಟು

ತಮಿಳುನಾಡು ಚುನಾವಣೆ
ಐಯುಎಂಎಲ್, ಎಂಎಂಕೆಗೆ ತಲಾ 2 ಕ್ಷೇತ್ರ

ಪ್ರಜಾವಾಣಿ ವಾರ್ತೆ

- 40 ಕ್ಷೇತ್ರ ಹಾಗೂ ರಾಜ್ಯಸಭಾ ಸ್ಥಾನಕ್ಕೆ ಕಾಂಗ್ರೆಸ್ ಪಟ್ಟು
- ರಾಜ್ಯಸಭಾ ಸ್ಥಾನ ಹಾಗೂ ಗರಿಷ್ಠ 28 ಕ್ಷೇತ್ರ ನೀಡಲು ಒಲವು ತೋರಿರುವ ಡಿಎಂಕೆ
- ಡಿಎಂಕೆ–ಕಾಂಗ್ರೆಸ್ ನಾಯಕರ ಜತೆಗೆ ಮತ್ತೊಂದು ಸುತ್ತಿನ ಮಾತುಕತೆ
- ರಾಜ್ಯಸಭೆಗೆ ತಮಿಳು ನಾಡಿನಿಂದ ಪವನ್ ಖೇರಾ ಸ್ಪರ್ಧಿಸುವ ಸಾಧ್ಯತೆ

ನವದೆಹಲಿ: ತಮಿಳುನಾಡು ವಿಧಾನಸಭಾ ಚುನಾವಣೆಗೆ ಸೀಟು ಹಂಚಿಕೆ ಸಂಬಂಧ ಆಡಳಿತಾರೂಢ ಡಿಎಂಕೆ–ಕಾಂಗ್ರೆಸ್ ಶನಿವಾರ ಮತ್ತೊಂದು ಸುತ್ತಿನ ಮಾತುಕತೆ ನಡೆಸಿದರೂ ಕಗ್ಗಂಟು ಬಗೆಹರಿದಿಲ್ಲ. 40 ಸ್ಥಾನಗಳನ್ನು ಬಿಟ್ಟುಕೊಡಬೇಕು ಎಂಬ ಕಾಂಗ್ರೆಸ್ ನಾಯಕರ ಬೇಡಿಕೆಗೆ ಡಿಎಂಕೆ ನಾಯಕರು ಒಪ್ಪಿಲ್ಲ.

ಡಿಎಂಕೆ ಮೈತ್ರಿ ಪಾಲುದಾರರೊಂದಿಗೆ ಸೀಟು ಹಂಚಿಕೆ ಒಪ್ಪಂದಗಳನ್ನು ಮುಕ್ತಾಯಗೊಳಿಸುವ ಪ್ರಕ್ರಿಯೆಯನ್ನು ಶನಿವಾರ ಆರಂಭಿಸಿದ್ದು, ಐಯುಎಂಎಲ್ ಮತ್ತು ಎಂಎಂಕೆಗೆ ನಾಲ್ಕು ವಿಧಾನಸಭಾ ಸ್ಥಾನಗಳನ್ನು ಹಂಚಿಕೆ ಮಾಡಿದೆ.

ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಇಲ್ಲಿನ ಡಿಎಂಕೆ ಪ್ರಧಾನ ಕಚೇರಿಯಲ್ಲಿ ಐಯುಎಂಎಲ್ ಮತ್ತು ಎಂಎಂಕೆಗೆ ತಲಾ ಎರಡು ಸ್ಥಾನಗಳನ್ನು ಹಂಚಿಕೆ ಮಾಡಿದ್ದಾರೆ. ಐಯುಎಂಎಲ್ ತನ್ನ ಏಣಿ ಚಿಹ್ನೆಯಡಿ ಸ್ಪರ್ಧಿಸಲಿದ್ದರೆ, ಎಂಎಂಕೆ ಅಭ್ಯರ್ಥಿಗಳು ಡಿಎಂಕೆಯ ಚಿಹ್ನೆಯಡಿ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ.

ಪ್ರತಿ ರಾಜಕೀಯ ಪಕ್ಷಕ್ಕೆ ಹಂಚಿಕೆ ಮಾಡಬೇಕಾದ ಸ್ಥಾನಗಳ ಸಂಖ್ಯೆಯ ಕುರಿತು ಕಾಂಗ್ರೆಸ್ ಮತ್ತು ಇತರ ಐದು ಸಣ್ಣ ಪಕ್ಷಗಳೊಂದಿಗೆ ಡಿಎಂಕೆ ಮಾತುಕತೆ ನಡೆಸಿದೆ. ತಿರುಚಿರಾಪಳ್ಳಿಯಲ್ಲಿ ಮಾರ್ಚ್ 9ರಂದು ಪಕ್ಷದ ರಾಜ್ಯಮಟ್ಟದ ಸಮ್ಮೇಳನಕ್ಕೆ ಮುನ್ನ ಸೀಟು ಹಂಚಿಕೆ ಮಾತುಕತೆಗಳನ್ನು ಪೂರ್ಣಗೊಳಿಸಲು ಆಡಳಿತ ಪಕ್ಷ ಉದ್ದೇಶಿಸಿದೆ.

2021ರ ಚುನಾವಣೆಯಲ್ಲಿ ಕಾಂಗ್ರೆಸ್ 25 ಕ್ಷೇತ್ರಗಳಲ್ಲಿ ಸ್ಪರ್ಧಿಸಿ 18ರಲ್ಲಿ ಗೆಲುವು ಸಾಧಿಸಿತ್ತು. ಈ ಸಲ 40 ಕ್ಷೇತ್ರಗಳನ್ನು ಹಾಗೂ ಒಂದು ರಾಜ್ಯಸಭಾ ಸ್ಥಾನ ಬಿಟ್ಟುಕೊಡಬೇಕು ಎಂದು ಪಟ್ಟು ಹಿಡಿದಿದೆ. ರಾಜ್ಯಸಭಾ ಸ್ಥಾನವನ್ನು ಮೈತ್ರಿಪಕ್ಷಕ್ಕೆ ನೀಡಲು ಡಿಎಂಕೆ ಒಪ್ಪಿದೆ. ಮೈತ್ರಿಕೂಟಕ್ಕೆ ಸೇರ್ಪಡೆಯಾಗಿರುವ ಸಣ್ಣ ಪಕ್ಷಗಳಿಗೂ ಈ ಸಲ ಸ್ಥಾನ ನೀಡಬೇಕಾಗಿರುವ ಕಾರಣ ಗರಿಷ್ಠ 28 ಕ್ಷೇತ್ರಗಳನ್ನಷ್ಟೇ ಕಾಂಗ್ರೆಸ್‌ಗೆ ನೀಡಲು ಸಾಧ್ಯ ಎಂದು ಡಿಎಂಕೆ ನಾಯಕರು ಸ್ಪಷ್ಟಪಡಿಸಿದ್ದಾರೆ. ತಮಿಳುನಾಡಿನಿಂದ ರಾಜ್ಯಸಭಾ ಸ್ಥಾನಕ್ಕೆ ಪಕ್ಷದ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರನ್ನು ಕಣಕ್ಕಿಳಿಸಲು ಕಾಂಗ್ರೆಸ್ ಉತ್ಸುಕತೆ ತೋರಿದೆ. ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಸ್ಟಾಲಿನ್ ಅವರೊಂದಿಗೆ ಸೋಮವಾರ ಮಾತುಕತೆ ನಡೆಸಿದ್ದರು.

ಸೀಟು ಹಂಚಿಕೆ ಬಿಕ್ಕಟ್ಟು ಬಗೆಹರಿಸುವ ಸಂಬಂಧ ಕಾಂಗ್ರೆಸ್ ಹಾಗೂ ಡಿಎಂಕೆ ನಾಯಕರು ಶನಿವಾರ ಮತ್ತೊಂದು ಸುತ್ತಿನ ಮಾತುಕತೆ ನಡೆಸಿದರು.

‘ಮಾತುಕತೆ ಸೌಹಾರ್ದಯುತವಾಗಿ ಕೊನೆಗೊಂಡಿದೆ. ಕಾಂಗ್ರೆಸ್‌ಗೆ ರಾಜ್ಯಸಭಾ ಸ್ಥಾನ ನೀಡಲು ಡಿಎಂಕೆ ಒಪ್ಪಿದೆ’ ಎಂದು ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಕೆ. ಸೆಲ್ವಪೆರುಂಥಗೈ ಘೋಷಿಸಿದರು. ‘ಪಕ್ಷವು ಡಿಎಂಕೆ ಜೊತೆ ಮಾತ್ರ ಮೈತ್ರಿ ಮತ್ತು ಸೀಟು ಹಂಚಿಕೆಯ ಬಗ್ಗೆ ಚರ್ಚಿಸುತ್ತಿದೆ’ ಎಂದು ಸ್ಪಷ್ಟಪಡಿಸಿದ ಅವರು, ಟಿವಿಕೆ ಜತೆಗೆ ಪಕ್ಷ ಚರ್ಚೆ ನಡೆಸುತ್ತಿದೆ’ ಎಂಬ ವದಂತಿಗಳನ್ನು ತಳ್ಳಿಹಾಕಿದರು. ತಮ್ಮ ಪಕ್ಷಕ್ಕೆ 70 ಕ್ಷೇತ್ರಗಳನ್ನು ನೀಡಲು ಟಿವಿಕೆ ಒಪ್ಪಿದೆ’ ಎಂದು ಪಕ್ಷದ ಕೆಲವು ನಾಯಕರು ಈ ಹಿಂದೆ ಹೇಳಿದ್ದರು.

ರಾಜ್ಯಸಭಾ ಚುನಾವಣೆಗೆ ಅಭ್ಯರ್ಥಿಗಳ ಹೆಸರನ್ನು ಸ್ಟಾಲಿನ್ ಸೋಮವಾರ ಪ್ರಕಟಿಸುವ ನಿರೀಕ್ಷೆ ಇದೆ. ಇದೇ ಸಂದರ್ಭದಲ್ಲಿ ಮೈತ್ರಿಕೂಟದ ಪಾಲುದಾರರಿಗೆ ರಾಜ್ಯಸಭಾ ಸ್ಥಾನಗಳ ಹಂಚಿಕೆ ಕುರಿತು ಔಪಚಾರಿಕ ಘೋಷಣೆ ಮಾಡುವ ನಿರೀಕ್ಷೆಯಿದೆ.

ಡಿಎಂಕೆ ನಾಯಕರ ಜತೆಗಿನ ಮಾತುಕತೆ ಬಳಿಕ ಹೈಕಮಾಂಡ್ ನಾಯಕರ ಜತೆಗೆ ಮಾತುಕತೆ ನಡೆಸಲು ಎಐಸಿಸಿ ತಮಿಳುನಾಡು ಉಸ್ತುವಾರಿ ಗಿರೀಶ್ ಚೋಡಂಕರ್ ಅವರು ರಾಷ್ಟ್ರ ರಾಜಧಾನಿಗೆ ಬಂದಿದ್ದಾರೆ.

ಸೀಟು ಹಂಚಿಕೆ ಬಗ್ಗೆ ಪ್ರಮುಖ ದಲಿತ ಪಕ್ಷ ವಿಸಿಕೆ ಹಾಗೂ ಡಿಎಂಕೆ ನಾಯಕರು ಸೋಮವಾರ ಮಾತುಕತೆ ನಡೆಸಲಿದ್ದಾರೆ. ಐದು ಸಣ್ಣ ಪಕ್ಷಗಳು ಡಿಎಂಕೆ ಸೀಟು ಹಂಚಿಕೆ ಸಂಧಾನ ಸಮಿತಿಯ ಮುಂದೆ ಶನಿವಾರ ತಮ್ಮ ಬೇಡಿಕೆಗಳನ್ನು ಮಂಡಿಸಿವೆ.

‘ಜಯಲಲಿತಾ ಆದರ್ಶಕ್ಕೆ ದ್ರೋಹ ಬಗೆದ ಪನ್ನೀರ್‌ಸೆಲ್ವಂ’

ಮದುರೈ (ತಮಿಳುನಾಡು) (ಪಿಟಿಐ): ಎಐಎಡಿಎಂಕೆಯ ಉಚ್ಚಾಟಿತ ನಾಯಕ ಒ.ಪನ್ನೀರ್‌ಸೆಲ್ವಂ ಅವರು ಡಿಎಂಕೆ ಸೇರ್ಪಡೆಯಾಗಿದ್ದನ್ನು ಬಿಜೆಪಿಯ ತಮಿಳುನಾಡು ಚುನಾವಣಾ ಉಸ್ತುವಾರಿ ಆಗಿರುವ ಕೇಂದ್ರ ಸಚಿವ ಪೀಯೂಷ್ ಗೋಯಲ್ ಶನಿವಾರ ಟೀಕಿಸಿದ್ದಾರೆ.



ಪೀಯೂಷ್ ಗೋಯಲ್

‘ದಿವಂಗತ ಮುಖ್ಯಮಂತ್ರಿ ಜೆ.ಜಯಲಲಿತಾ ಅವರು ಪನ್ನೀರ್‌ಸೆಲ್ವಂ ಅವರಿಗೆ ಅಪಾರ ಗೌರವ, ಪ್ರೀತಿ ನೀಡಿದ್ದರು. ಮುಖ್ಯಮಂತ್ರಿ ಆಗುವ ಅವಕಾಶವನ್ನೂ ಕಲ್ಪಿಸಿದ್ದರು. ಆದರೆ, ಅವರು ಜಯಲಲಿತಾ ಅವರ ಆದರ್ಶಗಳಿಗೆ ದ್ರೋಹ ಬಗೆದಿದ್ದಾರೆ. ತಮಿಳುನಾಡಿನ ಸ್ವಾಭಿಮಾನಿ ಜನರು ಪನ್ನೀರ್‌ಸೆಲ್ವಂ ಅವರನ್ನು ಕ್ಷಮಿಸುವುದಿಲ್ಲ’ ಎಂದು ಪೀಯೂಷ್ ಹೇಳಿದ್ದಾರೆ.

ಮಾರ್ಚ್ 1ರಂದು ಪ್ರಧಾನಿ ನರೇಂದ್ರ ಮೋದಿ ತಮಿಳುನಾಡಿಗೆ ಭೇಟಿ ನೀಡಲಿದ್ದು, ಅದಕ್ಕೂ ಮುನ್ನ ನಗರಕ್ಕೆ ಭೇಟಿ ನೀಡಿರುವ ಪೀಯೂಷ್ ಅವರು, ಪನ್ನೀರ್‌ಸೆಲ್ವಂ ಡಿಎಂಕೆಗೆ ಸೇರಿರುವುದು ಎಐಎಡಿಎಂಕೆ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಹೇಳಿದ್ದಾರೆ.

ಹಿಂದೆ ಬಿಜೆಪಿ ಮೈತ್ರಿಕೂಟದಲ್ಲಿದ್ದ ರಾಜ್ಯದ ಮಾಜಿ ಮುಖ್ಯಮಂತ್ರಿಯೂ ಆಗಿರುವ ಪನ್ನೀರ್‌ಸೆಲ್ವಂ ಅವರು, ಫೆಬ್ರವರಿ 27ರಂದು ಡಿಎಂಕೆ ಮುಖ್ಯಸ್ಥ, ಹಾಲಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರ ಸಮ್ಮುಖದಲ್ಲಿ ತಮ್ಮ ಮಗ ಒ.ಪಿ.ರವೀಂದ್ರನಾಥ್ ಮತ್ತು ಕೆಲವು ಬೆಂಬಲಿಗರೊಂದಿಗೆ ಡಿಎಂಕೆಗೆ ಸೇರ್ಪಡೆಯಾಗಿದ್ದಾರೆ.



ಕೇರಳದ ತಿರುವನಂತಪುರದಲ್ಲಿ ಆಟ್ಟುಕಾಲ್ ಪೊಂಗಾಲ ಆಚರಣೆ (ಸಂಗ್ರಹ ಚಿತ್ರ)

ಹಿಂದೂಗಳಿಗೆ ಆತಿಥ್ಯ: ಮೌಲ್ವಿ ಕರೆ

ತಿರುವನಂತಪುರ (ಪಿಟಿಐ): ಆಟ್ಟುಕಾಲ್ ಪೊಂಗಾಲ ಹಬ್ಬದ ಆಚರಣೆಗೆ ನಗರಕ್ಕೆ ಬರುವ ಹಿಂದೂಗಳಿಗೆ ಮಸೀದಿಗಳು ಹಾಗೂ ತಮ್ಮ ಮನೆಗಳಲ್ಲಿ ಆತಿಥ್ಯ ನೀಡುವಂತೆ ಪಾಳಯಂ ಇಮಾಮ್ ವಿ.ಪಿ ಸುಹೈಬ್ ಮೌಲ್ವಿ ಅವರು ಮುಸ್ಲಿಮರಿಗೆ ಕರೆ ನೀಡಿದ್ದಾರೆ. ಈ ವಿಷಯವು ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ.

ಈ ವರ್ಷ ಮಾ.3ರಂದು ಆಟ್ಟುಕಾಲ್ ಪೊಂಗಾಲ ಹಬ್ಬ ಆಚರಿಸಲಾಗುತ್ತಿದೆ. ಅಂದು ಉತ್ಸವದಲ್ಲಿ ಭಾಗಿಯಾಗಲು ಲಕ್ಷಾಂತರ ಮಹಿಳೆಯರು ತಿರುವನಂತಪುರಕ್ಕೆ ಆಗಮಿಸುತ್ತಾರೆ.

‘ವಿಭಿನ್ನ ನಂಬಿಕೆಯೊಂದಿಗೆ ಆಟ್ಟುಕಾಲ್ ಪೊಂಗಾಲ ಅನ್ನು ಆಚರಿಸಲಾಗುತ್ತದೆ. ಮುಸ್ಲಿಮರು ಈ ಆಚರಣೆಯಲ್ಲಿ ಭಾಗವಹಿಸದೇ ಹೋದರೂ, ಅತಿಥಿಗಳಾಗಿ ಭೇಟಿ ನೀಡುವ ಸಾವಿರಾರು ಮಹಿಳೆಯರು ಹಾಗೂ ಮಕ್ಕಳಿಗೆ ಆತಿಥ್ಯ ನೀಡುವ ಅವಕಾಶವನ್ನು ಈ ಸಂದರ್ಭವು ಒದಗಿಸುತ್ತದೆ’ ಎಂದು ಭಾಷಣದಲ್ಲಿ ಮೌಲ್ವಿ ಅವರು ಶುಕ್ರವಾರ ಹೇಳಿದರು.

‘ಕಳೆದ ವರ್ಷದಂತೆ ಈ ಬಾರಿಯೂ ರಂಜಾನ್ ಸಮಯದಲ್ಲಿ ಆಟ್ಟುಕಾಲ್ ಪೊಂಗಾಲ ಆಚರಿಸಲಾಗುತ್ತಿದೆ. ಸಂತೋಷ, ಭ್ರಾತೃತ್ವ, ಪ್ರೀತಿ ಸಾರುವ ರಂಜಾನ್ ಹಬ್ಬದ ಆಶಯವನ್ನು, ಸಹೋದರಿಯರು, ಮಕ್ಕಳೊಂದಿಗೆ ನಾವು ಹಂಚಿಕೊಳ್ಳಬೇಕು’ ಎಂದರು.

‘ಕೇರಳ ಸ್ಟೋರಿ 2’ಕ್ಕೆ ಪ್ರತಿಭಟನೆ ಬಿಸಿ

ತಿರುವನಂತಪುರ/ಕೊಚ್ಚಿ/ಕೋಯಿಕ್ಕೋಡ್ (ಪಿಟಿಐ): ‘ದಿ ಕೇರಳ ಸ್ಟೋರಿ 2: ಗೋಸ್ ಬಿಯಾಂಡ್’ ಚಿತ್ರ ಬಿಡುಗಡೆಗೆ ನ್ಯಾಯಾಲಯ ಅನುಮತಿ ನೀಡಿದ್ದರೂ, ಚಿತ್ರದ ಟಿಕೆಟ್ ಮಾರಾಟ ಶನಿವಾರ ನೀರಸವಾಗಿತ್ತು.

‘ಚಿತ್ರದಲ್ಲಿ ಕೇರಳವನ್ನು ಕೆಟ್ಟದಾಗಿ ತೋರಿಸಲಾಗಿದೆ’ ಎಂದು ಆರೋಪಿಸಿ ಡೆಮಾಕ್ರಟಿಕ್ ಯೂತ್ ಫೆಡರೇಷನ್ ಆಫ್ ಇಂಡಿಯಾದ (ಡಿವೈಎಫ್‌ಐ) ಸದಸ್ಯರು ಚಿತ್ರಮಂದಿರಗಳ ಎದುರು ಪ್ರತಿಭಟನೆ ನಡೆಸಿದರು.

‘ಒಪ್ಪಂದ ರೈತರನ್ನು ನಾಶ ಮಾಡಲಿದೆ’


ಬರ್ನಾಲಾ (ಪಿಟಿಐ): ಭಾರತ–ಅಮೆರಿಕ ವ್ಯಾಪಾರ ಒಪ್ಪಂದವು ಭಾರತೀಯ ರೈತರನ್ನು ಸರ್ವನಾಶ ಮಾಡಲಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದರು.

‘ಮಜ್ದೂರ್ ಕಿಸಾನ್ ಮಹಾ ರ‍್ಯಾಲಿ’ ಉದ್ದೇಶಿಸಿ ಶನಿವಾರ ಮಾತನಾಡಿದ ಅವರು, ಕೃಷಿ ವಲಯಕ್ಕೆ ಸಂಬಂಧಿಸಿದಂತೆ ಅಸಮಾಧಾನ ಇದ್ದ ಕಾರಣ ಒಪ್ಪಂದವು ನಾಲ್ಕು ತಿಂಗಳು ನನೆಗುದಿಗೆ ಬಿದ್ದಿತ್ತು’ ಎಂದು ಹೇಳಿದರು.

‘ಒಪ್ಪಂದದ ವಿಚಾರವಾಗಿ ನಾಲ್ಕು ತಿಂಗಳು ಯಾವುದೇ ಕ್ರಮ ಕೈಗೊಳ್ಳದ ಪ್ರಧಾನಿ ನರೇಂದ್ರ ಮೋದಿ ಅವರು 15 ನಿಮಿಷಗಳಲ್ಲಿ ಒಪ್ಪಂದ ಮಾಡಿಕೊಂಡಿದ್ದು ಏಕೆ’ ಎಂದು ಪ್ರಶ್ನಿಸಿದರು.

‘ಭಾರತವು ಪ್ರತಿವರ್ಷ ₹9 ಲಕ್ಷ ಕೋಟಿ ಮೌಲ್ಯದ ಅಮೆರಿಕ ಉತ್ಪನ್ನಗಳನ್ನು ಖರೀದಿಸಲಿದೆ ಎಂದು ಮೋದಿ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಭರವಸೆ ನೀಡಿದ್ದಾರೆ. ಈ ಒಪ್ಪಂದವು ಭಾರತೀಯ ರೈತರನ್ನು ನಾಶ ಮಾಡಲಿದೆ’ ಎಂದು ಹೇಳಿದರು.

‘ರಾಷ್ಟ್ರಪತಿ ಅವರ ಭಾಷಣದ ಮೇಲಿನ ವಂದನಾ ನಿರ್ಣಯದ ಕುರಿತು ಲೋಕಸಭೆಯಲ್ಲಿ ಮಾತನಾಡಲು ನನಗೆ ಅವಕಾಶ ನೀಡಲಿಲ್ಲ. ಸೇನೆಯ ಮಾಜಿ ಮುಖ್ಯಸ್ಥ ಎಂ.ಎಂ.ನರವಣೆ ಅವರ ‘ಅಪ್ರಕಟಿತ’ ಪುಸ್ತಕದ ಬಗ್ಗೆ ಉಲ್ಲೇಖ ಮಾಡುತ್ತೇನೆ ಎಂಬ ಕಾರಣಕ್ಕಾಗಿ ಅವಕಾಶ ನೀಡಲಿಲ್ಲ’ ಎಂದರು.



ರಾಹುಲ್ ಗಾಂಧಿ

‘ಪಕ್ಷಕ್ಕಾಗಿ ಒಗ್ಗಟ್ಟಿನಿಂದ ಕೆಲಸ ಮಾಡಿ. ಇಲ್ಲದಿದ್ದರೆ, ಎಷ್ಟು ದೊಡ್ಡ ನಾಯಕರೆಂಬುದನ್ನೂ ಪರಿಗಣಿಸದೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಇಲ್ಲಿ ಪಕ್ಷಕ್ಕಿಂತ ಯಾರೂ ದೊಡ್ಡವರಲ್ಲ’ ಎಂದು ಹೇಳಿದರು.

ಪಂಜಾಬ್‌ನ ಕಾಂಗ್ರೆಸ್ ಘಟಕದಲ್ಲಿ ಬಣ ರಾಜಕೀಯ ತೀವ್ರ ಸ್ವರೂಪ ಪಡೆಯುತ್ತಿರುವಾಗಲೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ಎದುರೇ ಅವರು ಎಚ್ಚರಿಕೆ ನೀಡಿದರು.

ಕಾಂಗ್ರೆಸ್‌ನ ಹಿರಿಯ ನಾಯಕರಾದ ಕೆ.ಸಿ.ವೇಣುಗೋಪಾಲ್, ಭೂಪೇಶ್ ಬಘೇಲ್, ಪಂಜಾಬ್ ಕಾಂಗ್ರೆಸ್ ಅಧ್ಯಕ್ಷ ಅಮರಿಂದರ್ ಸಿಂಗ್ ರಾಜಾ ಮತ್ತಿತರರು ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದರು.

ನಿರ್ಮಲಾಗೆ ರಾಹುಲ್ ಪತ್ರ

ನಿವೃತ್ತ ಸೈನಿಕರ ವಂತಿಗೆ ಆರೋಗ್ಯ ಯೋಜನೆಗೆ (ಇಸಿಎಚ್‌ಎಸ್) ಅನುದಾನ ಬಿಡುಗಡೆ ಮಾಡುವಂತೆ ಮತ್ತು ಅಂಗವಿಕಲರ ಪಿಂಚಣಿಗೆ ತೆರಿಗೆ ವಿನಾಯಿತಿ ನೀಡುವಂತೆ ರಾಹುಲ್ ಗಾಂಧಿ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆದಿದ್ದಾರೆ.

ಹಿರಿಯ ಸೈನಿಕರಿಗೆ ಅತ್ಯುತ್ತಮ ಆರೋಗ್ಯ ಸೇವೆ ಒದಗಿಸುವ ಯೋಜನೆಗೆ ಅಗತ್ಯವಾದ ಅನುದಾನ ಬೇಕಿದೆ ಎಂದು ಮನವಿ ಮಾಡಿದ್ದಾರೆ.

ಯೋಜನೆಯು ಅನುದಾನದ ಕೊರತೆ ಎದುರಿಸುತ್ತಿದೆ. ಸುಮಾರು 12,000 ಕೋಟಿ ಮೆಡಿಕಲ್ ಬಿಲ್ ಪಾವತಿ ಬಾಕಿ ಇದೆ ಎಂದು ತಿಳಿಸಿದ್ದಾರೆ.

ಪತ್ರದ ಪ್ರತಿಯೊಂದನ್ನು ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರಿಗೂ ಕಳುಹಿಸಿದ್ದಾರೆ.

‘ಸಂಗೀತಕ್ಕೆ ಎಲ್ಲೆ ಇಲ್ಲ’

ಏಕತೆ, ಪರಂಪರೆಯನ್ನು ಸಂಭ್ರಮಿಸಲು ಸಂಗೀತವು ಪ್ರಬಲ ಮಾಧ್ಯಮ. ಅದಕ್ಕೆ ಯಾವುದೇ ಎಲ್ಲೆ ಇಲ್ಲ ಎಂದು ರಾಹುಲ್ ಗಾಂಧಿ ಹೇಳಿದರು.

ದೆಹಲಿಯಲ್ಲಿ ಇತ್ತೀಚೆಗೆ ನಡೆದ ಈಶಾನ್ಯ ಸಂಗೀತ ಉತ್ಸವದಲ್ಲಿ ತಮಗಾದ ಅನುಭವದ ಕುರಿತ ವಿಡಿಯೊವನ್ನು ಅವರು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದಾರೆ. ಕಲಾವಿದರೊಂದಿಗೆ ಸಂವಾದ ನಡೆಸಿದ ದೃಶ್ಯ ವಿಡಿಯೊದಲ್ಲಿದೆ.

ರಾಧಾ–ಕೃಷ್ಣ ಪಲ್ಲಕ್ಕಿ

ಪಿಟಿಐ ಚಿತ್ರ



ಒಡಿಶಾದ ಭುವನೇಶ್ವರದಲ್ಲಿ ಹೋಳಿಗೂ ಮುನ್ನ ಶನಿವಾರ ನಡೆದ ‘ಡೋಲಾ ಜಾತ್ರೆ’ಯಲ್ಲಿ ಕೃಷ್ಣ ಮತ್ತು ರಾಧಾ ಮೂರ್ತಿಗಳ ಪಲ್ಲಕ್ಕಿ ಮೆರವಣಿಗೆ ನಡೆಯಿತು

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

‘ಮೋದಿ ಇಸ್ರೇಲ್ ಭೇಟಿ ನಾಚಿಕೆಗೇಡು’

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಇಸ್ರೇಲ್ ಭೇಟಿ ‘ನಾಚಿಕೆಗೇಡು’ ಮತ್ತು ‘ಸಮಯೋಚಿತವಲ್ಲದ್ದು’ ಎಂದು ಶನಿವಾರ ಕಾಂಗ್ರೆಸ್ ಟೀಕಿಸಿದೆ.

‘ಇಸ್ರೇಲ್ ನಡೆಸುತ್ತಿರುವ ಸೇನಾ ಕಾರ್ಯಾಚರಣೆಗೆ ಮೋದಿ ಅವರ ಭೇಟಿ ರಾಜಕೀಯ ಅನುಮೋದನೆ ಕೊಟ್ಟಂತಾಗಿದೆ. ಅಲ್ಲದೆ, ಅಂತರ ರಾಷ್ಟ್ರೀಯ ವ್ಯವಸ್ಥೆ ಕುರಿತು ಭಾರತ ಹೊಂದಿರುವ ಐತಿಹಾಸಿಕ ಬದ್ಧತೆಗೆ ವಿರುದ್ಧವಾದ ನಡೆಯೂ ಇದಾಗಿದೆ’ ಎಂದು ಕಾಂಗ್ರೆಸ್‌ನ ವಿದೇಶಾಂಗ ವ್ಯವಹಾರಗಳ ವಿಭಾಗದ ಮುಖ್ಯಸ್ಥ ಸಲ್ಮಾನ್ ಖುರ್ಷೀದ್ ಹೇಳಿಕೆ ನೀಡಿದ್ದಾರೆ.



ಸಲ್ಮಾನ್ ಖುರ್ಷಿದ್

‘ಒಂದು ಪ್ರದೇಶದ ಭೌಗೋಳಿಕ ಅಖಂಡತೆ, ರಾಜಕೀಯ ಸ್ವಾತಂತ್ರ್ಯದ ವಿರುದ್ಧ ಸೇನಾ ಬಳಕೆ ಕೂಡದು ಎಂಬ ವಿಶ್ವಸಂಸ್ಥೆಯ ನಿಲುವಿಗೆ ಬದ್ಧವಾಗಿರುವ ನಮ್ಮ ನೀತಿಗೂ ಈ ನಡೆ ವ್ಯತಿರಿಕ್ತವಾದುದು’ ಎಂದಿದ್ದಾರೆ.

‘ಪಶ್ಚಿಮ ಏಷ್ಯಾದಲ್ಲಿ ಶತ್ರುತ್ವ ತೀವ್ರಗೊಂಡಿರುವುದು ಮತ್ತು ವ್ಯಾಪಕ ಸಂಘರ್ಷ ಸ್ಥಿತಿ ಇರುವಾಗಲೇ ಪ್ರಧಾನಿ ಮೋದಿ ಫೆಬ್ರುವರಿ 26ರಿಂದ ಎರಡು ದಿನ ಇಸ್ರೇಲ್ ಪ್ರವಾಸ ಕೈಗೊಂಡಿದ್ದು ಅತ್ಯಂತ ಕಳವಳಕಾರಿ’ ಎಂದಿದ್ದಾರೆ.

ಇರಾನ್ ಮೇಲೆ ಇಸ್ರೇಲ್ ವಾಯುದಾಳಿ ನಡೆಸಿದ ನಂತರ ಅಮೆರಿಕ ಅಧ್ಯಕ್ಷ ಟ್ರಂಪ್ ಅವರು ಇರಾನ್‌ನಲ್ಲಿ ಬೃಹತ್ ಸಮರ ಕಾರ್ಯಾಚರಣೆ ನಡೆಸುವುದಾಗಿ ಶನಿವಾರ ಹೇಳಿದ್ದಾರೆ.

‘ಇಂತಹ ಸಂದರ್ಭದಲ್ಲಿ ಮೋದಿ ಅವರ ಭೇಟಿ ಪಕ್ಷಪಾತದ, ಆಕ್ರಮಣಕ್ಕೆ ಮೌನ ಸಮರ್ಥನೆ ನೀಡುವ ರಣನೀತಿಯಂತೆ ಭಾಸವಾಗುತ್ತದೆ. ಭಾರತದ ಸಂಬಂಧ ಇಸ್ರೇಲ್ ಜೊತೆಗೆ ಮಾತ್ರವಲ್ಲ, ಇರಾನ್, ಪ್ಯಾಲೆಸ್ಟೀನ್ ಸೇರಿ ಇತರರ ಜೊತೆಗೂ ಇದೆ ಎನ್ನುವುದನ್ನು ಬಿಜೆಪಿ ಆಡಳಿತ ಅರ್ಥ ಮಾಡಿಕೊಳ್ಳಬೇಕು’ ಎಂದಿದ್ದಾರೆ.

‘ನೈತಿಕ ಹೇಡಿತನ’

ಮೋದಿ ಅವರ ಇಸ್ರೇಲ್ ಭೇಟಿಯನ್ನು ಖಂಡಿಸಿರುವ ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್, ‘ಅವರು (ಮೋದಿ) ತಮ್ಮ ಇಸ್ರೇಲ್ ಭೇಟಿಯನ್ನು ಸಂಭ್ರಮಿಸಿದ ಎರಡು ದಿನಗಳ ನಂತರ ಅವರ ಉತ್ತಮ ಸ್ನೇಹಿತರು (ಇಸ್ರೇಲ್ ಮತ್ತು ಅಮೆರಿಕ) ಜಂಟಿಯಾಗಿ ಇರಾನ್ ವಿರುದ್ಧ ಸಮರ ಸಾರಿದ್ದಾರೆ’ ಎಂದು ಆರೋಪಿಸಿದರು.

‘ಪ್ರಧಾನಿ ಇಸ್ರೇಲ್ ಭೇಟಿ ನಾಚಿಕೆಗೇಡು’ ಎಂದು ‘ಎಕ್ಸ್’ನಲ್ಲಿ ಹೇಳಿರುವ ಅವರು, ‘ಕಳೆದ ಕೆಲ ತಿಂಗಳುಗಳಿಂದಲೂ ಅವರ ಸೈನ್ಯ ಜಮಾವಣೆ ಆಗುತ್ತಿದ್ದುದನ್ನು ನೋಡಿದರೆ, ಸಂಘರ್ಷದ ಮುನ್ಸೂಚನೆ ಇದ್ದೇ ಇತ್ತು. ಆದರೂ ಮೋದಿ ಇಸ್ರೇಲ್‌ಗೆ ಭೇಟಿ ನೀಡಿದರು. ಅಲ್ಲಿ ತಮ್ಮ ನೈತಿಕ ಹೇಡಿತನ ಪ್ರದರ್ಶಿಸಿದರು.

ಇಸ್ರೇಲ್ ಜೊತೆ ಭಾರತ ನಿಲ್ಲಲಿದೆ ಎಂದು ಘೋಷಿಸಿ ಪ್ರಶಸ್ತಿಯನ್ನೂ ಗಿಟ್ಟಿಸಿದರು’ ಎಂದು ಟೀಕಿಸಿದ್ದಾರೆ.

ಅರೆಬೆತ್ತಲೆ ಪ್ರತಿಭಟನೆ: ಯುವ ಕಾಂಗ್ರೆಸ್ ಅಧ್ಯಕ್ಷ ಚಿಬ್‌ಗೆ ಜಾಮೀನು

ನವದೆಹಲಿ (ಪಿಟಿಐ): ‘ಇಂಡಿಯಾ ಎ.ಐ ಇಂಪ್ಯಾಕ್ಟ್’ ಶೃಂಗಸಭೆಯ ಸಂದರ್ಭದಲ್ಲಿ ಅರೆಬೆತ್ತಲೆ ಪ್ರತಿಭಟನೆ ನಡೆಸಿದ ಕಾರಣಕ್ಕೆ ಬಂಧಿಸಲಾಗಿದ್ದ ರಾಷ್ಟ್ರೀಯ ಯುವ ಕಾಂಗ್ರೆಸ್ (ಐವೈಸಿ) ಅಧ್ಯಕ್ಷ ಉದಯ್ ಭಾನು ಚಿಬ್ ಅವರಿಗೆ ದೆಹಲಿ ನ್ಯಾಯಾಲಯ ಶನಿವಾರ ಜಾಮೀನು ಮಂಜೂರು ಮಾಡಿದೆ.



ಉದಯ್ ಭಾನು ಚಿಬ್

ನಾಲ್ಕು ದಿನಗಳಿಂದ ಪೊಲೀಸ್ ವಶದಲ್ಲಿದ್ದ ಚಿಬ್ ಅವರನ್ನು ಶನಿವಾರ ನ್ಯಾಯಾಧೀಶರಾದ ವಂಶಿಕಾ ಮೆಹ್ತಾ ಅವರ ಮುಂದೆ ಪೊಲೀಸರು ಹಾಜರುಪಡಿಸಿ, ಮತ್ತೆ ಏಳು ದಿನ ಕಸ್ಟಡಿ ವಿಸ್ತರಣೆ ಕೋರಿದ್ದರು. ಆದರೆ ಸರಿಯಾದ ಕಾರಣ ನೀಡದ ಹಿನ್ನೆಲೆಯಲ್ಲಿ ನ್ಯಾಯಾಧೀಶರು ಪರಿಗಣಿಸಲಿಲ್ಲ.

‘₹50,000 ಭದ್ರತಾ ಬಾಂಡ್ ಪಡೆದು ಜಾಮೀನು ನೀಡಿರುವ ನ್ಯಾಯಾಲಯ, ಪೊಲೀಸರಿಗೆ ಪಾಸ್‌ಪೋರ್ಟ್, ಎಲೆಕ್ಟ್ರಾನಿಕ್ ಉಪಕರಣಗಳನ್ನು ಒಪ್ಪಿಸುವಂತೆ ಸೂಚಿಸಿದೆ’ ಎಂದು ಚಿಬ್ ಅವರ ಪರ ವಕೀಲರು ಪತ್ರಕರ್ತರಿಗೆ ತಿಳಿಸಿದರು. ದೆಹಲಿಯ ಭಾರತ ಮಂಟಪಂನಲ್ಲಿ ಕೃತಕ ಬುದ್ಧಿಮತ್ತೆ ಕುರಿತ ಸಮ್ಮೇಳನದಲ್ಲಿ ತಮ್ಮ ಅಂಗಿ ಕಳಚಿ ಪ್ರಧಾನಿ ಹಾಗೂ ಕೇಂದ್ರ ಸರ್ಕಾರದ ವಿರುದ್ಧದ ಘೋಷಣೆ ಇದ್ದ ಬರಹಗಳನ್ನು ಪ್ರದರ್ಶಿಸಲಾಗಿತ್ತು. ಈ ಸಂಬಂಧ ಪೊಲೀಸರು ಅವರನ್ನು ಬಂಧಿಸಿದ್ದರು.

63.66 ಲಕ್ಷ ಮತದಾರರಿಗೆ ಕೊಕ್

ಒಂದನೇ ಪುಟದಿಂದ...

ನಮೂನೆ 7ರ ಮೂಲಕ 5.46 ಲಕ್ಷಕ್ಕೂ ಹೆಚ್ಚು ಮತದಾರರ ಹೆಸರನ್ನು ಅಳಿಸಲಾಗಿದ್ದರೆ, ನಮೂನೆ 6 ಮತ್ತು 6ಎ ಪರಿಶೀಲನೆ ಮೂಲಕ 1.82 ಲಕ್ಷಕ್ಕೂ ಹೆಚ್ಚು ಮತದಾರರನ್ನು ಪಟ್ಟಿಯಲ್ಲಿ ಸೇರಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.



ನವೆಂಬರ್ 4ರಿಂದ 116 ದಿನಗಳವರೆಗೆ ರಾಜ್ಯವ್ಯಾಪಿ ಎಸ್‌ಐಆರ್ ಪ್ರಕ್ರಿಯೆ ನಡೆದಿದ್ದು, ಡಿಸೆಂಬರ್ 16ರಂದು ಕರಡು ಪಟ್ಟಿ ಪ್ರಕಟಿಸಲಾಗಿತ್ತು.

‘ತೀರ್ಪು ಬಾಕಿ’: ಪಟ್ಟಿಯಲ್ಲಿ ಸುಮಾರು 60.06 ಲಕ್ಷ ಮತದಾರರನ್ನು ‘ತೀರ್ಪು ಬಾಕಿ’ ಎಂದು ಗುರುತಿಸಲಾಗಿದೆ. ಈ ಮತದಾರರ ಭವಿಷ್ಯವನ್ನು ಮುಂಬರುವ ವಾರಗಳಲ್ಲಿ ನ್ಯಾಯಾಂಗ ಅಧಿಕಾರಿಗಳು ನಿರ್ಧರಿಸಲಿದ್ದಾರೆ. ಇದು ಮತದಾರರ ಪಟ್ಟಿಯಲ್ಲಿನ ಏರಿಳಿತಕ್ಕೆ ಕಾರಣವಾಗುವ ಸಾಧ್ಯತೆಯಿದೆ.

ತೆರೆದುಕೊಳ್ಳದ ವೆಬ್ ಪೋರ್ಟಲ್: ಆಯೋಗವು ಶನಿವಾರ ಹಂತ ಹಂತವಾಗಿ ಆಫ್‌ಲೈನ್ ವಿಧಾನದಲ್ಲಿ ಪಟ್ಟಿ ಪ್ರಕಟಿಸಿದೆ. ಈ ಪಟ್ಟಿಯ ಪ್ರತಿಗಳನ್ನು ಜಿಲ್ಲೆಗಳ ಎಸ್‌ಡಿಒ ಮತ್ತು ಬಿಡಿಒ ಕಚೇರಿಗಳಲ್ಲಿ ಪ್ರಕಟಿಸಲಾಗಿದೆ. ಆಯೋಗದ ವೆಬ್‌ಸೈಟ್, ಪೋರ್ಟಲ್, ಮೊಬೈಲ್ ಅಪ್ಲಿಕೇಷನ್‌ಗಳು ತೆರೆದುಕೊಳ್ಳದ ಕಾರಣ ಮಾಹಿತಿ ಪಡೆಯಲು ಮತದಾರರು, ರಾಜಕೀಯ ಪಕ್ಷಗಳ ಕಾರ್ಯಕರ್ತರು ಹೆಣಗಾಡಿದರು.

ಭವಾನಿಪುರ: 47,000 ಮತದಾರರು ಹೊರಕ್ಕೆ

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪ್ರತಿನಿಧಿಸುವ ಕ್ಷೇತ್ರವಾದ ಭವಾನಿಪುರದಲ್ಲಿ ಒಟ್ಟು 47,000 ಮತದಾರರ ಹೆಸರನ್ನು ತೆಗೆಯಲಾಗಿದೆ. ಅಲ್ಲದೆ 14,000ಕ್ಕೂ ಹೆಚ್ಚು ಮತದಾರರ ಹೆಸರನ್ನು ‘ತೀರ್ಪು ಬಾಕಿ’ ಎಂದು ಗುರುತಿಸಲಾಗಿದೆ.

ಬಾಂಗ್ಲಾದೇಶದ ಗಡಿಯಲ್ಲಿರುವ ನಾದಿಯಾ ಜಿಲ್ಲೆಯಲ್ಲಿ ಸುಮಾರು 2.73 ಲಕ್ಷ, ಉತ್ತರ ಕೋಲ್ಕತ್ತ ವಲಯದಲ್ಲಿ 4.07 ಲಕ್ಷ, ಬಂಕುರಾ ಜಿಲ್ಲೆಯಲ್ಲಿ 1.18 ಲಕ್ಷ, ಹೂಗ್ಲಿಯಲ್ಲಿ 3.34 ಲಕ್ಷ ಮತದಾರರನ್ನು ಕೈಬಿಡಲಾಗಿದೆ.




ಎಲ್ಲೋರಾದಲ್ಲೊಂದು ಸುತ್ತು...
ವಿಶ್ವದ ಅತ್ಯಂತ ಶ್ರೇಷ್ಠ ಏಕಶಿಲಾ ನಿರ್ಮಾಣವೆಂದು ಖ್ಯಾತಿ ಪಡೆದಿರುವ ಕೈಲಾಸ ದೇವಾಲಯ ಸೇರಿದಂತೆ ಎಲ್ಲೋರಾ ಗುಹೆಗಳೊಳಗೆ ಹೆಜ್ಜೆ ಹಾಕುತ್ತಾ... 13

ಗಿಡಮೂಲಿಕೆಗಳ ಅಂತರಂಗ



ಅಕೇಶಿಯಾ ಚಿಗುರುಗಳು ಇವುಗಳಿಗೆ ಅಚ್ಚುಮೆಚ್ಚು

ಮನುಷ್ಯನ ಕಾಯಿಲೆಗಳಿಗೆ ಮದ್ದು ನೀಡುವ ಈ ಗಿಡಮೂಲಿಕೆಗಳು ನಿಜಕ್ಕೂ ನಮಗಾಗಿ ಹುಟ್ಟಿಕೊಂಡಿವೆಯೇ? ಅಥವಾ ಅವುಗಳ ಬದುಕುಳಿಯುವ ಹಾದಿಯ ದೀರ್ಘ ಹೋರಾಟದ ಫಲವೇ? ಮಾತನಾಡದ ಸಸ್ಯಗಳ ಭಾಷೆ, ಕಾಣದ ರಾಸಾಯನಿಕ ಯುದ್ಧ, ಮತ್ತು ಮಾನವ ಲಾಭಾಸಕ್ತಿಯ ನಡುವಿನ ಮೌನ ಸಂಘರ್ಷವನ್ನು ಅನಾವರಣಗೊಳಿಸುವ ಒಂದು ಚಿಂತನಾ ಪ್ರಯಾಣವಿದು.



ತಾರೆ ಚಿಗುರು

• ಚಿತ್ರ-ಬರಹ: ಕೃಪಾಕರ ಸೇನಾನಿ

ಇತ್ತೀಚೆಗೆ ಮೈಸೂರಿನ ರಸ್ತೆ ಬದಿಯ ತರಕಾರಿ ಅಂಗಡಿಯಲ್ಲಿ ವಿಚಿತ್ರ ಸನ್ನಿವೇಶವೊಂದು ಎದುರಾಯಿತು. ಅಂಗಡಿಯ ಮಾಲೀಕ ಬಂದ ಗಿರಾಕಿಗಳಿಗೆ ಹಾಗಲಕಾಯಿ ತಗೊಳ್ಳಿ ಸಾರ್... ಶುಗರ್‌ಗೆ ಒಳ್ಳೇದು, ನವಿಲುಕೋಸು ಬಿ.ಪಿಗೆ ಒಳ್ಳೇದು, ಮೂಲಂಗಿ ತಗೊಳ್ಳಿ...ನುಗ್ಗೆಸೊಪ್ಪು ತಗೊಳ್ಳಿ... ಎಂದು ಪ್ರತಿ ತರಕಾರಿಯಲ್ಲಿರುವ ಔಷಧೀಯ ಗುಣಗಳನ್ನು ಕಂಠಪಾಠ ಮಾಡಿದಂತೆ ಹೇಳುತ್ತಿದ್ದ.

ಅವನ ವಿವರಣೆಗಳು ನಿಲ್ಲದೆ ಮುಂದುವರಿದಿದ್ದಾಗ ಇವನು ತರಕಾರಿ ಮಾರುತ್ತಿದ್ದಾನೋ, ಇಲ್ಲವೇ ಔಷಧ ಮಾರುತ್ತಿದ್ದಾನೋ ಎನ್ನುವ ಗೊಂದಲ ಶುರುವಾಯಿತು.

ಆ ವಿಷಯದ ಕುರಿತು ಕೊಂಚ ಯೋಚಿಸಲು ಆರಂಭಿಸಿದೆವು. ಹೌದಲ್ಲ. ಈ ಸಸ್ಯಗಳೇಕೆ ಮನುಷ್ಯನ ಕಾಯಿಲೆಗಳಿಗೆ ಔಷಧ ತಯಾರು ಮಾಡಬೇಕು? ಅದರಿಂದ ಅವುಗಳಿಗೇನು ಲಾಭ? ಎಂಬ ಪ್ರಶ್ನೆಗಳು ಎದುರಾದವು. ಜೊತೆಗೆ ಪ್ರಕೃತಿ ತನಗೆ ಅವಶ್ಯವಿಲ್ಲದ ವಸ್ತುಗಳನ್ನು ಎಂದೂ ತಯಾರು ಮಾಡುವುದಿಲ್ಲವೆಂಬ ಸರಳ ತತ್ವವೂ ನೆನಪಿಗೆ ಬಂತು.

ಮೇಲಿನ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಮಾನವನ ಇತಿಹಾಸ ಮತ್ತು ಸಸ್ಯಸಂಕುಲಗಳ ವಿಕಾಸದ ಹಾದಿಯ ಪುಟಗಳಲ್ಲಿ ಅಲೆದಾಡುವುದೊಂದೇ ಮಾರ್ಗವೆನಿಸಿತು.

ಸುಮಾರು ಮೂರು ಲಕ್ಷ ವರ್ಷಗಳ ಹಿಂದೆ ಮನುಷ್ಯ ಭೂಮಿಗೆ ಆಗಮಿಸಿದ. ಆ ದಿನಗಳಲ್ಲಿ ಅವನ ಬದುಕು ಸುಲಭವಾಗಿರಲಿಲ್ಲ. ನಾನಾ ಬಗೆಯ ನೂರೆಂಟು ಸವಾಲುಗಳು ಅವನ ಮುಂದಿದ್ದವು. ಭೂಪಟದ ಅಸ್ಪಷ್ಟ ಹಾದಿಗಳಲ್ಲಿ ಅಲೆದಾಡಿಕೊಂಡು, ಸಣ್ಣಪುಟ್ಟ ಜೀವಿಗಳನ್ನು ಬೇಟೆಯಾಡುತ್ತಾ, ಹಣ್ಣು, ಕಾಯಿ, ಸೊಪ್ಪು ಸದೆಗಳನ್ನು ಹುಡುಕುತ್ತಾ ಅಲೆಮಾರಿಯಾಗಿ ಬದುಕು ಸಾಗಿಸಿದ್ದ.

ಈ ಪ್ರಯಾಣದಲ್ಲಿ ಅವನಿಗೆ ಸಣ್ಣಪುಟ್ಟ ಕಾಯಿಲೆಗಳು ಎದುರಾಗಿರಬಹುದು. ಆ ಅಸಹಾಯಕ ಸನ್ನಿವೇಶದಲ್ಲಿ ಎಲೆ, ಚಿಗುರು, ಬೀಜ, ಮರಗಿಡಗಳ ತೊಗಟೆಗಳನ್ನೆಲ್ಲಾ ತಿಂದು ನೋಡಿರಬಹುದು. ಇಂತಹ ನೂರಾರು ಪ್ರಯತ್ನಗಳಲ್ಲಿ ಯಾವುದೋ ಒಂದೆರಡು ಸಸ್ಯಗಳು ಔಷಧವಾಗಿ ಕೆಲಸ ಮಾಡಿರಬಹುದು. ಹೀಗೆ ಸಾವಿರಾರು ವರ್ಷಗಳ ಪ್ರಯೋಗಾತ್ಮಕ ಕಲಿಕೆಯ ಮಾರ್ಗದಲ್ಲಿ ಔಷಧೀಯ ಗುಣಗಳಿರುವ ಹಲವು ಗಿಡಮೂಲಿಕೆಗಳನ್ನು ಆತ ಪತ್ತೆ ಹಚ್ಚಿರಬಹುದು. ಬಹುಶಃ ಔಷಧ ಸಸ್ಯಗಳ ಆರಂಭದ ಪುಟಗಳು ಹೀಗೆ ತೆರೆದುಕೊಂಡಿರಬಹುದು.

ಗಿಡಮೂಲಿಕೆಗಳ ಔಷಧ ಎಂದರೆ ವಿಜ್ಞಾನದ ಭಾಷೆಯಲ್ಲಿ ರಾಸಾಯನಿಕ ವಸ್ತುಗಳು. ಸಸ್ಯಗಳು ಈ ರಾಸಾಯನಿಕ ಅಂಶಗಳನ್ನು ಉತ್ಪಾದಿಸಲು ಬಹಳಷ್ಟು ಶ್ರಮವನ್ನು ವ್ಯಯಿಸಬೇಕು. ಕಷ್ಟಪಟ್ಟು ಗಳಿಸಿದ ಆಹಾರವನ್ನು ಖರ್ಚು ಮಾಡಬೇಕು. ಹೀಗಿದ್ದೂ ರಾಸಾಯನಿಕ ವಸ್ತುಗಳನ್ನು ಗಿಡಗಳೇಕೆ ತಯಾರಿಸಬೇಕು?

ಇಲ್ಲಿ ಒಂದು ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಪ್ರಕೃತಿಯಲ್ಲಿ ಸಸ್ಯಸಂಕುಲಗಳ ಬದುಕು ನಿರಾತಂಕವಾಗಿಲ್ಲ. ಗಾಳಿ, ಬಿಸಿಲು, ಮಣ್ಣು, ನೀರು ಅವಶ್ಯವಾಗಿ ಲಭ್ಯವಿದ್ದಾಗ ಅವು ಚಿಗುರೊಡೆದು, ಹೂವು ಹಣ್ಣುಗಳನ್ನು ಬಿಟ್ಟು ಸುಖವಾಗಿ ಜೀವಿಸಬಲ್ಲವೆಂಬ ತಿಳಿವಳಿಕೆ ತಪ್ಪಾಗುತ್ತದೆ. ಪ್ರಕೃತಿಯಲ್ಲಿ ಜೀವಿಸುವುದು ಅಷ್ಟು ಸರಳವಲ್ಲ. ಬದುಕುಳಿಯುವ ಪರೀಕ್ಷೆಯಲ್ಲಿ ಅವು ಉತ್ತೀರ್ಣವಾಗುತ್ತಲೇ ಇರಬೇಕು. ಉಳಿದ ಜೀವಿಗಳೊಂದಿಗೆ ಸ್ಪರ್ಧಿಸಿ ಜಯಿಸುವುದಷ್ಟೇ ಅಲ್ಲ, ಬದುಕಿಗೆ ಸವಾಲೊಡ್ಡುವ ಶತ್ರುಗಳನ್ನು ಎಚ್ಚರಿಕೆಯಿಂದ ಯಶಸ್ವಿಯಾಗಿ ನಿಭಾಯಿಸಬೇಕು. ಈ ವಿಷಯದಲ್ಲಿ ಸಸ್ಯಗಳಿಗಿರುವ ಒಂದು ಅನನುಕೂಲವೆಂದರೆ ಅವು ಪ್ರಾಣಿ, ಪಕ್ಷಿಗಳಂತೆ ವೈರಿಗಳು ಎದುರಾದಾಗ ಜಿಗಿದು, ಹಾರಿ ಪಲಾಯನ ಮಾಡುವ ಸಾಮರ್ಥ್ಯವನ್ನು ಹೊಂದಿಲ್ಲ. ಹಾಗಾಗಿ ಅವು ನಿಂತಲ್ಲೇ ನಿಂತು ಶತ್ರುಗಳನ್ನು ಹಿಮ್ಮೆಟ್ಟಿಸುವ ತಂತ್ರಗಳನ್ನು ರೂಪಿಸಿಕೊಳ್ಳುವುದು ಅನಿವಾರ್ಯ.

ಈ ಸವಾಲಿಗೆ ಪರಿಹಾರ ಕಂಡುಕೊಳ್ಳಲು ಸಸ್ಯಗಳು ಬಗೆಬಗೆಯ ರಾಸಾಯನಿಕ ವಸ್ತುಗಳನ್ನು ಉತ್ಪಾದಿಸುವುದನ್ನು ಕಲಿತಿರಬಹುದು. ಇದನ್ನು ಸಸ್ಯಸಂಕುಲಗಳು ಒಮ್ಮಿಂದೊಮ್ಮೆಗೆ ಕಂಡುಕೊಂಡ ಸಾಧನವೆಂದು ಭಾವಿಸಬಾರದು. ಈ ರಾಸಾಯನಿಕ ವಸ್ತುಗಳೆಲ್ಲ ವಿಕಾಸಕ್ರಿಯೆಯ ಅನಂತಯಾತ್ರೆಯಲ್ಲಿ ಪರಿಷ್ಕೃತಗೊಂಡ ಅಮೂಲ್ಯ ವಸ್ತುಗಳು. ಇವುಗಳನ್ನು ಅವು ತಮ್ಮ ರಕ್ಷಣೆಗೆ ಶಸ್ತ್ರಗಳಾಗಿ, ಆಯುಧಗಳಾಗಿ ಬಳಸಿಕೊಳ್ಳುತ್ತಿವೆ.

ಇದಕ್ಕೆ ಅದ್ಭುತ ಉದಾಹರಣೆ ಎಂದರೆ ಆಫ್ರಿಕಾ ಕಾಡುಗಳಲ್ಲಿ ಜೀವಿಸುವ ಜಿರಾಫೆ ಪ್ರಾಣಿಗಳದು. ಜಿರಾಫೆಗಳಿಗೆ ಅಕೇಶಿಯಾ ಸಸ್ಯಗಳ ಎಲೆಗಳು ನೆಚ್ಚಿನ ಆಹಾರ. ಹಾಗಾಗಿ ಚಿಗುರುವ ಒಂದೂ ಎಲೆಯನ್ನು ಅವು ಬಿಡುವುದಿಲ್ಲ. ಇದಕ್ಕಾಗಿ ಅಕೇಶಿಯಾ ಗಿಡಗಳು ತಂತ್ರವೊಂದನ್ನು ಅಳವಡಿಸಿಕೊಂಡಿವೆ. ಜಿರಾಫೆಗಳು ಆಗಮಿಸಿ ಚಿಗುರುಗಳಿಗೆ ಬಾಯಾಡಿಸಿದ ಕ್ಷಣದಲ್ಲಿ ಮರಗಳು ಎಲೆಗಳಿಗೆ ರಾಸಾಯನಿಕ ದ್ರವ್ಯವನ್ನು ಹರಿದು ಬಿಡುತ್ತವೆ. ಅದು ಜಿರಾಫೆಗಳಲ್ಲಿ ಆಲಸ್ಯವನ್ನುಂಟು ಮಾಡುತ್ತದೆ. ಇದರಿಂದ ಅವು ಮುಂದಿನ ಮರಕ್ಕೆ ತೆರಳುತ್ತವೆ. ಜಿರಾಫೆಗಳು ಆಗಮಿಸುವ ಸುದ್ದಿಯನ್ನು ಕೆಲವೊಮ್ಮೆ ಅಕ್ಕಪಕ್ಕದ ಅಕೇಶಿಯಾ ಗಿಡಮರಗಳು ಗಾಳಿಯಲ್ಲಿ ತೇಲಿಬರುವ ಅಣುಗಳ ಮಾಹಿತಿ ಪಡೆದು ಮುಂಚಿತವಾಗಿಯೇ ದಾಳಿಗೆ ಸಜ್ಜಾಗಿ ನಿಲ್ಲುತ್ತವೆ. ಇದೇ ಅವುಗಳ ಉಳಿವಿನ ಗುಟ್ಟು.



ಐಪೋಮಿಯ ಹೂವು


ನಮ್ಮಲ್ಲಿ ಮೇಕೆಗಳ ಸ್ವಭಾವವನ್ನು ಗಮನಿಸಿದಾಗ ಈ ಮೇಲಿನ ಸಂವಹನ ಇನ್ನಷ್ಟು ಸ್ಪಷ್ಟವಾಗಿ ಮನದಟ್ಟಾಗಬಹುದು. ಈ ಮೇಕೆಗಳು ದನ, ಕುರಿಗಳಂತೆ ಒಂದೆಡೆ ನಿಂತು ಮೇಯುವುದೇ ಇಲ್ಲ. ಪ್ರತಿ ಗಿಡಗಳಲ್ಲಿ ನಾಲ್ಕಾರು ಎಲೆಗಳಿಗೆ ಬಾಯಾಡಿಸಿ ಅವಸರದಿಂದ ಮುಂದಿನ ಗಿಡಕ್ಕೆ ಸಾಗುತ್ತವೆ. ಇಲ್ಲಿಯೂ ಸಹ ಸಸ್ಯಗಳು ಹೊರ ಸೂಸುವ ರಾಸಾಯನಿಕ ಅಸ್ತ್ರಗಳಿಂದ ಪಾರಾಗಲು ಮೇಕೆಗಳಲ್ಲಿ ಈ ಸ್ವಭಾವ ರೂಪುಗೊಂಡಿರಬಹುದು. ಇದನ್ನು ಗಮನಿಸಿ 'ಆಡು ಮುಟ್ಟದ ಸೊಪ್ಪಿಲ್ಲ' ಎನ್ನುವ ಗಾದೆ ಅರಳಿರಬಹುದು.

ಇದೇ ರೀತಿ ಎಕ್ಕದ ಗಿಡಗಳನ್ನು ಮುಖ್ಯ ಔಷಧ ಗಿಡವೆಂದು ಪರಿಗಣಿಸಿದ್ದೇವೆ. ಅದು ಬದುಕುಳಿಯಲು ಯಾವುದೋ ಚಿಟ್ಟೆಯ ಸಂತತಿಯೊಂದಿಗೆ ನಿರಂತರವಾಗಿ ಹೋರಾಟ ನಡೆಸಿಕೊಂಡು ಬಂದಿದೆ. ಇವೆರಡರ ನಡುವೆ ಜರುಗಿರುವ ತಂತ್ರ ಮತ್ತು ಪ್ರತಿತಂತ್ರದ ಪ್ರಕ್ರಿಯೆಯಲ್ಲಿ ಎಕ್ಕದ ಗಿಡಗಳು 150ಕ್ಕೂ ಹೆಚ್ಚು ಬಗೆಯ ರಾಸಾಯನಿಕ ವಸ್ತುಗಳನ್ನು ರೂಪಿಸಿಕೊಂಡಿವೆ. ಇವುಗಳ ನಡುವಿನ ಹೋರಾಟ ಇಂದಿಗೂ ಮುಂದುವರಿದಿದೆ. ಮುಂದೆಯೂ ಮುಂದುವರಿಯುತ್ತದೆ. ಇದನ್ನೇ ಪ್ರಕೃತಿಯಲ್ಲಿ ಬದುಕಿಗಾಗಿ ಹೋರಾಟ ಎಂದು ಸರಳವಾಗಿ ಹೇಳಿಬಿಡುತ್ತೇವೆ. ಆದರೆ ಗಿಡ ಮೂಲಿಕೆಗಳು ಈ ರಾಸಾಯನಿಕ ಅಂಶಗಳನ್ನು ರೂಪಿಸಿಕೊಳ್ಳುವ ಜ್ಞಾನದ ಹಿಂದೆ ಲಕ್ಷಾಂತರ ವರ್ಷಗಳ ನೈಸರ್ಗಿಕ ಆಯ್ಕೆ ಕೆಲಸ ಮಾಡಿರುತ್ತದೆ. 11ನೇ ಪುಟಕ್ಕೆ...

ಶ್! ಇದು ಬೆಕ್ಕುಗಳ ಮ್ಯೂಸಿಯಂ



ಇದೇ ನೋಡಿ ಬೆಕ್ಕುಗಳ ಚಿನ್ನಾಟಕ್ಕಿರುವ ಮೈದಾನ
ಚಿತ್ರಗಳು: ಅನೂಪ್ ರಾಘ. ಟಿ.



ರ್‍ಯಾಗ್ ಡಾಲ್ ತಳಿಯ ಬೆಕ್ಕು

• ಶಿವಪ್ರಸಾದ್ ರೈ

ಮೈಸೂರು ನಗರದ ನಂಜನಗೂಡು ರಸ್ತೆಯ ಮಧುವನದ ಎದುರು ಈಗ ಹೊಸದೊಂದು ಸ್ಥಳ ಗಮನ ಸೆಳೆಯುತ್ತಿದೆ. ಇದು ರೆಸಾರ್ಟ್ ಅಲ್ಲ, ಥೀಮ್ ಪಾರ್ಕ್ ಕೂಡ ಅಲ್ಲ; ಬೆಕ್ಕುಗಳಿಗಾಗಿ ರೂಪುಗೊಂಡಿರುವ ಅಪರೂಪದ ಲೋಕ. 'ಜಿನ್ ಮಿನ್ ಕ್ಯಾಟ್ ವರ್ಲ್ಡ್' ಎಂಬ ಹೆಸರಿನ ಈ ಬೆಕ್ಕುಗಳ ಮ್ಯೂಸಿಯಂ, ಮುದ್ದುಮರಿಗಳ ಆಟ, ಅಪರೂಪದ ತಳಿಗಳ ನಡಿಗೆ, ಮತ್ತು ಅವುಗಳ ಬಗ್ಗೆ ಅರಿವು ಮೂಡಿಸುವ ಪ್ರಯತ್ನಗಳಿಂದ ಬೆಕ್ಕು ಪ್ರಿಯರು ಮತ್ತು ಪ್ರವಾಸಿಗರ ಗಮನ ಸೆಳೆಯುತ್ತಿದೆ.

ಹದಿನೈದು ವರ್ಷಗಳ ಕಾರ್ಪೊರೇಟ್ ಬದುಕಿನ ಒತ್ತಡದಿಂದ ಹೊರಬಂದ ಶರತ್ ಅವರ ಜೀವನದಲ್ಲಿ ಮುದ್ದಾದ ಸಂಗಾತಿ ಇದ್ದಳು; ಅವಳ ಹೆಸರು 'ಕೊಕೊ'. ಕೆಲಸದ ದಣಿವು, ಜೀವನದ ಏರುಪೇರುಗಳನ್ನೆಲ್ಲ ಹಂಚಿಕೊಳ್ಳುತ್ತಿದ್ದ ಆ ಬೆಕ್ಕು ಒಂದು ದಿನ ರಸ್ತೆ ಅಪಘಾತದಲ್ಲಿ ಮೃತಪಟ್ಟಾಗ, ಶರತ್ ಅವರ ಬದುಕು ಕ್ಷಣಾರ್ಧದಲ್ಲಿ ಬದಲಾಗಿತ್ತು. ಆ ನೋವು ಅವರನ್ನು ಕುಗ್ಗಿಸಲಿಲ್ಲ, ಬದಲಿಗೆ ಬೆಕ್ಕುಗಳಿಗಾಗಿ ಏನಾದರೂ ಮಾಡಬೇಕು ಎಂಬ ದೃಢಸಂಕಲ್ಪಕ್ಕೆ ದಾರಿ ತೋರಿಸಿತು.

''ಕೊಕೊ' ಇಲ್ಲದ ಖಾಲಿತನ ತುಂಬಲಾಗದು. ಆದರೆ ಆಕೆಯ ನೆನಪಿನಲ್ಲಿ ಇನ್ನೂ ಅನೇಕ ಬೆಕ್ಕುಗಳಿಗೆ ಸುರಕ್ಷಿತ, ಸಂತೋಷಕರ ಜಗತ್ತು ನಿರ್ಮಿಸಬೇಕು ಎಂದು ನಿರ್ಧರಿಸಿದೆ' ಎನ್ನುತ್ತಾರೆ ಶರತ್.

ಮೈಸೂರಿನಲ್ಲಿ ಮೃಗಾಲಯ ಇರುವುದು ಎಲ್ಲರಿಗೂ ಗೊತ್ತು. ಇದರ ಜೊತೆಗೆ ಬೆಕ್ಕುಗಳ ರಕ್ಷಣೆ, ಆರೈಕೆ ಹಾಗೂ ಅವುಗಳ ತಳಿಗಳ ಮಾಹಿತಿಗಾಗಿ ಹೊಸದೊಂದು ಮ್ಯೂಸಿಯಂ ಇದೆ ಗೊತ್ತೇ?

ಕಲ್ಪನೆಯಿಂದ ಕಾರ್ಯರೂಪಕ್ಕೆ

₹50 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಈ ಮ್ಯೂಸಿಯಂ ಕೇವಲ ಪ್ರದರ್ಶನ ಸ್ಥಳವಲ್ಲ; ಇದು ಅರಿವು ಕೇಂದ್ರವೂ ಹೌದು. ಎರಡು ವರ್ಷ ಶರತ್ ಬೆಕ್ಕುಗಳ ಸಾಕಾಣಿಕೆ, ಆರೈಕೆ, ತಳಿಗಳು ಮತ್ತು ರೋಗಗಳ ಕುರಿತು ಮಾಹಿತಿ ಸಂಗ್ರಹಿಸಿದರು. ಬೆಕ್ಕುಗಳ ಆರೈಕೆ (ಫೀಲೈನ್ ಕೇರ್) ಕುರಿತು ಅಧ್ಯಯನ ಮಾಡಿ ತಜ್ಞರ ಸಲಹೆ ಪಡೆದುಕೊಂಡರು. ಸ್ನೇಹಿತರ ಸಹಾಯದಿಂದ ಹದಿನಾಲ್ಕು ತಳಿಗಳ ಬೆಕ್ಕುಗಳನ್ನು ಪಡೆದು, ಮೈಸೂರಿನ ವಾತಾವರಣಕ್ಕೆ ಅವು ಹೊಂದಿಕೊಳ್ಳುತ್ತವೆಯೇ ಎಂಬುದನ್ನು ಮೂರು ತಿಂಗಳು ಗಮನಿಸಿದರು.

ಇದೀಗ ಇಲ್ಲಿ ಇಪ್ಪತ್ತಕ್ಕೂ ಹೆಚ್ಚು ಬೆಕ್ಕುಗಳಿವೆ. ಅಪರೂಪದ ತಳಿಗಳಾದ ಮೇನ್ ಕೂನ್, ಸೈಬೀರಿಯನ್, ಪರ್ಶಿಯನ್, ಬೆಂಗಾಲ್, ಸ್ಫಿಂಕ್ಸ್, ಹಿಮಾಲಯನ್ ಮತ್ತು ರ್‍ಯಾಗ್ ಡಾಲ್ ಬೆಕ್ಕುಗಳು ಇಲ್ಲಿ ಸ್ವಚ್ಛಂದವಾಗಿ ಓಡಾಡುತ್ತಿವೆ. ಕೆಲವು ಮರಿಗಳನ್ನು ದತ್ತು ಪಡೆದು ಸಾಕಲಾಗುತ್ತಿದೆ.

ಸ್ವಾತಂತ್ರ್ಯವೇ ವಿಶೇಷತೆ

ಮ್ಯೂಸಿಯಂ ಒಳಭಾಗದಲ್ಲಿ ಮುದ್ದಾದ ಜೋಕಾಲಿಗಳು, ಕುಳಿತುಕೊಳ್ಳಲು ವಿನ್ಯಾಸಗೊಳಿಸಿದ ಮಂಚಗಳು ಹಾಗೂ ವಿಶಾಲಗೂಡುಗಳು ಇವೆ. ಒಂದು ಗೂಡಿನಿಂದ ಮತ್ತೊಂದಕ್ಕೆ ಸಾಗಲು 300 ಅಡಿ ಉದ್ದದ ಸುರಂಗ ಮಾದರಿಯ ಮಾರ್ಗವಿದ್ದು, ಬೆಕ್ಕುಗಳು ಯಾವುದೇ ಭಯವಿಲ್ಲದೆ ಓಡಾಡಬಹುದು. ಅವುಗಳನ್ನು ಪಂಜರಕ್ಕೆ ಸೀಮಿತಗೊಳಿಸದೇ, ಸ್ವತಂತ್ರವಾಗಿ ಆಟವಾಡಲು ಅವಕಾಶ ಕಲ್ಪಿಸಿರುವುದು ವಿಶೇಷ.

ಲಸಿಕೆ, ಆಹಾರ ಮತ್ತು ಆರೋಗ್ಯ ನಿರ್ವಹಣೆಗೆ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಪ್ರತಿಯೊಂದು ತಳಿಯ ವಿಶೇಷತೆ, ಹೊಂದಿಕೊಳ್ಳುವ ವಾತಾವರಣ, ಸಾಮಾನ್ಯ ರೋಗಗಳು ಮತ್ತು ಆರೈಕೆ ವಿಧಾನಗಳ ಬಗ್ಗೆ ಮಾಹಿತಿಯನ್ನೂ ಪ್ರದರ್ಶಿಸಲಾಗಿದೆ.

ಅರಿವಿನ ಅಂಗಳ

ಇಲ್ಲಿ ಕೇವಲ ಬೆಕ್ಕುಗಳನ್ನು ನೋಡುವುದಲ್ಲ; ಅವುಗಳನ್ನು ಅರ್ಥಮಾಡಿಕೊಳ್ಳುವ ಅವಕಾಶವೂ ಇದೆ. ಬೆಕ್ಕಿನ ದೃಷ್ಟಿಗೆ ಬಣ್ಣಗಳು ಹೇಗೆ ಕಾಣುತ್ತವೆ ಎಂಬುದನ್ನು ಚಿತ್ರಗಳ ಮೂಲಕ ತೋರಿಸಲಾಗಿದೆ. ಬೆಕ್ಕಿಗೆ ಜ್ವರ ಬಂದರೆ ಏನು ಮಾಡಬೇಕು, ಹೇಗೆ ಹಿಡಿದುಕೊಳ್ಳಬೇಕು, ಲಾಲನೆ-ಪಾಲನೆ ಹೇಗೆ ಮಾಡಬೇಕು ಎಂಬುದರ ಕುರಿತು ಸೂಕ್ಷ್ಮ ಮಾಹಿತಿಯನ್ನೂ ನೀಡಲಾಗಿದೆ.

'ಬೆಕ್ಕುಗಳ ಸಾಕಾಣಿಕೆಯಷ್ಟೇ ನನ್ನ ಉದ್ದೇಶವಲ್ಲ. ಅವುಗಳಲ್ಲಿ ಸುಮಾರು ಐವತ್ತು ತಳಿಗಳಿವೆ. ಆದರೆ ಜನರಿಗೆ ಅದರ ಅರಿವಿಲ್ಲ. ಶೋ ಗಾಗಿ ಸಾಕಾಣಿಕೆ ಮಾಡುವವರ ಸಂಖ್ಯೆ ಹೆಚ್ಚುತ್ತಿದೆ. ಹೀಗಾಗಿ ಸಾಕಾಣಿಕೆಯ ಕುರಿತು ಅರಿವು ಮೂಡಿಸಿ, ಮಾಹಿತಿಯನ್ನೂ ನೀಡಿದ್ದೇವೆ' ಎಂದು ಮ್ಯೂಸಿಯಂ ಬಗ್ಗೆ ವಿವರಿಸಿದರು ಶರತ್.

ಜನಮೆಚ್ಚಿದ ಹೊಸ ಪ್ರಯತ್ನ

ವಾರಾಂತ್ಯಗಳಲ್ಲಿ ಪೋಷಕರು ಮಕ್ಕಳನ್ನು ಈ ಮ್ಯೂಸಿಯಂಗೆ ಕರೆದುಕೊಂಡು ಬರುತ್ತಿದ್ದಾರೆ. ಮಕ್ಕಳಿಗೆ ₹69, ವಯಸ್ಕರಿಗೆ ₹99 ಪ್ರವೇಶ ಶುಲ್ಕ ನಿಗದಿಯಾಗಿದೆ. ಬೆಕ್ಕಿನ ಮುಖ ಆಧಾರಿತ ಕಲಾಕೃತಿಗಳು, ಕಾರ್ಟೂನ್ ಪಾತ್ರಗಳು, ಹಾಗೂ ಶೈಕ್ಷಣಿಕ ಪ್ರದರ್ಶನಗಳು ಮಕ್ಕಳಲ್ಲಿ ಕುತೂಹಲ ಹುಟ್ಟಿಸುತ್ತಿವೆ.

12ನೇ ಪುಟಕ್ಕೆ...



ಬೆಂಗಾಲ್ ತಳಿಯ ಬೆಕ್ಕು



ಬೆಕ್ಕನ್ನು ಹೋಲುವ ಕಲಾಕೃತಿಗಳ ಪ್ರದರ್ಶನ

ಹಳ್ಳಿ ಹುಡುಗನ ಸೋಡಾ ಉದ್ಯಮ



ಇಲ್ಲೇ ತಯಾರಾಗುತ್ತೆ ಬಗೆಬಗೆಯ ಸೋಡಾ

• ಮಹಾಂತೇಶ ಗಂಗಯ್ಯ ಓಶಿಮಠ

ನಾವು ಚಾರಣ ಮುಗಿಸಿಕೊಂಡು ಶಿಶಿಲ ಎಂಬ ಗ್ರಾಮದಲ್ಲಿ ಬಸ್ಸಿಗಾಗಿ ಕಾಯುತ್ತಿದ್ದೆವು. ಬೆಟ್ಟದ ಗಾಳಿ ದೇಹಕ್ಕೆ ತಂಪು ಕೊಟ್ಟಿದ್ದರೂ, ಬಾಯಾರಿಕೆ ನೀಗಿರಲಿಲ್ಲ. ಅಲ್ಲೇ ಇದ್ದ ಸಣ್ಣ ಅಂಗಡಿಯತ್ತ ಹೆಜ್ಜೆ ಹಾಕಿದೆವು. ಫ್ರಿಜ್‌ನೊಳಗೆ ಬಹುರಾಷ್ಟ್ರೀಯ ಕಂಪನಿಗಳ ಬಣ್ಣ ಬಣ್ಣದ ತಂಪು ಪಾನೀಯಗಳ ನಡುವೆ ಒಂದು ಹೆಸರು ಕಣ್ಣಿಗೆ ಬಿತ್ತು. ಅದು 'ಶ್ರೀ ಕೃಷ್ಣ ಗೋಲಿ ಸೋಡಾ'.

ಬಾಟಲಿಯನ್ನು ಕೈಗೆತ್ತಿಕೊಂಡಾಗ ಅದರ ಮೇಲಿದ್ದ ಘೋಷವಾಕ್ಯ ಮನಸ್ಸಿಗೆ ನೇರವಾಗಿ ತಾಕಿತು: 'ಹಳ್ಳಿ ಹುಡುಗ, ಹಳ್ಳಿ ರೈತ'. ಕುತೂಹಲದಿಂದ ಲಿಂಬು, ಕಿತ್ತಲೆ ಮತ್ತು ಶುಂಠಿ ಸ್ವಾದದ ಸೋಡಾವನ್ನು ತೆಗೆದುಕೊಂಡೆವು. ಗಟಗಟ ಕುಡಿದೆವು. ಕ್ಷಣದಲ್ಲೇ ದಾಹ ಇಂಗಿತು; ರುಚಿ ಮನಸ್ಸು ಗೆದ್ದಿತು. ಅದು ಕೇವಲ ಪಾನೀಯವಲ್ಲ, ಹಳ್ಳಿಯೊಂದರ ಹಂಬಲದ ರುಚಿಯಂತೆ ಅನಿಸಿತು.

ಈ ಬ್ರ್ಯಾಂಡ್‌ನ ರೂವಾರಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಶಿಶಿಲ ಗ್ರಾಮದ ಮಲೆಕುಡಿಯರ ಯುವ ರೈತ ಬಾಲಕೃಷ್ಣ.

ಯುಟ್ಯೂಬ್‌ನಿಂದ ಉದ್ಯಮದವರೆಗೆ

ಕೃಷಿ ಕೆಲಸದ ಬಿಡುವಿನಲ್ಲಿ ಯುಟ್ಯೂಬ್‌ನಲ್ಲಿ ವಿಡಿಯೊಗಳನ್ನು ವೀಕ್ಷಿಸುತ್ತಿದ್ದಾಗ ಗೋಲಿ ಸೋಡಾ ತಯಾರಿಸುವ ವಿಡಿಯೊ ಆಕಸ್ಮಿಕವಾಗಿ ಕಣ್ಣಿಗೆ ಬಿತ್ತು. ಅದನ್ನು ಕುತೂಹಲದಿಂದ ನೋಡಿದರು. ಆ ಕ್ಷಣವೇ ಒಂದು ಚಿಂತನೆಯ ಬೀಜ ಬಿತ್ತಿತು– 'ನಾನೂ ಏಕೆ ಗೋಲಿ ಸೋಡಾ ತಯಾರಿಸಬಾರದು?'

ಈ ಆಲೋಚನೆಯನ್ನು ಅಷ್ಟಕ್ಕೇ ಬಿಡಲಿಲ್ಲ. ಕೂಡಲೇ ಕಾರ್ಯರೂಪಕ್ಕೆ ತಂದರು. ಮರುದಿನವೇ ಮಂಗಳೂರು ಬಸ್ ಏರಿದರು. ನಗರವನ್ನೆಲ್ಲ ಸುತ್ತಾಡಿ ಗೋಲಿ ಸೋಡಾ ಉದ್ಯಮ ನಡೆಸುತ್ತಿದ್ದ ವ್ಯಕ್ತಿಯನ್ನು ಹುಡುಕಿ, ತಮ್ಮ ಕನಸನ್ನು ಹಂಚಿಕೊಂಡರು. ಅವರಿಂದ ಮಾರ್ಗದರ್ಶನ ಪಡೆದರು. ಅವರ ಸಲಹೆಯಂತೆ ಸುಧಾರಿತ ಚಿಕ್ಕ ಉಪಕರಣಗಳು, ಸೋಡಾ ಸಿಲಿಂಡರ್‌ಗಳು, ಬಾಟಲಿಗಳನ್ನು ಮಂಗಳೂರು ಮತ್ತು ಕೊಯಮತ್ತೂರಿನಿಂದ ತರಿಸಿ ಎರಡೂವರೆ ವರ್ಷಗಳ ಹಿಂದೆ ಸಣ್ಣಮಟ್ಟಿನಲ್ಲಿ ಗೋಲಿ ಸೋಡಾ ಉದ್ಯಮ ಆರಂಭಿಸಿದರು.

13ನೇ ಪುಟಕ್ಕೆ...





ಸುಣ್ಣ ಬಣ್ಣಗಳಿಂದ ಕಂಗೊಳಿಸುತ್ತಿರುವ ಸರ್ಕಾರಿ ಪ್ರೌಢಶಾಲೆ

ಗೋಡೆಗೆ ಬಣ್ಣ ಮನಸ್ಸಿಗೆ ಬೆಳಕು

• ಓದೇಶ ಸಕಲೇಶಪುರ

ದೃಶ್ಯ–ಒಂದು

ಭಾನುವಾರವಾದರೂ ಚನ್ನಪಟ್ಟಣದ ಹಳೇ ಡೇರಾದ ಸರ್ಕಾರಿ ಉರ್ದು ಪ್ರೌಢಶಾಲೆಯಲ್ಲಿ ಹಬ್ಬದ ವಾತಾವರಣ. ವಿದ್ಯಾರ್ಥಿಗಳು, ಶಿಕ್ಷಕರು, ಕೆಲ ಪೋಷಕರ ಕೈಗಳಿಗೂ ಬಣ್ಣಮೆತ್ತಿಕೊಂಡಿತ್ತು. ವರ್ಷಗಳಿಂದ ಸುಣ್ಣ–ಬಣ್ಣ ಕಾಣದ ಗೋಡೆಗಳು ಆ ದಿನ ಹೊಸ ಕಳೆ ತಾಳುತ್ತಿದ್ದವು. ಏಣಿ ಮೇಲೆ ನಿಂತು ಗೋಡೆಗೆ ರೋಲರ್ ಬ್ರಷ್ ಹರಡುತ್ತಿದ್ದ ವ್ಯಕ್ತಿಯೊಬ್ಬರ ಇನ್ನೊಂದು ಕೈಯಲ್ಲಿ ಬಣ್ಣ ತುಂಬಿದ ಬಕೆಟ್ ಇತ್ತು. ಕೆಳಗೆ ನಿಂತ ಮಕ್ಕಳು ಕುತೂಹಲದಿಂದ ನೋಡುತ್ತಿದ್ದರು. ಅವರು ಸಾಮಾನ್ಯ ಸ್ವಯಂಸೇವಕರಲ್ಲ, ಚನ್ನಪಟ್ಟಣ ತಾಲ್ಲೂಕಿನ ತಹಶೀಲ್ದಾರ್ ಬಿ.ಎನ್.ಗಿರೀಶ್.

ದೃಶ್ಯ–ಎರಡು

ಹಳ್ಳಿಯೊಂದರ ಮನೆ. ಸಂಜೆ 7.30. ಟಿ.ವಿ.ಯಲ್ಲಿ ಧಾರಾವಾಹಿ ಚಾಲ್ತಿಯಲ್ಲಿತ್ತು. ಪಕ್ಕದ ಕೋಣೆಯಲ್ಲಿ ಹುಡುಗಿಯೊಬ್ಬಳು ಎಸ್‌ಎಸ್‌ಎಲ್‌ಸಿ ಪಾಠವನ್ನು ಮಂತ್ರದಂತೆ ಪಠಿಸುತ್ತಿದ್ದಳು. ಮನೆಯ ಬಾಗಿಲು ತಟ್ಟುವ ಶಬ್ದ ಮೃದುವಾಗಿ ಕೇಳಿಸಿತು. ಮನೆಯ ಯಜಮಾನಿ ಓಡಿಹೋಗಿ ಬಾಗಿಲು ತೆರೆದು ಚಕಿತರಾದರು.

ನಗು ಚೆಲ್ಲುತ್ತಾ, ಕೈಯಲ್ಲಿ ಬೆಳಗುತ್ತಿರುವ ಮೊಂಬತ್ತಿ ಹಿಡಿದು ಒಳಬಂದ ಆ ವ್ಯಕ್ತಿ ಆತ್ಮೀಯವಾಗಿ ಕೇಳುತ್ತಾರೆ: ‘ಹೇಗಿದ್ದೀರಿ? ಮಗಳ ಪರೀಕ್ಷೆ ತಯಾರಿ ಹೇಗಿದೆ?’. ತಕ್ಷಣವೇ ಟಿ.ವಿ.ಚಾಲೂ ಇರುವುದನ್ನು ಗಮನಿಸಿದ ಅವರು, ಅದನ್ನು ಬಂದ್ ಮಾಡುತ್ತಾರೆ: ‘ನೀವು ಹೀಗೆ ಧಾರಾವಾಹಿ ನೋಡುತ್ತಾ ಕುಳಿತರೆ, ಆಕೆಗೆ ಓದಲು ತೊಂದರೆ ಆಗುವುದಿಲ್ಲವೇ’ ಎಂದು ಆಕ್ಷೇಪದ ಧ್ವನಿಯಲ್ಲಿ ಕೇಳುತ್ತಾರೆ. ಯಜಮಾನಿ ಏನೇನೋ ಸಬೂಬು ಹೇಳುತ್ತಾರೆ. ಅಷ್ಟರಲ್ಲಿ ಹುಡುಗಿ ಕೋಣೆಯಿಂದ ಹೊರ ಬರುತ್ತಾಳೆ.

ಅವರು ಆ ಹುಡುಗಿಗೆ ಹೇಗೆ ಓದಬೇಕು, ಪರೀಕ್ಷೆಯನ್ನು ಹೇಗೆ ಎದುರಿಸಬೇಕು ಎಂಬ ಸಲಹೆ ನೀಡಿ, ಪ್ರೋತ್ಸಾಹದ ಮಾತುಗಳನ್ನು ಆಡುತ್ತಾರೆ. ಈ ಸಂದರ್ಭದಲ್ಲಿ ಅವರೊಂದಿಗೆ ಶಿಕ್ಷಕರು, ಕೆಲವು ಪೋಷಕರೂ ಇರುತ್ತಾರೆ. ಕೊನೆಯಲ್ಲಿ ಮೊಂಬತ್ತಿಯನ್ನು ಹುಡುಗಿಯ ಕೈಗೆ ನೀಡಿ, ‘ಪರೀಕ್ಷೆ ಭಯವಲ್ಲ; ಸಂಭ್ರಮ’ ಎಂಬ ಸಂದೇಶವನ್ನು ನೀಡುತ್ತಾರೆ.

ಮನೆ ಹೊರಗೆ ಈಗಾಗಲೇ ಜನ ಸೇರಿದ್ದಾರೆ–‘ತಹಶೀಲ್ದಾರ್ ಸಾರ್ ಬಂದಿದ್ದಾರೆ!’ ಎಂಬ ಗುಸುಗುಸು.

ಎಂಟು ತಿಂಗಳ ಹಿಂದೆ ಚನ್ನಪಟ್ಟಣಕ್ಕೆ ವರ್ಗವಾಗಿ ಬಂದಿರುವ ಗಿರೀಶ್, ‘ಸರ್ಕಾರಿ ಶಾಲೆ ಉಳಿಸೋಣ, ಬೆಳೆಸೋಣ’ ಅಭಿಯಾನವನ್ನು ಆರಂಭಿಸಿದ್ದಾರೆ.

ಚನ್ನಪಟ್ಟಣದ ಟಿಪ್ಪು ನಗರ, ಹಳೇ ಡೇರಾ, ಸಮೀಪದ ಭೈರಾಪಟ್ಟಣ ಸೇರಿದಂತೆ ಹಲವು ಸರ್ಕಾರಿ ಪ್ರೌಢಶಾಲೆಗಳು ಈಗ ಹೊಸ ಬಣ್ಣದಲ್ಲಿ ಹೊಳೆಯುತ್ತಿವೆ.


ಗೋಡೆಗೆ ಬಣ್ಣ ಹಚ್ಚುತ್ತಿರುವ ತಹಶೀಲ್ದಾರ್ ಬಿ.ಎನ್. ಗಿರೀಶ್

ಕಟ್ಟಡ ಮಾತ್ರವಲ್ಲ; ಮಕ್ಕಳ ಮನಸ್ಸುಗಳಿಗೂ ಹೊಸ ಉತ್ಸಾಹ ತುಂಬುತ್ತಿದೆ.

ಅಧಿಕಾರಿಗಳು ರಜಾ ದಿನಗಳಲ್ಲಿ ಸಾರ್ವಜನಿಕರ ಕೈಗೆ ಸಿಗದೆ ವಿಶ್ರಾಂತಿಯಲ್ಲಿರುವುದು ಮಾಮೂಲು. ಆದರೆ, ಅದಕ್ಕೆ ವಿರುದ್ಧವಾಗಿ ಗಿರೀಶ್ ತಮ್ಮ ರಜಾ ದಿನಗಳನ್ನು ಶಾಲೆಗಳಿಗೆ ಮೀಸಲಿಟ್ಟಿದ್ದಾರೆ. ಸಂಜೆ–ರಾತ್ರಿ ಸಮಯದಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ ನೀಡುತ್ತಾರೆ. ತಾಲ್ಲೂಕಿನಲ್ಲಿ ನಿರಂತರವಾಗಿ ಪರೀಕ್ಷಾ ಪ್ರೇರಣಾ ಮತ್ತು ಮಾರ್ಗದರ್ಶಿ ಕಾರ್ಯಾಗಾರಗಳ ಮೂಲಕ ಶೇಕಡ ನೂರರಷ್ಟು ಫಲಿತಾಂಶಕ್ಕೆ ಶ್ರಮಿಸುತ್ತಿದ್ದಾರೆ.

ಪರೀಕ್ಷೆ ಭಯವಲ್ಲ, ಅದು ಸಂಭ್ರಮ

‘ಶಾಲಾ ಕಟ್ಟಡ ಮತ್ತು ಪರಿಸರವು ಮಕ್ಕಳ ಮೇಲೆ ಬೀರುವ ಪರಿಣಾಮವನ್ನು ಸ್ವತಃ ನಾನೇ ಅನುಭವಿಸಿದ್ದೇನೆ’ ಎನ್ನುವ ಗಿರೀಶ್, ‘ಸ್ಫೂರ್ತಿಯ ಮಾತುಗಳು ವಿದ್ಯಾರ್ಥಿಗಳನ್ನು ಉತ್ತಮ ಫಲಿತಾಂಶದತ್ತ ಕೊಂಡೊಯ್ಯುತ್ತವೆ. ಅದಕ್ಕಾಗಿ ನನ್ನ ಬಿಡುವಿನ ಸಮಯವನ್ನು ಈ ಅಭಿಯಾನಕ್ಕೆ ಮೀಸಲಿಟ್ಟಿದ್ದೇನೆ’ ಎನ್ನುತ್ತಾರೆ.

ಆರಂಭದಲ್ಲಿ ‘ಇದು ಸಾಧ್ಯವೇ?’ ಎಂದು ಪ್ರಶ್ನಿಸಿದವರೇ ಈಗ ಬೆಂಬಲಿಗರಾಗಿದ್ದಾರೆ. ಅಧಿಕಾರಿಗಳು, ಶಿಕ್ಷಕರು, ಪೋಷಕರು, ಶಿಕ್ಷಣ ಪ್ರೇಮಿಗಳು, ಸಾಹಿತಿಗಳು, ಉದ್ಯಮಿಗಳು, ಸ್ವಾಮೀಜಿಗಳ ಸೇರ್ಪಡೆಯಿಂದಾಗಿ ಇದು ಸಾಮೂಹಿಕ ಚಳವಳಿಯ ರೂಪ ಪಡೆದಿದೆ.


ಆ ಹಳ್ಳಿಯೊಂದರ ಆ ಮನೆಯಲ್ಲಿ ಮೊಂಬತ್ತಿಯ ಬೆಳಕು ಇನ್ನೂ ಆರಿಲ್ಲ. ಆ ಬೆಳಕು ಕೇವಲ ಒಂದು ಹುಡುಗಿಯ ಪರೀಕ್ಷಾ ಕನಸನ್ನು ಮಾತ್ರವಲ್ಲ; ಸರ್ಕಾರಿ ಶಾಲೆಗಳ ಭವಿಷ್ಯವನ್ನೂ ಬೆಳಗಿಸುತ್ತಿದೆ. ಬಣ್ಣ ಹಚ್ಚಿದ ಗೋಡೆಗಳಂತೆ, ಆತ್ಮವಿಶ್ವಾಸದ ಬಣ್ಣ ಹಚ್ಚಿದ ಮಕ್ಕಳ ಕಣ್ಣುಗಳಲ್ಲಿ ಈಗ ಹೊಸ ಕಳೆ ಮೂಡಿದೆ. ❖

ರೈತನ ಮಗನ ಪಯಣ

ಗಿರೀಶ್, ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಬೆಟ್ಟದಹಳ್ಳಿಯ ರೈತನ ಮಗ. ಒಂದನೇ ತರಗತಿಯಿಂದ ಪಿಯುಸಿವರೆಗೆ ಸರ್ಕಾರಿ ಶಾಲೆ–ಕಾಲೇಜುಗಳಲ್ಲೇ ವಿದ್ಯಾಭ್ಯಾಸ. ಎಂ.ಕಾಂ, ಎಂ.ಫಿಲ್ ನಂತರ ಉಪನ್ಯಾಸಕರಾಗಿ ಆರು ವರ್ಷ ಪಾಠ ಮಾಡಿದ್ದಾರೆ.

2008ರಲ್ಲಿ ಕೆಪಿಎಸ್‌ಸಿ ಮೂಲಕ ಸಹಕಾರ ನಿರೀಕ್ಷಕರಾಗಿ ನೇಮಕಗೊಂಡರು. ಆದರೆ ಅವರ ಗುರಿ ಕೆಎಎಸ್ ಆಗಿತ್ತು. ಸತತ ಒಂಬತ್ತು ವರ್ಷಗಳ ಪರಿಶ್ರಮ ಮತ್ತು ನಾಲ್ಕನೇ ಪ್ರಯತ್ನದಲ್ಲಿ 2017ರಲ್ಲಿ ಕೆಎಎಸ್ ಪಾಸು ಮಾಡಿದರು.

ಇದಕ್ಕೂ ಮುನ್ನ ಕಿರುತೆರೆ, ರೇಡಿಯೊ, ದೂರದರ್ಶನದಲ್ಲಿ ನಿರೂಪಕರಾಗಿ ಕೆಲಸ ಮಾಡಿದ್ದಾರೆ. ಇದು ಅವರ ಮತ್ತೊಂದು ಮುಖ.


ಬಿ.ಎನ್. ಗಿರೀಶ್

ಸಮಾಜಮುಖಿ ಆಡಳಿತ

ಶಿವಮೊಗ್ಗ, ದಾವಣಗೆರೆ, ಮೈಸೂರು ತಾಲ್ಲೂಕುಗಳಲ್ಲಿ ತಹಶೀಲ್ದಾರ್ ಆಗಿ ಕಾರ್ಯನಿರ್ವಹಿಸಿದ ಗಿರೀಶ್, ಶಿವಮೊಗ್ಗದಲ್ಲಿ ಆರು ತಿಂಗಳಲ್ಲಿ 76 ಸಾವಿರ ಕಡತಗಳ ವಿಲೇವಾರಿ ಮಾಡಿದರು. ಅಕ್ರಮ ಗಣಿಗಾರಿಕೆ ವಿರುದ್ಧ ಮಾರುವೇಷದಲ್ಲಿ ದಾಳಿ ನಡೆಸಿ ಬಂದ್ ಮಾಡಿಸಿದ ಘಟನೆ ರಾಜ್ಯದ ಗಮನ ಸೆಳೆದಿತ್ತು.

2021–22ರಲ್ಲಿ ರಾಜ್ಯಮಟ್ಟದ ‘ಸರ್ವೋತ್ತಮ ಸೇವಾ ಪ್ರಶಸ್ತಿ’ ಲಭಿಸಿದೆ. ಸರ್ಕಾರಿ ಶಾಲೆ ಹಾಗೂ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣಾ ಕಾರ್ಯಕ್ಕೆ ಕರ್ನಾಟಕ ಮಕ್ಕಳ ರಕ್ಷಣಾ ಆಯೋಗದ ಪ್ರಶಂಸಾ ಪತ್ರವೂ ಸಿಕ್ಕಿದೆ.

ಗಿಡಮೂಲಿಕೆಗಳ...

10ನೇ ಪುಟದಿಂದ...

ಆದರೆ ಪ್ರಕೃತಿಯ ಸಸ್ಯಸಂಕುಲಗಳ ರಹಸ್ಯಲೋಕ ಮನುಕುಲದಲ್ಲಿ ವಿಸ್ಮಯವನ್ನುಂಟು ಮಾಡಲು ಸೋತಿದೆ. ಅದನ್ನು ನಗದೀಕರಿಸಿಕೊಳ್ಳುವ ಹಾದಿ ಸಕ್ರಿಯಗೊಂಡಿದೆ. ಈಗ ಔಷಧ ಉದ್ಯಮಕ್ಕೆ ಅವಶ್ಯವಿರುವ ಈ ರಾಸಾಯನಿಕ ವಸ್ತುಗಳಲ್ಲಿ ಶೇಕಡ 80 ಭಾಗ ಪ್ರಕೃತಿಯಿಂದಲೇ ದಕ್ಕುತ್ತಿದೆ. ಜಾಗತಿಕವಾಗಿ ಔಷಧ ಉದ್ಯಮ 120 ಬಿಲಿಯನ್ ಡಾಲರ್ ಮೌಲ್ಯವನ್ನು ಮೀರಿದೆ. ಇದರಿಂದ ಲೆಕ್ಕವಿಲ್ಲದಷ್ಟು ಸಸ್ಯಪ್ರಭೇದಗಳು ಸಂಕಷ್ಟಕ್ಕೆ ಸಿಕ್ಕಿಕೊಂಡಿವೆ. ಮತ್ತಷ್ಟು ವಿನಾಶದಂಚಿನಲ್ಲಿವೆ.

ನೀವು ಸಿಂಕೋನಾ ಹೆಸರನ್ನು ಕೇಳಿರಬಹುದು. ಚರಿತ್ರೆಯಲ್ಲಿ 40 ಕೋಟಿಗೂ ಹೆಚ್ಚು ಜನರನ್ನು ಆಹುತಿ ತೆಗೆದುಕೊಂಡ ಮಲೇರಿಯಾ ಕಾಯಿಲೆಗೆ ಮದ್ದು ಒದಗಿಸಿದ್ದೇ ಈ ಸಿಂಕೋನಾ ಸಸ್ಯ. ‘ಜ್ವರದ ಮರ’ವೆಂದೇ ಖ್ಯಾತಿ ಪಡೆದ ಇದು ತನ್ನ ತವರು ದೇಶವಾದ ‘ಪೆರು’ವಿನಲ್ಲಿಂದು ಅಪಾಯದಂಚಿನಲ್ಲಿದೆ.

ಪ್ರಕೃತಿಯಲ್ಲಿ ಜೀವಿಗಳು ನಮ್ಮ ನೆಲೆಗೆ ಹೊಂದಿಕೊಂಡು ಬದುಕುವ ಪ್ರವೃತ್ತಿಯನ್ನು ಹೊಂದಿವೆ. ಆದರೆ ಮಾನವ ಮಾತ್ರ ಈ ತತ್ವಕ್ಕೆ ತದ್ವಿರುದ್ಧ. ತನ್ನ ಅನುಕೂಲಕ್ಕೆ ತಕ್ಕಂತೆ ಪರಿಸರವನ್ನು ಬಗ್ಗಿಸುತ್ತಾ, ಬದಲಾಯಿಸುತ್ತಾ ಸಾಗಿದ್ದಾನೆ.

ಇದೇ ರೀತಿ ಸುಗಂಧ ದ್ರವ್ಯಗಳ ಪ್ರಪಂಚವೂ ವಿಸ್ಮಯಲೋಕವೆ. ಸಸ್ಯಗಳು ಪರಾಗಸ್ಪರ್ಶಕ್ಕೆ, ಬೀಜ ಪ್ರಸರಣಕ್ಕೆ, ಗಾಳಿ, ನೀರು, ಬಣ್ಣಗಳನ್ನೆಲ್ಲಾ ಬಳಸಿಕೊಳ್ಳುತ್ತವೆ. ಅದೇ ರೀತಿ ತಮ್ಮ ಬದುಕಿಗೆ ಅವಶ್ಯವಿರುವ ಸಂಗಾತಿಗಳನ್ನು ಓಲೈಸಲು, ಆಮಂತ್ರಿಸಲು, ಜೊತೆಗೆ ವೈರಿಗಳನ್ನು ದೂರವಿಡಲು ಸಸ್ಯಗಳು ಸುಗಂಧ ದ್ರವ್ಯಗಳನ್ನು ಅಸ್ತ್ರಗಳಾಗಿ ಬಳಸುತ್ತವೆ. ಈ ಸುಗಂಧ ದ್ರವ್ಯಗಳು ಸಹ ರಾಸಾಯನಿಕ ವಸ್ತುಗಳ ಮತ್ತೊಂದು ರೂಪ. ನಾವು ಬಳಸುವ ಗೋಂದ್, ರಬ್ಬರ್‌ಗಳೆಲ್ಲವೂ ಕೀಟಗಳನ್ನು ದೂರವಿರಿಸಲು ಬಳಸುವುದು ರಾಸಾಯನಿಕ ವಸ್ತುಗಳನ್ನೇ.

ಒಮ್ಮೆ ನಾಗರಹೊಳೆ ಕಾಡಿನಲ್ಲಿ ಕಾಡುನಾಯಿಗಳನ್ನು ಹುಡುಕಿ ಅಲೆದಾಡುವಾಗ ದಟ್ಟ ಪೊದೆಯೊಳಗಿನಿಂದ ಘಾಟು ವಾಸನೆ ಬರುತ್ತಿತ್ತು. ಅದು ಸತ್ತ ಪ್ರಾಣಿಯ ದೇಹ ಕೊಳೆತುನಾರುವಂತಹ ವಾಸನೆ. ಹುಲಿಯೋ, ಚಿರತೆಯೋ ಬೇಟೆಯಾಡಿರುವ ಕಳೇಬರವೆಂದೇ ತೀರ್ಮಾನಿಸಿ ಹುಡುಕಾಡಿದೆವು. ಆದರೆ ಅಲ್ಲಿ ಯಾವ ಕುರುಹುಗಳೂ ಸಿಗಲಿಲ್ಲ. ವಾಸನೆ ಮಾತ್ರ ಇನ್ನಷ್ಟು ದಟ್ಟವಾಯಿತು. ಸ್ವಲ್ಪ ಹೊತ್ತಿನ ಬಳಿಕ ಗೊಂದಲ ತಿಳಿಯಾಯಿತು. ಆ ವಾಸನೆಯನ್ನು ಬೀರುತ್ತಿದ್ದದ್ದು ನೆಲದಲ್ಲಿ ಅರಳಿದ್ದ ಒಂದು ಸುಂದರ ಹೂವು! ನೂರೆಂಟು ಕೀಟಗಳು ಆ ಸುವಾಸನೆಗೆ ಆಕರ್ಷಿತಗೊಂಡು ಮಕರಂದಕ್ಕೆ ಮುಗಿಬಿದ್ದಿದ್ದವು! ಬಹುಶಃ ವಾಸನೆಯೂ ಸಹ ಸಬ್ಜೆಕ್ಟಿವ್ ಅಲ್ಲವೇ?

ಹಾಗೆಯೇ ಲುನಾರ್ ಪತಂಗ ಚೆಲ್ಲುವ ಸುಗಂಧ ದ್ರವ್ಯ ನಮ್ಮ ಮೂಗಿಗೆ ಅರಿವಾಗುವುದೇ ಇಲ್ಲ. ಇದು ಕೂಡುವಿಕೆಗೆ ಸಿದ್ಧವಿರುವ ಮಾಹಿತಿಯನ್ನು ರಾಸಾಯನಿಕ ಭಾಷೆಯ ಮೂಲಕ ಸಂಗಾತಿಗಳಿಗೆ ತಲುಪಿಸುತ್ತವೆ. ಈ ಸಂದೇಶ ಎರಡು ಕಿಲೋಮೀಟರ್ ದೂರದಲ್ಲಿರುವ ಸಂಗಾತಿಯನ್ನು ತಲುಪುವಲ್ಲಿ ಯಶಸ್ವಿಯಾಗುತ್ತದೆ. ಇವೆಲ್ಲ ಪ್ರಕೃತಿಯಲ್ಲಿ ಚಾಲ್ತಿಯಲ್ಲಿರುವ ಭಾಷೆ ಮತ್ತು ಸಂವಹನಕ್ಕೆ ಸಂಬಂಧಿಸಿದ ವಿಷಯಗಳು.

ಇಷ್ಟು ರಹಸ್ಯಗಳನ್ನೊಳಗೊಂಡ ಜಗತ್ತು ಮನುಕುಲವನ್ನು ವಿಸ್ಮಯಗೊಳಿಸಿ ಚಕಿತಗೊಳಿಸಬೇಕಿತ್ತು. ಅದು ಸಾಧ್ಯವಾಗಿಲ್ಲ. ಸಾಧ್ಯವಾಗುವ ಕುರುಹುಗಳೂ ಕಾಣಿಸುತ್ತಿಲ್ಲ. ಈಗ ಸುಗಂಧ ದ್ರವ್ಯಗಳ ಉದ್ಯಮ ಬೃಹದಾಕಾರವಾಗಿ ಬೆಳೆದಿದೆ. ಬೇಡಿಕೆ ಹೆಚ್ಚುತ್ತಲೇ ಇದೆ. ಇದರ ವಾರ್ಷಿಕ ವಹಿವಾಟು 380 ಬಿಲಿಯನ್ ಡಾಲರ್‌ಗಳಿಗೂ ಹೆಚ್ಚಿದೆ. ಮುಂದಿನ ದಿನಗಳಲ್ಲಿ ಅದು ಇನ್ನಷ್ಟು ವೃದ್ಧಿಯಾಗುವುದಾಗಿ ಸಮೀಕ್ಷೆಗಳು ಸೂಚಿಸಿವೆ. ಈ ಉದ್ಯಮಕ್ಕೆ ಪೂರೈಕೆಯಾಗುವ ಮೂಲದ್ರವ್ಯಗಳೆಲ್ಲ ಪ್ರಕೃತಿಯಿಂದಲೇ ಬರಬೇಕಿದೆ.

ಈ ಬೇಡಿಕೆಗಳಿಗೆ ಪೂರಕವಾಗಿ ಕೆಲವು ಆಯ್ದ ಗಿಡಮೂಲಿಕೆಗಳನ್ನು ಬೇಲಿಯ ಹೊಲಗಳಲ್ಲಿ ಬೆಳೆಸುವ ಸಂಪ್ರದಾಯ ಆರಂಭವಾಗಿದೆ. ಸರ್ಕಾರಗಳು, ಉದ್ಯಮಗಳು ಇದರಲ್ಲಿ ಭಾಗಿಯಾಗಿವೆ. ಈ ಸಂಸ್ಕೃತಿ ಅಮಾನವೀಯವೆನಿಸುತ್ತದೆ. ಪ್ರಕೃತಿಯಲ್ಲಿ ಬದುಕುಳಿಯಲು ಕಲಿತಿದ್ದ ಭಾಷೆ, ಕಲೆಗಳೆಲ್ಲ ಅಂತ್ಯಗೊಳ್ಳಬಹುದು. ಅವು ಕಾಲಾಂತರದಲ್ಲಿ ನಿಸರ್ಗದ ನಿಯಮಗಳಿಗೆ ಅನುಸಾರವಾಗಿ ವಿಕಸಿಸಿ ಅರಳಿದ ಜೀವಕೋಟಿಗಳ ಮಹಾ ಅಧ್ಯಾಯವೊಂದು ಕೊನೆಗೊಳ್ಳುತ್ತದೆ. ಅವು ಮಾತುಬಾರದ ಗಿಡಗಳಾಗಿ ಮಾಡುವುದು ಅಪರಾಧವಾಗುತ್ತದೆ.

ಏಕೆಂದರೆ ಈ ರಾಸಾಯನಿಕ ದ್ರವ್ಯಗಳ ಹುಟ್ಟು ಪಡೆದಿರುವುದು ಜೀವಿ–ಜೀವಿಗಳ ನಡುವೆ ಲಕ್ಷಾಂತರ ವರ್ಷಗಳು ಜರುಗಿದ ಸಂಘರ್ಷ ಮತ್ತು ಸಂವಾದದಿಂದ. ಇದು ನಿಷ್ಕ್ರಿಯಗೊಳ್ಳಬಾರದು. ಸದಾ ಮುಂದುವರಿಯಬೇಕು. ಇಲ್ಲದಿದ್ದಲ್ಲಿ ಪ್ರಕೃತಿಯ ಸಹಜ ಚಟುವಟಿಕೆಗಳಿಗೆ ನಿರ್ಬಂಧ ಹೇರಿದಂತಾಗುತ್ತದೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಜೀವಪರಿಸರ ಅತಿ ಮುಖ್ಯ. ನಾವು ನೆಟ್ಟು ಬೆಳೆಸಿದ ಸಾವಿರಾರು ಗಿಡ ಮರಗಳಿಗೆ ಇಂತಹ ಪ್ರಾಮುಖ್ಯತೆ ಇರುವುದೇ ಇಲ್ಲ. ಅವು ಮಾತುಬಾರದ ಹಸಿರು ಹೊದಿಕೆಗಳಾಗಿ ಉಳಿಯಬಹುದಷ್ಟೆ. ಈ ಹಿನ್ನೆಲೆಯಲ್ಲಿ ಜೀವಪರಿಸರಗಳನ್ನು ಉಳಿಸಿಕೊಳ್ಳುವ ಮನೋಧರ್ಮ ನಮ್ಮದಾಗಬೇಕು. ಆಗಷ್ಟೇ ಅದ್ಭುತ ಚರಿತ್ರೆಯೊಂದನ್ನು ಗೌರವಿಸುವ ಸಂಸ್ಕೃತಿಗೆ ನಾವೆಲ್ಲ ಪಾತ್ರರಾಗಬಹುದು. ❖

ಜುಮ್ಮನಕಾಯಿ ರುಚಿಗೂ, ಪರಿಮಳಕ್ಕೂ ಸೈ

• ಸುರೇಂದ್ರ ಪೈ

ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಬ್ಯಾಣಗಳಲ್ಲಿ ಶಾಲಾ ಮಕ್ಕಳು ಓಡಾಡುತ್ತಿದ್ದರು. ಆಗಸದೆತ್ತರಕ್ಕೆ ಬೆಳೆದಿದ್ದ, ದಪ್ಪ ಮುಳ್ಳುಗಳಿಂದ ಕೂಡಿದ ಮರವೊಂದು ಅವರ ಗಮನ ಸೆಳೆಯಿತು. ಅದರ ಕೆಳಗೆ ಬಿದ್ದಿದ್ದ ಕಪ್ಪು ಬಣ್ಣದ ಒಣಕಾಯಿ ವಿಚಿತ್ರ ಪರಿಮಳ ಬೀರುತ್ತಿತ್ತು. ಕುತೂಹಲದಿಂದ ಹೆಕ್ಕಿ ರುಚಿ ನೋಡಿದ ಕ್ಷಣದಲ್ಲೇ ಮೈಯಲ್ಲಿ ‘ಜುಮ್’ ಎನ್ನುವ ಅನುಭವ. ಕ್ಷಣಕಾಲ ಮಕ್ಕಳು ಗಾಬರಿಗೊಂಡರು– ‘ವಿಷದ ಕಾಯಿ ತಿಂದೆವೋ?’

ಅವರ ಜೊತೆಗಿದ್ದ ಸ್ಥಳೀಯ ರಾಮಿ ಗೌಡ ನಗುತ್ತಾ ಹೇಳಿದರು: ‘ಅದು ವಿಷ ಅಲ್ಲ. ನಮ್ಮ ಮೀನುಸಾರಿಗೆ ಹಾಕೋ ಜುಮ್ಮನಕಾಯಿ!’ ಅಲ್ಲಿಂದಲೇ ಈ ಅಪರೂಪದ ಮಸಾಲೆಯ ಕಥೆ ಆರಂಭವಾಯಿತು.


ಮಾರಾಟಕ್ಕೆ ಸಿದ್ಧವಾಗುತ್ತಿರುವ ಒಣಗಿದ ಜುಮ್ಮನಕಾಯಿ


ಹಸಿ ಜುಮ್ಮನಕಾಯಿ ಗೊಂಚಲು

ಪಶ್ಚಿಮ ಘಟ್ಟದ ಅಪರೂಪದ ಮರ

ಜುಮ್ಮನಕಾಯಿ ಮರ (Zanthoxylum rhetsa) ಪಶ್ಚಿಮ ಘಟ್ಟಗಳ ವೈಶಿಷ್ಟ್ಯಪೂರ್ಣ ಸಸ್ಯ. ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಅಂಕೋಲಾ, ಕುಮಟಾ, ಶಿರಸಿ, ಸಿದ್ಧಾಪುರ ಹಾಗೂ ಗೋವಾ ಭಾಗಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಹಳ್ಳಿಗರು ಇದನ್ನು ‘ಗಾವಂಟಿ ಮರ’ ಎಂದು ಕರೆಯುತ್ತಾರೆ. ಕೊಂಕಣಿಯಲ್ಲಿ ‘ತೆಪ್ಪಲ್’, ತುಳುನಾಡಿನಲ್ಲಿ ‘ಕಾಂವಟಿಕಾಯಿ’ ಎಂಬ ಹೆಸರುಗಳಿವೆ.

ಸುಮಾರು 30 ರಿಂದ 35 ಮೀಟರ್ ಎತ್ತರಕ್ಕೆ ಬೆಳೆಯುವ ಈ ಮರದ ಕಾಂಡ ದಪ್ಪ ಹಾಗೂ ಗಟ್ಟಿಯಾದ ಮುಳ್ಳುಗಳಿಂದ ಕೂಡಿರುತ್ತದೆ. ಮಳೆಗಾಲ ಮುಗಿದ ಬಳಿಕ ಬಿಳಿ ಹೂವು ಬಿಡುವ ಮರವು ನವೆಂಬರ್–ಡಿಸೆಂಬರ್ ವೇಳೆಗೆ ಗೊಂಚಲು ಗೊಂಚಲಾಗಿ ದ್ರಾಕ್ಷಿಯಂತೆ ಕಾಯಿ ಕೊಡುತ್ತದೆ. ಹಸಿ ಜುಮ್ಮನಕಾಯಿಯನ್ನು ಬಿಸಿಲಿನಲ್ಲಿ ಒಣಗಿಸಿ ಒಳಗಿನ ಬೀಜ ಬೇರ್ಪಡಿಸಿದಾಗ ಘಮಘಮಿಸುವ ಪರಿಮಳ ಇನ್ನಷ್ಟು ಹೆಚ್ಚುತ್ತದೆ. ಒಮ್ಮೆ ಒಣಗಿಸಿ ಶೇಖರಿಸಿದರೆ ವರ್ಷವಿಡಿ ಬಳಕೆ ಸಾಧ್ಯ.

ಮೀನುಸಾರಿಗೆ ವಿಶೇಷ ರುಚಿ

ಕರಾವಳಿ ಭಾಗದ ವಿಶೇಷ ಮೀನು ಪದಾರ್ಥಗಳಲ್ಲಿ ಜುಮ್ಮನಕಾಯಿ ಬೇಕೇಬೇಕು. ವಿಶೇಷವಾಗಿ ಬಂಗುಡೆ ಮತ್ತು ತಾರ್ಲೆ ಮೀನಿನ ಸಾರಿನಲ್ಲಿ ಇದರ ಬಳಕೆ ಹೆಚ್ಚು. ಮೀನಿನ ಗಾಢ ವಾಸನೆಯನ್ನು ಸಮತೋಲನಗೊಳಿಸಿ, ಸಾರಿಗೆ ವಿಶಿಷ್ಟ ರುಚಿ ನೀಡುವ ಗುಣ ಇದರಲ್ಲಿದೆ. ಸ್ಥಳೀಯ ನಂಬಿಕೆಯ ಪ್ರಕಾರ, ಮೀನಿನ ಅತಿಯಾದ ಸೇವನೆಯಿಂದ ಉಂಟಾಗುವ ಅಜೀರ್ಣ ಹಾಗೂ ವಾಯು ಸಮಸ್ಯೆ ನಿವಾರಣೆಗೆ ಸಹ ಇದು ಸಹಕಾರಿ.

ಶಾಖಾಹಾರದಲ್ಲೂ ಇದರ ಬಳಕೆ ಇದೆ. ಬೆಂಡೆಕಾಯಿ, ಆಲೂಗಡ್ಡೆ, ತೆಂಗಿನಕಾಯಿ ರುಬ್ಬಿದ ಪದಾರ್ಥಗಳಲ್ಲಿ ಜುಮ್ಮನಕಾಯಿ ಸೇರಿಸಿದರೆ ವಿಶೇಷ ಸುವಾಸನೆ ಮೂಡುತ್ತದೆ. ಕೊಂಕಣಿ ಶೈಲಿಯ ‘ತೆಪ್ಪಳಾ ಆಂಬಟ್’ ಅನ್ನದ ಜೊತೆಗೆ ಅಥವಾ ನೀರ್ ದೋಸೆ, ಉದ್ದಿನ ದೋಸೆ, ಕೊಟ್ಟೆ ಕಡಬಿನೊಂದಿಗೆ ರುಚಿಕರ.

ಹಾಲಕ್ಕಿ ಮಹಿಳೆಯರ ಜೀವನದ ಅಂಗ

ಕಾಡಂಚಿನ ಹಳ್ಳಿಗಳಲ್ಲಿ ಹಾಲಕ್ಕಿ ಮಹಿಳೆಯರು ಜುಮ್ಮನಕಾಯಿ ಸಂಗ್ರಹಿಸಿ ಪೇಟೆಗಳಲ್ಲಿ ಮಾರಾಟ ಮಾಡುತ್ತಾರೆ. ಗೋಕರ್ಣ, ಅಂಕೋಲಾ, ಕುಮಟಾ ಪೇಟೆಗಳಲ್ಲಿ ಸ್ಥಳೀಯರು ಹಾಗೂ ಪ್ರವಾಸಿಗರು ಇದನ್ನು ಖರೀದಿಸುತ್ತಾರೆ. ಮೊದಲೆಲ್ಲ ಒಂದು ಗೊಂಚಲು ₹5 ರಿಂದ ₹10 ಇತ್ತಂತೆ. ಈಗ ಅದು ₹50 ರಿಂದ ₹60ಕ್ಕೆ ಏರಿದೆ. ಮರ ಹತ್ತಿ ಕೊಯ್ಯುವವರು ಕಡಿಮೆಯಾಗಿರುವುದು ಹಾಗೂ ಮರಗಳ ಸಂಖ್ಯೆ ಕುಸಿಯುತ್ತಿರುವುದು ಬೆಲೆ ಏರಿಕೆಗೆ ಕಾರಣ. ಋತುವಿಗೂ ಮೊದಲು ಮನೆ ಹತ್ತಿರ ಬಂದು ಕೇಳಿ ಹೋಗುವ ಗ್ರಾಹಕರೂ ಇದ್ದಾರೆ. ಇದರಿಂದ ಹಾಲಕ್ಕಿ ಕುಟುಂಬಗಳಿಗೆ ಒಂದು ಹೆಚ್ಚುವರಿ ಆದಾಯ ದೊರೆಯುತ್ತದೆ.

ಕರಾವಳಿ ಸಂಸ್ಕೃತಿಯ ಪ್ರತಿನಿಧಿ ಯಕ್ಷಗಾನ ವೇಷಭೂಷಣ ತಯಾರಿಕೆಯಲ್ಲಿ ಹಿಂದೆ ಗಾವಂಟಿ ಮರದ ತೊಗಟೆ ಬಳಸಲಾಗುತ್ತಿತ್ತು. ಅದರ ಗಟ್ಟಿತನ ಹಾಗೂ ಮುಳ್ಳಿನ ಆಕೃತಿ ಭುಜಕೀರ್ತಿ, ಎದೆಹಾರ, ಕಿರೀಟ ತಯಾರಿಕೆಗೆ ಸೂಕ್ತವಾಗಿತ್ತು ಎಂದು ಹಿರಿಯ ಕಲಾವಿದರು ನೆನಪಿಸುತ್ತಾರೆ. ಮರಗಳ ಕೊರತೆ ಮತ್ತು ಕರಕುಶಲ ಕಲಾವಿದರ ಅಭಾವದಿಂದ ಆ ಪದ್ಧತಿ ಬಹುತೇಕ ನಿಂತಿದೆ.

ಉಡುಪಿಯ ಶ್ರೀ ಕೃಷ್ಣ ಮಠದ ವಿಟ್ಲಪಿಂಡಿ ಉತ್ಸವದ ಸಂದರ್ಭದಲ್ಲಿ ರಥಬೀದಿಯಲ್ಲಿ ನಡೆಯುವ ಆಟಗಳಲ್ಲಿ ಹಸಿ ಜುಮ್ಮನಕಾಯಿಯನ್ನು ಗುಂಡಿನಂತೆ ಬಳಸುವ ಸಂಪ್ರದಾಯ ಇಂದಿಗೂ ಕಂಡುಬರುತ್ತದೆ. ಅದರಿಂದ ಹೊಮ್ಮುವ ‘ಥಡ್’ ಎಂಬ ಶಬ್ದ ಮಕ್ಕಳಲ್ಲಿ ಸಂಭ್ರಮ ಉಂಟುಮಾಡುತ್ತದೆ.



ಕಣ್ಮರೆಯಾಗುತ್ತಿರುವ ಕಾಡು ಸಂಪತ್ತು

ಒಮ್ಮೆ ಕಾಡು, ಬೆಟ್ಟ, ಬ್ಯಾಣಗಳಲ್ಲಿ ಯಥೇಚ್ಛವಾಗಿ ಕಂಡುಬರುತ್ತಿದ್ದ ಜುಮ್ಮನಕಾಯಿ ಮರಗಳು ಈಗ ನಿಧಾನವಾಗಿ ಕಣ್ಮರೆಯಾಗುತ್ತಿವೆ. ಸುಲಭವಾಗಿ ಕೊಯ್ಯಲು ಆಗದ ಕಾರಣ ಕೆಲವರು ಮರದ ರೆಂಬೆ-ಕೊಂಬೆಗಳನ್ನು ಕತ್ತರಿಸಿ ಸಂಗ್ರಹಿಸುವುದು ಕಾಣಸಿಗುತ್ತಿದೆ. ಕಾಡು ಕಡಿತ ಹಾಗೂ ಮನೆ ನಿರ್ಮಾಣವೂ ಮರಗಳ ಸಂಖ್ಯೆಯನ್ನು ಕುಗ್ಗಿಸುತ್ತಿದೆ. ಜುಮ್ಮನಕಾಯಿ ಕೇವಲ ಮಸಾಲೆ ಅಲ್ಲ. ಅದು ಕರಾವಳಿಯ ರುಚಿ, ಪರಿಮಳ ಮತ್ತು ಸಂಸ್ಕೃತಿಯ ಸ್ಮೃತಿ. ಈ ಮರವನ್ನು ಬೆಳೆಸಿ, ಉಳಿಸಿ ಮುಂದಿನ ತಲೆಮಾರಿಗೆ ಈ ‘ಜುಮ್’ ಅನುಭವವನ್ನು ವರ್ಗಾಯಿಸುವುದು ನಮ್ಮ ಹೊಣೆ ಅಲ್ಲವೇ? ❖


ಜುಮ್ಮನಕಾಯಿ ಮರ

ಮುನ್ನೋಟ 01-03-2026 ರಿಂದ 07-03-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಸ್ವಂತ ಬಲದ ಮೇಲೆ ನಂಬಿಕೆ ಇಟ್ಟು ಮುನ್ನಡೆಯಿರಿ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಹೊಸ ಆಸ್ತಿ ಕೊಳ್ಳಲು ಸಕಾಲ. ಪಶುಸಂಗೋಪನೆ ಮಾಡುವವರಿಗೆ ಉತ್ತಮ ಲಾಭವಿರುತ್ತದೆ. ಮಕ್ಕಳಿಂದ ನಿರೀಕ್ಷಿತ ಸಹಕಾರ ದೊರೆಯುವುದಿಲ್ಲ. ನರರೋಗ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ. ಸಂಗಾತಿಯ ಜೊತೆ ಮಾಡಿದ ವ್ಯವಹಾರಗಳಲ್ಲಿ ಲಾಭ ಹೆಚ್ಚಿರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಸಂಗೀತಗಾರರಿಗೆ ಬೇಡಿಕೆ ಹೆಚ್ಚುತ್ತದೆ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮಗತಿಯ ಫಲಿತಾಂಶವಿರುತ್ತದೆ. ವೃತ್ತಿಯಲ್ಲಿ ಅಭಿವೃದ್ಧಿಯನ್ನು ಕಂಡರೂ, ಹಿತಶತ್ರುಗಳು ಜಾಸ್ತಿಯಾಗುವರು. ಸ್ತ್ರೀರೋಗ ತಜ್ಞರಿಗೆ ಬೇಡಿಕೆ ಹೆಚ್ಚಾಗುತ್ತದೆ. ಸಂಗಾತಿಗೆ ಉದ್ಯೋಗ ದೊರೆಯುವ ಸಾಧ್ಯತೆಗಳಿವೆ. ವೃತ್ತಿಯಲ್ಲಿ ಹೊಸ ಸ್ಥಾನ ಸಿಗುವ ಸಾಧ್ಯತೆಗಳಿವೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಅಧ್ಯಾಪಕರಿಗೆ ಬೇಡಿಕೆ ಮತ್ತು ಗೌರವ ಹೆಚ್ಚಾಗುತ್ತದೆ. ವೈಯಕ್ತಿಕ ಆದಾಯ ನಿರೀಕ್ಷೆಯ ಮಟ್ಟ ತಲುಪುತ್ತದೆ. ಒಳ್ಳೆಯ ಕೆಲಸಗಳಿಗೆ ಮಾತ್ರ ಜನರ ಸಹಕಾರ ಸಿಗುತ್ತದೆ. ಹಿರಿಯರ ಆಸ್ತಿಯನ್ನು ಖರೀದಿ ಮಾಡಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶವಿದೆ. ಕೃಷಿಯಿಂದ ನಿರೀಕ್ಷಿತ ಆದಾಯ ಸಿಗುವುದಿಲ್ಲ. ಸಂಗಾತಿಯ ಸಹಕಾರ ಬಹಳ ಮುಖ್ಯವಾಗಿರುತ್ತದೆ. ನಿಮ್ಮ ವೃತ್ತಿಯಲ್ಲಿ ಸ್ವಲ್ಪ ಏರಿಳಿತಗಳು ಇರುತ್ತವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಒಂದು ಕಾರ್ಯ ಸಾಧನೆಯಾದ ಸಂತೋಷ ಮನಸ್ಸಿನಲ್ಲಿರುತ್ತದೆ. ಆದಾಯವು ಕಡಿಮೆ ಇದ್ದು, ಅದರಲ್ಲಿ ನಿಭಾಯಿಸಬೇಕಾದ ಅನಿವಾರ್ಯತೆ ಇರುತ್ತದೆ. ಆಸ್ತಿ ವಹಿವಾಟು ನಡೆಸುವ ಮಧ್ಯವರ್ತಿಗಳಿಗೆ ಅಭಿವೃದ್ಧಿ ಇದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಮಟ್ಟದ ಯಶಸ್ಸು ದೊರೆಯುವುದಿಲ್ಲ. ಹಿರಿಯರ ಆರೋಗ್ಯದಲ್ಲಿ ವ್ಯತ್ಯಾಸವಾಗಬಹುದು. ಸಂಗಾತಿಗೆ ಕೃಷಿ ಭೂಮಿ ದೊರೆಯುವ ಸಾಧ್ಯತೆಗಳಿವೆ. ಸರ್ಕಾರಿ ವ್ಯವಹಾರಗಳಲ್ಲಿ ನಿಧಾನ ಗತಿ ಇರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ವೈರಾಗ್ಯದ ಕಡೆಗೆ ಮನಸ್ಸು ಹರಿಯಬಹುದು. ಆದಾಯವು ಖರ್ಚನ್ನು ಪೂರೈಸುವಷ್ಟಿರುತ್ತದೆ. ಸ್ಥಿರಾಸ್ತಿಯನ್ನು ಪಡೆಯುವ ಯೋಗವಿದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಲಭಿಸುತ್ತದೆ. ಆರೋಗ್ಯದಲ್ಲಿ ವ್ಯತ್ಯಾಸ ಉಂಟಾಗಬಹುದು. ಸಂಗಾತಿಯ ಸಹಾಯದಿಂದ ಆರ್ಥಿಕ ಚೇತರಿಕೆಯನ್ನು ಕಾಣಬಹುದು. ಹಿರಿಯರ ಆಸ್ತಿಯಿಂದ ನಿಮಗೆ ಆದಾಯ ಮತ್ತು ಅಭಿವೃದ್ಧಿ ಇರುತ್ತದೆ. ವೃತ್ತಿಯಲ್ಲಿ ಹೊಸತನವನ್ನು ಕಾಣಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ವಾರದ ಆರಂಭದಲ್ಲಿ ಹಣಕಾಸಿನ ಮುಗ್ಗಟ್ಟು ಎದುರಾಗಬಹುದು. ಸಂಗಾತಿ ಕಡೆಯವರಿಂದ ನಿರೀಕ್ಷಿತ ಸಹಕಾರ ದೊರೆಯುವುದಿಲ್ಲ. ವೃತ್ತಿ ಸಂಬಂಧಿತ ಸ್ಥಳದಲ್ಲಿ ವಾಸಿಸಲು ಅವಕಾಶಗಳು ದೊರೆಯಬಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ಮಾತ್ರವಿರುತ್ತದೆ. ಕೆಲವೊಮ್ಮೆ ಸಂಗಾತಿಯಿಂದ ನಿರೀಕ್ಷಿತ ಸಹಾಯ ದೊರೆಯುವುದಿಲ್ಲ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಹೆಚ್ಚು ಆತ್ಮವಿಶ್ವಾಸದಿಂದ ಕೆಲಸ ಮಾಡುವಿರಿ. ಸಿದ್ಧ ಉಡುಪು ತಯಾರಕರಿಗೆ ಹೆಚ್ಚು ಲಾಭವಿರುತ್ತದೆ. ಕೃಷಿ ಸಂಶೋಧಕರಿಗೆ ಹಿನ್ನಡೆಯಾಗಬಹುದು. ಸಂಗಾತಿಯ ಸಹಕಾರದಿಂದ ಆಸ್ತಿ ಖರೀದಿಸಬಹುದು. ವೃತ್ತಿಯಲ್ಲಿ ಅನುಕೂಲತೆಗಳು ಹೆಚ್ಚುತ್ತವೆ. ಧರ್ಮ ಕಾರ್ಯಗಳನ್ನು ಮಾಡುವವರಿಗೆ ಸಾಕಷ್ಟು ಜನಬೆಂಬಲ ದೊರೆಯುತ್ತದೆ. ದೇಣಿಗೆಯ ಆದಾಯವು ಹೆಚ್ಚುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಕುಟುಂಬದಲ್ಲಿ ಸಂತಸವಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಕೆಲವು ಬಂಧುಗಳು ನಿಮ್ಮ ಕಷ್ಟಕ್ಕೆ ಸ್ಪಂದಿಸುವರು. ಕಟ್ಟಡ ನಿರ್ಮಾಣ ಮಾಡುವವರ ಆದಾಯವು ಹೆಚ್ಚುತ್ತದೆ. ಕೃಷಿ ಸಂಶೋಧಕರಿಗೆ ಮತ್ತು ಕೃಷಿ ವಿದ್ಯಾರ್ಥಿಗಳಿಗೆ ಹೆಚ್ಚು ಅಭಿವೃದ್ಧಿ ಇರುತ್ತದೆ. ಸಂಗಾತಿಯಿಂದ ಸಂಸಾರದಲ್ಲಿ ಸುಖ ಹೆಚ್ಚುತ್ತದೆ. ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ. ವೃತ್ತಿಯಲ್ಲಿ ಹೆಚ್ಚಿನ ಸಮಸ್ಯೆಗಳಿರುವುದಿಲ್ಲ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಬಹಳ ಗಂಭೀರವಾಗಿ ವಿಷಯಗಳನ್ನು ಚಿಂತನೆ ಮಾಡುವಿರಿ. ಆದಾಯವು ತಕ್ಕಮಟ್ಟಿಗೆ ಇರುತ್ತದೆ. ಕೃಷಿ ಭೂಮಿಯನ್ನು ಕೊಳ್ಳುವ ಯೋಗವಿದೆ. ವಿದ್ಯಾರ್ಥಿಗಳು ಹೆಚ್ಚು ಶ್ರಮವಹಿಸಲೇ ಬೇಕಾದ ಅನಿವಾರ್ಯತೆ ಇದೆ. ಕುಡಿಯುವ ನೀರು ಆರೋಗ್ಯ ವ್ಯತ್ಯಾಸಕ್ಕೆ ಕಾರಣವಾಗಬಹುದು. ನಿಮ್ಮ ಸಂಗಾತಿಯಿಂದ ನಿಮ್ಮ ಅಗತ್ಯಗಳಿಗೆ ಪೂರಕವಾಗಿ ಆರ್ಥಿಕ ಸಹಾಯ ದೊರೆಯುತ್ತದೆ. ನಿಮ್ಮ ಸ್ವಂತ ಬಲದಿಂದ ವೃತ್ತಿಯಲ್ಲಿ ಮೇಲ್ದರ್ಜೆಗೆ ಏರಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಆದಾಯವು ಅಗತ್ಯವನ್ನು ಪೂರೈಸುವಷ್ಟಿರುತ್ತದೆ. ವೈರಿಗಳನ್ನು ಮಣಿಸಲು ಬೇಕಾದ ತಂತ್ರಗಳನ್ನು ಹೆಣೆಯುವಿರಿ. ಆಧುನಿಕ ಕೃಷಿ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶವಿರುತ್ತದೆ. ಹಿರಿಯರ ನಡುವಿನ ಹಣದ ವ್ಯವಹಾರಗಳು ದ್ವೇಷಕ್ಕೆ ಕಾರಣವಾಗಬಹುದು. ಸಂಗಾತಿಯ ಧರ್ಮ ನಿಷ್ಠುರತೆ ನಿಮ್ಮನ್ನು ಕೆರಳಿಸುತ್ತದೆ. ಪ್ರೀತಿ, ಪ್ರೇಮದಲ್ಲಿರುವವರಿಗೆ ಹೆಚ್ಚು ಯಶಸ್ಸು ದೊರೆಯುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಆದಾಯವು ಕಡಿಮೆ ಇರುತ್ತದೆ. ಚುರುಕಾದ ನಡವಳಿಕೆ ಇರುತ್ತದೆ. ಭೂಮಿ ವ್ಯಾಪಾರ ಮಾಡುವವರ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷೆಗೆ ಮೀರಿದ ಫಲಿತಾಂಶ ಬರುತ್ತದೆ. ಶೀತ ಬಾಧೆ ಕೆಲವರನ್ನು ಕಾಡಬಹುದು. ತಾಯಿ ಮತ್ತು ಮಕ್ಕಳ ನಡುವೆ ಕಾವೇರಿದ ವಾತಾವರಣವಿರುತ್ತದೆ. ಸಂಗಾತಿಯ ನಿರ್ಲಿಪ್ತತೆ ಕೋಪ ತರಿಸಬಹುದು. ವೃತ್ತಿಯಲ್ಲಿ ಹೆಚ್ಚು ವೇತನ ಮತ್ತು ಹೊಸ ಸ್ಥಾನವನ್ನು ಕಾಣಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಎಷ್ಟೇ ಶ್ರಮಪಟ್ಟು ದುಡಿದರೂ ಫಲವಿಲ್ಲವೆಂದು ಚಿಂತಿಸುವಿರಿ. ಆದಾಯವು ಕಡಿಮೆ ಇದ್ದು, ಖರ್ಚು ಹೆಚ್ಚಾಗುತ್ತದೆ. ಬಂಧುಗಳ ಸಹಕಾರ ಸಿಗುವುದಿಲ್ಲ. ವಿದ್ಯಾರ್ಥಿಗಳಿಗೆ ಪ್ರಗತಿಯ ಕಾಲ. ಹೊಟ್ಟೆ ನೋವು ಕಾಣಿಸಬಹುದು. ಸಂಗಾತಿಯಿಂದ ಖರ್ಚು ಹೆಚ್ಚಾಗುವ ಸಾಧ್ಯತೆಗಳಿವೆ. ಕೃಷಿಯಿಂದ ಲಾಭ ಬರುವ ಸಾಧ್ಯತೆಗಳಿವೆ.


ಪದಬಂಧ 2933

ಮೇಲಿಂದ ಕೆಳಕ್ಕೆ

1. ಪಾವನಗೊಳಿಸಲು ಅರ್ಹನಾದ ಈತ ಕೆಳಕ್ಕೆ ಬಿದ್ದಿದ್ದಾನೆ 3
2. ಉತ್ತರಭಾರತದಲ್ಲಿ ಬೀಳಬಹುದಾದ ದೃಷ್ಟಿ 3
3. ಒಂದು ರೀತಿಯಲ್ಲಿ ಗಾತ್ರ ಪ್ರಮಾಣದ ಅಳತೆ 4
4. ವಾದದಲ್ಲಿರಬೇಕಾದ ಗಟ್ಟಿತನ, ಒಳಗಿನ ಸಾರ 3
7. ಮತ್ತೇರಿಸಿ ಮೈ ಮರೆಸುವ ವಸ್ತು 3
9. ಆದ್ಯ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಗಳ ಗಳ ಬರೆದವರು 5
10. ಪುಷ್ಪ ಮಾಲಿಕೆ 5
12. ಹತ್ತಿರವಲ್ಲದ ಬಹಳ ವ್ಯಾಪ್ತಿಯ ಪಯಣ 5
17. ಒಳ್ಳೆಯ ಮುಕ್ತಾಯಕ್ಕೆ ಪ್ರತೀಕವಾದ ಕೆಂಪು ಗ್ರಹ 3
18. ಇವ ಚಂದ್ರನೋ, ವಾಲಿಯೋ ನಕ್ಷತ್ರದೇವತೆಯ ಪ್ರಿಯ 4
19. ದೀರ್ಘವಾಗಿ ಬದುಕುವವ 3
20. ಕುತೂಹಲದ ಜೊತೆ ಕಳವಳ 3
21. ಯಾವ ಉದ್ರೇಕವೂ ಇಲ್ಲದ ಸಮಚಿತ್ತ 3

ಎಡದಿಂದ ಬಲಕ್ಕೆ

1. ಒಂದು ರೀತಿ ಇರಬಹುದಾದ ಅರಿವು 4
3. ಪ್ರಾಣಿಗಳನ್ನು ಪಾಲಿಸುವ ಪರಮಾತ್ಮ 4
5. ನೀರಿನ ಕನ್ಯೆ ಈ ಚೆಲುವೆ 5
6. ಶಿರವನ್ನು ವಿಕ್ರಯಿಸುವ ಪರಂಪರೆ 4
8. ವರ್ಷದಲ್ಲಿ ಎಣಿಸುವ ಅನೇಕ ತಿಂಗಳು 4
10. ಹೋಳಿಗೆಯೊಳಗಿನ ಕಾಯಿಬೆಲ್ಲದ ಸಾರ 3
11. ಒಂದು ರೀತಿ ಹೂವಿನಂತಹ ಕೋವಿ 3
13. ಸಂತ ಸಂನ್ಯಾಸಿಗಳ ಕಾಷಾಯ 2
14. ಸದ್ಯದ ಪರಿಸ್ಥಿತಿ, ಮುಂದೆ ನಡೆಯುವ ಅವಸ್ಥೆ 2
15. ಹಾವೇರಿಯ ಸಂಪತ್ತು ನಗುವ ಪರಿಯಲ್ಲಿ ಶೂನ್ಯ ಆವರಿಸಿದೆ 2
16. ಸ್ವರವೆತ್ತಿ ಗೀತೆಯಾಗಿ ಪ್ರಸ್ತುತ ಪಡಿಸು 2
17. ಬೆಣ್ಣೆ ತೆಗೆದಂತೆ ವಿಚಾರಸಾರ ಮೂಡಿಸಲು ಕಡೆಯುವ ಕ್ರಿಯೆ 3
18. ಕಡೆಗಣಿಸುವ ಅಸಡ್ಡೆ 3
19. ಅತ್ತಿತ್ತ ಅಲುಗದೆ ಗಟ್ಟಿಯಾಗಿರುವ ಸಪ್ತಾಹದ ಒಂದು ದಿನ 4
20. ಈಶ್ವರನೊಲುಮೆಗೆ ಉರಗ ಗಜಗಳ ಸೆಣಸಾಟ ಕ್ಷೇತ್ರ 4
22. ಬೇಂದ್ರೆಯವರ ಕುರುಡುಕಾಸಿನ ಹಾಡು 5
23. ತರುಣ ಪೀಳಿಗೆಯ ಹಾಡು 4
24. ಅಮೂಲ್ಯ ಹರಳಿನ ಕವಿಯನ್ನು ಕೊಡುವ ವ್ಯಕ್ತಿ 4



ಪದಬಂಧ ಉತ್ತರ -2932

ಮೇಲಿಂದ ಕೆಳಕ್ಕೆ

1.ಕರಕಮಲ 2.ಸಮಾಜಸೇವೆ 3.ಸುಮನ 4.ಅಲಕನಂದ 5.ಜಗಜ್ಜನನಿ 11.ಲಾವಣಿ 12.ಆತಂಕ 14.ಮೇರುಪರ್ವತ 15.ಹರಿಚಂದನ 17.ಕಾಸಿನಸರ 18. ಮಡಿವಂತಿಕೆ 21.ಪತ್ರಿಕೆ

ಎಡದಿಂದ ಬಲಕ್ಕೆ

1.ಕಳಸ 4.ಅನುಜ 6.ಮಹಾಕಾಲ 7.ಜನ್ಮದಿನ 8.ಮನಸೇ 9.ನಂದನ 10.ವೆನಿಲಾ 12.ಆನಂದ 13.ವಸಂತಂ 15.ಹರಿಣಿ 16.ಕನ್ನಕಾ 19.ರುವಾರಿ 20.ಸಿಗಡಿ 21.ಪಲಾಯನ 22.ದತ್ತುಪುತ್ರಿ 23.ತಲ್ಲೀನ 24.ರವಿಕೆ

ಪಂಚತಂತ್ರಗಳ ಕಥನಕ್ಕೆ ಕಲಾ ಚೌಕಟ್ಟು

• ರೂಪಾ ಕೆ.ಎಂ.

ಪಂಚತಂತ್ರಗಳ ಕಥೆಗಳು ಎಲ್ಲರ ಬಾಲ್ಯದ ಬೆರಗು. ನೀತಿಯನ್ನು ಕಥೆಗಳ ರೂಪದಲ್ಲಿ ಹೇಳುತ್ತಾ, ನೀತಿಯೆಡೆಗೆ ಪ್ರೀತಿ ಹುಟ್ಟಿಸುವ ಪಂಚತಂತ್ರದ ಕಥೆಗಳು ಬಾಲ್ಯವನ್ನು ಮತ್ತೊಂದು ಮಗ್ಗುಲಿಗೆ ವಿಸ್ತರಿಸುವಲ್ಲಿ ಸದಾ ಮುಂದಿವೆ. ಇಂಥ ಕಥೆಗಳನ್ನು ವಿವಿಧ ನೆಲದ ದೇಸೀ ಕಲಾ ಪ್ರಕಾರಗಳ ಮೂಲಕ ನಿರೂಪಿಸಿ ಬಣ್ಣದೊಂದಿಗೆ ಬೆರಗಿನ ಕಾರಂಜಿಯನ್ನೇ ಚಿಮ್ಮಿಸಲಾಯಿತು.

ದೇಶದ ನಾನಾ ಭಾಗಗಳಿಂದ ಬಂದಿದ್ದ ದೇಸಿ ಕಲಾವಿದರು ಪಂಚತಂತ್ರದ ಒಟ್ಟು 84 ಕಥೆಗಳಿಗೆ ಬಣ್ಣವಷ್ಟೇ ಅಲ್ಲ, ಭಾವವನ್ನೂ ತುಂಬಿದರು. ಗೆರೆ, ಕುಂಚ, ಬಣ್ಣಗಳು ಇಲ್ಲಿ ಕಥನವನ್ನು ಕಡೆಯುವ ಕಡೆಗೋಲುಗಳಾದವು. ಇದು ಅಂತರರಾಷ್ಟ್ರೀಯ ಕೆಂಪೇಗೌಡ ವಿಮಾನ ನಿಲ್ದಾಣದ ಸಮೀಪ ಇರುವ ಚಾಣಕ್ಯ ವಿಶ್ವವಿದ್ಯಾಲಯದಲ್ಲಿ ಕಂಡುಬಂದ ರಾಷ್ಟ್ರೀಯ ಕಲಾ ಶಿಬಿರದ ಚಿತ್ರಣಗಳು.

ಈ ಕಲಾ ಶಿಬಿರವನ್ನು ಯುವಕ ಸಂಘದ ‘ಆರ್ಟ್ ಮ್ಯಾಟರ್ಸ್’ ವೇದಿಕೆಯು ತನ್ನ 10ನೇ ವಾರ್ಷಿಕೋತ್ಸವ ಪ್ರಯುಕ್ತ ಭಾರತೀಯ ಜ್ಞಾನಪರಂಪರೆ ವಿಭಾಗದ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಶಿಬಿರ ಇದಾಗಿತ್ತು.

ಸಾಮಾನ್ಯವಾಗಿ ‘ಆರ್ಟ್ ಮ್ಯಾಟರ್ಸ್’ ಕಲಾ ವಿದ್ಯಾರ್ಥಿಗಳಿಗೆಂದು ಕಲಾ ಪ್ರದರ್ಶನ, ಸ್ಪರ್ಧೆಗಳನ್ನು ಆಯೋಜಿಸುತ್ತಾ ಬರುತ್ತಿದೆ. ಆದರೆ, ಈ ಬಾರಿ ಇಂಥದ್ದೊಂದು ವಿನೂತನ ಎನಿಸುವ ಶಿಬಿರವನ್ನು ಆಯೋಜಿಸಿತ್ತು. ಭಾರತೀಯ ಸಾಂಪ್ರದಾಯಿಕ ಕಲಾ ಪ್ರಕಾರಗಳಾದ ಮೈಸೂರು, ತಂಜಾವೂರು, ಕೇರಳ ಮ್ಯೂರಲ್, ಆಂಧ್ರದ ಕಲಂಕಾರಿ, ಅಸ್ಸಾಂನ ಸತ್ತಾರಿಯಾ, ಗುಜರಾತ್‌ನ ಮಾತಾ ನಿ ಪಚೇಡಿ, ಬಿಹಾರದ ಮಧುಬನಿ, ಮಹಾರಾಷ್ಟ್ರದ ಚಿತ್ರಕಥಿ, ಮಧ್ಯಪ್ರದೇಶದ ಗೋಂಡ್, ಬಂಗಾಳದ ಪಟಚಿತ್ರ ಕಲಾಪ್ರಕಾರಗಳಲ್ಲಿ ಪಂಚತಂತ್ರದ ಕಥೆಗಳನ್ನು ನಿರೂಪಿಸಲಾಗಿದೆ.



ಚಿತ್ರ ಬಿಡಿಸುವ ಕಾರ್ಯದಲ್ಲಿ ಮಗ್ನರಾಗಿರುವ ಕಲಾವಿದರು

ಚಿತ್ರಗಳು: ಪ್ರಶಾಂತ್ ಎಚ್.ಜಿ.

ಕಲಾ ಶಿಬಿರದ ಸಂಯೋಜಕ ಶಿವಪ್ರಸಾದ್ ಕೆ. ಆಚಾರ್ ನೀಡಿದ ಮಾಹಿತಿ ಇಷ್ಟು: ‘ಈ ಶಿಬಿರದಲ್ಲಿ ಪಾಲ್ಗೊಳ್ಳಬೇಕೆಂದು ಒಂದು ಸಾವಿರ ಕಲಾ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದರು. ದೇಶದ ಎಲ್ಲ ಪ್ರಮುಖ ಕಾಲೇಜಿನ ವಿದ್ಯಾರ್ಥಿಗಳನ್ನು ಈ ಶಿಬಿರದಲ್ಲಿ ನೋಡಬಹುದು. ಕೋಲ್ಕತ್ತದ ಶಾಂತಿನಿಕೇತನ, ವಾರಾಣಸಿಯ ಬನಾರಸ್ ಕಾಲೇಜಿನ ವಿದ್ಯಾರ್ಥಿಗಳು, ಪಾರೂಲ್ ಯುನಿರ್ವಸಿಟಿ, ಜವಾಹರ್‌ಲಾಲ್ ಆರ್ಕಿಟೆಕ್ಚರ್ ಆ್ಯಂಡ್ ಫೈನ್ ಆರ್ಟ್ಸ್ ಯುನಿವರ್ಸಿಟಿ, ಅಣ್ಣೈ ಕಾಮಾಕ್ಷಿ, ಜಯಲಲಿತಾ ಫೈನ್ ಆರ್ಟ್ಸ್ ಆ್ಯಂಡ್ ಮ್ಯೂಸಿಕ್ ಅಕಾಡೆಮಿ, ಚಿತ್ರಕಲಾ ಪರಿಷತ್, ಮೈಸೂರಿನ ಕಾವಾ ಸೇರಿದಂತೆ ಒಟ್ಟು ಹದಿನೇಳು ರಾಜ್ಯಗಳ ಕಾಲೇಜುಗಳಿಂದ 300 ಕಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಮೂನ್ನೂರು ಮಂದಿಗೆ ಏಕಕಾಲಕ್ಕೆ ಚಿತ್ರಬಿಡಿಸಲು ಅವಕಾಶ ಮಾಡಿಕೊಡುವುದು ಕಷ್ಟವಾಗುವುದರಿಂದ ಎರಡು ಹಂತಗಳಲ್ಲಿ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.’



ಶಿಬಿರದಲ್ಲಿ ರಚನೆಗೊಂಡ ಚಿತ್ರಗಳು

84 ಕಥೆಗಳನ್ನು ವಿವಿಧ ಕಲಾವಿದರಿಗೆ ಅವರದ್ದೇ ಭಾಷೆಯಲ್ಲಿ ಹೇಳಿ ಅರ್ಥ ಮಾಡಿಸಲಾಯಿತು. ಹೀಗೆ ಅರ್ಥ ಮಾಡಿಸುವಲ್ಲಿ ಪ್ರೊ. ರಾಘವೇಂದ್ರ ರಾವ್ ಕುಲಕರ್ಣಿ ಅವರ ಶ್ರಮ ದೊಡ್ಡದು. ಆ ಕಲಾವಿದರು ಬಿಡಿಸಿದ ಚಿತ್ರಗಳಿಗೆ, ಕಲಾ ವಿದ್ಯಾರ್ಥಿಗಳು ಬಣ್ಣ ತುಂಬಿದರು. ವಿವಿಧ ಪ್ರಕಾರಗಳಲ್ಲಿ 84 ಪಂಚತಂತ್ರ ಕಥೆಗಳನ್ನು ನೋಡಬಹುದು.

ಪಂಚತಂತ್ರವೇ ಏಕೆ?

ರಾಜಾತಿಥ್ಯದಲ್ಲಿ ಇದ್ದ ವಿಷ್ಣುಶರ್ಮ ರಾಜನ ಮೂರು ಮಕ್ಕಳಿಗೆ ಕಥೆಗಳ ಮೂಲಕ ಬದುಕಿನ ಪಾಠಗಳನ್ನು ಹೇಳಿಕೊಟ್ಟ ಸಾರವೇ ‘ಪಂಚತಂತ್ರ’. ಆದರೆ, ಈ ಮಾಹಿತಿ ಸಾಗರದ ಯುಗದಲ್ಲಿ ಈ ಕಥೆಗಳನ್ನು ಬೇಕಾದ ಹಾಗೇ ತಿರುಚಲಾಗಿದೆ. ಮೂಲದಲ್ಲಿ ಇಲ್ಲದೇ ಇರುವುದನ್ನೆಲ್ಲ ಸೇರಿಸುವ ಅಥವಾ ತೆಗೆದಿರುವಂಥ ಕಥೆಗಳನ್ನೂ ನೋಡಬಹುದು. ಹಾಗಾಗಿ ಪಂಚತಂತ್ರದ ಮೂಲ ಸಾರವನ್ನು ಮುಂದಿನ ಪೀಳಿಗೆಗೆ ಸಶಕ್ತವಾಗಿ ಅಂದರೆ ಬಣ್ಣಗಳ ಮೂಲಕ ತಲುಪಿಸಬೇಕು ಎನ್ನುವ ಕಾರಣಕ್ಕೆ ಪಂಚತಂತ್ರವನ್ನೇ ಆಯ್ಕೆ ಮಾಡಿಕೊಳ್ಳಲಾಗಿದೆ.

ಅದಕ್ಕಾಗಿ ಪಂಚತಂತ್ರಗಳ ಬಗ್ಗೆ ಅಧ್ಯಯನ ಮಾಡಿರುವ ಡಾ. ಭರತ್ ದಾಷ್ ಅವರು ಮೂಲ ಕಥೆಗಳ ಸಾರದ ಬಗ್ಗೆ ಪೂರ್ವ ಶಿಬಿರದಲ್ಲಿ ಕಲಾವಿದರಿಗೆ ಅರಿವು ಮೂಡಿಸಿದ್ದರು. ನಶಿಸಿ ಹೋಗುತ್ತಿರುವ ಕಲಾ ಪ್ರಕಾರಗಳಲ್ಲಿ ಕಥನ ಲೋಕದಲ್ಲಿ ಇಂದಿಗೂ ಛಾಪು ಉಳಿಸಿಕೊಂಡಿರುವ ಪಂಚತಂತ್ರದ ಕಥೆಗಳನ್ನು ಕ್ಯಾನ್ವಾಸ್ ಮೇಲೆ ತರಬೇಕು ಎನ್ನುವುದು ಪ್ರಮುಖ ಉದ್ದೇಶವಾಗಿತ್ತು ಎನ್ನುತ್ತಾರೆ ಶಿವಪ್ರಸಾದ್.

ಈ ಕಲಾ ಶಿಬಿರದಲ್ಲಿ ಸೃಷ್ಟಿಯಾದ ಎಲ್ಲ ಕಲಾಕೃತಿಗಳು ಸರ್ಕಾರಿ ಶಾಲೆಗಳಲ್ಲಿ ಪ್ರದರ್ಶನಗೊಳ್ಳಲಿವೆ. ಜತೆಗೆ ಬೇರೆ ಬೇರೆ ಭಾಷೆಗಳಲ್ಲಿ ಇವುಗಳನ್ನು ಪ್ರದರ್ಶಿಸುವ, ಎಲ್ಲ ಕಲಾಕೃತಿಗಳನ್ನು ಇಟ್ಟುಕೊಂಡು ಪುಸ್ತಕ ಮಾಡುವ ಇರಾದೆಯೂ ಇದೆ. ಜತೆಗೆ ವಿವಿಧ ರಾಜ್ಯಗಳಲ್ಲಿರುವ ಪ್ರಸಿದ್ಧ ಕಲಾ ಗ್ಯಾಲರಿಗಳಲ್ಲಿ ಪ್ರದರ್ಶನಗೊಳ್ಳುವ ಬಗ್ಗೆಯೂ ಆಲೋಚನೆ ಇದೆ.

ಸವಾಲುಗಳೇನಾಗಿತ್ತು?

ಸಾಂಪ್ರದಾಯಿಕ ಮೈಸೂರು ಕಲಾಪ್ರಕಾರದಲ್ಲಿ ಸಾಮಾನ್ಯವಾಗಿ ದೇವರ ಚಿತ್ರಗಳನ್ನು ನೋಡಬಹುದು. ಆದರೆ, ಕಥೆಗೆ ಅಗತ್ಯವಿರುವ ನಾಯಿ, ಸಿಂಹ, ಕೋತಿ ಸೇರಿದಂತೆ ಪ್ರಾಣಿಗಳನ್ನು ಇದೇ ಪ್ರಕಾರದಲ್ಲಿ ಬಿಡಿಸಿರುವುದು ಈ ಶಿಬಿರದ ವಿಶೇಷ. ಈ ಬಗ್ಗೆ ಮೈಸೂರು ಕಲಾಪ್ರಕಾರದ ಕಲಾವಿದರಿಗೆ ತುಸು ಆತಂಕವೂ ಇತ್ತು. ಹೀಗೆ ಅಸಂಪ್ರದಾಯಿಕವಾಗಿ ಚಿತ್ರ ಬಿಡಿಸುವುದು ಕಲೆಗೆ ಮಾಡುವ ಅಪಚಾರವಾಗಬಹುದೇ ಎಂಬ ಕೊರಗು ಇಟ್ಟುಕೊಂಡಿದ್ದರು. ಅವರನ್ನು ಒಪ್ಪಿಸುವುದು ಆರಂಭದಲ್ಲಿ ತುಸು ಕಷ್ಟವಾಯಿತು ಎನ್ನುತ್ತಾರೆ ಶಿವಪ್ರಸಾದ್.

ಶಿಬಿರದ ಉದ್ದೇಶವೇ ನಶಿಸುತ್ತಿರುವ ಭಾರತೀಯ ಕಲಾಪ್ರಕಾರಗಳನ್ನು ಪುನಃಶ್ಚೇತನಗೊಳಿಸುವುದು. ಹಾಗಾಗಿ ಸಾಂಪ್ರದಾಯಿಕ ಶೈಲಿಗೆ ಜನಪದವನ್ನು ಮಿಳಿತಗೊಳಿಸಿ, ಇನ್ನಷ್ಟು ಈ ಕಲೆಗಳನ್ನು ಜನಪ್ರಿಯಗೊಳಿಸುವುದು ಹಾಗೂ ಸಮಕಾಲೀನ ತಂತ್ರಜ್ಞಾನವನ್ನೂ ಈ ಕಲಾ ಪ್ರಕಾರಗಳಲ್ಲಿ ಅಳವಡಿಸಿದಾಗ ಹೊಸ ಪೀಳಿಗೆ ಈ ಕಲಾ ಪ್ರಕಾರಗಳನ್ನು ಹೆಚ್ಚು ನೆಚ್ಚಿಕೊಳ್ಳುವ ಸಾಧ್ಯತೆ ಇರುತ್ತದೆ.

ಜಪಾನಿನ ದೇಸಿ ಕಲೆ ವುಡನ್ ಕಟ್ಟಿಂಗ್ ಪ್ರಿಂಟ್ ಅನ್ನು ಆ್ಯನಿಮೇಷನ್ ತಂತ್ರಜ್ಞಾನದಲ್ಲಿ ಬಳಸಿಕೊಳ್ಳಲಾಗುತ್ತಿದೆ. ಹೊಸ ತಂತ್ರಜ್ಞಾನ ಬಳಸಿಕೊಂಡು ಕಲಾ ಪ್ರಕಾರಗಳನ್ನು ಪ್ರಯೋಗಗಳಿಗೆ ಒಡ್ಡಿದಾಗಷ್ಟೆ ಅವು ಜನಮಾನಸದಲ್ಲಿ ಉಳಿಯುತ್ತವೆ. ಸಮಕಾಲೀನವಾಗಿಯೂ ಪ್ರಚಲಿತದಲ್ಲಿರುತ್ತದೆ.

ಶಿಬಿರದ ಪ್ರಮುಖ ಅಂಶಗಳು


ನಶಿಸಿ ಹೋಗಿರುವ ಅಸ್ಸಾಂನ ಸತ್ತಾರಿಯಾ ಕಲಾ ಪ್ರಕಾರದ ಪುನಃಶ್ಚೇತನ ಕಾರ್ಯ ಕೈಗೊಂಡ ಸುಜಿತ್ ದಾಸ್ ಈ ಶಿಬಿರದಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಇದಲ್ಲದೇ ಮಹಾರಾಷ್ಟ್ರದ ಚಿತ್ರಕಥಿ ಕಲಾ ಪ್ರಕಾರವನ್ನು ಈವರೆಗೂ ಶ್ರದ್ಧೆಯಿಂದ ಕೈಗೊಂಡಿರುವ ಸಮಕಾಲೀನ ಚಿತ್ರ ಕಲಾವಿದೆ ಪ್ರತಿಭಾ ವಾಗ್ ಅವರೂ ಪಾಲ್ಗೊಂಡಿದ್ದರು.

ಕಲೆಗೆ ಮುಡುಪಿಟ್ಟ ಕುಟುಂಬ

ಇನ್ನೂ ಮಾತಾ ನಿ ಪಚೇಡಿ ಕಲಾಪ್ರಕಾರಕ್ಕೆ ಮುಡಿಪಾಗಿಟ್ಟ ಕುಟುಂಬದ ಜಗದೀಶ ಚಿತ್ತಾರ, ಪರೇಶ ಚಿತ್ತಾರ, ರಮೀಲಾ ಅವರು ಮಾತಿಗೆ ಸಿಕ್ಕರು. ಗುಜರಾತಿನ ವಾಘರಿ ಸಮುದಾಯದಲ್ಲಿ ರೂಪುಗೊಂಡ ವಿಶಿಷ್ಟ ಕಲಾ ಪ್ರಕಾರವೇ ಮಾತಾ ನಿ ಪಚೇಡಿ. 15–16ನೇ ಶತಮಾನದಲ್ಲಿ ಈ ಕಲಾ ಪ್ರಕಾರವೂ ಅಭಿವೃದ್ಧಿಗೊಂಡಿದ್ದು, ವಾಘರಿಯಂಥ ಅಲೆಮಾರಿ ಸಮುದಾಯಕ್ಕೆ ದೇವಸ್ಥಾನ ಪ್ರವೇಶ ನಿರಾಕರಿಸಿದಾಗ, ಬಂಡಾಯವೆದ್ದು ಬಣ್ಣದ ಮೂಲಕ ದೇವಿಯನ್ನು ಸಾಕ್ಷಾತ್ಕರಿಸಿಕೊಳ್ಳಲಾಯಿತು.

ಇಲ್ಲಿ ಬಟ್ಟೆಯೇ ಕ್ಯಾನ್ವಾಸ್

ಸಸ್ಯ ಹಾಗೂ ಖನಿಜಗಳಿಂದ ನೈಸರ್ಗಿಕವಾಗಿ ಬಣ್ಣವನ್ನು ತಯಾರಿಸಲಾಗುತ್ತದೆ. ಬಿದಿರಿನಿಂದ ಮಾಡಿದ ಪೆನ್ನನ್ನು ಬಳಸಿ ಚಿತ್ರ ಬಿಡಿಸಲಾಗುತ್ತದೆ. ದೇವಿಯ ಆರಾಧನೆ ಹಾಗೂ ಪೌರಾಣಿಕ ಕಥೆಗಳನ್ನು ಬಿಂಬಿಸುವ ಮಾತಾ ನಿ ಪಚೇಡಿ ಕಲಾಪ್ರಕಾರವನ್ನು, ಪಂಚತಂತ್ರ ಕಥೆ ನಿರೂಪಿಸುವಲ್ಲಿ ಬಳಸಿಕೊಂಡಿದ್ದು ವಿಶೇಷ ಎನಿಸಿತ್ತು. ಇದೊಂದು ಹೊಸ ಅನುಭವವೇ ಸರಿ. ಮೂಲ ಕಲಾಪ್ರಕಾರ ಹಾಗೂ ನಿಯಮಗಳಿಗೆ ಯಾವುದೇ ರೀತಿಯಲ್ಲಿ ಧಕ್ಕೆ ಬಾರದ ಹಾಗೇ ಈ ಕಲಾಪ್ರಕಾರವನ್ನು ಬಳಸಿಕೊಳ್ಳಲಾಗಿದೆ ಎಂದು ಹೇಳಲು ಜಗದೀಶ್ ಅವರು ಮರೆಯಲಿಲ್ಲ.



ಹಲವು ಕಲಾಪ್ರಕಾರಗಳ ಹಲವು ದೃಷ್ಟಿಕೋನಗಳನ್ನು ಏಕಕಾಲಕ್ಕೆ ನೋಡಲು, ಅರ್ಥೈಸಿಕೊಳ್ಳಲು ಈ ಶಿಬಿರವು ದೊಡ್ಡ ಅವಕಾಶವಾಗಿದೆ ಎಂದು ಚಿತ್ರಕಲಾ ವಿದ್ಯಾರ್ಥಿ ಸಚಿನ್ ಗದಗ ಹರ್ಷ ವ್ಯಕ್ತಪಡಿಸಿದರು. ❖

ನೀರಗನ್ನಡಿಯಲ್ಲಿ ಹೆಣ್ಣಿನ ಪ್ರತಿಬಿಂಬ



ನೀರಗನ್ನಡಿ ನಾಟಕದ ದೃಶ್ಯ

ಚಿತ್ರ: ಕೆ.ಶಿವರುದ್ರಯ್ಯ

• ರುದ್ರೇಶ್ ಅದರಂಗಿ

ರಾತ್ರಿ ದೀಪಗಳು ಆರಿದ ನಂತರ ಹಟ್ಟಿಯ ಜ್ಯೋತಿಗಳು ಒಂದೊಂದಾಗಿ ನೀರವ ರಾತ್ರಿಯಲ್ಲಿ ಊರಾಚೆಯ ಕೊಳದ ಬಳಿ ಸೇರುತ್ತವೆ. ಸಭಾಂಗಣವೇ ಕೊಳವಾಗಿ, ಮೃದುವಾದ ಅಲೆಗಳ ನಡುವೆ ಮಿನುಗುವ ಜ್ಯೋತಿಗಳು ಪಾತ್ರಗಳಾಗಿ ರಂಗಮಂಚವನ್ನು ಏರುತ್ತವೆ. ಈ ದೃಶ್ಯಕಲ್ಪನೆ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ‘ಹೊನ್ನಾರು ನಾಟಕೋತ್ಸವ’ದಲ್ಲಿ ‘ನಟರಂಗ’ ಅಭಿನಯಿಸಿದ ಕೆ.ವೈ.ನಾರಾಯಣಸ್ವಾಮಿ ಅವರ ‘ನೀರಗನ್ನಡಿ’ ನಾಟಕದಲ್ಲಿ ಜೀವಪಡೆಯಿತು.

ಜನಪದ ಕಥೆಯಿಂದ ಪ್ರೇರಿತವಾದ ಈ ನಾಟಕ ಹೆಣ್ಣಿನ ಜೀವನದಲ್ಲಿ ‘ಅನುಮಾನ’ ಎಂಬ ವಿಷಬೀಜ ಹೇಗೆ ಬೆಳೆದು ಕುಟುಂಬವನ್ನೇ ನಾಶಮಾಡಬಲ್ಲದು ಎಂಬುದನ್ನು ರೂಪಕಾತ್ಮಕವಾಗಿ ಹೇಳುತ್ತದೆ. ಹಟ್ಟಿಯ ಜ್ಯೋತಮ್ಮಗಳೇ ಕಥೆಯನ್ನು ಹೇಳುವ ತಂತ್ರದಲ್ಲಿ ಕಥಾವಸ್ತು ಹರಿಯುತ್ತದೆ. ಮದುವೆಯ ಸಂಭ್ರಮದ ಮಧ್ಯೆ ಯುದ್ಧದ ಕಾರ್ಮೋಡ ಕವಿದು ಮಧುಮಗ ವೀರಕುಮಾರನನ್ನು ರಣಾಂಗಣಕ್ಕೆ ಕರೆದೊಯ್ಯುತ್ತದೆ. ಮದುವೆ ಮುರಿಯುತ್ತದೆ; ಮದುಮಗಳನ್ನು ತವರುಮನೆಯವರು ಕಾಡಿನಲ್ಲಿ ಬಿಟ್ಟುಹೋಗುತ್ತಾರೆ. ಆತ್ಮಹತ್ಯೆಗೆ ಮುಂದಾಗುವ ಅವಳನ್ನು ಜ್ಯೋತಮ್ಮದಿರು ತಡೆದು ಗಂಡನ ಮನೆಗೆ ಕಳುಹಿಸುತ್ತಾರೆ.

ಆದರೆ ಗಂಡನ ಮನೆಯಲ್ಲಿ ಅವಳಿಗೆ ಸ್ವಾಗತವಲ್ಲ, ಅನುಮಾನ ಕಾದಿರುತ್ತದೆ. ಅತ್ತೆಯ ಕಾಟ, ಬಡತನ, ನಿರ್ಲಕ್ಷ್ಯ–ಇವೆಲ್ಲದರ ನಡುವೆ ಸಣ್ಣ ಘಟನೆಯೊಂದು ದೊಡ್ಡ ದುರಂತಕ್ಕೆ ಬೀಜವಾಗುತ್ತದೆ. ಇಲಿಗಳ ಕುತಂತ್ರದಿಂದ ಹುಟ್ಟಿದ ಅನುಮಾನ ಯುದ್ಧದಿಂದ ಮರಳಿದ ವೀರಕುಮಾರನ ಮನಸ್ಸನ್ನು ವಿಷ ಮಾಡುತ್ತದೆ. ಮೊದಲ ರಾತ್ರಿಯ ಪಲ್ಲಂಗದ ಕೆಳಗೆ ಅಡಗಿದ ಕತ್ತಿ ಕೇವಲ ಆಯುಧವಲ್ಲ–ಅದು ಸಂಶಯದ ರೂಪಕ.

‘ಹೆಣ್ಣಿನ ಜೀವನವೂ ಅಷ್ಟೇ. ಯಾರೋ ಎಸೆದ ಹುಲ್ಲಿನ ಕಡ್ಡಿಯೂ ಅನುಮಾನದ ಕತ್ತಿಯಾಗಬಹುದು’ ಎಂಬ ಅರ್ಥಪೂರ್ಣ ಮಾತು ನಾಟಕದ ಕೇಂದ್ರಬಿಂದು. ಒಂದು ಇಲಿ ಕೂಡ ಪ್ರೇಮಸೌಧವನ್ನು ಕೆಡವಬಲ್ಲದೆ? ಎಂಬ ಪ್ರಶ್ನೆ ಪ್ರೇಕ್ಷಕರ ಮನಸ್ಸಿನಲ್ಲಿ ಅಲೆಗಳಂತೆ ತೇಲುತ್ತದೆ. ವೀರಕುಮಾರ ಸಂಶಯದ ದಡದಲ್ಲಿ ನಿಂತಾಗ, ಸೊಸೆ ಜೀವನದಿಯಾಗಿ ಹರಿಯುವ ರೂಪಕದೊಂದಿಗೆ ನಾಟಕ ಮುಕ್ತಾಯಗೊಳ್ಳುತ್ತದೆ.

ಶಕ್ತಿಯುತ ಬರವಣಿಗೆ, ತಾಂತ್ರಿಕ ಪ್ರಯೋಗ

ಕೆ.ವೈ.ನಾರಾಯಣಸ್ವಾಮಿ ಅವರ ಸಂಭಾಷಣೆಗಳು ಸ್ಪಷ್ಟ, ಸಶಕ್ತ ಮತ್ತು ಧ್ವನಿಪೂರ್ಣ. ನಾಟಕ ವಾಚ್ಯವಾಗದೆ ದೃಶ್ಯ–ರೂಪಕಗಳ ಮೂಲಕ ಹೆಣ್ಣಿನ ಬದುಕಿನ ಸವಾಲುಗಳನ್ನು ಎತ್ತಿ ಹಿಡಿಯುತ್ತದೆ. ಜನಪದ ನೆಲೆಯಿದ್ದರೂ ವಿಷಯ ಸಮಕಾಲೀನವಾಗಿ ತಟ್ಟುತ್ತದೆ.

ನಿರ್ದೇಶಕ ಬಿ.ಸುರೇಶ ಸಭಾಂಗಣವನ್ನೇ ಕೊಳವಾಗಿ ರೂಪಿಸಿದ್ದಾರೆ. ನೀರಿನ ಅಲೆಗಳ ಭಾವ ಮೂಡಿಸಲು ಕನ್ನಡಿಗಳ ಬಳಕೆ, ಪರದೆಯ ಅಂಚುಗಳ ಚಲನೆ, ಕನ್ನಡಿ ಮತ್ತು ಕತ್ತಿಯ ರೂಪಕಾತ್ಮಕ ಉಪಯೋಗ–ಇವು ನಾಟಕಕ್ಕೆ ದೃಶ್ಯಗಾಢತೆ ನೀಡಿವೆ. ತಾಂತ್ರಿಕವಾಗಿ ಆಲೋಚಿಸಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಬೆಂಗಳೂರಿನ ಸುರಾನ ಕಾಲೇಜಿನ ವಿದ್ಯಾರ್ಥಿಗಳಿಗೆ ಶ್ರಮವಹಿಸಿ ನಾಟಕ ಕಲಿಸಿರುವುದು ಪ್ರಶಂಸನೀಯ. ಆದರೆ ನಾಟಕದ ವಸ್ತುವಿನ ಸೂಕ್ಷ್ಮತೆ ಹಾಗೂ ನಿರ್ದೇಶಕರ ದೃಷ್ಟಿಯನ್ನು ಸಂಪೂರ್ಣವಾಗಿ ಹಿಡಿಯುವಲ್ಲಿ ಕೆಲವಡೆ ನಟರು ಎಡವಿದ್ದಾರೆ. ಮೊದಲ ಪ್ರದರ್ಶನವಾಗಿರುವುದರಿಂದ ಈ ಅಸ್ಪಷ್ಟತೆ ಮುಂದಿನ ಪ್ರದರ್ಶನಗಳಲ್ಲಿ ಸರಿಯಾಗುವ ನಿರೀಕ್ಷೆ ಇದೆ.

ವೀರಕುಮಾರನಾಗಿ ದರ್ಶನ್, ಸೊಸೆಯಾಗಿ ದೇವಿಕಾ, ಅತ್ತೆಯಾಗಿ ಚಂದನಾ ಹರ್ಷ ಅಭಿನಯ ಗಮನಸೆಳೆಯಿತು. ಎಂ.ಡಿ. ಪಲ್ಲವಿ ಅವರ ಸಂಗೀತ ನಾಟಕಕ್ಕೆ ಭಾವಸಹಕಾರ ನೀಡಿದರೂ, ಮುದ್ರಿತ ಧ್ವನಿಸುರುಳಿಯಲ್ಲಿ ಕೆಲವೊಮ್ಮೆ ತಾಂತ್ರಿಕ ಅಡಚಣೆ ಕಂಡುಬಂತು. ರವಿಕುಮಾರ್ ಅವರ ಪರಿಕರ ನಿರ್ವಹಣೆ, ಶಶಿಧರ ಅಡಪ ಅವರ ರಂಗವಿನ್ಯಾಸ, ರಾಮಕೃಷ್ಣ ಎನ್.ಕೆ. ಅವರ ಪ್ರಸಾಧನ, ಅಕ್ಷರ ವೇಣುಗೋಪಾಲ್ ಅವರ ಬೆಳಕಿನ ವಿನ್ಯಾಸ ಸಮರ್ಪಕವಾಗಿತ್ತು.

1972 ರಲ್ಲಿ ಪ್ರಾರಂಭವಾದ ‘ನಟರಂಗ’ ಕನ್ನಡ ರಂಗಭೂಮಿಗೆ ಗಣನೀಯ ಕೊಡುಗೆ ನೀಡಿದೆ. ಹಳೆಯ ಬೇರು–ಹೊಸ ಚಿಗುರಿನ ಸಮನ್ವಯದೊಂದಿಗೆ ಮುಂದುವರಿಯುತ್ತಿದೆ. ❖

ಶ್! ಇದು ಬೆಕ್ಕುಗಳ ಮ್ಯೂಸಿಯಂ!



ಪರ್ಶಿಯನ್ ತಳಿಯ ಬೆಕ್ಕು

10ನೇ ಪುಟದಿಂದ...


ಭವಿಷ್ಯದಲ್ಲಿ ಬೆಕ್ಕುಗಳಿಗಾಗಿ ವಿಶೇಷ ಪಾರ್ಲರ್ ಆರಂಭಿಸುವ ಯೋಚನೆಯೂ ಶರತ್ ಅವರಿಗಿದೆ. ಪ್ರಸ್ತುತ ಬೆಕ್ಕುಗಳು ಸಂಪೂರ್ಣವಾಗಿ ಹೊಂದಿಕೊಂಡ ಬಳಿಕ ಇನ್ನಷ್ಟು ತಳಿಗಳನ್ನು ಪರಿಚಯಿಸುವ ಯೋಜನೆ ಇದೆ.

ಒಬ್ಬ ವ್ಯಕ್ತಿಯ ವೈಯಕ್ತಿಕ ದುಃಖದಿಂದ ಆರಂಭವಾದ ಈ ಪ್ರಯತ್ನ, ಇಂದು ಮೈಸೂರಿನ ಪ್ರವಾಸೋದ್ಯಮಕ್ಕೆ ಹೊಸ ಮೆರಗು ತುಂಬುತ್ತಿದೆ. ‘ಕೊಕೊ’ ಎಂಬ ಮುದ್ದು ಬೆಕ್ಕಿನ ನೆನಪಿನಲ್ಲಿ ಹುಟ್ಟಿದ ಈ ಮ್ಯೂಸಿಯಂ, ಬೆಕ್ಕುಗಳ ಮೇಲೆ ಪ್ರೀತಿ ಮಾತ್ರವಲ್ಲ; ಜವಾಬ್ದಾರಿಯ ಅರಿವನ್ನೂ ಮೂಡಿಸುತ್ತದೆ.

ನೀವು ಮೈಸೂರಿನ ಕಡೆಗೆ ಹೊರಟಿದ್ದರೆ ಈ ಅಪರೂಪದ ‘ಬೆಕ್ಕಿನ ಲೋಕ’ಕ್ಕೆ ಭೇಟಿ ನೀಡುವುದನ್ನು ಮರೆಯಬೇಡಿ. ಇಲ್ಲಿ ಮುದ್ದಾದ ಮರಿಗಳ ಆಟದ ಹಿಂದೆ, ಒಂದು ಭಾವನಾತ್ಮಕ ಕಥೆಯೂ ಇದೆ. ❖

ಮೊದಲ ಓದು

ಪ್ರಬಂಧಗುಣದ ರಚನೆಗಳು



ಏಳು ಮನೆ ಸಾಲು
ಲೇ: ಉಗಮ ಶ್ರೀನಿವಾಸ್
ಪ್ರ: ಕಣಿವೆ ಪ್ರಕಾಶನ
ಸಂ: 98444 73764

ಕವಿ, ಪತ್ರಕರ್ತ, ರಂಗಕರ್ಮಿ ಉಗಮ ಶ್ರೀನಿವಾಸ್ ಅವರ ‘ಏಳು ಮನೆ ಸಾಲು’ ಹೃದ್ಯ ವ್ಯಕ್ತಿಚಿತ್ರಗಳ ಸಂಕಲನ. ಇಲ್ಲಿನ ಎಲ್ಲ ಬರಹಗಳೂ ಪುಟ್ಟದಾಗಿದ್ದರೂ, ಬರಹದ ಕೇಂದ್ರದಲ್ಲಿರುವ ವ್ಯಕ್ತಿತ್ವಗಳು ಘನವಾದವೇ ಆಗಿವೆ. ಸೀಮಿತ ಚೌಕಟ್ಟಿನಲ್ಲಿಯೂ ತಮ್ಮದೇ ಆದ ವ್ಯಕ್ತಿತ್ವ ರೂಪಿಸಿಕೊಂಡ ವಿಶಿಷ್ಟ ವ್ಯಕ್ತಿಗಳ ಪರಿಚಯಗಳು ಇಲ್ಲಿವೆ. ಭಿನ್ನ ಬದುಕುಗಳನ್ನು ಪರಿಚಯಿಸುವ ಇಲ್ಲಿನ ಬರಹಗಳ ಮೂಲಕ ಲೇಖಕರ ಸಾಮಾಜಿಕ ಬದುಕಿನ ಒಂದು ಆಯಾಮವನ್ನೂ ಪರಿಚಯಿಸಿಕೊಳ್ಳಬಹುದಾಗಿದೆ.

ವೈಯಕ್ತಿಕ ಬದುಕಿನೊಂದಿಗೆ ಸಾಹಿತ್ಯ, ರಾಜಕೀಯ, ರಂಗಭೂಮಿ, ಊರು–ಕೇರಿ ಎಲ್ಲವೂ ಈ ಕೃತಿಯಲ್ಲಿ ಇಡುಕಿರಿದಿವೆ. ವೀಚಿ, ಲಂಕೇಶ್, ಸಿಜಿಕೆ ಅವರೊಂದಿಗೆ ‘ಆಸ್ಪತ್ರೆಯ ಕವಿ ಷಡಕ್ಷರಿ’ಯೂ ಇಲ್ಲಿನ ಸ್ಮೃತಿಚಿತ್ರಗಳಲ್ಲಿದ್ದಾರೆ. ಇಂದಿರಾಗಾಂಧಿ ಅವರೊಂದಿಗೆ ಲೇಖಕರ ಅಜ್ಜಿಯೂ ಸಹೃದಯರಿಗೆ ಮುಖಾಮುಖಿಯಾಗುತ್ತಾರೆ.

ಉಗಮ ಅವರದು ಕವಿಸೂಕ್ಷ್ಮಗಳ ಹಾಗೂ ಪತ್ರಕರ್ತನ ಕಣ್ಣೋಟದ ಅಡಕ ಬರವಣಿಗೆ. ಯಾವುದನ್ನೂ ಅವರು ಲಂಬಿಸುವುದಿಲ್ಲ. ಹೆಚ್ಚು ವಿವರಗಳನ್ನೂ ನೀಡುವುದಿಲ್ಲ. ಆದರೆ, ಈ ಸಂಕಲನದ ಕಿರುಚಿತ್ರಗಳು ಹೇಳುವುದಕ್ಕಿಂತಲೂ ಮಿಗಿಲಾದ ಏನನ್ನೋ ಓದುಗರ ಗಮನಕ್ಕೆ ತರಲು ಹವಣಿಸುತ್ತಿರುವಂತಿವೆ. ಅದು ದೂಳು ಕುಳಿತ ಮೌಲ್ಯವಿರಬಹುದು, ಬಾಲ್ಯದ ಸವಿನೆನಪಿನ ನವಿಲುಗರಿ ಇರಬಹುದು, ಸ್ನೇಹಭಾವದ ಆರ್ದ್ರತೆ ಆಗಿರಬಹುದು, ಬದುಕಿನುದ್ದಕ್ಕೂ ಹಿಂಬಾಲಿಸಿಕೊಂಡು ಬಂದಿರುವ ಅನುಬಂಧದ ತಂತು ಇರಬಹುದು. ಇವೆಲ್ಲವೂ ಈ ಕೃತಿಯ ಬರಹಗಳಿಗೆ ಜೀವಸ್ಪರ್ಶ ನೀಡಿವೆ.

‘ಏಳು ಮನೆ ಸಾಲು’ ಎನ್ನುವ ಶೀರ್ಷಿಕೆ ಲೇಖಕರ ಊರುಮನೆಯೊಂದಿಗೆ ತಳಕು ಹಾಕಿಕೊಂಡಿರುವ ಒಂದು ಭಾವತಂತು. ಆದರೆ, ಈ ಏಳು ಎನ್ನುವುದು ಹಲವು ಪಟ್ಟಾಗಿ, ಲೇಖಕರ ಊರು–ಮನೆ ಓದುಗರದೂ ಆಗಿ ಪರಿಣಮಿಸುವುದು ಈ ಕೃತಿಯ ವಿಶೇಷ. ಪುಟ್ಟ ಪ್ರಬಂಧಗಳಂತೆಯೂ ಓದಿಸಿಕೊಳ್ಳುವ ಗುಣ ಇಲ್ಲಿನ ಮೂವತ್ತೆರಡು ಬರಹಗಳಿಗಿದೆ.

ಪುಟ: 116 ₹155

ರಾಸಾಯನಿಕಗಳ ಮಾಹಿತಿ



ಮನೆ ಬಳಕೆಯ ರಾಸಾಯನಿಕಗಳು
ಲೇ: ಗೋಪಾಲಪುರ ನಾಗೇಂದ್ರಪ್ಪ, ರೇಣುಕಾರಾಣಿ ನಾಗೇಂದ್ರಪ್ಪ
ಪ್ರ: ನವಕರ್ನಾಟಕ
ಸಂ: 080 22161900


ದೈನಂದಿನ ಜೀವನದಲ್ಲಿ ಬಳಸುವ ರಾಸಾಯನಿಕಗಳ ಬಗ್ಗೆ ಪುಸ್ತಕ ಬೆಳಕು ಚೆಲ್ಲುತ್ತದೆ. ನಾವು ದೈನಂದಿನ ಬಳಕೆಗಾಗಿ ಉಪಯೋಗಿಸುವ ಆಹಾರ ಶುಚಿಗೊಳಿಸುವ ಉತ್ಪನ್ನಗಳಲ್ಲಿ ಯಾವುದನ್ನು ಬಳಸಬೇಕು ಎಂಬುದು ಜಿಜ್ಞಾಸೆಯಾಗಿಯೇ ಉಳಿದಿರುವ ಇಂದಿನ ಕಾಲಘಟ್ಟದಲ್ಲಿ ಇಂತಹ ಮಾರ್ಗದರ್ಶಕ ಪುಸ್ತಕಗಳು ಸಹಕಾರಿಯಾಗುತ್ತವೆ. ಮುಖ್ಯವಾಗಿ ಆಹಾರ ಹಾಗೂ ಶೃಂಗಾರ ಸಾಧನಗಳಲ್ಲಿರುವ ಹಾನಿಕಾರಕ ರಾಸಾಯನಿಕ ನಮ್ಮ ಆರೋಗ್ಯಕ್ಕೂ ಮಾರಕವಾಗುತ್ತವೆ. ಈ ಹಿನ್ನೆಲೆಯಲ್ಲಿ ಪುಸ್ತಕ ರಾಸಾಯನಿಕಗಳ ಉಪಯುಕ್ತತೆ ಹಾಗೂ ಅವುಗಳ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ನಿವಾರಿಸಲು ಸಹಕಾರಿಯಾಗಿದೆ.

ಹಾಗೆ ನೋಡಿದರೆ ನಾವು ಬಳಸುವ ಸುಗಂಧ ದ್ರವ್ಯಗಳಲ್ಲೂ ರಾಸಾಯನಿಕಗಳಿರುತ್ತವೆ. ಯಾವ ವಸ್ತುವಿನಲ್ಲಿ ಎಷ್ಟರ ಪ್ರಮಾಣದಲ್ಲಿ ರಾಸಾಯನಿಕಗಳಿರುತ್ತವೆ ಎಂಬುದೂ ಇಲ್ಲಿ ತಿಳಿಸಲಾಗಿದೆ. ಇಲ್ಲಿರುವ ಮನೆಯಲ್ಲಿ ಪರಿಚಿತ ರಾಸಾಯನಿಕಗಳು, ಕಾರ್ಬೋಹೈಡ್ರೇಟ್, ಹಾಲು ಮೊಟ್ಟೆ ಮತ್ತು ಲವಣಗಳು, ಹಣ್ಣು ಮತ್ತು ಬೀಜಗಳಲ್ಲಿರುವ ರಾಸಾಯನಿಕಗಳು, ಮಸಾಲೆಗಳು ಮುಂತಾದ ಅಧ್ಯಾಯಗಳು ನಮಗೆ ವೈಜ್ಞಾನಿಕ ಹಾಗೂ ವಿಸ್ತಾರವಾದ ಮಾಹಿತಿ ಒದಗಿಸಲು ಸಹಕಾರಿಯಾಗಿದೆ. ಅಲ್ಲದೆ ರಾಸಾಯನಿಕಗಳ ಉಪಯೋಗ ಹಾಗೂ ಇದರ ವಿಜ್ಞಾನವನ್ನು ಸರಳವಾಗಿ ಪುಸ್ತಕದಲ್ಲಿ ವಿವರಿಸುವುದು ಈ ಹೊತ್ತಗೆಯ ಮೌಲ್ಯವನ್ನು ಹೆಚ್ಚಿಸಿದೆ ಎನ್ನಬಹುದು.

ಆಹಾರ ಬಗ್ಗೆ ಹೆಚ್ಚಿನ ಕಾಳಜಿ ಇರುವವರು ಹಾಗೂ ಮುತುವರ್ಜಿ ವಹಿಸುವವರಿಗೂ ನಮ್ಮ ಮನೆಗಳಲ್ಲಿ ಬಳಸುವ ಆಹಾರ ಪದಾರ್ಥಗಳೂ ಸೇರಿದಂತೆ ಎಲ್ಲ ವಸ್ತುಗಳಲ್ಲಿ ಇರುವ ರಾಸಾಯನಿಕಗಳ ಬಗ್ಗೆ ಅರಿವಿನ ಕೊರತೆ ಇರುತ್ತದೆ. ಬಳಸುವ ಬಗ್ಗೆ ಗೊಂದಲವೂ ಇರುತ್ತದೆ. ಅಲ್ಲದೆ ಎಲ್ಲ ರಾಸಾಯನಿಕಗಳು ಹಾನಿಕಾರಕ ಮತ್ತು ವಿಷಕಾರಿ ಎಂಬ ತಪ್ಪು ತಿಳಿವಳಿಕೆಗಳೂ ಇರುತ್ತವೆ. ಅಂತಹ ತಪ್ಪು ಅಭಿಪ್ರಾಯವನ್ನು ಹಾಗೂ ಗೊಂದಲವನ್ನು ನಿವಾರಿಸುವಲ್ಲಿ ಈ ಪುಸ್ತಕ ಸಫಲವಾಗಿದೆ. ಇಂದಿನ ಕಲುಷಿತ, ಕಲಬೆರಕೆ ವಾತಾವರಣದಲ್ಲಿ ಯಾವುದು ಬಳಸಬೇಕು ಯಾವುದು ಬಿಡಬೇಕು ಎಂಬ ಗೊಂದಲ ಕಾಡುತ್ತಿರುವಾಗ ಈ ಪುಸ್ತಕ ದಾರಿದೀಪದಂತಿದೆ.

ಪುಟ: 336 ₹395

ಬದುಕಿನ ಪರಿಧಿಯ ಅರಿವು



ಬೆಳಗಿನ ಮೌನ ನಿತ್ಯದ ಧ್ಯಾನ
ಲೇ: ಕಂ.ಕ. ಮೂರ್ತಿ
ಪ್ರ: ಸಾಹಿತ್ಯಲೋಕ
ಸಂ: 9945939436

‘ಬೆಳಗಿನ ಮೌನ ನಿತ್ಯದ ಧ್ಯಾನ’ ಇದು ಪತ್ರಕರ್ತ ಹಾಗೂ ಸಾಹಿತಿ ಕಂ.ಕ.ಮೂರ್ತಿ ಅವರ ಐದನೇ ಪುಸ್ತಕ.

ಈ ಸಂಕಲನದಲ್ಲಿರುವ ಎಲ್ಲ ಲೇಖನಗಳು ವಿಭಿನ್ನ ವಿಷಯಗಳಿಂದ ಕೂಡಿವೆ. ಅನುಭವ, ಕನಸು, ನೆನಪು, ಹಳಹಳಿಕೆ, ಭವಿಷ್ಯ, ವಾಸ್ತವ, ಜೀವನ, ಬದುಕು, ಪುರಾಣ, ಮನುಷ್ಯ, ಜಗತ್ತು, ಪ್ರಕೃತಿ, ಪ್ರೀತಿ... ಲೇಖನಗಳ ವಸ್ತುವಾಗಿವೆ.

ಲೇಖಕರು ಹೇಳಿರುವಂತೆ ಈ ಲೇಖನಗಳು ಅನುಭವ ಕಥನವಲ್ಲ. ಇದು ಮನುಷ್ಯನ ಬದುಕಿನ ಪರಿಧಿಯನ್ನು ಅರಿಯುವ, ಬದುಕಿನ ಅನಂತ ವಿಸ್ತಾರವನ್ನು ತಡವಿ ನೋಡುವ, ಅವರ ದುಃಖ, ದುಮ್ಮಾನಗಳು, ಭಾವನೆಯ ಸುಳಿಗಳಿಗೆ ಒಡಲ ಕಥೆಯ ನೂಲಿನಿಂದ ಸ್ಪರ್ಶ ನೀಡುವ ಪ್ರಯತ್ನ.

ಬೇಲಿ ದಾಟಿದ ಹೂವು, ನಂಬಿಕೆಯ ಎಳೆ ಲೇಖನಗಳು ಕಿರುಕಥೆಗಳ ಮಾದರಿಯಲ್ಲಿದ್ದು, ಅವುಗಳಲ್ಲಿ ಘಟನೆಯೊಂದನ್ನ ಹೇಳಿ ಅದನ್ನು ನಿರ್ಧರಿಸುವ ಹಕ್ಕನ್ನು ಲೇಖಕರು ಓದುಗರಿಗೇ ನೀಡಿದ್ದಾರೆ.

‘ಎರೆಹುಳ ಮಣ್ಣನ್ನು ಹದ ಮಾಡುವ ಹಾಗೆ ಅನುಭವಗಳು ಮನಸ್ಸನ್ನು ಹದ ಮಾಡುತ್ತವೆ..’, ‘ನಾವು ನಿತ್ಯ ಹೊಸ ಹೂವಿನಂತೆ ಅರಳುವುದು ಸಾಧ್ಯವಾದರೆ ಈ ಲೋಕ ನಮಗೆ ನಿತ್ಯವೂ ಬೆರಗು..’ ಇದೇ ರೀತಿಯ ಬೆರಗುಗೊಳಿಸುವ ಸಾಲುಗಳು ಇವರ ಬರಹಗಳಲ್ಲಿವೆ.


ಇಲ್ಲಿನ ಕೆಲವು ಲೇಖನಗಳು ಪ್ರಬಂಧದಂತೆ ಕಂಡರೆ, ಮತ್ತೆ ಕೆಲವು ಕಥೆಗಳಂತೆ ಭಾಸವಾಗುತ್ತವೆ. ಲೇಖಕನೊಳಗಿನ ಪತ್ರಕರ್ತನೂ ಕೆಲವು ಲೇಖನಗಳಲ್ಲಿ ಕಾಣಿಸುತ್ತಾನೆ. ಕೆಲವು ಲೇಖನಗಳು, ಹಿಂದಿನ ಲೇಖನದ ಮುಂದುವರಿದ ಭಾಗವಾದಂತೆ ಅನಿಸುತ್ತದೆ. ಲೇಖನಗಳ ಮಧ್ಯೆ ಮಧ್ಯೆ ತಮ್ಮದೇ ಪದ್ಯಗಳನ್ನು ಬಳಸಿಕೊಂಡು, ಅದನ್ನೇ ನಿರೂಪಣೆ ಮಾಡಿಕೊಂಡು ಹೋಗಿರುವುದು ಗಮನಸೆಳೆಯುತ್ತದೆ.

ಈ ಲೇಖನಗಳು ಮನುಷ್ಯ ಬದುಕಿಗೆ ಪ್ರೇರಣೆ ನೀಡುವುದರ ಜೊತೆಗೆ ಜಗತ್ತಿನ ವಿವಿಧ ಮಜಲುಗಳ ದರ್ಶನವನ್ನು ಮಾಡಿಸುತ್ತದೆ. ಸರಳ ನಿರೂಪಣೆ ಮತ್ತು ಭಾಷಾ ಶೈಲಿಯು ಈ ಲೇಖನಗಳನ್ನು ಓದಿಸಿಕೊಂಡು ಹೋಗುತ್ತದೆ.

ಪುಟ: 112 ₹160

ಎಲ್ಲೋರಾ: ಧರ್ಮ, ಶಿಲ್ಪಕಲೆಗಳ ಸಂಗಮ

ಎಲ್ಲೋರಾದಲ್ಲಿ 34 ಗುಹೆಗಳು ಇವೆ. ಈ ಪೈಕಿ ಹೆಚ್ಚಿನ ಪ್ರವಾಸಿಗರನ್ನು ಸೆಳೆಯುವುದು ವಿಶ್ವದ ಅತ್ಯಂತ ಶ್ರೇಷ್ಠ ಏಕಶಿಲಾ ನಿರ್ಮಾಣಗಳಲ್ಲಿ ಒಂದೆಂದು ಪರಿಗಣಿಸಲಾದ ಕೈಲಾಸನಾಥ ದೇವಾಲಯ. ಇವುಗಳ ಒಳಗೆ ಹೆಜ್ಜೆ ಹಾಕಿದ ಅನುಭವವನ್ನು ಮನಸ್ಸಿನ ಜೊತೆಗೆ ಕ್ಯಾಮೆರಾದೊಳಗೆ ಹಿಡಿದಿಟ್ಟು ಅದಕ್ಕೆ ಅಕ್ಷರ ರೂಪ ನೀಡಿ ಪ್ರಸ್ತುತಪಡಿಸಿದ್ದಾರೆ ಲೇಖಕರು.


ಚೈತ್ಯ ಮಂಟಪದ ಒಳನೋಟ

• ಚಿತ್ರ–ಬರಹ: ಕೆ.ಪಿ.ಸತ್ಯನಾರಾಯಣ

ಮಹಾರಾಷ್ಟ್ರದ ಚರಣಂದ್ರಿ ಬೆಟ್ಟಗಳ ಹೃದಯಭಾಗದಲ್ಲಿ, ಡೆಕ್ಕನ್ ಬಯಲಿನತ್ತ ಪಶ್ಚಿಮಮುಖವಾಗಿ ನಿಂತಿರುವ ಬೃಹತ್ ಶಿಲಾಸಮೂಹಗಳು ಸಾವಿರಾರು ವರ್ಷಗಳ ಇತಿಹಾಸವನ್ನು ಮೌನವಾಗಿ ನಿವೇದಿಸುತ್ತಿವೆ. ಆ ಮೌನದ ಒಳಗೆ ಕಾಲದ ಶಿಲ್ಪಗಳ ಉಸಿರಾಟ ಕೇಳಿಸಿಕೊಳ್ಳುವ ಸ್ಥಳವೇ ಎಲ್ಲೋರಾ ಗುಹೆಗಳು. ಇವು ಬಂಡೆಗಳನ್ನು ಹೊರಗಿನಿಂದ ಕಟ್ಟಿ ನಿರ್ಮಿಸಿದ ದೇವಾಲಯಗಳಲ್ಲ; ಬೆಟ್ಟವನ್ನೇ ಒಳಗಿನಿಂದ ಕೊರೆದು ಸೃಷ್ಟಿಸಿದ ದಿವ್ಯ ಲೋಕ. ಸುಮಾರು 350 ವರ್ಷಗಳ ಅವಧಿಯಲ್ಲಿ– ಕ್ರಿ.ಶ. 6ನೇ ಶತಮಾನದಿಂದ 10ನೇ ಶತಮಾನದವರೆಗೆ ಈ ಅದ್ಭುತ ಗುಹಾಲಯ ಸಂಕೀರ್ಣ ರೂಪುಗೊಂಡಿದೆ.

ಒಟ್ಟು 34 ಗುಹೆಗಳು ಇಲ್ಲಿವೆ. ಅವುಗಳಲ್ಲಿ 12 ಬೌದ್ಧ (ಕ್ರಿ.ಶ. 550–750), 17 ಹಿಂದೂ (ಕ್ರಿ.ಶ. 600–975) ಮತ್ತು 5 ಜೈನ (ಕ್ರಿ.ಶ. 800–1000) ಪರಂಪರೆಗೆ ಸೇರಿವೆ. ಈ ವೈವಿಧ್ಯವೇ ಎಲ್ಲೋರಾದ ವಿಶೇಷ. ಒಂದೇ ಬೆಟ್ಟದ ಒಳಗೆ ಮೂರು ಧರ್ಮಗಳ ಕಲಾತ್ಮಕ ಅಭಿವ್ಯಕ್ತಿ–ಸಹಬಾಳ್ವೆಯ ಶಿಲಾ ಸಾಕ್ಷ್ಯ.

ಏಕಶಿಲೆಯ ಅದ್ಭುತ

ಎಲ್ಲೋರಾದಲ್ಲಿ ಪ್ರವಾಸಿಗರು ಹೆಚ್ಚಾಗಿ ಹೆಜ್ಜೆಗಳನ್ನು ಹಾಕುವುದು ಸಂಖ್ಯೆ 16ರ ಗುಹೆಯತ್ತ. ಇದು ಶಿವನ ವಾಸಸ್ಥಾನವಾದ ಕೈಲಾಸವನ್ನು ಪ್ರತಿನಿಧಿಸುವ ದೇವಾಲಯ. ಜಗತ್ಪ್ರಸಿದ್ಧವಾದ ಕೈಲಾಸ ದೇವಾಲಯ ವಿಶ್ವದ ಅತ್ಯಂತ ಶ್ರೇಷ್ಠ ಏಕಶಿಲಾ ನಿರ್ಮಾಣಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ಮೇಲಿನಿಂದ ಕೆಳಗೆ ಕೊರೆದು ರೂಪಿಸಿದ ಈ ಮಹಾಕಾರ್ಯ ಶಿಲ್ಪಿಗಳ ತಾಳ್ಮೆ ಮತ್ತು ತಾಂತ್ರಿಕ ನಿಪುಣತೆಯ ಪರಾಕಾಷ್ಠೆ. ರಾಷ್ಟ್ರಕೂಟ ರಾಜರ ಆಶ್ರಯದಲ್ಲಿ ಏಳು ತಲೆಮಾರುಗಳ ಶಿಲ್ಪಿಗಳು ಈ ಕಾರ್ಯದಲ್ಲಿ ತೊಡಗಿಕೊಂಡರೆಂದು ಹೇಳಲಾಗುತ್ತದೆ.

ಇಲ್ಲಿನ ವಿಶೇಷವೆಂದರೆ; ಹೊರಗಿನಿಂದ ತರಲಾದ ಯಾವುದೇ ಶಿಲ್ಪವನ್ನು ತಂದು ಸ್ಥಾಪಿಸಿಲ್ಲ. ಬೆಟ್ಟದ ಬಂಡೆಯನ್ನೇ ಮೃದುವಾಗಿ, ಶ್ರದ್ಧೆಯಿಂದ ಕೆತ್ತಿ ದೇವ–ದೇವತೆಗಳ ಅನೇಕ ಮೂರ್ತಿಗಳನ್ನು ರೂಪಿಸಲಾಗಿದೆ. ಕಲ್ಲು ಇಲ್ಲಿ ಕೇವಲ ದ್ರವ್ಯವಲ್ಲ; ಅದು ಭಾವ, ಅದು ಭಕ್ತಿ, ಅದು ಶಿಲ್ಪಿಯ ಉಸಿರು.

ವಿಶ್ವಕರ್ಮನ ಚೈತ್ಯ ಮಂಟಪ

ಆದರೆ ಎಲ್ಲೋರಾದ ಆತ್ಮವನ್ನು ಅರಿಯಲು ಕೇವಲ ಕೈಲಾಸನಾಥ ದೇವಾಲಯ ಸಾಕಾಗುವುದಿಲ್ಲ. ಗುಹೆ ಸಂಖ್ಯೆ 10 ಬೌದ್ಧ ಧರ್ಮಕ್ಕೆ ಸೇರಿದ ಚೈತ್ಯ ಮಂಟಪ ಮತ್ತೊಂದು ಅನುಭವದ ಲೋಕಕ್ಕೆ ಕರೆದುಕೊಂಡು ಹೋಗುತ್ತದೆ. ದೇವ ಶಿಲ್ಪಿ ವಿಶ್ವಕರ್ಮನ ಹೆಸರಿನಿಂದ ಕರೆಯಲಾಗುವ ಈ ಏಕಶಿಲಾ ಗುಹಾಲಯದ ಮುಂಭಾಗ ಕಲಾತ್ಮಕ ಕೆತ್ತನೆಗಳಿಂದ ಅಲಂಕರಿಸಲಾಗಿದೆ.

ಕ್ರಿ.ಶ. 7ನೇ ಶತಮಾನದಲ್ಲಿ ನಿರ್ಮಿತವಾದ ಈ ಚೈತ್ಯಾಲಯದಲ್ಲಿ ಧರ್ಮಚಕ್ರ ಮುದ್ರೆಯಲ್ಲಿ ಉಪದೇಶಿಸುತ್ತಿರುವ 15 ಅಡಿ ಎತ್ತರದ ಬುದ್ಧನ ವಿಗ್ರಹವಿದೆ. ಮೇಲಿನ ಮಹಡಿಯಲ್ಲಿ 'ತಥಾಗತ'ನ ಉಲ್ಲೇಖವಿರುವ ಪಾಲಿ ಭಾಷೆಯ ಶಾಸನವೂ ಕಾಣಿಸುತ್ತದೆ. ಕುದುರೆಯ ಲಾಳದ ಆಕಾರದ ಕಿಟಕಿಯ ಮೂಲಕ ಒಳನುಗ್ಗುವ ಬೆಳಕು ನೇರವಾಗಿ ಬುದ್ಧನ ಮುಖದ ಮೇಲೆ ಬೀಳುತ್ತದೆ. ಆ ಮೃದುವಾದ ಅರೆಬೆಳಕಿನಲ್ಲಿ ಬುದ್ಧನ ಶಾಂತ ಮುಖಭಾವ ಮನಸ್ಸಿನೊಳಗಿನ ಗೊಂದಲವನ್ನೇ ಕರಗಿಸುವಂತೆ ಅನಿಸುತ್ತದೆ.

ಗುಹೆಯ ಒಳಗೆ 18 ಅಷ್ಟಭುಜಾಕೃತಿಯ ಕಂಬಗಳು. ಅವುಗಳ ಮೇಲೆ ಎರಡು ಹಂತಗಳಲ್ಲಿ ಕೆತ್ತಿದ ವಿವಿಧ ಮೂರ್ತಿಗಳು ಕಣ್ಣಿಗೆ ಹಬ್ಬ. ಮರದ ತುಂಡುಗಳನ್ನು ಜೋಡಿಸಿ ಮಾಡಿರುವಂತೆ ಕಾಣುವ ಚಾವಣಿಯ ವಿನ್ಯಾಸವು ಕಲ್ಲಿನಲ್ಲೇ ಮೂಡಿರುವ ಶಿಲ್ಪಕೌಶಲ್ಯಕ್ಕೆ ಸಾಕ್ಷಿ. ಒಳಗೆ ಮಾತನಾಡಿದರೆ ಅದು ಅನುರಣಿತವಾಗಿ ಹಲವು ಬಾರಿ ಮರಳಿ ಬರುತ್ತದೆ. 'ಓಂ' ಎಂಬ ಮಂತ್ರೋಚ್ಚಾರಣೆ ಇಲ್ಲಿ ಅಲೌಕಿಕ ಅನುಭೂತಿ ನೀಡುತ್ತದೆ.


ಇಂತಹ ಗುಹೆಗಳು ಇಲ್ಲಿ ಹತ್ತಾರಿವೆ...

ಒಂದು ದಿನ ಸಾಲುವುದಿಲ್ಲ

ಎಲ್ಲಾ 34 ಗುಹೆಗಳನ್ನೂ ವಿವರವಾಗಿ ವೀಕ್ಷಿಸಲು ಒಂದು ದಿನ ಸಾಲದು. ಆದರೆ ಗುಹೆ ಸಂಖ್ಯೆ 5, 10, 15, 16, 21, 29 ಮತ್ತು 32 ಪ್ರಮುಖ ಗಮನಾರ್ಹ ಗುಹೆಗಳಾಗಿವೆ. ಇತಿಹಾಸ, ಧರ್ಮ ಮತ್ತು ಶಿಲ್ಪಕಲೆಯ ಮೇಳೈಸಿದ ಈ ಮಹಾಕಾವ್ಯವನ್ನು ಅರಿಯಲು ಹೆಚ್ಚು ಸಮಯಬೇಕಾಗುತ್ತದೆ.

ಪ್ರವಾಸ

ಎಲ್ಲೋರಾ ಕೇವಲ ಪುರಾತತ್ವ ತಾಣವಲ್ಲ; ಇದು ಜೀವಂತ ಭಕ್ತಿಯ ಕೇಂದ್ರವೂ ಹೌದು. ಭಾರತದ 12 ಜ್ಯೋತಿರ್ಲಿಂಗಗಳಲ್ಲಿ ಒಂದಾದ ಗ್ರೀಶ್ನೇಶ್ವರ ದೇವಾಲಯ ಇಲ್ಲಿಯೇ ನೆಲೆಗೊಂಡಿದೆ. ಮಹಾರಾಷ್ಟ್ರದ ಐದು ಜ್ಯೋತಿರ್ಲಿಂಗಗಳಲ್ಲಿ ಒಂದಾಗಿರುವ ಈ ಕ್ಷೇತ್ರ ಅನೇಕ ಶತಮಾನಗಳಿಂದ ಯಾತ್ರಾರ್ಥಿಗಳನ್ನು ಆಕರ್ಷಿಸುತ್ತಿದೆ. ಹಿಂದಿನ ದಿನಗಳಲ್ಲಿ ಕೆಲವು ಗುಹೆಗಳಲ್ಲಿ ಯೋಗಿಗಳು ತಪಸ್ಸು ಮಾಡುತ್ತಿದ್ದರೆಂದು ಸ್ಥಳೀಯ ಕತೆಗಳು ಹೇಳುತ್ತವೆ.

ಮಹಾರಾಷ್ಟ್ರದ ಔರಂಗಾಬಾದ್ ನಗರದಿಂದ ಸುಮಾರು 30 ಕಿಲೋಮೀಟರ್ ದೂರದಲ್ಲಿರುವ ಎಲ್ಲೋರಾ, ಪ್ರವಾಸಿಗರಿಗೆ ಕೇವಲ ವೀಕ್ಷಣೆಯ ಅನುಭವವನ್ನಲ್ಲ, ಒಳನೋಟದ ಪ್ರಯಾಣವನ್ನೂ ನೀಡುತ್ತದೆ. ಕೈಲಾಸನಾಥ ದೇವಾಲಯದ ವೈಭವಕ್ಕೆ ಮಾರುಹೋಗುವುದು ಸಹಜ. ಆದರೆ ಹತ್ತನೇ ಗುಹೆಯ ಚೈತ್ಯ ಮಂಟಪದಲ್ಲಿ ಕ್ಷಣಕಾಲ ಮೌನವಾಗಿ ನಿಂತು ಬುದ್ಧನ ಮುಖದ ಶಾಂತಿಯನ್ನು ನೋಡುವಾಗ ಮಾತ್ರ ಎಲ್ಲೋರಾದ ಆತ್ಮವನ್ನು ಸ್ಪರ್ಶಿಸಿದ ಅನುಭವ ಆಗುತ್ತದೆ.

ಕಲ್ಲಿನಲ್ಲಿ ಕೆತ್ತಿದ ದೇವಾಲಯಗಳಿಗಿಂತ ಹೆಚ್ಚಾಗಿ, ಇದು ಕಾಲದ ಧ್ಯಾನಸ್ಥಿತಿ. ಎಲ್ಲೋರಾ–ಇತಿಹಾಸವನ್ನು ನೋಡಲು ಮಾತ್ರವಲ್ಲ, ಅನುಭವಿಸಲು ಹೋಗಬೇಕಾದ ಸ್ಥಳ. ಇದನ್ನು 1983ರಲ್ಲಿ ಯುನೆಸ್ಕೋ ವಿಶ್ವ ಪರಂಪರೆ ತಾಣ ಎಂದು ಘೋಷಿಸಿದೆ.



ಹಳ್ಳಿ ಹುಡುಗನ ಸೋಡಾ ಉದ್ಯಮ

10ನೇ ಪುಟದಿಂದ...

ಅನುಮಾನಗಳ ಮಧ್ಯೆ ಆರಂಭ

ಆದರೆ, ಈ ಸಾಹಸವನ್ನು ಊರಿನ ಕೆಲ ಹಿರಿಯರು ಅನುಮಾನದಿಂದಲೇ ನೋಡಿದರು. ಇದಕ್ಕೆ ಕಾರಣವಿಷ್ಟೆ. ಮಾರುಕಟ್ಟೆಯಲ್ಲಿ ಈಗಾಗಲೇ ಬಹುರಾಷ್ಟ್ರೀಯ ಕಂಪನಿಗಳ ತಂಪುಪಾನೀಯಗಳು ಸಾಮ್ರಾಜ್ಯ ಸ್ಥಾಪಿಸಿವೆ. ಇದೇ ಊರಿನಲ್ಲಿದ್ದ ಗೋಲಿ ಸೋಡಾ ಉದ್ಯಮ ಮೂರು ದಶಕಗಳ ಹಿಂದೆಯೇ ಬಂದ್ ಆಗಿತ್ತು. ಪರಿಸ್ಥಿತಿ ಹೀಗಿರುವಾಗ 'ಈ ಹುಡುಗನ ಪಾನೀಯ ಮಾರಾಟವಾಗುತ್ತದೆಯೇ' ಎಂಬ ಪ್ರಶ್ನೆ ಎಲ್ಲರಲ್ಲೂ ಮೂಡಿತ್ತು. ಆದರೆ ಅನುಮಾನಗಳಿಗಿಂತ ಶ್ರಮ ದೊಡ್ಡದಾಯಿತು. ಶಿಶಿಲದಲ್ಲಿ ಗೋಲಿ ಸೋಡಾ ಮರುಹುಟ್ಟು ಪಡೆಯಿತು.

ಮುಡುಗೇರಿಯ ಘಟ್ಟದಲ್ಲಿ ಹುಟ್ಟಿ ದಕ್ಷಿಣ ಕನ್ನಡದಲ್ಲಿ ಹರಿಯುವ ಕಪಿಲಾ ಹೊಳೆಯ ಸುತ್ತಲಿನ ಶಿಶಿಲ, ಅರಿಸಿನಮಕ್ಕಿ, ಸೌತಡ್ಕ, ಕೊಕ್ಕಡ ಗ್ರಾಮಗಳ ಚಿಲ್ಲರೆ ಅಂಗಡಿಯವರು ಬಾಲಕೃಷ್ಣನಿಗೆ ಬೆಂಬಲ ನೀಡಿದರು. ಸ್ಥಳೀಯರ ಸಹಕಾರವೇ ಈ ಉದ್ಯಮಕ್ಕೆ ಬಲವಾಯಿತು.

ಇದೇ ಊರಿನಲ್ಲಿ ಹಲವು ವರ್ಷಗಳ ಹಿಂದೆ ಗೋಲಿ ಸೋಡಾವನ್ನು ತಯಾರಿಸುತ್ತಿದ್ದ ಉದ್ದಿಮೆದಾರರೊಬ್ಬರು ತಮ್ಮಲ್ಲಿದ್ದ ಬಾಟಲಿಗಳನ್ನು ಬಾಲಕೃಷ್ಣನಿಗೆ ನೀಡಿದರು. ಅವೆಲ್ಲವೂ ಸೇರಿ ಈಗ ಅವರ ಬಳಿ ಸುಮಾರು ಎರಡೂವರೆ ಸಾವಿರ ಬಾಟಲಿಗಳಿವೆ. ಮೂರು ಬಗೆಯ ಸ್ವಾದಗಳಲ್ಲಿ ಗೋಲಿ ಸೋಡಾ ತಯಾರಿಸಲಾಗುತ್ತಿದೆ. ಬೇಡಿಕೆ ಹೆಚ್ಚಾಗಿದ್ದು ಬಾಟಲಿಗಳ ಕೊರತೆ ಉಂಟಾಗಿದೆ. ಇನ್ನೂ ಸಾವಿರ ಬಾಟಲಿಗಳನ್ನು ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶಗಳಿಂದ ಖರೀದಿಸುವ ಯೋಜನೆಯೂ ಅವರಿಗಿದೆ. ಪಾನೀಯ ತಯಾರಿ, ತುಂಬಿಸುವುದು, ಅಂಗಡಿಗಳಿಗೆ ಪೂರೈಕೆ–ಈ ಎಲ್ಲ ಕೆಲಸಗಳಿಗೆ ನಾಲ್ಕಾರು ಸ್ಥಳೀಯ ಕಾರ್ಮಿಕರು ಕೈಜೋಡಿಸಿದ್ದಾರೆ. ಸಣ್ಣ ಪ್ರಯತ್ನ ಇದೀಗ ಸ್ಥಿರ ಉದ್ಯಮದ ರೂಪ ಪಡೆಯುತ್ತಿದೆ.

ಹಳ್ಳಿಯ ಆತ್ಮವಿಶ್ವಾಸದ ಬುಗ್ಗೆ

ಬಾಲಕೃಷ್ಣ ಅವರನ್ನು ಭೇಟಿಯಾದ ನಂತರ ಶಿಶಿಲದ ಹಿರಿಯರೊಬ್ಬರ ಮಾತು ಮನಸ್ಸಿಗೆ ತಟ್ಟಿತು: 'ಮಾರುಕಟ್ಟೆಯಲ್ಲಿನ ಬಹುರಾಷ್ಟ್ರೀಯ ಕಂಪನಿಗಳ ಭರಾಟೆಗೆ ತುಸು ತಡೆ ಹಾಕಲು ಎಲ್ಲ ಕಡೆಯೂ ನಮ್ಮೂರಿನ ಬಾಲಕೃಷ್ಣರಂತವರು ಹುಟ್ಟಿಕೊಳ್ಳಬೇಕು'–ಗೋಲಿ ಸೋಡಾ ದಾಹ ನೀಗಿಸಿದರೆ, ಈ ಮಾತು ಮನಸ್ಸಿಗೆ ತಂಪು ನೀಡಿತು.

ಗೋಲಿ ಸೋಡಾ ಕೇವಲ ತಂಪುಪಾನೀಯವಲ್ಲ. ಅದು ಹಳ್ಳಿಯ ಆತ್ಮವಿಶ್ವಾಸದ ಬುಗ್ಗೆ. ಶಿಶಿಲದ ಇತಿಹಾಸದ ಪುಟಗಳಲ್ಲಿ ಮಸುಕಾಗಿದ್ದ ಒಂದು ಸಿಹಿ ನೆನಪು ಮತ್ತೆ ಜೀವಂತವಾಗಿದೆ. ಬಹುರಾಷ್ಟ್ರೀಯ ಬ್ರ್ಯಾಂಡ್‌ಗಳ ನಡುವೆ, 'ಹಳ್ಳಿ ಹುಡುಗ'ನ ಕನಸು ಮೈಕೊಡವಿ ಎದ್ದು ನಿಂತಿದೆ.


ಗೋಲಿ ಸೋಡಾ ತುಂಬಿಸುವ ಯಂತ್ರ

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಗಣಿತದಲ್ಲಿ ಗರ್ದಿ ಗಮ್ಮತ್ತು

6ರ ಆರ್ಭಟ

ಇಲ್ಲಿರುವ ಸಂಖ್ಯಾ ಸರಣಿಯ ಪ್ರತಿ ಮೂರು ಸಂಖ್ಯೆಗಳನ್ನು ಕೂಡಿಸಿ, ಬರುವ ಮೊತ್ತವನ್ನು ಮತ್ತೆ ಕೂಡಿಸುತ್ತಾ ಹೋದರೆ ಕೊನೆಗೆ ಎಲ್ಲಾ ಸಂಖ್ಯೆಗಳ ಏಕಾಂಕ ಒಂದೇಯಾಗಿರುತ್ತದೆ.

1+2+3=6=0+6 = 6
4+5+6=15=1+5 = 6
7+8+9=24=2+6 = 6
10+11+12=33=3+3 = 6
13+14+15=42=4+2 = 6
16+17+18=51=5+1 = 6
19+20+21=60=6+0 = 6

ಹೀಗೆ ಮುಂದುವರಿಯಿರಿ....


ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಡಣ್ಣ ಚಿಕ್ಕ ಕ್ಷಿಪ್ರ ಕಥೆಯ

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಭಿಕ್ಷುಕನ ನಟನೆ

ತನಗೆ ಕಾಲಿಲ್ಲ ಭಿಕ್ಷೆ ನೀಡಿ ಎನ್ನುತ್ತಾ ರಸ್ತೆಯಲ್ಲಿ ಭಿಕ್ಷುಕನೊಬ್ಬ ಬೇಡುತ್ತಿದ್ದ. ನಾಲ್ಕು ಚಕ್ರವಿದ್ದ ಸಣ್ಣ ಮರದ ಹಲಗೆಯ ಮೇಲೆ ಕುಳಿತು ಅದನ್ನು ಕೈಯಲ್ಲಿ ತಳ್ಳುತ್ತಾ ಸಾಗುತ್ತಿದ್ದ. ಅಷ್ಟರಲ್ಲೇ ನಾಯಿಯೊಂದು ಆತನನ್ನು ಬೆನ್ನಟ್ಟಿತು. ಅದನ್ನು ಕಂಡ ಆತ ಕಾಪಾಡಿ ಎನ್ನುತ್ತಾ ಅಲ್ಲಿಂದ ಓಡತೊಡಗಿದ. ಆತ ಓಡುತ್ತಿರುವುದನ್ನು ಅಕ್ಕಪಕ್ಕದವರು ಕಣ್ಣು ಬಾಯಿ ಬಿಟ್ಟು ನೋಡಿದರು!



ಜಾಣಪದ ಅಕ್ಷರ ಆಟ

ಇಲ್ಲಿ ಕೊಟ್ಟಿರುವ ಒಂದಕ್ಷರಕ್ಕೆ ಒಂದೇ ಬಳ್ಳಿಯ ಕ್ರಮವಾದ ಎರಡಕ್ಷರ ತುಂಬಿ ಅರ್ಥಬದ್ಧ ಪದ ಮಾಡಿ.

1	ಮು		
2	ದ		
3	ಪ		
4	ಬ		
5	ಬಿ		
6	ಉಂ		
7	ಸೇ		
8	ರಾ		
9	ಪೊ		
10	ಕೈ		

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ರಜ	+	ಮಾನ	+	ತು	=	
2	ಜನ	+	ಪಾಶ	+	ದೇ	=	
3	ನಟ	+	ಇಲಿ	+	ಜ	=	
4	ಮಾನು	+	ಮೀರು	+	ಜ	=	
5	ಕುರ	+	ಲವ	+	ಗೌ	=	

ಸರಿ ಉತ್ತರ ಮುಂದಿನ ವಾರ..


ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...


ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು


ನಿಶಾಂತ್ ಭಾರದ್ವಾಜ್
ಚಿಕ್ಕಮಗಳೂರು


ಲೇಖನ ಡಿ.ವಿ.
ಬೆಂಗಳೂರು


ನಚಿಕೇತನ ಜಗದೀಶ ಬಳೆಗಾರ, ಧಾರವಾಡ


ಅರವಿಂದ್ ಎಂ.ಆರ್.
ಬೆಂಗಳೂರು


ಧೃತಿ ಎಂ.
ಮಂಡ್ಯ


ಪ್ರತಿಜ್ಞಾ ರುದ್ರಾಪೂರ
ಬೈಲಹೊಂಗಲ

ಶಬ್ದಾಟ

ಇಲ್ಲಿರುವ ಪದದ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಬೇರೊಂದು ಪದ ಮಾಡಿ.

ರಾಧಿಕಾ ಉತ್ತರ = ________________



ಪದ ಹುಡುಕಾಟ

ಇಲ್ಲಿರುವ ಪದಗಳಿಂದ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಸತಿ ಸಹಗಮನ ಬಾಲ್ಯ ವಿವಾಹಗಳಂಥ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡಿದ್ದ ಓರ್ವ ಸಮಾಜ ಸುಧಾರಕನ ಹೆಸರನ್ನು ಹುಡುಕಿ.

1.ಕರಾವಳಿ ಪ್ರದೇಶ
2.ಜಾಗತಿಕ ಸಮಸ್ಯೆ
3.ಸರಾಗವಾಗಿ ಹೇಳು
4.ಮನೆ ಮಾತಾಗಿರುವ
5.ಸಮೋಪಾಯ ಮಾಡು
6.ಹಸಿಬಿಸಿ ಆಹಾರ
7.ಜನರಿಗಾಗಿ ಸೇವೆ
8.ರಾಮನವಮಿ
9.ಕಾಯಕವೇ ಕೈಲಾಸ

ಉತ್ತರ = ________________

2. ಇಲ್ಲಿ ಕೊಟ್ಟಿರುವ 'ಚಿತ್ರ' ಎಂಬ ಪದಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಅರ್ಥಬದ್ಧ ಪದ ರಚಿಸಿ.

1	ಚಿ	ತ್ರ		
2	ಚಿ	ತ್ರ		
3	ಚಿ	ತ್ರ		
4	ಚಿ	ತ್ರ		
5	ಚಿ	ತ್ರ		

ಅಕ್ಷರ ಪಟ್ಟಿ

ಗೀ	ಪ್ತ	ತೆ	ಗು	ಪ
ಟ	ಹಿಂ	ನು	ಸೆ	ಭಾ



ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಸಾವಿರದಿನ 2.ಕಾಡಿಗೆಹೋಗು 3.ಸಮರಸಾರು 4.ಜೀವನಕ್ರಮ 5.ಕಾವಲುಪಡೆ

ಶಬ್ದಾಟ: ಸರ್ವಜ್ಞನಹಿತ

ವರ್ಡ್‌ಗೇಮ್: ASHWINI

ಬ್ರೇನ್‌ವೀಟಾ ಆಟ: 1 + 3 + 5 + 7 + 9 + 11 + 13 + 15 + 17 + 19 = 100

ಜಾಣಪದ ಆಟ: 1.ಪರಿಕರ 2.ಕನಿಕರ 3.ಕಷ್ಟಕರ 4.ಭಯಂಕರ 5.ಸುಧಾಕರ 6.ಸುಖಕರ 7.ಲಾಭಕರ 8.ಹಾನಿಕರ 9.ದುಃಖಕರ 10.ಶುಭಕರ

ಮೋಜಿನ ಇಂಗ್ಲಿಷ್: 1.FOCUS 2.VIRUS 3.MEDAL 4.MODEL 5.BEGIN 6.DEVIL 7.CAMEL 8.LEVEL 9.FINAL 10.SOLAR

ಗಾದೆ ಗುರ್ತಿಸು: ಬಾಯಿ ಬಂಗಾರ ಕೈ ಹಿತ್ತಾಳೆ

ವಿಂಡೀಸ್ ಮಣಿಸಿದರೆ ಭಾರತ ಸೆಮಿಗೆ

ಅಭಿಷೇಕ್, ತಿಲಕ್ ಮೇಲೆ ಭರವಸೆ ಲಯಕ್ಕೆ ಮರಳುವರೇ ವರುಣ್ ಚಕ್ರವರ್ತಿ?

ಕೋಲ್ಕತ್ತ (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡವು ಟಿ20 ವಿಶ್ವಕಪ್ ಟೂರ್ನಿ ಸೆಮಿಫೈನಲ್ ತಲುಪಲು ಇನ್ನೊಂದು ಕಠಿಣ ಸವಾಲನ್ನು ಮೀರಿ ನಿಲ್ಲುವ ಒತ್ತಡದಲ್ಲಿದೆ. ಭಾನುವಾರ ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ವೆಸ್ಟ್ ಇಂಡೀಸ್ ತಂಡದ ಎದುರು ಜಯಿಸಲೇಬೇಕಿದೆ.

ಸೂಪರ್ 8ರ ಒಂದನೇ ಗುಂಪಿನಲ್ಲಿ ದಕ್ಷಿಣ ಆಫ್ರಿಕಾ ತಂಡವು ಈಗಾಗಲೇ 4 ಅಂಕಗಳೊಂದಿಗೆ ನಾಲ್ಕರ ಘಟ್ಟ ಪ್ರವೇಶಿಸಿದೆ. ಜಿಂಬಾಬ್ವೆ ಎರಡು ಪಂದ್ಯಗಳನ್ನು ಸೋತು ಹೊರಬಿದ್ದಿದೆ. ಈ ಗುಂಪಿನಲ್ಲಿ ಈಗ ಉಳಿದಿರುವ ಏಕೈಕ ಪಂದ್ಯದಲ್ಲಿ ಭಾರತ ಮತ್ತು ವಿಂಡೀಸ್ ಹಣಾಹಣಿ ನಡೆಸಲಿವೆ. ಉಭಯ ತಂಡಗಳೂ ತಲಾ ಎರಡು ಅಂಕ ಗಳಿಸಿವೆ. ಆದರೆ ವಿಂಡೀಸ್ ನೆಟ್ ರನ್ ರೇಟ್ ಭಾರತಕ್ಕಿಂತ ಹೆಚ್ಚು ಇದೆ. ಎರಡನೇ ಸ್ಥಾನದಲ್ಲಿದೆ.

ಈ ಪಂದ್ಯದಲ್ಲಿ ಗೆಲ್ಲುವ ತಂಡವು ಮಾರ್ಚ್ 5ರಂದು ಮುಂಬೈನಲ್ಲಿ ನಡೆಯುವ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಆಡಲಿದೆ.

ಈ ಹಂತದ ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಎದುರು ಭಾರತ ತಂಡವು ಸೋತಿತ್ತು. ಎರಡನೇಯ ಹಣಾಹಣಿಯಲ್ಲಿ ಜಿಂಬಾಬ್ವೆ ಎದುರು ಭಾರತದ ಬ್ಯಾಟರ್‌ಗಳು ರನ್‌ಹರಿಸಿದ್ದರು. ಈ ಹಿಂದಿನ ಪಂದ್ಯಗಳಲ್ಲಿ ವೈಫಲ್ಯ ಅನುಭವಿಸಿದ್ದವರು ಲಯಕ್ಕೆ ಮರಳಿದ್ದರು. ಸಂಜು ಸ್ಯಾಮ್ಸನ್ 24 ರನ್ ಗಳಿಸಿದರೂ

ಇಂದಿನ ಪಂದ್ಯ

ಜಿಂಬಾಬ್ವೆ	V/s	ದಕ್ಷಿಣ ಆಫ್ರಿಕಾ
ತಾಣ: ದೆಹಲಿ, ಆರಂಭ: ಮಧ್ಯಾಹ್ನ 3		
ಭಾರತ	V/s	ವೆಸ್ಟ್ ಇಂಡೀಸ್
ತಾಣ: ಕೋಲ್ಕತ್ತ, ಆರಂಭ: ರಾತ್ರಿ 7		

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊಹಾಟ್‌ಸ್ಟಾರ್

ಅಭಿಷೇಕ್ ಶರ್ಮಾ ಜೊತೆಗೆ ಉತ್ತಮ ಆರಂಭ ನೀಡಿದರು. ಅಭಿಷೇಕ್ ಅರ್ಧಶತಕ ಗಳಿಸಿದ್ದು ಭಾರತ ತಂಡದಲ್ಲಿ ಹೊಸ ಹುಮ್ಮಸ್ಸು ಮೂಡಿಸಿದೆ. ಟೂರ್ನಿಯುದ್ದಕ್ಕೂ ಅವರ ಬ್ಯಾಟ್‌ನಿಂದ ಹೆಚ್ಚು ರನ್‌ಗಳು ಹರಿದಿರಲಿಲ್ಲ. ತಿಲಕ್ ವರ್ಮಾ 6ನೇ ಕ್ರಮಾಂಕದಲ್ಲಿ ಬಂದು ಉಪಯುಕ್ತ ಕಾಣಿಕೆ ನೀಡಿದರು. ಇದರಿಂದಾಗಿ ತಂಡವು 4 ವಿಕೆಟ್‌ಗಳಿಗೆ 256 ರನ್ ಗಳಿಸಿತ್ತು. ಸೂರ್ಯ ಮತ್ತು ಹಾರ್ದಿಕ್ ಪಾಂಡ್ಯ ಅವರ ಆಟವೂ ರಂಗೇರಿತ್ತು. ಹಾರ್ದಿಕ್ ಬೌಲಿಂಗ್‌ನಲ್ಲಿಯೂ ಮಿಂಚಿದ್ದರು.

ಅರ್ಷದೀಪ್ ಸಿಂಗ್ ಅವರು ಜಸ್‌ಪ್ರೀತ್ ಬೂಮ್ರಾ ಅವರೊಂದಿಗೆ ವೇಗದ ವಿಭಾಗದ ಶಕ್ತಿಯಾಗಿದ್ದಾರೆ. ಆದರೆ ಸ್ಪಿನ್ನರ್ ವರುಣ್ ಚಕ್ರವರ್ತಿ ಅವರ ಬೌಲಿಂಗ್ ಬಗ್ಗೆಯೇ ತಂಡಕ್ಕೆ ಹೆಚ್ಚಿನ ಚಿಂತೆ ಇದೆ.

ಅವರು ತಮ್ಮ ಎಸೆತಗಳ ಲೆಂಗ್ತ್ ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗುತ್ತಿಲ್ಲ. ದುಬಾರಿಯೂ ಆಗುತ್ತಿದ್ದಾರೆ. ದಕ್ಷಿಣ ಅಫ್ರಿಕಾ ಎದುರಿನ ಪಂದ್ಯದಲ್ಲಿ ಅವರು ನಾಲ್ಕು ಓವರ್‌ಗಳಲ್ಲಿ 47 ರನ್ ಕೊಟ್ಟಿದ್ದರು. ಇನ್ನೊಂದೆಡೆ ಶಿವಂ ದುಬೆ ಅವರು ಜಿಂಬಾಬ್ವೆ ವಿರುದ್ಧದ ಪಂದ್ಯದಲ್ಲಿ 46 ರನ್ ಕೊಟ್ಟರು. ಅದರಲ್ಲಿ ನಾಲ್ಕು ವೈಡ್ ಮತ್ತು ಎರಡು ನೋಬಾಲ್‌ಗಳಿದ್ದವು.

ದೊಡ್ಡ ಹೊಡೆತಗಳ ದೈತ್ಯರು ಇರುವ ವಿಂಡೀಸ್ ಎದುರು ಬಿಗಿ ದಾಳಿ ಮಾಡದಿದ್ದರೆ ಪೆಟ್ಟು ತಿನ್ನುವುದು ಖಚಿತ. ಆಲ್‌ರೌಂಡರ್ ಜೇಸನ್ ಹೋಲ್ಡರ್ ಹಾಗೂ ರೊಮೆರಿಯೊ ಶೆಫರ್ಡ್ ಅವರು ಉತ್ತಮ ಲಯದಲ್ಲಿದ್ದಾರೆ. ಆದರೆ ಅಗ್ರಕ್ರಮಾಂಕದ ಬ್ಯಾಟರ್‌ಗಳು ವಿಫಲರಾಗಿದ್ದು ದಕ್ಷಿಣ ಆಫ್ರಿಕಾ ಎದುರು ತಂಡದ ಸೋಲಿಗೆ ಕಾರಣವಾಗಿತ್ತು.

ಶಮರ್ ಜೋಸೆಫ್, ಗುಡಕೇಶ್ ಮೋತಿ, ರೊಮೆರಿಯೊ ಶೆಫರ್ಡ್ ಮತ್ತು ಮ್ಯಾಥ್ಯೂ ಫೋರ್ಡ್ ಅವರ ದಾಳಿಯನ್ನು ಎದುರಿಸಿ ನಿಲ್ಲುವ ಸವಾಲು ಆತಿಥೇಯ ಬ್ಯಾಟರ್‌ಗಳ ಮುಂದಿದೆ.

ಒಂದೊಮ್ಮೆ ಮಳೆ ಬಂದು ಪಂದ್ಯ ರದ್ದಾದರೆ, ಉಭಯ ತಂಡಗಳಿಗೆ ತಲಾ ಒಂದು ಅಂಕ ಹಂಚಲಾಗುತ್ತದೆ. ಆದರೆ ರನ್‌ರೇಟ್‌ನಲ್ಲಿ ವಿಂಡೀಸ್ ಮುಂದಿರುವುದರಿಂದ ಭಾರತ ಹೊರಬೀಳುವ ಸಾಧ್ಯತೆ ಇದೆ.





ಭಾರತ ತಂಡದ ತಿಲಕ್ ವರ್ಮಾ (ಎಡ) ಹಾಗೂ ಅಭಿಷೇಕ್ ಶರ್ಮಾ ಶನಿವಾರ ಅಭ್ಯಾಸ ನಡೆಸಿದರು — ಪಿಟಿಐ ಚಿತ್ರಗಳು

ತಂಡಗಳ ಬಲಾಬಲ (ಟಿ20)

ಒಟ್ಟು ಪಂದ್ಯ	30
ಭಾರತ ಗೆಲುವು	19
ವೆಸ್ಟ್ ಇಂಡೀಸ್ ಗೆಲುವು	10
ಫಲಿತಾಂಶವಿಲ್ಲ	1

‘ಸೂಪರ್ 8’ ಹಂತದ ಅಂಕಪಟ್ಟಿ (ಒಂದನೇ ಗುಂಪು)

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ದಕ್ಷಿಣ ಆಫ್ರಿಕಾ	2	2	0	0	4	2.890
ವೆಸ್ಟ್ ಇಂಡೀಸ್	2	1	1	0	2	1.791
ಭಾರತ	2	1	1	0	2	-0.100
ಜಿಂಬಾಬ್ವೆ	2	0	2	0	0	-4.475



ರೊಮೆರಿಯೊ ಶೆಫರ್ಡ್

ಟಿ20 ವಿಶ್ವಕಪ್‌ನಲ್ಲಿ ಉಭಯ ತಂಡಗಳ ಸಾಧನೆ

ವರ್ಷ	ತಾಣ	ಫಲಿತಾಂಶ
2009	ಲಾರ್ಡ್ಸ್	ವೆಸ್ಟ್ ಇಂಡೀಸ್‌ಗೆ 7 ವಿಕೆಟ್ ಗೆಲುವು
2010	ಬ್ರಿಡ್ಜ್‌ಟೌನ್	ವೆಸ್ಟ್ ಇಂಡೀಸ್‌ಗೆ 14 ರನ್ ಜಯ
2014	ಮೀರ್‌ಪುರ	ಭಾರತಕ್ಕೆ 7 ವಿಕೆಟ್ ಗೆಲುವು
2016	ಮುಂಬೈ	ವೆಸ್ಟ್ ಇಂಡೀಸ್‌ಗೆ 7 ವಿಕೆಟ್ ಜಯ

ಲಂಕಾ ವೀರೋಚಿತ ಹೋರಾಟ: ನ್ಯೂಜಿಲೆಂಡ್ ಸೆಮಿಗೆ

ಗೆದ್ದರೂ ನಾಕೌಟ್‌ಗೇರದ ಪಾಕ್

ಪಲ್ಲೆಕೆಲೆ (ಪಿಟಿಐ): ಆರಂಭ ಆಟಗಾರರಾದ ಸಾಹಿಬ್‌ಝಾದಾ ಫರ್ಹಾನ್ (100) ಮತ್ತು ಫಖರ್ ಜಮಾನ್ (84) ಅವರ ದಾಖಲೆಯ ಜೊತೆಯಾಟದ ನೆರವಿನಿಂದ ಪಾಕಿಸ್ತಾನ ತಂಡವು ಶನಿವಾರ ಟಿ20 ವಿಶ್ವಕಪ್‌ನ ಸೂಪರ್ ಎಂಟರ ತನ್ನ ಕೊನೆಯ ಪಂದ್ಯದಲ್ಲಿ 5 ರನ್‌ಗಳಿಂದ ಶ್ರೀಲಂಕಾ ತಂಡವನ್ನು ಮಣಿಸಿತು. ಆದರೆ, ಈ ರೋಚಕ ಪಂದ್ಯದಲ್ಲಿ ಗೆದ್ದರೂ ಪಾಕ್‌ನ ನಾಕೌಟ್ ಕನಸು ಸಾಕಾರಗೊಳ್ಳಲಿಲ್ಲ.

ಪಾಕಿಸ್ತಾನ ತಂಡವು ಸೆಮಿಫೈನಲ್‌ಗೆ ಅರ್ಹತೆ ಪಡೆಯಲು ಆತಿಥೇಯ ತಂಡವನ್ನು 147 ರನ್‌ಗಳ ಒಳಗೆ ನಿಯಂತ್ರಿಸಬೇಕಿತ್ತು. ಆದರೆ, 213 ರನ್‌ಗಳ ಗುರಿ ಎದುರಿಸಿದ ಲಂಕಾ ತಂಡವು ಕೊನೆಯಲ್ಲಿ ತೀವ್ರ ಹೋರಾಟ ನಡೆಸಿದರೂ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 207 ರನ್ ಗಳಿಸಿ, ಕೇವಲ ಆರು ರನ್‌ಗಳ ಕೊರತೆ ಎದುರಿಸಿತು.

ಆತಿಥೇಯರ ಗೆಲುವಿಗೆ ಕೊನೆಯ ಓವರ್‌ನಲ್ಲಿ 28 ರನ್ ಬೇಕಿತ್ತು. ವೇಗಿ ಶಾಹೀನ್ ಶಾ ಅಫ್ರಿದಿ ಹಾಕಿದ ಓವರ್‌ನ ಮೊದಲ ನಾಲ್ಕು ಎಸೆತಗಳಲ್ಲಿ ನಾಯಕ ದಸುನ್ ಶನಕ (ಔಟಾಗದೇ 76;31ಎ, 4x2, 6x8) ಹ್ಯಾಟ್ರಿಕ್ ಸಿಕ್ಸರ್ ಸೇರಿ 22 ರನ್ ಬಾಚಿದರು. ಆದರೆ, ನಂತರದ ಎರಡು ಎಸೆತಗಳಲ್ಲಿ ರನ್ ಬರಲಿಲ್ಲ. ಹೀಗಾಗಿ ಲಂಕಾ ನಿರಾಸೆಯೊಂದಿಗೆ ಅಭಿಯಾನ ಮುಗಿಸಿತು.

ಎರಡನೇ ಗುಂಪಿನಲ್ಲಿ ನ್ಯೂಜಿಲೆಂಡ್ ತಂಡವು ನೆಟ್ ರನ್‌ರೇಟ್ ಆಧಾರದಲ್ಲಿ ಎರಡನೇ ಸ್ಥಾನ ಪಡೆದು ಸೆಮಿಫೈನಲ್‌ಗೆ ಮುನ್ನಡೆಯಿತು. ಇದೇ ಗುಂಪಿನಿಂದ ಇಂಗ್ಲೆಂಡ್ ಹ್ಯಾಟ್ರಿಕ್ ಗೆಲುವಿನೊಂದಿಗೆ ಈ ಮೊದಲೇ ನಾಕೌಟ್ ಪ್ರವೇಶಿಸಿದೆ.

ಲಂಕಾ ತಂಡವು ಎರಡನೇ ಓವರ್‌ನಲ್ಲೇ ಪಥುಮ್ ನಿಸಾಂಕ (3) ಅವರನ್ನು ಕಳೆದುಕೊಂಡಿತು. ನಂತರ ದಲ್ಲೂ ಅಬ್ರಾರ್ ಅಹ್ಮದ್ (23ಕ್ಕೆ 3) ದಾಳಿಗೆ ನಿಯಮಿತವಾಗಿ ವಿಕೆಟ್‌ಗಳು ಉರುಳಿದವು. ಆದರೆ, ಪವನ್ ರತ್ನಾಯಕೆ (58;37ಎ, 4x4, 6x3) ಮತ್ತು ಶನಕ ದಿಟ್ಟ ಪ್ರತಿರೋಧ ತೋರಿ ಗೆಲುವಿನ ಆಸೆ ಚಿಗುರಿಸಿದ್ದರು.

ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಪಾಕ್ ಭರ್ಜರಿ ಆರಂಭ ಪಡೆಯಿತು. ಆರಂಭದಿಂದಲೇ ಬೀಸಾಟಕ್ಕಿಳಿದ ಫರ್ಹಾನ್ ಮತ್ತು ಜಮಾನ್ ಮೊದಲ ವಿಕೆಟ್‌ಗೆ ದಾಖಲೆಯ 176 ರನ್ ಸೇರಿಸಿದರು. ಅದರಿಂದಾಗಿ 8 ವಿಕೆಟ್‌ಗೆ 212 ರನ್ ಗಳಿಸಿತು.

ಎಡಗೈ ಬ್ಯಾಟರ್ ಜಮಾನ್ 16ನೇ ಓವರಿನಲ್ಲಿ ಆಫ್‌ಸ್ಟಂಪ್‌ನಾಚೆ ಇದ್ದ ಚೆಂಡನ್ನು ಹೊಡೆಯಲು ಹೋಗಿ ಸ್ಟಂಪ್ಸ್‌ಗೆ ಎಳೆದುಕೊಂಡರು. ಅವರಿಗೆ ಎರಡು ಜೀವದಾನಗಳೂ ದೊರಕಿದ್ದವು. ಈ ಅವಕಾಶಗಳನ್ನು ಜಮಾನ್ ಚೆನ್ನಾಗಿಯೇ ಬಳಸಿಕೊಂಡು 42 ಎಸೆತಗಳಲ್ಲಿ 84 ರನ್ (4x9, 6x4) ಸಿಡಿಸಿದರು.

ಇನ್ನೊಂದು ಕಡೆ ಫರ್ಹಾನ್ 60 ಎಸೆತಗಳ ಇನಿಂಗ್ಸ್‌ನಲ್ಲಿ 9 ಬೌಂಡರಿಗಳ ಜೊತೆ ಐದು ಸಿಕ್ಸರ್‌ಗಳಿದ್ದವು. ಇದು ಅವರಿಗೆ ಈ ವಿಶ್ವಕಪ್‌ನಲ್ಲಿ ಎರಡನೇ ಶತಕ. ಅವರು (323) ಒಂದೇ ಅವೃತ್ತಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಭಾರತದ ತಾರೆ ವಿರಾಟ್ ಕೊಹ್ಲಿ (319 ರನ್) ದಾಖಲೆ ಮುರಿದರು.

ಜಮಾನ್ ನಿರ್ಗಮನದ ನಂತರ ವಿಕೆಟ್‌ಗಳು ಉದುರಿದವು. ಎಂಟು ವಿಕೆಟ್‌ಗಳು 36 ರನ್ ಅಂತರದಲ್ಲಿ ಉರುಳಿದವು. ಜಮಾನ್– ಫರ್ಹಾನ್ ಬಿಟ್ಟರೆ ಉಳಿದ ಯಾರೂ ಎರಡಂಕಿ ಮೊತ್ತ ಗಳಿಸಲಿಲ್ಲ.


ಸ್ಕೋರುಗಳು: ಪಾಕಿಸ್ತಾನ: 20 ಓವರುಗಳಲ್ಲಿ 8 ವಿಕೆಟ್‌ಗೆ 212 (ಸಾಹಿಬ್‌ಝಾದಾ ಫರ್ಹಾನ್ 100, ಫಖರ್ ಜಮಾನ್ 84; ಮಧುಶಂಕ 33ಕ್ಕೆ3, ಶನಕ 42ಕ್ಕೆ2). ಶ್ರೀಲಂಕಾ: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 207 (ಪವನ್ ರತ್ನಾಯಕೆ 58, ದಸುನ್ ಶನಕ ಔಟಾಗದೇ 76; ಅಬ್ರಾರ್ ಅಹ್ಮದ್ 23ಕ್ಕೆ 3). ಪಂದ್ಯದ ಆಟಗಾರ: ಸಾಹಿಬ್‌ಝಾದಾ ಫರ್ಹಾನ್

‘ಸೂಪರ್ 8’ ಹಂತದ ಅಂಕಪಟ್ಟಿ (ಎರಡನೇ ಗುಂಪು)

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಇಂಗ್ಲೆಂಡ್	3	3	0	0	6	1.096
ನ್ಯೂಜಿಲೆಂಡ್	3	1	1	1	3	1.390
ಪಾಕಿಸ್ತಾನ	3	1	1	1	3	-0.123
ಶ್ರೀಲಂಕಾ	3	0	3	0	0	-1.950

ಮೊದಲ ವಿಕೆಟ್‌ಗೆ ದಾಖಲೆ ಜೊತೆಯಾಟ (ಟಿ20 ವಿಶ್ವಕಪ್)

ರನ್	ಆಟಗಾರರು	ತಂಡ	ಎದುರಾಳಿ	ವರ್ಷ
176	ಫರ್ಹಾನ್–ಫಖರ್ ಜಮಾನ್	ಪಾಕಿಸ್ತಾನ	ಶ್ರೀಲಂಕಾ	2026
175*	ಟಿಮ್ ಸೀಫರ್ಟ್–ಫಿನ್ ಅಲೆನ್	ನ್ಯೂಜಿಲೆಂಡ್	ಯುಎಇ	2026
170	ಜೋಸ್ ಬಟ್ಲರ್–ಅಲೆಕ್ಸ್ ಹೇಲ್ಸ್	ಇಂಗ್ಲೆಂಡ್	ಭಾರತ	2022



ಸೋತ ನಿರಾಸೆಯಲ್ಲಿ ದಸುನ್ ಶನಕ

ಟಾಸ್‌ಗೂ ಮುನ್ನ ತಂಡ ಸೇರಿದ್ದ ಕಮ್ರಾನ್

• ಸತೀಶ ಬಿ.

ಹುಬ್ಬಳ್ಳಿ: ಜಮ್ಮು ಮತ್ತು ಕಾಶ್ಮೀರ ತಂಡದ ಆರಂಭಿಕ ಬ್ಯಾಟರ್ ಕಮ್ರಾನ್ ಇಕ್ಬಾಲ್ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಅಮೋಘ ಶತಕ ಬಾರಿಸಿದರು. ಅದರೊಂದಿಗೆ ಪಂದ್ಯ ಸಂಪೂರ್ಣವಾಗಿ ಆತಿಥೇಯ ತಂಡದಿಂದ ಕೈಜಾರುವಂತೆ ಮಾಡಿದರು.



ಕಮ್ರಾನ್ ಇಕ್ಬಾಲ್

ಫೈನಲ್ ಪಂದ್ಯ ಆರಂಭದ ಹಿಂದಿನ ದಿನದವರೆಗೂ ಇಕ್ಬಾಲ್ ಅವರ ಹೆಸರು ಆಡುವ 11ರ ಬಳಗದಲ್ಲಿ ಇರಲಿಲ್ಲ. ಅಭ್ಯಾಸದ ವೇಳೆ ಆರಂಭಿಕ ಬ್ಯಾಟರ್ ಶುಭಂ ಖಜೂರಿಯಾ ಬೆನ್ನು ನೋವು ಕಾಣಿಸಿಕೊಂಡು ಫೈನಲ್ ಪಂದ್ಯಕ್ಕೆ ಅಲಭ್ಯರಾದರು. ಹೀಗಾಗಿ ಕಮ್ರಾನ್‌ಗೆ ಬುಲಾವ್ ನೀಡಲಾಯಿತು. ರಾತ್ರಿ 11.30ಕ್ಕೆ ದೆಹಲಿಯಿಂದ ಹೊರಟ ಅವರು ರಾತ್ರಿ 1.55ಕ್ಕೆ ಮುಂಬೈ ತಲುಪಿದರು. ಅಲ್ಲಿ ನಾಲ್ಕು ತಾಸು ಕಾದು, ಬೆಳಿಗ್ಗೆ 6.15ಕ್ಕೆ ಮುಂಬೈನಿಂದ ಹೊರಟು, ಪಂದ್ಯದ ದಿನ ಟಾಸ್‌ಗೆ ಅರ್ಧ ಗಂಟೆ ಮುನ್ನ ಕ್ರೀಡಾಂಗಣ ತಲುಪಿದರು.

ಅನಿರೀಕ್ಷಿತ ಅವಕಾಶದಲ್ಲಿ ತಂಡವನ್ನು ಸೇರಿಕೊಂಡ ಅವರಿಗೆ ಒದಗಿದ್ದು ಇನಿಂಗ್ಸ್ ಆರಂಭಿಸುವ ಜವಾಬ್ದಾರಿ! ಮೊದಲ ಇನಿಂಗ್ಸ್‌ನಲ್ಲಿ ಕೇವಲ 6 ರನ್ ಗಳಿಸಿ ವೇಗಿ ಪ್ರಸಿದ್ಧ ಕೃಷ್ಣ ಅವರಿಗೆ ವಿಕೆಟ್ ಒಪ್ಪಿಸಿದ್ದ ಅವರು, ಎರಡನೇ ಇನಿಂಗ್ಸ್‌ನಲ್ಲಿ ಅಮೋಘ ಆಟವಾಡಿದರು; ಆತಿಥೇಯ ಬೌಲರ್‌ಗಳನ್ನು ಇನ್ನಿಲ್ಲದಂತೆ ಕಾಡಿದರು. ತಮ್ಮ ವೈಯಕ್ತಿಕ ಗರಿಷ್ಠ ಮೊತ್ತವನ್ನು (ಅಜೇಯ 160) ಸಹ ಹೆಚ್ಚಿಸಿಕೊಂಡರು.

ಶುಕ್ರವಾರ ನಾಲ್ಕನೇ ದಿನದಾಟ ಆರಂಭಿಸಿದ್ದ ಜಮ್ಮು–ಕಾಶ್ಮೀರ ತಂಡವನ್ನು ಬೇಗ ಆಲ್‌ಔಟ್ ಮಾಡಿ ಗೆಲುವಿಗೆ ಪ್ರಯತ್ನಿಸುವ ಸಣ್ಣ ಅವಕಾಶವೊಂದು ಕರ್ನಾಟಕ ತಂಡಕ್ಕೆ ಇತ್ತು. ಅದಕ್ಕೆ ತಕ್ಕಂತೆ ವೇಗಿಗಳಾದ ಪ್ರಸಿದ್ಧ ಕೃಷ್ಣ, ವೈಶಾಖ ವಿಜಯ ಕುಮಾರ ಅವರು 11ರನ್ ಆಗುವಷ್ಟರಲ್ಲಿ ಎರಡು ವಿಕೆಟ್ ಕಿತ್ತು ಆತಿಥೇಯ ತಂಡದಲ್ಲಿ ಗೆಲುವಿನ ಆಸೆ ಚಿಗುರಿಸಿದ್ದರು. ಈ ಹಂತದಲ್ಲಿ ನಾಯಕ ಪಾರಸ್ ಡೋಗ್ರಾ, ಅಬ್ದುಲ್ ಸಮದ್ ಜತೆ ಅರ್ಧಶತಕದ ಜತೆಯಾಟವಾಡಿದ ಕಮ್ರಾನ್, ಸಾಹಿಲ್ ಜತೆಗೂಡಿ 197 (415 ಎಸೆತ) ರನ್ ಸೇರಿಸಿದರು. ಇದರಿಂದಾಗಿ ತವರಿನ ಅಂಗಳದಲ್ಲಿ ಒಂಬತ್ತನೇ ಬಾರಿ ರಣಜಿ ಟ್ರೋಫಿ ಎತ್ತಿ ಹಿಡಿಯುವ ಕರ್ನಾಟಕ ತಂಡದ ಕ್ಷೀಣ ಆಸೆ ಕೈಗೂಡಲಿಲ್ಲ.

ಹುಬ್ಬಳ್ಳಿಯಲ್ಲಿ ಹಿಂದೆ ಆಡಿದ್ದ ಪಾರಸ್

ಜಮ್ಮು ಮತ್ತು ಕಾಶ್ಮೀರ ತಂಡದ ನಾಯಕ ಪಾರಸ್ ಡೋಗ್ರಾ ಅವರು 2013ರಲ್ಲಿ ಹುಬ್ಬಳ್ಳಿಯ ಕೆಎಸ್‌ಸಿಎ ಮೈದಾನದಲ್ಲಿ ಲಿಸ್ಟ್ ಎ ಪಂದ್ಯದಲ್ಲಿ ಆಡಿದ್ದರು. ಶನಿವಾರ ಅವರು ಅದನ್ನು ನೆನಪು ಮಾಡಿಕೊಂಡರು.

‘2013ರಲ್ಲಿ ಇದೇ ಮೈದಾನದಲ್ಲಿ ಲಿಸ್ಟ್ ಎ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದೆ. ಈಗ ಇದೇ ಮೈದಾನದಲ್ಲಿ ಟ್ರೋಫಿ ಗೆದ್ದಿದ್ದೇನೆ. ಈ ಹಿಂದೆ ಮುಂಬೈ, ಬರೋಡಾ ತಂಡಗಳನ್ನು ಅದರ ನೆಲದಲ್ಲೇ ಮಣಿಸಿದ್ದರಿಂದ ತಂಡದಲ್ಲಿ ಆತ್ಮವಿಶ್ವಾಸ ಹೆಚ್ಚಿತ್ತು. ಬಲಿಷ್ಠ ಕರ್ನಾಟಕ ತಂಡವನ್ನು ಮಣಿಸಿ ಟ್ರೋಫಿ ಗೆದ್ದಿರುವುದರಿಂದ ತಂಡದ ವಿಶ್ವಾಸ ಇನ್ನಷ್ಟು ವೃದ್ಧಿಯಾಗಿದೆ. ಈ ಗೆಲುವಿಗೆ ಪ್ರತಿಯೊಬ್ಬರೂ ಕೊಡುಗೆ ನೀಡಿದ್ದಾರೆ ಎಂದರು.

‘ಕಳೆದ ವರ್ಷ ಕ್ವಾರ್ಟರ್ ಫೈನಲ್ ತಲುಪಿದ್ದೆವು. ಆಗಲೇ ನಮಗೆ ಟ್ರೋಫಿ ಗೆಲ್ಲುವ ಸಾಮರ್ಥ್ಯ ಇದೆ ಎಂಬ ವಿಶ್ವಾಸ ಮೂಡಿತ್ತು. ಈಗ ಟ್ರೋಫಿ ಗೆದ್ದಿರುವುದು ಅದ್ಭುತ ಕ್ಷಣ’ ಎಂದು ಡೋಗ್ರಾ ಹೇಳಿದರು.

‘ಫೈನಲ್ ಪಂದ್ಯದಲ್ಲಿ ಪ್ರತಿ ರನ್, ವಿಕೆಟ್ ಸಹ ಮಹತ್ವದ್ದು. ಹೀಗಾಗಿ ಸಂಪೂರ್ಣ ಪ್ರಯತ್ನ ಹಾಕುವಂತೆ ತಂಡದ ಆಟಗಾರರಿಗೆ ಹೇಳಿದ್ದೆ. ನಮ್ಮ ಬೌಲರ್‌ಗಳು ಉತ್ತಮ ಪ್ರದರ್ಶನ ನೀಡಿದರು. ಅದು ಟ್ರೋಫಿ ಗೆಲ್ಲಲು ಪ್ರಮುಖ ಕಾರಣವಾಯಿತು’ ಎಂದರು.



ಟ್ರೋಫಿಯೊಂದಿಗೆ ಪಾರಸ್ ಡೋಗ್ರಾ

> ಈ ಐತಿಹಾಸಿಕ ಗೆಲುವು ಆಟಗಾರರ ಧೈರ್ಯ, ಶಿಸ್ತು ಮತ್ತು ಕ್ರೀಡಾ ಸ್ಫೂರ್ತಿಯನ್ನು ಪ್ರತಿಬಿಂಬಿಸುತ್ತದೆ. ಇದು ಜಮ್ಮು ಮತ್ತು ಕಾಶ್ಮೀರದ ಜನರಿಗೆ ಹೆಮ್ಮೆಯ ಕ್ಷಣವಾಗಿದೆ
>
> **ನರೇಂದ್ರ ಮೋದಿ,** ಪ್ರಧಾನಮಂತ್ರಿ

> ಕಾಶ್ಮೀರ ವಿಲ್ಲೊಗಳು (ಬ್ಯಾಟ್) ಅನೇಕ ಚಾಂಪಿಯನ್ನರ ಕಿಟ್‌ಗಳ ಭಾಗವಾಗಿವೆ. ಜಮ್ಮು ಮತ್ತು ಕಾಶ್ಮೀರ ತಂಡ ಚಾಂಪಿಯನ್ ಆದ ಪ್ರಯಾಣ ದೇಶೀಯ ಕ್ರಿಕೆಟ್‌ನ ಸೌಂದರ್ಯವನ್ನು ವ್ಯಾಖ್ಯಾನಿಸುತ್ತದೆ
>
> **ಸಚಿನ್ ತೆಂಡೂಲ್ಕರ್,** ದಿಗ್ಗಜ ಕ್ರಿಕೆಟಿಗ

ಅಂಕಿ ಅಂಶಗಳು

₹5 ಕೋಟಿ ವಿಜೇತ ಜಮ್ಮು–ಕಾಶ್ಮೀರ ತಂಡಕ್ಕೆ ದೊರೆತ ಬಹುಮಾನ

₹3 ಕೋಟಿ ರನ್ನರ್ಸ್ ಅಪ್ ಕರ್ನಾಟಕ ತಂಡ ಪಡೆದ ಬಹುಮಾನ

₹2 ಕೋಟಿ ಜಮ್ಮು–ಕಾಶ್ಮೀರ ತಂಡಕ್ಕೆ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಘೋಷಿಸಿದ ಬಹುಮಾನ

ಕೊನೆಯ ದಿನ ಕಮ್ರಾನ್, ಸಾಹಿಲ್ ಶತಕ • ಕರ್ನಾಟಕದ ಬೌಲರ್‌ಗಳ ಪರದಾಟ

ದೇಶಿ ಕ್ರಿಕೆಟ್‌ಗೆ ಹೊಸ ‘ರಾಜ’ ಜಮ್ಮು–ಕಾಶ್ಮೀರ

• ಗಿರೀಶ ದೊಡ್ಡಮನಿ

ಹುಬ್ಬಳ್ಳಿ: ನೃಪತುಂಗ ಬೆಟ್ಟದ ತಪ್ಪಲಲ್ಲಿ ಇರುವ ರಾಜನಗರದ ಕ್ರಿಕೆಟ್ ಮೈದಾನದಲ್ಲಿ ಶನಿವಾರ ಮಧ್ಯಾಹ್ನ ನೆತ್ತಿ ಸುಡುವ ಬಿಸಿಲಿನಲ್ಲಿ ಹಿಮಕಣಿವೆಯ ಜಮ್ಮು–ಕಾಶ್ಮೀರ ತಂಡದ ಸಂಭ್ರಮ ಮುಗಿಲು ಮುಟ್ಟಿತು. ಪಾರಸ್ ಡೋಗ್ರಾ ನಾಯಕತ್ವದ ತಂಡವು ಮೊತ್ತಮೊದಲ ಬಾರಿ ರಣಜಿ ಟ್ರೋಫಿಗೆ ಮುತ್ತಿಕ್ಕಿತು.

ತನ್ನ 67 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿ ಫೈನಲ್ ತಲುಪಿದ್ದ ಜಮ್ಮು–ಕಾಶ್ಮೀರ ಎಂಟು ಸಲದ ಚಾಂಪಿಯನ್ ಆತಿಥೇಯ ಕರ್ನಾಟಕದ ಎದುರು ಮೊದಲ ಇನಿಂಗ್ಸ್ ಮುನ್ನಡೆಯೊಂದಿಗೆ ಡ್ರಾ ಸಾಧಿಸಿತು. ಅದರೊಂದಿಗೆ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.

ಮಧ್ಯಾಹ್ನ 2.10ಕ್ಕೆ ಉಭಯ ತಂಡಗಳ ನಾಯಕರು ಡ್ರಾ ಮಾಡಿಕೊಳ್ಳಲು ಕೈಕುಲುಕುತ್ತಿದ್ದಂತೆಯೇ ಡೋಲ್ ತಾಷಾದ ಸದ್ದು, ಸಿಡಿಮದ್ದುಗಳ ಶಬ್ದ ಪ್ರತಿಧ್ವನಿಸಿದವು. ಚಾಂಪಿಯನ್ ತಂಡದ ಆಟಗಾರರು, ನೆರವು ಸಿಬ್ಬಂದಿ ಮತ್ತು ಅಭಿಮಾನಿಗಳ ನೃತ್ಯವೂ ರಂಗೇರಿತು. ಕಳೆದ ಐದು ದಿನಗಳಿಂದ ಕ್ರೀಡಾಂಗಣಕ್ಕೆ ಬಂದು ಕ್ರಿಕೆಟ್ ಆಸ್ವಾದಿಸಿದ್ದ ಅಭಿಮಾನಿಗಳಿಗೆ ಅಭಿನಂದನೆ ಸಲ್ಲಿಸಲು ಪ್ರವಾಸಿ ತಂಡದ ಆಟಗಾರರು ಕ್ರೀಡಾಂಗಣದಲ್ಲಿ ಒಂದು ಪ್ರದಕ್ಷಿಣೆ ಹಾಕಿದರು.

ಇದೆಲ್ಲಕ್ಕೂ ಮುನ್ನ ಡೋಗ್ರಾ ಬಳಗವು ಕರ್ನಾಟಕದ ವಿರುದ್ಧ ಸಂಪೂರ್ಣ ಪಾರಮ್ಯ ಮೆರೆಯಿತು. ಮೊದಲ ಇನಿಂಗ್ಸ್‌ನಲ್ಲಿ 13 ತಾಸುಗಳಿಗೂ ಹೆಚ್ಚು ಕಾಲ ಬ್ಯಾಟಿಂಗ್ ಮಾಡಿದ್ದ ಪ್ರವಾಸಿಗರು ಎಂಟೂವರೆ ಗಂಟೆಗಳ ಕಾಲ ಕ್ರೀಸ್ ಮೇಲೆ ಲಂಗರು ಹಾಕಿದ್ದರು. ಐದು ದಿನಗಳ ಪಂದ್ಯದಲ್ಲಿ ಕರ್ನಾಟಕವು ಬ್ಯಾಟಿಂಗ್ ಮಾಡಿದ್ದು 93.3 ಓವರ್‌ಗಳು ಮಾತ್ರ!

ಜಮ್ಮು–ಕಾಶ್ಮೀರವು ನಾಲ್ಕನೇ ದಿನದಾಟದಲ್ಲಿ 291 ರನ್‌ಗಳಿಂದ ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಿತ್ತು. ಎರಡನೇ ಇನಿಂಗ್ಸ್‌ನಲ್ಲಿ 57 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 186 ರನ್ ಗಳಿಸಿತ್ತು. ಕಮ್ರಾನ್ ಇಕ್ಬಾಲ್ (ಬ್ಯಾಟಿಂಗ್ 94; 160ಎ, 4X11, 6X1) ಮತ್ತು ಸಾಹಿಲ್ ಲೋತ್ರಾ (ಬ್ಯಾಟಿಂಗ್ 16; 41ಎ, 4X2) ಕ್ರೀಸ್‌ನಲ್ಲಿದ್ದರು. ಕೊನೆಯ ದಿನ ಬೆಳಿಗ್ಗೆ ತಮ್ಮ ಆಟ ಮುಂದುವರಿಸಿದ ಕಮ್ರಾನ್ 189 ಎಸೆತಗಳಲ್ಲಿ ಶತಕವನ್ನು ಪೂರ್ಣಗೊಳಿಸಿದರು. ಸಾಹಿಲ್ ಅವರೊಂದಿಗೆ ಜೊತೆಯಾಟ ಮುಂದುವರಿಸಿದರು. ಯಾವುದೇ ಧಾವಂತ ತೋರದ ಇಬ್ಬರೂ ಬ್ಯಾಟರ್‌ಗಳು ಆತಿಥೇಯ ಬೌಲರ್‌ಗಳನ್ನು ಕಾಡಿದರು. ಸ್ಪಿನ್ನರ್‌ಗಳ ಬೌಲರ್‌ಗಳ ಬಹುತೇಕ ಎಸೆತಗಳನ್ನು ಪ್ಯಾಡ್‌ನಿಂದ ತಡೆದರು. ಪಿಚ್‌ನಲ್ಲಿ ಬೌಲರ್‌ಗಳಿಗೆ ನೆರವು ಇರಲಿಲ್ಲ.

ಕೆ.ಎಲ್. ರಾಹುಲ್ ಮತ್ತು ಕರುಣ್ ನಾಯರ್ ಕೂಡ ಬೌಲಿಂಗ್ ಮಾಡಿದರು. ರಾಹುಲ್ ಹಾಕಿದ 83ನೇ ಓವರ್‌ನಲ್ಲಿ ಸಾಹಿಲ್ ಅವರ ಕ್ಯಾಚ್ ಪಡೆಯುವಲ್ಲಿ ಸ್ಲಿಪ್‌ನಲ್ಲಿದ್ದ ಮಯಂಕ್ ಅಗರವಾಲ್ ವಿಫಲರಾದರು. ಊಟದ ವಿರಾಮದ ಹೊತ್ತಿಗೆ ತಂಡ 576 ರನ್‌ಗಳ ಮುನ್ನಡೆಯಲ್ಲಿತ್ತು. ಆದರೂ ಡಿಕ್ಲೇರ್ ಮಾಡಲಿಲ್ಲ. ಆಗ 80 ರನ್ ಗಳಿಸಿದ್ದ ಸಾಹಿಲ್ ಶತಕಕ್ಕಾಗಿ ತಂಡವು ಅವಕಾಶ ಮಾಡಿಕೊಟ್ಟಿತು. ವಿರಾಮದ ನಂತರ ಇಬ್ಬರೂ ಬ್ಯಾಟರ್‌ಗಳು ನಿಧಾನವಾಗಿ ರನ್ ಗಳಿಸಿದರು. 99 ರನ್ ಗಳಿಸಿದ್ದ ಸಾಹಿಲ್ ಒಂದು ರನ್ ಪಡೆಯಲು 14 ಎಸೆತಗಳನ್ನು ಆಡಿದರು. 223 ಎಸೆತಗಳಲ್ಲಿ ಅವರು ಶತಕದ ಗಡಿ ದಾಟಿದರು. ಕುಣಿದಾಡಿ, ಸದ್ದು ಹೊಡೆದು ಸಂಭ್ರಮಿಸಿದರು. ಕೆಲವೇ ನಿಮಿಷಗಳ ನಂತರ ಪಂದ್ಯಕ್ಕೆ ತೆರೆ ಬಿತ್ತು. ಜಮ್ಮು–ಕಾಶ್ಮೀರದ ಸಂಭ್ರಮ ಗರಿಗೆದರಿತು. ಕಣಿವೆ ರಾಜ್ಯದ ಕ್ರಿಕೆಟ್‌ನಲ್ಲಿ ಹೊಸ ಪರ್ವ ಆರಂಭವಾಯಿತು. ಸ್ಥಳೀಯರು ವಿಜೇತ ಆಟಗಾರರೊಂದಿಗೆ ಚಿತ್ರಗಳನ್ನು ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಜಮ್ಮು–ಕಾಶ್ಮೀರ: 173.1 ಓವರ್‌ಗಳಲ್ಲಿ 584. ಕರ್ನಾಟಕ: 93.3 ಓವರ್‌ಗಳಲ್ಲಿ 293. ಎರಡನೇ ಇನಿಂಗ್ಸ್: ಜಮ್ಮು–ಕಾಶ್ಮೀರ: 113 ಓವರ್‌ಗಳಲ್ಲಿ 4 ವಿಕೆಟ್‌ಗೆ 342 (ಶುಕ್ರವಾರ 4ಕ್ಕೆ186) (ಕಮ್ರಾನ್ ಇಕ್ಬಾಲ್ ಔಟಾಗದೇ 160, ಸಾಹಿಲ್ ಲೋತ್ರಾ ಔಟಾಗದೇ 101). ಫಲಿತಾಂಶ: ಪಂದ್ಯ ಡ್ರಾ, ಮೊದಲ ಇನಿಂಗ್ಸ್ ಮುನ್ನಡೆ ಆಧಾರದಲ್ಲಿ ಜಮ್ಮು–ಕಾಶ್ಮೀರ ಚಾಂಪಿಯನ್.

ಪಂದ್ಯದ ಆಟಗಾರ: ಶುಭಂ ಪುಂದೀರ (121 ರನ್).

ಸರಣಿಯ ಆಟಗಾರ: ಅಕೀಬ್ ನಬಿ ದಾರ್ (60 ವಿಕೆಟ್, 245 ರನ್)



ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ರನ್ನರ್‌ಅಪ್ ಆದ ಕರ್ನಾಟಕ ತಂಡದ ನಾಯಕ ದೇವದತ್ತ ಪಡಿಕ್ಕಲ್ ಅವರಿಗೆ ಬಿಸಿಸಿಐ ಅಧ್ಯಕ್ಷ ಮಿಥುನ್ ಮನ್ಹಾಸ್, ಕಾರ್ಯದರ್ಶಿ ದೇವಜಿತ್ ಸೈಕಿಯಾ ಟ್ರೋಫಿ ಪ್ರದಾನ ಮಾಡಿದರು

ಚಿತ್ರಗಳು: ಗೋವಿಂದರಾಜ ಜವಳಿ

ಕಳೆದ ಐದು ಋತುಗಳ ವಿಜೇತರು

ಋತು	ಚಾಂಪಿಯನ್	ರನ್ನರ್ಸ್
2025-26	ಜಮ್ಮು–ಕಾಶ್ಮೀರ	ಕರ್ನಾಟಕ
2024-25	ವಿದರ್ಭ	ಕೇರಳ
2023-24	ಮುಂಬೈ	ವಿದರ್ಭ
2022-23	ಸೌರಾಷ್ಟ್ರ	ಬಂಗಾಳ
2021-22	ಮಧ್ಯಪ್ರದೇಶ	ಮುಂಬೈ

ಕಳೆದ 11 ವರ್ಷಗಳಲ್ಲಿ ಕರ್ನಾಟಕ ತಂಡ

ಋತು	ಹಂತ
2015-16	ಗುಂಪು ಹಂತ
2016-17	ಕ್ವಾರ್ಟರ್‌ಫೈನಲ್
2017-18	ಸೆಮಿಫೈನಲ್
2018-19	ಸೆಮಿಫೈನಲ್
2019-20	ಸೆಮಿಫೈನಲ್
2020-21	ಕೋವಿಡ್‌ನಿಂದ ಟೂರ್ನಿ ರದ್ದು
2021-22	ಕ್ವಾರ್ಟರ್‌ಫೈನಲ್
2022-23	ಸೆಮಿಫೈನಲ್
2023-24	ಕ್ವಾರ್ಟರ್‌ಫೈನಲ್
2024-25	ಗುಂಪು ಹಂತ
2025-26	ರನ್ನರ್ಸ್‌ಅಪ್

ತಾರೆಗಳಿದ್ದರೂ ಜಯಿಸದ ಕರ್ನಾಟಕ

2014–15ರಲ್ಲಿ ಕರ್ನಾಟಕ ಕೊನೆಯ ಸಲ ಪ್ರಶಸ್ತಿ ಜಯಿಸಿತ್ತು. ಅಲ್ಲಿಂದ ಇಲ್ಲಿಯವರೆಗೆ ನಡೆದ ಟೂರ್ನಿಗಳಲ್ಲಿ ಮೂರು ಸಲ ಕ್ವಾರ್ಟರ್‌ಫೈನಲ್ ಹಾಗೂ ನಾಲ್ಕು ಸಲ ಸೆಮಿಫೈನಲ್ ಪ್ರವೇಶಿಸಿದ್ದ ತಂಡವು ಅಂತಿಮ ಸುತ್ತಿಗೆ ಲಗ್ಗೆ ಹಾಕುವಲ್ಲಿ ವಿಫಲವಾಗಿತ್ತು.

ಈ ಬಾರಿ ನಾಕೌಟ್ ಹಂತದಲ್ಲಿ ಮುಂಬೈ ಹಾಗೂ ಉತ್ತರಾಖಂಡ ತಂಡಗಳ ವಿರುದ್ಧ ಭರ್ಜರಿಯಾಗಿ ಜಯಿಸಿದ್ದ ತಂಡವು ತವರು ರಾಜ್ಯದ ಅಂಗಳದಲ್ಲಿ ಪ್ರಶಸ್ತಿ ಗೆಲ್ಲುವ ಭರವಸೆ ಮೂಡಿಸಿತ್ತು. ಭಾರತ ತಂಡದಲ್ಲಿ ಆಡಿರುವ ಅನುಭವಿಗಳಾದ ಕೆ.ಎಲ್. ರಾಹುಲ್, ದೇವದತ್ತ, ಕರುಣ್ ನಾಯರ್ ಹಾಗೂ ವೇಗಿ ಪ್ರಸಿದ್ಧಕೃಷ್ಣ ತಂಡದಲ್ಲಿದ್ದರು. ಋತುವಿನಲ್ಲಿ 950 ರನ್ ಹೊಡೆದಿದ್ದ ಆರ್. ಸ್ಮರಣ್ ಕೂಡ ಇದ್ದರು. ಆದರೆ ಈ ಪ್ರಮುಖ ಬ್ಯಾಟರ್‌ಗಳು ಕಾಶ್ಮೀರ ತಂಡದ ಮಧ್ಯಮವೇಗಿ ಅಕೀಬ್ ನಬಿ ದಾರ್ ಅವರ ದಾಳಿಯ ಮುಂದೆ ಕುಸಿದರು.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಆಡಳಿತವು ಟೂರ್ನಿಯ ಮಧ್ಯದಲ್ಲಿ ಮಯಂಕ್ ಅಗರವಾಲ್ ಅವರಿಂದ ನಾಯಕತ್ವವನ್ನು ದೇವದತ್ತ ಪಡಿಕ್ಕಲ್‌ಗೆ ವರ್ಗಾಯಿಸಿತ್ತು. ಆದರೆ ಹುಬ್ಬಳ್ಳಿಯಲ್ಲಿ ಮೊದಲ ಬಾರಿಗೆ ನಡೆದ ಫೈನಲ್‌ನಲ್ಲಿ ಕರ್ನಾಟಕದ ಯಾವುದೇ ಪ್ರಯೋಗ ಮತ್ತು ತಂತ್ರಗಾರಿಕೆಗಳು ಫಲ ನೀಡಲಿಲ್ಲ.

2010ರಲ್ಲಿ ಮೈಸೂರಿನಲ್ಲಿ ನಡೆದಿದ್ದ ಮುಂಬೈ ಎದುರಿನ ಫೈನಲ್‌ನಲ್ಲಿ ಕರ್ನಾಟಕ ಪರಾಭವಗೊಂಡಿತ್ತು. ಆದರೆ ಆ ಪಂದ್ಯವು ರೋಚಕವಾಗಿತ್ತು. ಕರ್ನಾಟಕದ ಪ್ರತಿರೋಧ ದಿಟ್ಟವಾಗಿತ್ತು. ಆದರೆ, ಇಲ್ಲಿ ನಡೆದ ಪಂದ್ಯದಲ್ಲಿ ಜಮ್ಮು–ಕಾಶ್ಮೀರ ತಂಡ ಪ್ರಶಸ್ತಿ ಗಳಿಸುವುದು ನಾಲ್ಕನೇ ದಿನವೇ ನಿರ್ಧಾರವಾಗಿತ್ತು. ಪ್ರವಾಸಿ ತಂಡದ ಯೋಜನಾಬದ್ಧ ಮತ್ತು ಶಿಸ್ತಿನ ಆಟವನ್ನು ಮೀರಿನಿಲ್ಲುವಲ್ಲಿ ಕರ್ನಾಟಕ ಹಿಂದೆ ಬಿದ್ದಿತು. ಏಳನೇ ಬಾರಿ ರನ್ನರ್ಸ್ ಅಪ್ ಆಯಿತು.

ಚೆಸ್: ಗುಕೇಶ್‌ಗೆ ಸೋಲಿನ ಆಘಾತ

ಪ್ರಾಗ್ (ಪಿಟಿಐ): ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಪ್ರಾಗ್ ಅಂತರ ರಾಷ್ಟ್ರೀಯ ಚೆಸ್ ಉತ್ಸವದ ಮೂರನೇ ಸುತ್ತಿನಲ್ಲಿ ಹಾಲೆಂಡ್‌ನ ಆಟಗಾರ ಜೋರ್ಡನ್ ವಾನ್ ಫೋರಿಸ್ಟ್ ಕೈಲಿ ಆಘಾತ ಅನುಭವಿಸಿದರು. ಭಾರತದ ಇನ್ನೊಬ್ಬ ಆಟಗಾರ ಅರವಿಂದ ಚಿದಂಬರಂ ಅವರು ಇರಾನ್‌ನ ಪರ್ಹಾಮ್ ಮಘಸೂಡ್ಲು ಜೊತೆ ಡ್ರಾ ಮಾಡಿಕೊಂಡರು.

ಶುಕ್ರವಾರ ನಡೆದ ಪಂದ್ಯದಲ್ಲಿ ಬಿಳಿ ಕಾಯಿಗಳಲ್ಲಿ ಆಡಿದ ಡಚ್ ಆಟಗಾರ 48 ನಡೆಗಳಲ್ಲಿ ಜಯಗಳಿಸಿದರು. ಈ ಟೂರ್ನಿಯ ಮೊದಲ ಎರಡು ಸುತ್ತುಗಳಲ್ಲಿ ಗುಕೇಶ್ ಎದುರಾಳಿಗಳ ವಿರುದ್ಧ ಡ್ರಾ ಮಾಡಿಕೊಂಡಿದ್ದರು.

ಕ್ರೀಡಾಕೂಟ: ಹಿಮಪೂರ್ವಿಗೆ 5 ಪದಕ

ಬೆಂಗಳೂರು: ನಗರದ ಕ್ರೈಸ್ಟ್ ವಿಶ್ವವಿದ್ಯಾಲಯದ ಕಾನೂನು ವಿದ್ಯಾರ್ಥಿನಿ ಡಿ.ಎಸ್.ಹಿಮಪೂರ್ವಿ ಅವರು ಲಖನೌದ ರಾಮ ಮನೋಹರ ಲೋಹಿಯಾ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಡೆದ ಅಂತರ ಕಾನೂನು ವಿಶ್ವವಿದ್ಯಾಲಯಗಳ ಕ್ರೀಡಾಕೂಟದ ಅಥ್ಲೆಟಿಕ್ಸ್‌ನಲ್ಲಿ ಚಿನ್ನ ಸಹಿತ ನಾಲ್ಕು ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಶನಿವಾರ ಮುಕ್ತಾಯಗೊಂಡ ಈ ಕೂಟದ ಲಾಂಗ್‌ಜಂಪ್‌ನಲ್ಲಿ 4.61 ಮೀ. ದೂರ ಜಿಗಿದು ಚಿನ್ನ ಗೆದ್ದ ಅವರು, 100 ಮೀ. (13.46 ಸೆ.) ಮತ್ತು 200 ಮೀ. ಓಟದಲ್ಲಿ ಬೆಳ್ಳಿ ಪದಕ ಗೆದ್ದುಕೊಂಡರು. 4x100 ಮೀ. ರಿಲೆ ಓಟದಲ್ಲೂ ಚಿನ್ನದ ಪದಕ ಗೆದ್ದುಕೊಂಡರು.

ಥ್ರೋಬಾಲ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ತಮ್ಮ ವಿ.ವಿ ತಂಡದಲ್ಲೂ ಆಡಿದರು.



ದುಬೈನಲ್ಲಿ ಸಿಲುಕಿದ ಪಿ.ವಿ. ಸಿಂಧು

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದಿರುವ ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಅವರು ಶನಿವಾರ ದುಬೈ ವಿಮಾನ ನಿಲ್ದಾಣದಲ್ಲಿ ಸಿಲುಕಿಕೊಂಡಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನ ಸ್ಥಿತಿಯಿಂದಾಗಿ ವಿಮಾನ ಕಾರ್ಯಾಚರಣೆಗಳನ್ನು ಸ್ಥಗಿತಗೊಳಿಸಲಾಗಿದೆ. ಪ್ರತಿಷ್ಠಿತ ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಗೆ ಹೊರಟಿದ್ದ ಸಿಂಧು ಅವರು ದುಬೈನಲ್ಲಿ ಸಿಲುಕಿದರು. ಆ ಟೂರ್ನಿಯು ಮಂಗಳವಾರ ಆರಂಭವಾಗಲಿದೆ. ದುಬೈನಲ್ಲಿ ತಮ್ಮ ತಂಡದೊಂದಿಗೆ ಸುರಕ್ಷಿತವಾಗಿ ಇರುವುದಾಗಿ ಸಿಂಧು ತಿಳಿಸಿದ್ದಾರೆ.

ದುಬೈ ವಿಮಾನ ನಿಲ್ದಾಣದಲ್ಲಿನ ಜನದಟ್ಟಣೆಯ ವಿಡಿಯೊವೊಂದನ್ನು ತನ್ನ ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿರುವ ಸಿಂಧು, ‘ಮುಂದಿನ ಸೂಚನೆ ಬರುವವರೆಗೂ ಎಲ್ಲಾ ವಿಮಾನಗಳನ್ನು ಸ್ಥಗಿತಗೊಳಿಸಲಾಗಿದೆ’ ಎಂದು ಬರೆದಿದ್ದಾರೆ.

ಪುಟಿದೇಳುವತ್ತ ಕೌರ್ ಪಡೆ ಚಿತ್ತ

ಆಸ್ಟ್ರೇಲಿಯಾ ವಿರುದ್ಧ ಮೂರನೇ ಏಕದಿನ ಪಂದ್ಯ ಇಂದು

ಹೋಬಾರ್ಟ್ (ಪಿಟಿಐ): ಬ್ಯಾಟಿಂಗ್ ವಿಭಾಗದ ವೈಫಲ್ಯದಿಂದಾಗಿ ಎರಡು ಪಂದ್ಯಗಳಲ್ಲಿ ಸೋತಿರುವ ಭಾರತ ಮಹಿಳಾ ತಂಡವು, ಆಸ್ಟ್ರೇಲಿಯಾ ವಿರುದ್ಧದ ಏಕದಿನ ಕ್ರಿಕೆಟ್ ಸರಣಿಯ ಮೂರನೇ ಮತ್ತು ಅಂತಿಮ ಏಕದಿನ ಪಂದ್ಯದಲ್ಲಿ ಪುಟಿದೇಳುವತ್ತ ಚಿತ್ತ ನೆಟ್ಟಿದೆ. ಆ ಮೂಲಕ, ‘ವೈಟ್‌ವಾಷ್’ ಮುಖಭಂಗದಿಂದ ಪಾರಾಗಲು ವಿಶ್ವ ಚಾಂಪಿಯನ್ ಹರ್ಮನ್‌ಪ್ರೀತ್ ಕೌರ್ ಪಡೆ ಎದುರು ನೋಡುತ್ತಿದೆ.

ಉಪನಾಯಕಿ ಸ್ಮೃತಿ ಮಂದಾನ (58 ಹಾಗೂ 31) ಹಾಗೂ ನಾಯಕಿ ಹರ್ಮನ್ (53 ಹಾಗೂ 54) ಹೊರತುಪಡಿಸಿದರೆ ಭಾರತ ತಂಡದ ಬ್ಯಾಟಿಂಗ್ ವಿಭಾಗವು ಸರಣಿಯಲ್ಲಿ ಸ್ಥಿರ ಪ್ರದರ್ಶನ ನೀಡಿಲ್ಲ. ಮೊದಲ ಪಂದ್ಯದಲ್ಲಿ ಶೂನ್ಯಕ್ಕೆ ನಿರ್ಗಮಿಸಿದ್ದ ಆರಂಭಿಕ ಆಟಗಾರ್ತಿ ಪ್ರತೀಕಾ ರಾವಲ್ ಅವರು ಎರಡನೇ ಪಂದ್ಯದಲ್ಲಿ ಅರ್ಧಶತಕ ಗಳಿಸಿದ್ದರು. ಆದರೆ, ಅನುಭವಿ ಆಟಗಾರ್ತಿಯರಾದ ಜೆಮಿಮಾ ರಾಡ್ರಿಗಸ್ (8 ಹಾಗೂ 11) ಮತ್ತು ದೀಪ್ತಿ ಶರ್ಮಾ (2 ಹಾಗೂ 1 ರನ್) ಅವರಿಂದ ನಿರೀಕ್ಷಿತ ಆಟ ಮೂಡಿಬರದಿರುವುದು ಪ್ರವಾಸಿ ತಂಡಕ್ಕೆ ಮುಳುವಾಗಿದೆ.

‘ಎರಡೂ ಪಂದ್ಯಗಳಲ್ಲಿ ಬ್ಯಾಟಿಂಗ್ ವಿಭಾಗ ಕೈಕೊಟ್ಟಿರುವುದರಿಂದ ನಮಗೆ ಹಿನ್ನಡೆಯಾಗಿದೆ. ಕೊನೆಯ ಪಂದ್ಯದಲ್ಲಿ ನಮ್ಮ ಬ್ಯಾಟರ್‌ಗಳು ಸ್ಥಿರ ಪ್ರದರ್ಶನ ನೀಡುವ, ದೊಡ್ಡ ಇನಿಂಗ್ಸ್ ಆಡುವ ವಿಶ್ವಾಸವಿದೆ’ ಎಂದು ಹರ್ಮನ್ ಅವರು ಎರಡನೇ ಪಂದ್ಯದ ನಂತರ ನಡೆದ ಸುದ್ದಿಗೋಷ್ಠಿಯಲ್ಲಿ ಹೇಳಿದ್ದರು.

ಬ್ಯಾಟರ್‌ಗಳ ಅಸ್ಥಿರ ಆಟ ಒಂದು ಕಡೆಯಾದರೆ, ಬೌಲರ್‌ಗಳೂ ವಿಕೆಟ್ ಗಳಿಸಲು ಪರದಾಡುತ್ತಿದ್ದು ಭಾರತ ತಂಡದ ಚಿಂತೆಗೆ ಕಾರಣವಾಗಿದೆ. ಮತ್ತೊಂದೆಡೆ, ಬ್ಯಾಟಿಂಗ್–ಬೌಲಿಂಗ್ ಎರಡರಲ್ಲೂ ಪ್ರಾಬಲ್ಯ ಸಾಧಿಸಿರುವ ಆಸ್ಟ್ರೇಲಿಯಾ ತಂಡವು ಸರಣಿ ಗೆಲುವಿನ ಅಂತರವನ್ನು 3–0ಗೆ ಹೆಚ್ಚಿಸಿಕೊಳ್ಳುವತ್ತ ಯೋಜನೆ ರೂಪಿಸಿದೆ.

ನಾಯಕಿ ಅಲಿಸಾ ಹೀಲಿ ಅವರಿಗೆ ಇದು ವಿದಾಯದ ಏಕದಿನ ಪಂದ್ಯವಾಗಿದ್ದು, ಗೆಲುವಿನೊಂದಿಗೆ ಬೀಳ್ಕೊಡಲು ಆತಿಥೇಯರು ಸಜ್ಜಾಗಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 9.20. ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್



ಅಲಿಸಾ ಹೀಲಿ ಹಾಗೂ ಹರ್ಮನ್‌ಪ್ರೀತ್ ಕೌರ್

ಪಾಕ್ ಟಿ20 ತಂಡದ ನಾಯಕ ಆಘಾ ಪದಚ್ಯುತಿ ಸಾಧ್ಯತೆ

ಕರಾಚಿ (ಪಿಟಿಐ): ಪಾಕಿಸ್ತಾನ ಟಿ20 ಕ್ರಿಕೆಟ್ ತಂಡದ ನಾಯಕ ಸಲ್ಮಾನ್ ಅಲಿ ಆಘಾ ಅವರನ್ನು ನಾಯಕತ್ವದಿಂದ ಪದಚ್ಯುತಗೊಳಿಸುವ ಸಾಧ್ಯತೆ ದಟ್ಟವಾಗಿದೆ.

ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನ ತಂಡದ ಪ್ರದರ್ಶನದ ಬಗ್ಗೆ ಪಾಕ್ ಕ್ರಿಕೆಟ್ ಮಂಡಳಿ (ಪಿಸಿಬಿ) ಮುಖ್ಯಸ್ಥ ಮೊಹ್ಸಿನ್ ನಖ್ವಿ ಅವರು ಅಸಮಾಧಾನಗೊಂಡಿದ್ದಾರೆ. ಹೀಗಾಗಿ, ಟೂರ್ನಿ ಮುಕ್ತಾಯದ ನಂತರ ಪಾಕ್ ಕ್ರಿಕೆಟ್ ತಂಡದಲ್ಲಿ ಪ್ರಮುಖ ಬದಲಾವಣೆಗಳು ಆಗಲಿವೆ ಎಂದು ತಿಳಿದುಬಂದಿದೆ.

ಆಘಾ, ಬಾಬರ್ ಆಜಂ, ಉಸ್ಮಾನ್ ಖಾನ್ ಸೇರಿ ಕೆಲ ಅನುಭವಿ ಆಟಗಾರರಿಗೆ ವಿಶ್ವಕಪ್ ಟೂರ್ನಿಯೇ ಕೊನೆಯ ಟೂರ್ನಿಯಾಗುವ ಸಾಧ್ಯತೆ ಇದೆ ಎಂದು ಪಿಸಿಬಿ ಮೂಲಗಳು ತಿಳಿಸಿವೆ.

ಆಲ್‌ರೌಂಡರ್ ಶಾದಾಬ್ ಖಾನ್ ಅಥವಾ ಏಕದಿನ ತಂಡದ ನಾಯಕ ಶಾಹೀನ್ ಶಾ ಅಫ್ರಿದಿ ಅವರಿಗೆ ಟಿ20 ತಂಡದ ನಾಯಕತ್ವ ವಹಿಸುವ ಸಾಧ್ಯತೆ ಇದೆ ಎಂದೂ ತಿಳಿದುಬಂದಿದೆ.

‘ಆಘಾ ನಾಯಕತ್ವದ ಪಾಕ್ ತಂಡವು ಟಿ20 ವಿಶ್ವಕಪ್‌ನಲ್ಲಿ ಉತ್ತಮ ಪ್ರದರ್ಶನ ತೋರಲಿದೆ ಎಂಬುದಾಗಿ ಆಯ್ಕೆಗಾರರು, ಆಡಳಿತ ಮಂಡಳಿ ಹಾಗೂ ಪಿಸಿಬಿಯಲ್ಲಿನ ಆಪ್ತರು ನಖ್ವಿ ಅವರಿಗೆ ಭರವಸೆ ನೀಡಿದ್ದರು. ಆದರೆ, ಪಾಕ್ ತಂಡವು ನಿರೀಕ್ಷಿತ ಪ್ರದರ್ಶನ ನೀಡುವಲ್ಲಿ ವಿಫಲವಾಗಿದ್ದು, ನಖ್ವಿ ಅಸಮಾಧಾನಗೊಂಡಿದ್ದಾರೆ’ ಎಂದು ಪಿಸಿಬಿ ಮೂಲವೊಂದು ಶನಿವಾರ ತಿಳಿಸಿದೆ.

‘ಆಘಾ ಅವರನ್ನು ನಾಯಕತ್ವದಿಂದ ಕೆಳಗಿಳಿಸಲು ಪಿಸಿಬಿ ಮುಖ್ಯಸ್ಥರು ನಿರ್ಧರಿಸಿದ್ದಾರೆ. ತಂಡದ ಇತರ ಆಟಗಾರರ ಭವಿಷ್ಯದ ಬಗ್ಗೆ ಮುಖ್ಯ ಕೋಚ್ ಮೈಕ್ ಹೆಸನ್ ಹಾಗೂ ಆಯ್ಕೆಗಾರರೊಂದಿಗೆ ಚರ್ಚಿಸಿ, ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ’ ಎಂದು ಹೇಳಿದೆ.



ಸಲ್ಮಾನ್ ಆಘಾ